ಗುರುವಾರ, ಜುಲೈ 2, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮರಳಿ ಶಾಲೆಗೆ...

ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ, ಬೇಸಿಗೆ ರಜೆ ಮುಗಿಸಿ ಶಾಲೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಶಿಕ್ಷಕಿಯೊಬ್ಬರು ತಿಲಕ ಇಟ್ಟು ಸ್ವಾಗತಿಸಿದರು

ಯಾತ್ರೆಗೆ ಸಿದ್ಧ...

ಅಮರನಾಥ ಯಾತ್ರೆಗೆ ನೋಂದಣಿ ಮಾಡಿಸಲು ಸಾಧುವೊಬ್ಬರು ಜಮ್ಮುವಿನಲ್ಲಿ ಕಾದಿದ್ದರು

ಪರಮಪೂಜ್ಯ
ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ
ಸಚ್ಚಿದಾನಂದ ಪ್ರಣವಸ್ವರೂಪ ಆಚಾರ್ಯ
ಮಹಾಮಂಡಲೇಶ್ವರ ಜಗದ್ಗುರು
ಶ್ರೀ ಶ್ರೀ ಶ್ರೀ ಜಯೇಂದ್ರ ಪುರಿ ಮಹಾಸ್ವಾಮಿಗಳು,
ಪಾದಸೇವಕ ಪೀಠಾಧಿಪತಿ,
ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನ,
ರಾಜರಾಜೇಶ್ವರೀನಗರ, ಬೆಂಗಳೂರು.
ಮಹಾಸ್ವಾಮಿಗಳ ದಿವ್ಯ ಆಶೀರ್ವಾದಗಳೊಂದಿಗೆ

ಬನ್ನಿ,
ಈ ಸಂಭ್ರಮಾಚರಣೆಯಲ್ಲಿ
ಕುಟುಂಬ ಸಮೇತರಾಗಿ ಭಾಗವಹಿಸಿ,
ನಮ್ಮ ವಿಶೇಷ ಕೊಡುಗೆಗಳ
ಪ್ರಯೋಜನವನ್ನು ಪಡೆದುಕೊಳ್ಳಿ.

GRAND OPENING
TODAY
NEW MEGA SHOWROOM

ಸುದರ್ಶನ್ ಸಿಲ್ಕ್ಸ್

82 ವರ್ಷಗಳ ನಂಬಿಕೆಯನ್ನು ಹೊಂದಿರುವ

ಆರ್ ಆರ್ ನಗರದಲ್ಲಿ

Since 1944 | A Legacy of Trust & Elegance

avoncreativeforum.com

VALET PARKING | 1134, 2ND MAIN RD, BEML LAYOUT 3RD STAGE, R R NAGAR , BENGALURU -98 | 080-49929966

ಚಾಂದನಿ, ವಿನಯ್ ರಂಗದೋಳ್‌ಗೆ 'ಉಪಾಸನಾ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಾಸನಾ ಟ್ರಸ್ಟ್ ನೀಡುವ 'ಉಪಾಸನಾ' ಪ್ರಶಸ್ತಿಗೆ ಗಾಯಕಿ ಚಾಂದನಿ ಆರ್. ಹಾಗೂ 'ನಾದೋಪಾಸನಾ ಪ್ರಶಸ್ತಿ'ಗೆ ರಿದಂ ಪ್ಯಾಡ್ ಕಲಾವಿದ ಆರ್. ವಿನಯ್ ರಂಗದೋಳ್ ಆಯ್ಕೆ ಆಗಿದ್ದಾರೆ.

ಚಾಂದನಿ ಆರ್.

ವಿನಯ್

ಗಾಯಕ ಜಿ.ವಿ. ಅತ್ರಿ ಹಾಗೂ ಕೊಳಲು ವಾದಕ ಎನ್.ಎಸ್. ಮುರಳಿ ಅವರ ಸ್ಮರಣಾರ್ಥ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

ಇದೇ 11ರಂದು ಸಂಜೆ 6 ಗಂಟೆಗೆ ಎನ್.ಆರ್. ಕಾಲೊನಿಯಲ್ಲಿರುವ ಪತ್ತಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಉಪಾಸನಾ ಮೋಹನ್ ತಿಳಿಸಿದ್ದಾರೆ.

ಫಲಾನುಭವಿಗಳ ಮಾಹಿತಿ ಸಂಗ್ರಹ ಶುರು

ಸರ್ವರ್ ಸಮಸ್ಯೆಯಿಂದ ಮೊದಲ ದಿನ ಪೂರ್ಣ ಪ್ರಮಾಣದಲ್ಲಿ ನಡೆಯದ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮಾಹಿತಿ ಸಂಗ್ರಹಿಸುವ ಕಾರ್ಯಕ್ಕೆ ಬುಧವಾರ ಚಾಲನೆ ನೀಡಲಾಗಿದೆ. ಆದರೆ, ಸರ್ವರ್ ಸಮಸ್ಯೆಯಿಂದಾಗಿ ಮೊದಲ ದಿನ ಹಲವು ಕಡೆ ಮೀಟರ್ ರೀಡರ್‌ಗಳಿಗೆ ಮಾಹಿತಿ ಸಂಗ್ರಹಿಸಲು ಸಾಧ್ಯವಾಗಿಲ್ಲ ಎಂದು ವರದಿಯಾಗಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಬುಧವಾರ ಒಟ್ಟು 2,536 ಫಲಾನುಭವಿಗಳ ಮಾಹಿತಿ ಸಂಗ್ರಹಿಸಲಾಯಿತು. ಬೇರೆ ಕಂಪನಿಗಳಿಂದ ನಿಖರ ಮಾಹಿತಿ ದೊರೆತಿಲ್ಲ. ಆದರೆ, ಎಲ್ಲ ಕಡೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಬೇರೆ ಕಂಪನಿಗಳ ವ್ಯಾಪ್ತಿಯಲ್ಲಿ ತಲಾ ಒಂದು ಸಾವಿರದಿಂದ 1,500 ಫಲಾನುಭವಿಗಳ ಮಾಹಿತಿ ಸಂಗ್ರಹಿಸಿರುವ ಅಂದಾಜಿದೆ ಎಂದು ಮೂಲಗಳು ತಿಳಿಸಿವೆ.

ಮೀಟರ್ ರೀಡರ್‌ಗಳು ಹಾಗೂ ಸಿಬ್ಬಂದಿ ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಿ, ಸೇವಾ ಸಿಂಧು ಮೊಬೈಲ್ ಆ್ಯಪ್‌ನಲ್ಲಿ ದಾಖಲಿಸಿದರು. ಈ ಕಾರ್ಯ ಆಗಸ್ಟ್ 31ರವರೆಗೆ ನಡೆಯಲಿದೆ.

ಸರ್ವರ್ ಸಮಸ್ಯೆಯಿಂದಾಗಿ ಬುಧವಾರ ಮಾಹಿತಿ ಸಂಗ್ರಹಿಸಲು ಆಗಲಿಲ್ಲ. ಗುರುವಾರ ಈ ಸಮಸ್ಯೆ ಬಗೆಹರಿಯುವ ಸಾಧ್ಯತೆ ಇದೆ. ಒಬ್ಬ ಮೀಟರ್ ರೀಡರ್‌ಗೆ ಸರಾಸರಿ 4ರಿಂದ 5 ಸಾವಿರ ಮನೆಗಳ ಜವಾಬ್ದಾರಿ ವಹಿಸಲಾಗಿದೆ. ಇದರಲ್ಲಿ ಒಂದು ಸಾವಿರ ಮನೆಗಳು ಗೃಹಜ್ಯೋತಿ ವ್ಯಾಪ್ತಿಗೆ ಬರುವುದಿಲ್ಲ ಎಂದು ಅಂದಾಜಿಸಿದರೂ, ಉಳಿದ ಮನೆಗಳಿಂದ ಮಾಹಿತಿ ಸಂಗ್ರಹಿಸಬೇಕಾಗುತ್ತದೆ ಎಂದು ಮೀಟರ್ ರೀಡರ್ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಮೊಬೈಲ್ ಆ್ಯಪ್ ಜೊತೆಗೆ ಮುದ್ರಿತ ಘೋಷಣಾ ಪತ್ರವನ್ನು ಫಲಾನುಭವಿಗಳ ಸಮ್ಮುಖದಲ್ಲಿ ಸಿಬ್ಬಂದಿ ಭರ್ತಿ ಮಾಡಿಕೊಂಡರು. ಫಲಾನುಭವಿಯ ವಿದ್ಯುತ್ ಖಾತೆ ಸಂಖ್ಯೆ, ಗೃಹ ಜ್ಯೋತಿ ನೋಂದಣಿ ಸಮಯದಲ್ಲಿ ನೀಡಿದ್ದ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ ಸೇರಿದಂತೆ, ಫಲಾನುಭವಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ , ಪ್ಯಾನ್ ಕಾರ್ಡ್, ಬಾಡಿಗೆ/ಭೋಗ್ಯ (ಲೀಸ್) ಕರಾರು ಪತ್ರ (ಅನ್ವಯಿಸಿದರೆ ಮಾತ್ರ) ಹಾಗೂ ಪ್ರವರ್ಗದ ಮಾಹಿತಿ ಪಡೆದರು. ಈ ಎಲ್ಲ ದಾಖಲೆಗಳನ್ನು ಸಿದ್ಧಪಡಿಸಿ ಕೊಂಡು, ಸಿಬ್ಬಂದಿ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಒದಗಿಸುವಂತೆ ಅಧಿಕಾರಿಗಳು ಫಲಾನುಭವಿಗಳಿಗೆ ಮನವಿ ಮಾಡಿದ್ದಾರೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು 68.86 ಲಕ್ಷ ಗೃಹ ಜ್ಯೋತಿ ಫಲಾನುಭವಿಗಳಿದ್ದು, ಅವರು ನೋಂದಣಿ ಸಮಯದಲ್ಲಿ ನೀಡಿರುವ ಮೊಬೈಲ್ ಸಂಖ್ಯೆಗೆ ಮಾಹಿತಿ ಸಂಗ್ರಹ ಹಾಗೂ ಸಿಬ್ಬಂದಿ ಭೇಟಿ ಕುರಿತು ಎಸ್‌ಎಮ್‌ಎಸ್ ಸಂದೇಶ ಕಳುಹಿಸಲಾಗಿದೆ. ಮುದ್ರಿತ ಘೋಷಣಾ ಪತ್ರದಲ್ಲಿ ಫಲಾನುಭವಿಗಳ ಸಹಿಯನ್ನು ಪಡೆದುಕೊಳ್ಳಬೇಕು. ಒಂದು ವೇಳೆ ಮಾಹಿತಿ ಪರಿಶೀಲನೆ ಸಮಯದಲ್ಲಿ ಫಲಾನುಭವಿ ಸ್ಥಳದಲ್ಲಿ ಲಭ್ಯವಿಲ್ಲದಿದ್ದರೆ ಫಲಾನುಭವಿಯ ಹತ್ತಿರದ ಸಂಬಂಧಿಯ ಸಹಿಯನ್ನು ಪಡೆಯಲು ಸಿಬ್ಬಂದಿಗೆ ಸೂಚಿಸಲಾಗಿದೆ.

ಬೆಸ್ಕಾಂ ಸಿಬ್ಬಂದಿ ಮನೆ-ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಫಲಾನುಭವಿಗಳು ನೀಡಿರುವ ಮಾಹಿತಿಯು ಅಪೂರ್ಣವಾಗಿದ್ದರೆ, ಅವರು ನೀಡಿರುವ ಮಾಹಿತಿಗಳನ್ನು ಮೊಬೈಲ್ ಆ್ಯಪ್‌ನ ಡ್ರಾಫ್ಟ್‌ನಲ್ಲಿ ಉಳಿಸಿಕೊಂಡು, ಮತ್ತೊಮ್ಮೆ ಫಲಾನುಭವಿಯ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿದೆ.

ಬೆಂಗಳೂರಿನ ಮನೆಯೊಂದರಲ್ಲಿ ಬೆಸ್ಕಾಂ ಸಿಬ್ಬಂದಿ ಬುಧವಾರ ಮಾಹಿತಿ ಸಂಗ್ರಹಿಸಿದರು

'ಯಾವುದೇ ನಿರ್ಧಾರವಾಗಿಲ್ಲ'

ಗೃಹಜ್ಯೋತಿ ಯೋಜನೆಯ ಫಲಾನುಭವಿಗಳಿಂದ ಮಾಹಿತಿಯನ್ನು ಅಷ್ಟೇ ಸಂಗ್ರಹಿಸಲಾಗುತ್ತಿದೆ. ಯಾವ ವರ್ಗದವರನ್ನು ಕೈಬಿಡಬೇಕು ಎಂಬ ಬಗ್ಗೆ ಚರ್ಚೆಯಾಗಿಲ್ಲ. ಹೀಗಾಗಿ ಯಾರೂ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ಬೆಸ್ಕಾಂನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ತಿಂಗಳಿಗೆ 200 ಯೂನಿಟ್ ಒಳಗೆ ವಿದ್ಯುತ್ ಬಳಕೆ ಮಾಡುವ ಎಲ್ಲರಿಗೂ ಈಗ ಉಚಿತ ವಿದ್ಯುತ್ ಸೌಲಭ್ಯವಿದೆ. ಪರಿಶೀಲನೆ ನಂತರ ರಾಜ್ಯದಲ್ಲಿ ಮತದಾನದ ಹಕ್ಕು ಹೊಂದಿಲ್ಲದೆ ಇರುವವರು, ಆದಾಯ ತೆರಿಗೆ ಪಾವತಿದಾರರು ಸೇರಿದಂತೆ ಕೆಲವರನ್ನು ಕೈಬಿಡುವ ಸಾಧ್ಯತೆ ಇದೆ.

ಸುದ್ದಿ 2 ನಿಮಿಷ

'ಕಾನೂನು ಕ್ರಮ ಕೈಗೊಳ್ಳಿ'

ಬೆಂಗಳೂರು: 'ಚಿಕ್ಕಬಳ್ಳಾಪುರದಲ್ಲಿ ಕೆಂಪೇಗೌಡ ಜಯಂತಿ ಆಚರಣೆ ವೇಳೆ ಶಾಸಕ ಪ್ರದೀಪ್ ಈಶ್ವರ್ ಮೇಲೆ ಚಪ್ಪಲಿ ಎಸೆದು, ಅವಾಚ್ಯ ಶಬ್ಧಗಳಿಂದ ನಿಂದಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ.ರಾಮಚಂದ್ರಪ್ಪ ಒತ್ತಾಯಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಪೊಲೀಸರ ಸಮ್ಮುಖದಲ್ಲೇ ಆಡಳಿತ ಪಕ್ಷದ ಶಾಸಕರಿಗೆ ಅವಮಾನಿಸಿರುವುದನ್ನು ಒಕ್ಕೂಟ ಖಂಡಿಸುತ್ತದೆ. ಶೋಷಿತ ಸಮುದಾಯಕ್ಕೆ ಸೇರಿದ ಜನ ಪ್ರತಿನಿಧಿಯ ಮೇಲೆ ದೌರ್ಜನ್ಯ ನಡೆದಿರುವಾಗ ಧ್ವನಿ ಇಲ್ಲದ ಜನರ ಪರಿಸ್ಥಿತಿ ಏನು' ಎಂದು ಪ್ರಶ್ನಿಸಿದರು. 'ರಾಜ್ಯದ ಯಾವುದೇ ಮೂಲೆಯಲ್ಲಿ ಹಿಂದುಳಿದವರ ಮೇಲೆ ದಬ್ಬಾಳಿಕೆ ನಡೆದರೆ ಒಕ್ಕೂಟವು ತೀವ್ರ ಹೋರಾಟ ನಡೆಸಲಿದೆ. ಘಟನೆಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕ್ಷಮೆಯಾಚಿಸಬೇಕು' ಎಂದು ಒತ್ತಾಯಿಸಿದರು.



ಗೋಷ್ಠಿಯಲ್ಲಿ ಮಾವಳ್ಳಿ ಶಂಕರ್, ಕೆ.ವೆಂಕಟಸುಬ್ಬರಾಜು, ಬಸವರಾಜ ಲ. ಬಸಲಿಗುಂದಿ, ಜಿ.ಡಿ.ಗೋಪಾಲ್, ಬಾಲಕೃಷಸ್ವಾಮಿ ಯಾದವ್, ರಂಗಪ್ಪ, ಮಹಾಂತೇಶ್ ಎಸ್. ಕೌಲಗಿ, ಬಿ.ಟಿ.ಜಗದೀಶ್, ಬಸವರಾಜ ಮಾಳಗೆ ಪಾಲ್ಗೊಂಡಿದ್ದರು.

'ಭಿನ್ನಮತ ಬಿಟ್ಟು ಕೆಲಸ ಮಾಡಿ'

ಬೆಂಗಳೂರು: ಪರಸ್ಪರ ಕಾಲೆಳೆದುಕೊಳ್ಳುವುದನ್ನು ಬಿಡಿ ಮತ್ತು ಭಿನ್ನಮತ ಮರೆತು ಒಟ್ಟಿಗೇ ಚುನಾವಣೆಗೆ ಸಿದ್ದತೆ ಮಾಡಿಕೊಳ್ಳಿ ಎಂದು ರಾಜ್ಯ ಬಿಜೆಪಿ ನಾಯಕರಿಗೆ ಆರ್‌ಎಸ್‌ಎಸ್ ಪ್ರಮುಖರು ಕಿವಿಮಾತು ಹೇಳಿದ್ದಾರೆ.

ಪಾಲಿಕೆಗಳ ಚುನಾವಣೆಗೆ ಸಿದ್ಧತೆ ಕುರಿತಾಗಿ ರಾಜ್ಯ ಬಿಜೆಪಿ ನಾಯಕರ ಜತೆ ಆರ್‌ಎಸ್‌ಎಸ್ ರಾಷ್ಟ್ರೀಯ ಸಹ ಸರಕಾರ್ಯವಾಹ ಸಿ.ಆರ್.ಮುಕುಂದ ಮತ್ತು ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯವಾಹ ತಿಪ್ಪೇಸ್ವಾಮಿ ಅವರು ಬುಧವಾರ ಸಭೆ ನಡೆಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಷಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರು, ಸಂಸದರು ಸಭೆಯಲ್ಲಿ ಭಾಗಿಯಾಗಿದ್ದರು. ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನದಿಂದಾಗಿ ಪಕ್ಷಕ್ಕೆ ಮುಜುಗರವಾಗಿದೆ. ಆ ಎಲ್ಲ ಭಿನ್ನಮತವನ್ನು ಬದಿಗೊತ್ತಿ, ಪಕ್ಷದ ಬಲವರ್ಧನೆಗೆ ದುಡಿಯಬೇಕು ಎಂದು ಆರ್‌ಎಸ್‌ಎಸ್ ಪ್ರಮುಖರು ತಾಕೀತು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ನಾಯಕರ ನಡುವೆ ಸಮನ್ವಯದ ಕೊರತೆ, ಪರಸ್ಪರ ಕಾಲೆದುಕೊಳ್ಳುವುದು, ಚರ್ಚೆ- ಸಮಾಲೋಚನೆಯಿಲ್ಲದ ವೈರುಧ್ಯದ ನಡೆಯಿಂದ ಪಕ್ಷಕ್ಕೆ ಹಿನ್ನಡೆಯಾಗುತ್ತಿದೆ. ಜನರಿಗೂ ಪಕ್ಷದ ಬಗ್ಗೆ ಗೊಂದಲ ಮೂಡುತ್ತಿದೆ. ಈ ಕಾರಣದಿಂದಲೇ ಈ ಸಭೆ ನಡೆಸುವ ಅನಿವಾರ್ಯ ಸ್ಥಿತಿ ಎದುರಾಗಿದೆ. ಮತ್ತೆ ಇಂತಹ ಸ್ಥಿತಿ ಬರದೇ ಇರುವ ರೀತಿ ನಡೆದುಕೊಳ್ಳಬೇಕು ಎಂಬ ಎಚ್ಚರಿಕೆ ನೀಡಿದ್ದಾರೆ ಎಂದು ಮಾಹಿತಿ ನೀಡಿವೆ.

'ಎಸ್‌ಐಆರ್‌ನಲ್ಲಿ ಭಾಗಿಯಾಗಿ': ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪಕ್ಷದ ದೃಷ್ಟಿಯಿಂದ ಬಹಳಮುಖ್ಯವಾದುದು. ಹೀಗಾಗಿ ಪಕ್ಷದ ಎಲ್ಲ ನಾಯಕರೂ ಸಕ್ರಿಯವಾಗಿ ಎಸ್‌ಐಆರ್‌ನಲ್ಲಿ ಭಾಗಿಯಾಗಬೇಕು ಎಂದು ಆರ್‌ಎಸ್‌ಎಸ್ ಪ್ರಮುಖರು ಬಿಜೆಪಿ ನಾಯಕರಿಗೆ ಸೂಚಿಸಿದ್ದಾರೆ.

'ಬಿಎಲ್‌ಎ ನೇಮಕ ಮತ್ತು ಕಾರ್ಯಕರ್ತರಿಗೆ ತರಬೇತಿ ನೀಡುವುದರಿಂದ ಎಸ್‌ಐಆರ್‌ನಲ್ಲಿ ಭಾಗಿಯಾದಂತಾಗುವುದಿಲ್ಲ. ಶಾಸಕರು, ಸಂಸದರು ಸೇರಿ ಎಲ್ಲ ನಾಯಕರೂ ಕ್ಷೇತ್ರಕ್ಕಿಳಿದು ಕೆಲಸ ಮಾಡಬೇಕು ಎಂದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಬಿಜೆಪಿ ಅಧಿಕಾರಕ್ಕೆ ಬಂದರೆ ಹುಂಡಿ ಕಳ್ಳರಿದ್ದಾರೆಂದು ಫಲಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತವನ್ನು ಮೊಹಮ್ಮದ್ ಘಜ್ನಿ 17 ಬಾರಿ ಲೂಟಿ ಮಾಡಿದ್ದಾನೆ ಎಂದು ಓದಿದ್ದೇವೆ. ಅವರನ್ನು ಬಿಟ್ಟರೆ ದೇವಸ್ಥಾನಗಳನ್ನು ಅತಿ ಹೆಚ್ಚು ಲೂಟಿ ಮಾಡಿರುವವರು ಆರ್‌ಎಸ್‌ಎಸ್ ಹಾಗೂ ಬಿಜೆಪಿಯವರು. ದೇವರ ಬಗ್ಗೆ ಇವರು ನಮಗೆ ಪಾಠ ಮಾಡುತ್ತಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ಭಾರತ ಜೋಡೊ ಭವನದಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಬಿಜೆಪಿ ಅಧಿಕಾರಕ್ಕೆ ಬಂದರೆ ದೇವಸ್ಥಾನದ ಮುಂದೆ ಹುಂಡಿ ಕಳ್ಳರಿದ್ದಾರೆಂದು ಫಲಕ ಹಾಕಬೇಕು ಎಂಬಂತಾಗಿದೆ' ಎಂದು ವ್ಯಂಗ್ಯವಾಡಿದರು.

'ಬಿಜೆಪಿಯವರು ಮಾಡಿಸುವ ಜಾತಿ, ಧರ್ಮದ ಹೆಸರಿನ ಗಲಾಟೆಯಲ್ಲಿ ಜೈಲಿಗೆ ಹೋಗುವವರು ದಲಿತರು, ಶೂದ್ರರು. ಆದರೆ, ರಾಮಮಂದಿರ ಲೂಟಿ ಮಾಡಿದವರು ಯಾರು? ದಲಿತರು, ಶೂದ್ರರೇ? ದೇವಸ್ಥಾನ ಕಟ್ಟಲು ಹೊರಟವರೇ ಲೂಟಿ ಹೊಡೆದಿದ್ದಾರೆ. ಆದರೂ ಪ್ರಧಾನಿ ಮೋದಿ ತುಟಿ ಬಿಚ್ಚುತ್ತಿಲ್ಲ. ಇದಕ್ಕೆ ಹೊಣೆ ಯಾರು' ಎಂದು ಪ್ರಶ್ನಿಸಿದರು.

ಬಿ.ಕೆ. ಹರಿಪ್ರಸಾದ್

ನಾನೂ ಹಿಂದು: 'ನಾನು ಹೆಮ್ಮೆಯಿಂದ ಹಿಂದು ಎಂದು ಹೇಳಿಕೊಳ್ಳುತ್ತೇನೆ. ನಾನು ಪಾಲಿಸುವ ಹಿಂದು ಧರ್ಮ ಮಹಾತ್ಮ ಗಾಂಧಿ, ವಿವೇಕಾನಂದ, ನಾರಾಯಣ ಗುರು, ಕನಕದಾಸ, ಬಸವಣ್ಣ ಹೇಳುವ ಧರ್ಮ. ಗೋಡ್ಸೆ, ಹೆಡಗೇವಾರ್ ಹೇಳುವ ಹಿಂದೂ ಧರ್ಮ ಪಾಲಿಸಲ್ಲ' ಎಂದು ಹೇಳಿದರು.

'ಕೆಪಿಸಿಸಿ ಪ್ರಚಾರ ಸಮಿತಿಯ ಕೆಲಸ ಕಾಂಗ್ರೆಸ್ ಸರ್ಕಾರದ ಆಚಾರ, ವಿಚಾರ ಪ್ರಚಾರ ಮಾಡುವುದು. ಅದರ ಹೊರತಾಗಿ ನೀವು ಬೇರೆ ಏನನ್ನೂ ಮಾಡಬೇಡಿ. ಬೆಂಗಳೂರಿನಲ್ಲಿ ಸದ್ಯದಲ್ಲೇ ಚುನಾವಣೆ ಬರಲಿದೆ. ಅದಕ್ಕೆ ಸಿದ್ಧರಾಗಿ' ಎಂದು ಮನವಿ ಮಾಡಿದರು.

ಪ್ರಚಾರ ಸಮಿತಿಯ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ಮಾಜಿ ಸಚಿವರಾದ ರಾಣಿ ಸತೀಶ್, ಕಿಮ್ಮನೆ ರತ್ನಾಕರ್, ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನಮಂತಯ್ಯ ಮತ್ತಿತರರು ಇದ್ದರು.

'ಬೆಂಗಳೂರು ದಕ್ಷಿಣ ಜಿಲ್ಲೆಗೆ ಹೊಸರೂಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮನಗರದ ನಗರ ಪ್ರದೇಶ ಮಾತ್ರವಲ್ಲ, ಇಡೀ ಬೆಂಗಳೂರು ದಕ್ಷಿಣ ಜಿಲ್ಲೆಗೆ ಹೊಸ ರೂಪ ನೀಡಬೇಕು ಎಂಬುದು ನನ್ನ ಸಂಕಲ್ಪ. ಈಗ ಮಾಡದಿದ್ದರೆ, ಮತ್ಯಾವ ಸಮಯದಲ್ಲೂ ಮಾಡಲು ಸಾಧ್ಯವಿಲ್ಲ ಎಂಬ ಅರಿವಿದೆ. ಇದನ್ನು ಹಂತ ಹಂತವಾಗಿ ಮಾಡುತ್ತೇವೆ' ಎಂದು ರಾಮನಗರದ ಜನರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ರಾಮನಗರದ ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ನೇತೃತ್ವದಲ್ಲಿ ಅಲ್ಲಿನ ರೈತ ಮುಖಂಡರು ಹಾಗೂ ನಾಗರಿಕರು ಶಿವಕುಮಾರ್ ಅವರನ್ನು ಗೃಹ ಕಚೇರಿ 'ಕೃಷ್ಣಾ'ದಲ್ಲಿ ಬುಧವಾರ ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ಸಲ್ಲಿಸಿದರು.

ರಾಮನಗರದ ಸಿಎಂಸಿ ಕಚೇರಿ ಬಳಿ ವಾಣಿಜ್ಯ ಸಂಕೀರ್ಣ, ಅಂಬೇಡ್ಕರ್ ಭವನದ ನವೀಕರಣ, ರಾಮನಗರ ರೈಲ್ವೆ ನಿಲ್ದಾಣದಿಂದ ಸಿಎಂಸಿ ವ್ಯಾಪ್ತಿಯ ರಸ್ತೆ ವಿಸ್ತರಣೆ, ವಿವಿಧ ವಾರ್ಡ್‌ಗಳ ವಿಸ್ತರಣೆ, ಅಭಿವೃದ್ಧಿ ಕಾರ್ಯ ಸೇರಿದಂತೆ ತಾಲ್ಲೂಕಿನಲ್ಲಿ ₹772.70 ಕೋಟಿ ಮೊತ್ತದ 18 ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಶಿವಕುಮಾರ್, 'ಈಗಾಗಲೇ ವೈದ್ಯಕೀಯ ವಿಶ್ವವಿದ್ಯಾಲಯ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಕ್ಷೇತ್ರ ಹಾಗೂ ಜಿಲ್ಲೆ ಈ ಹಿಂದೆ ಹೇಗಿತ್ತು ಎಂದು ನಾನು ಈಗ ಚರ್ಚೆ ಮಾಡುವುದಿಲ್ಲ, ಹೇಳಿದರೆ ಅದು ರಾಜಕೀಯವಾಗುತ್ತದೆ. ಈಗ ನಮ್ಮ ಮೇಲೆ ಜವಾಬ್ದಾರಿ ಇದೆ. ಈ ಭಾಗದ ಅನುಕೂಲಕ್ಕೆ ಏನು ಮಾಡಬೇಕೊ ಅದನ್ನು ಮಾಡುತ್ತೇವೆ. ಬಡವರಿಗೆ ಯಾವ ರೀತಿ ನಿವೇಶನ ಹಂಚಿಕೆ ಮಾಡಬೇಕು ಎಂದು ಈಗಾಗಲೇ ನಿಮ್ಮ ಶಾಸಕರಾದ ಇಕ್ಬಾಲ್ ಹುಸೇನ್ ಅವರಿಗೆ ಮಾರ್ಗದರ್ಶನ ನೀಡಿದ್ದೇನೆ. ಮೊದಲ ಹಂತದಲ್ಲಿ ನಿವೇಶನ ಹಂಚಿಕೆಗೆ ಶೀಘ್ರದಲ್ಲೇ ಹಣ ಬಿಡುಗಡೆ ಮಾಡಲಾಗುವುದು' ಎಂದರು.

ವಿರೋಧ ಪಕ್ಷದವರಿಗೆ ಸಹಿಸಲು ಆಗುತ್ತಿಲ್ಲ: 'ನಾವು ಅಧಿಕಾರಕ್ಕೆ ಬಂದಿರುವುದನ್ನು ವಿರೋಧ ಪಕ್ಷದವರಿಗೆ ಸಹಿಸಲು ಆಗುತ್ತಿಲ್ಲ. ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿದ ನಂತರ ಹೇಗೆ ಗೌರವ ಬಂದಿದೆ ಎಂದು ನೀವು ಗಮನಿಸಿದ್ದೀರಿ. ಜನ ನಿಮ್ಮನ್ನು ಹೇಗೆ ನೋಡುತ್ತಿದ್ದಾರೆ. ನಿಮ್ಮ ಆಸ್ತಿ ಮೌಲ್ಯ ಎಷ್ಟಾಗಿದೆ ನಿಮಗೆ ಗೊತ್ತಿದೆ. ನೀವುಗಳು ಎಲ್ಲರನ್ನೂ ವಿಶ್ವಾಸಕ್ಕೆ ಪಡೆದು ಕೆಲಸ ಮಾಡಿ. ಬೇರೆ ಪಕ್ಷದವರು ಸಂಪರ್ಕ ಮಾಡಲು ಇಚ್ಛಿಸುತ್ತಿದ್ದಾರೆ. ಅವರನ್ನು ಸೇರಿಸಿಕೊಂಡು ಮುಂದಿನ ಚುನಾವಣೆ ಸುಗಮವಾಗಿ ನಡೆಯುವಂತೆ ಮಾಡಿ. ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳುವ ಕೆಲಸ ಮಾಡುತ್ತೇವೆ. ನಿಮಗೆ ಒಳ್ಳೆಯದಾಗುವಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ' ಎಂದರು.

'ಹುಷಾರಾಗಿರಿ'

ಡಿ.ಕೆ. ಶಿವಕುಮಾರ್

'ನನ್ನ ಹೆಸರು ಹೇಳಿಕೊಂಡು ಕೆಲವರು ಏಜೆಂಟರಂತೆ ಬರುತ್ತಾರೆ. ಅಂತಹವರಿಂದ ಹುಷಾರಾಗಿರಿ. ನಿಮ್ಮ ಊರಿನ ಅಭಿವೃದ್ಧಿ ವಿಚಾರ ಹೊರತುಪಡಿಸಿ, ಅಧಿಕಾರಿಗಳು, ಗುತ್ತಿಗೆದಾರರ ವಿಚಾರಕ್ಕೆ ತಲೆಕೆಡಿಸಿಕೊಳ್ಳಬೇಡಿ. ಮುಖ್ಯಮಂತ್ರಿ ಜಿಲ್ಲೆ ಎಂದರೆ ಯಾವತ್ತೂ ಇಲ್ಲದ ನೆಂಟರು ಕೂಡಲೇ ಹುಟ್ಟಿಕೊಳ್ಳುತ್ತಾರೆ. ಅಂತಹವರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳಬೇಡಿ. ಅಂತಹವರು ಬಂದು ಏನಾದರೂ ಕೇಳಿದರೆ, ನೀವುಂಟು, ಅವರುಂಟು ಎಂದು ಹೇಳಿ' ಎಂದು ಸಲಹೆ ನೀಡಿದರು.

'ಕ್ಷೇತ್ರವನ್ನೇ ಬಿಟ್ಟು ಹೋದವರು ಈಗ ಮತ್ತೆ ಬಂದು ವಿರೋಧ ಮಾಡುತ್ತಿದ್ದಾರೆ. ನಾನು ಯಾವ ಊರನ್ನೂ ಒಕ್ಕಲೆಬ್ಬಿಸುವುದಿಲ್ಲ.ಆ ಊರುಗಳು ಅಭಿವೃದ್ಧಿಯಾಗುತ್ತವೆ. ಆ ಭಾಗದ ಜನರಿಗೆ ಪರಿಹಾರ ನೀಡಲಾಗುವುದು. ಎರಡು-ಮೂರು ಹಳ್ಳಿಗಳನ್ನು ಸೇರಿಸಿ ಅಧಿಸೂಚನೆ ಹೊರಡಿಸುತ್ತಿದ್ದೇವೆ. ಕೆಲವರು ರಾಜಕಾರಣ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.



'ಟಿಇಟಿಯಲ್ಲಿ ಕನ್ನಡಕ್ಕೆ ಅವಕಾಶ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ (ಎನ್‌ಸಿಟಿಇ) ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ನಿಯಮಾವಳಿ ಪ್ರಕಾರ ಮಹಾರಾಷ್ಟ್ರ ಸರ್ಕಾರವು ಟಿಇಟಿಯನ್ನು ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ನಡೆಸಬೇಕು ಎಂಬ ಆಗ್ರಹ ವ್ಯಕ್ತವಾಗಿದೆ.

ಪರೀಕ್ಷೆಯನ್ನು ಕೇವಲ ಮರಾಠಿ ಭಾಷೆಯಲ್ಲಿ ನಡೆಸಿರುವುದರಿಂದ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಪ್ರೊ.ಬಿ.ಕೆ.ಆರ್.ರಾವ್ ಬೈಂದೂರು ಹಾಗೂ ಕನ್ನಡಪರ ಸಂಘಟನೆಗಳ ಮುಖಂಡರು ಆರೋಪಿಸಿದ್ದಾರೆ.

ಮಹಾರಾಷ್ಟ್ರ ಸರ್ಕಾರ ಮತ್ತು ಪರೀಕ್ಷಾ ಪ್ರಾಧಿಕಾರದ ಧೋರಣೆಯನ್ನು ಖಂಡಿಸಿದ್ದು, ಕನ್ನಡದಲ್ಲೂ ಟಿಇಟಿ ಪರೀಕ್ಷೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಹೇರ್ ವತಿಯಿಂದ ಪ್ರಭಾಕರ ಕೋರೆ ಅವರನ್ನು ಸನ್ಮಾನಿಸಲಾಯಿತು

ಕೆಎಲ್‌ಇ ಸಂಸ್ಥೆ ಬಳಗಕ್ಕೆ 'ಪದ್ಮಶ್ರೀ' ಸಮರ್ಪಣೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಅವಿರತ ಶ್ರಮ, ಬದ್ಧತೆ ಮತ್ತು ಸಹಕಾರದ ಮೂಲಕ ಕೆಎಲ್‌ಇ ಸಂಸ್ಥೆ ಬೆಳವಣಿಗೆಗೆ ಎಲ್ಲ ಶಿಕ್ಷಕರು ಹಾಗೂ ಸಿಬ್ಬಂದಿ ಕೊಡುಗೆ ನೀಡಿದ್ದಾರೆ. ನನಗೆ ಸಿಕ್ಕಿರುವ ಪದ್ಮಶ್ರೀ ಪ್ರಶಸ್ತಿಯನ್ನು ಅವರಿಗೆ ಸಮರ್ಪಿಸುತ್ತೇನೆ' ಎಂದು ಕೆಎಲ್‌ಇ ಸಂಸ್ಥೆ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಹೇಳಿದರು.

'ಪದ್ಮಶ್ರೀ' ಗೌರವಕ್ಕೆ ಭಾಜನರಾದ ಪ್ರಯುಕ್ತ ನಗರದಲ್ಲಿ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್ ಆ್ಯಂಡ್ ರಿಸರ್ಚ್‌ನವರು ಬುಧವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಾಮೂಹಿಕ ಪ್ರಯತ್ನದಿಂದ ಕೆಎಲ್‌ಇ ಸಂಸ್ಥೆಯು ಕಳೆದ 110 ವರ್ಷಗಳಲ್ಲಿ ಬೃಹದಾಕಾರವಾಗಿ ಬೆಳೆದಿದೆ. ಈ ಶ್ರೀಮಂತ ಪರಂಪರೆ ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ಇಂದಿನ ಆಡಳಿತ ಮಂಡಳಿ ಮೇಲಿದೆ. ಕೆಎಲ್‌ಇ ಸಂಸ್ಥೆಯ ಬೆಳವಣಿಗೆಗಾಗಿ ಎಲ್ಲರೂ ಸಮರ್ಪಣಾ ಭಾವದಿಂದ ಕಾರ್ಯ ನಿರ್ವಹಿಸಬೇಕು' ಎಂದು ಕರೆನೀಡಿದರು.

ಕಾಹೇರ್ ಕುಲಪತಿ ಡಾ.ಸಂದೀಪ ಶ್ರೀವಾಸ್ತವ, ಡಾ. ಎಚ್.ಬಿ.ರಾಜಶೇಖರ ಮಾತನಾಡಿದರು. ಕೆಎಲ್‌ಇ ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ, ಉಪಾಧ್ಯಕ್ಷ ಬಸವರಾಜ ತಟವಟಿ, ಆಶಾತಾಯಿ ಕೋರೆ, ನಿರ್ದೇಶಕರಾದ ಎಂ.ಕೆ. ಕವಟಗಿಮಠ, ಜಯಾನಂದ ಮುನವಳ್ಳಿ, ಡಾ.ವಿ.ಐ.ಪಾಟೀಲ, ವೈ.ಎಸ್.ಪಾಟೀಲ, ಪ್ರವೀಣ ಬಾಗೇವಾಡಿ, ಡಾ.ಪ್ರೀತಿ ದೊಡ್ಡವಾಡ, ಕಾಹೇರ್ ಕುಲಸಚಿವ ಡಾ.ವಿ.ಎಂ.ಪಟ್ಟಣಶೆಟ್ಟಿ ಮತ್ತು ಡಾ.ಚಂದ್ರ ಮೆಟಗುಡ್ ಇದ್ದರು.

ಪತ್ರಿಕಾ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಮತ

ಸುಳ್ಳು ಸುದ್ದಿಗಳು ವೈರಸ್ ಇದ್ದಂತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಸುದ್ದಿಗಳು ವೈರಸ್ ಇದ್ದ ಹಾಗೆ. ಅವುಗಳನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ನಿಯಮಗಳನ್ನು ತಂದಿವೆ. ನಾವು ಬಹಳ ಎಚ್ಚರಿಕೆಯಿಂದ ಇದ್ದೇವೆ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಬುಧವಾರ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಪ್ರಸಾರ ಮಾಡಲು 24 ಗಂಟೆಯೂ ಸುದ್ದಿ ಬೇಕು. ಅದಕ್ಕಾಗಿ ಸತ್ಯ, ಸುಳ್ಳು ಎಲ್ಲ ತರಹದ ಸುದ್ದಿಗಳನ್ನು ಹಾಕುತ್ತೀರಿ. ಅದರಿಂದ ಹಲವು ಬಾರಿ ಘನತೆಗೆ ಕುಂದುಂಟಾಗಿದೆ' ಎಂದರು.

'ಏಳೆಂಟು ತಿಂಗಳಿನಿಂದ ಆರೋಗ್ಯ ತಪಾಸಣೆ ಮಾಡಿಸಿರಲಿಲ್ಲ. ಅದಕ್ಕಾಗಿ ಬುಧವಾರ ಬೆಳಿಗ್ಗೆ ಸಾಮಾನ್ಯ ಆರೋಗ್ಯ ತಪಾಸಣೆ ಮಾಡಿಸಲು ಆಸ್ಪತ್ರೆಗೆ ಹೋಗಿದ್ದೆ. ಅದನ್ನೇ ಆಸ್ಪತ್ರೆಗೆ ದಾಖಲಾಗಿದ್ದೇನೆ ಎಂದು ವರದಿ ಮಾಡಿದ್ದವು. ಇದೇ ರೀತಿ ಮೇಕೆದಾಟು ಪಾದಯಾತ್ರೆಯ ಸಂದರ್ಭದಲ್ಲಿ ನಿತ್ರಾಣಗೊಂಡಿದ್ದ ವೇಳೆ ಕಾರ್ಯಕರ್ತರ ತಳ್ಳಾಟದಿಂದ ನಾನು ಕಂಪಿಸಿದ್ದನ್ನೇ ಕುಡಿದು ನಡೆಯುತ್ತಿದ್ದಾರೆ ಎಂದು ಬಿಂಬಿಸಿದ್ದರು. ಬೇರೆಯವರಿಗೆ ಮಜಾ ನೀಡಲು ನಮ್ಮನ್ನು ಬಳಸಬೇಡಿ' ಎಂದು ಮನವಿ ಮಾಡಿದರು.

'ಡಿಜಿಟಲ್ ಯುಗದಲ್ಲಿ ನಿಜ ಪತ್ರಕರ್ತರು ಯಾರು?' ಕುರಿತ ವಿಚಾರ ಸಂಕಿರಣದಲ್ಲಿ ವಾರ್ತಾ ಭಾರತಿ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ದಿನೇಶ್ ಗುಂಡೂರಾವ್ ಮಾತನಾಡಿ, 'ಮಾಧ್ಯಮಗಳು ಚೆನ್ನಾಗಿವೆ ಎಂದರೆ ಆ ದೇಶ ಚೆನ್ನಾಗಿದೆ ಎಂದರ್ಥ' ಎಂದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಆರ್. ಪೂರ್ಣಿಮಾ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ತೆಲಂಗಾಣ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಕೆ. ಶ್ರೀನಿವಾಸ ರೆಡ್ಡಿ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಎಂ.ಎನ್. ಅನುಚೇತ್, ಮಾಧ್ಯಮ ಅಕಾಡೆಮಿ ಕಾರ್ಯದರ್ಶಿ ಸಹನಾ ಎಂ. ಉಪಸ್ಥಿತರಿದ್ದರು.

ಪತ್ರಿಕಾ ದಿನಾಚರಣೆಯಲ್ಲಿ ಆಯೇಶಾ ಖಾನಂ, ಶಿವಾನಂದ ತಗಡೂರು, ಎಂ.ಎನ್. ಅನುಚೇತ್, ಕೆ. ಶ್ರೀನಿವಾಸ ರೆಡ್ಡಿ, ದಿನೇಶ್ ಗುಂಡೂರಾವ್, ಅಬ್ದುಸ್ಸಲಾಂ ಪುತ್ತಿಗೆ, ವೂಡೇ ಪಿ. ಕೃಷ್ಣ, ಪುರುಷೋತ್ತಮ ಬಿಳಿಮಲೆ ಅವರು ಮಾಧ್ಯಮ ಗ್ಯಾಲರಿ ಚಿತ್ರ ಸಂಪುಟ ಬಿಡುಗಡೆ ಮಾಡಿದರು ಪ್ರಜಾವಾಣಿ ಚಿತ್ರ

> **ನನ್ನ ತಂದೆ ಆರ್. ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದಾಗ ನಿರ್ಭೀತಿಯಿಂದ ಟೀಕಿಸಿ ಬರೆಯಲಾಗುತ್ತಿತ್ತು. ಅಂಥ ನಿರ್ಭೀತಿಯ ಮಾಧ್ಯಮ ಈಗಲೂ ಬೇಕಾಗಿದೆ**
> **ದಿನೇಶ್ ಗುಂಡೂರಾವ್,** ಶಾಸಕ

'ಮುದ್ರಣ ಮಾಧ್ಯಮಕ್ಕೆ ಶ್ರದ್ಧಾಂಜಲಿ ಬೇಡ'

'ರೇಡಿಯೊ ಬಂದಾಗ ಮುದ್ರಣ ಮಾಧ್ಯಮಕ್ಕೆ ತೊಂದರೆಯಾಗಲಿದೆ ಎಂದು ಭಾವಿಸಿದರು. ಈಗ ರೇಡಿಯೊ ಕೇಳುವವರಿಲ್ಲದಂತಾಗಿದೆ. ಟಿ.ವಿ. ಬಂದಾಗಲೂ ಇದೇ ಭಯ ಉಂಟಾಗಿತ್ತು. ಆದರೆ, ಈಗ ಟಿ.ವಿ. ಮಾಧ್ಯಮದ ಸ್ಥಿತಿ ಹೇಗಿದೆ ಎಂದು ನೋಡಿ. ಡಿಜಿಟಲ್ ಮಾಧ್ಯಮ ಬಂದಿರುವುದು ಮುದ್ರಣ ಮಾಧ್ಯಮಕ್ಕೆ ಭೀತಿ ಎಂಬಂತೆ ನೋಡಲಾಗುತ್ತಿದೆ. ಡಿಜಿಟಲ್ ಮಾಧ್ಯಮ ಮುದ್ರಣಕ್ಕೆ ಪೂರಕವಾಗಿದೆ. ಮುದ್ರಣ ಮಾಧ್ಯಮಕ್ಕೆ ಶ್ರದ್ಧಾಂಜಲಿ ಸಲ್ಲಿಸಲು ಅವಸರ ಬೇಡ. ಇನ್ನೂ ಹಲವಾರು ವರ್ಷ ಏನೂ ಆಗುವುದಿಲ್ಲ' ಎಂದು ಅಬ್ದುಸ್ಸಲಾಂ ಪುತ್ತಿಗೆ ತಿಳಿಸಿದರು.

ಸಿನ್ನರ್ ಮುನ್ನಡೆ
ವಿಶ್ವದ ಅಗ್ರಮಾನ್ಯ ಆಟಗಾರ, ಇಟಲಿಯ ಯಾನಿಕ್ ಸಿನ್ನರ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಬುಧವಾರ ಮೂರನೇ ಸುತ್ತಿಗೆ ಮುನ್ನಡೆದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 76,922 | ನಿಫ್ಟಿ 24,005 | $/₹ 95.16 | ಚಿನ್ನ (Std. 10g) ₹1,45,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,35,820 (ಬೆಂಗಳೂರು)



ಬರದ ಛಾಯೆ, ಮಳೆ ಮುನ್ಸೂಚನೆ

ಈ ವರ್ಷ ಮುಂಗಾರು ಋತುವಿನ ಮೊದಲ ತಿಂಗಳಲ್ಲಿ (ಜೂನ್) ಮಳೆ ಬಹಳ ಕ್ಷೀಣವಾಗಿದ್ದು, ವಿಶೇಷವಾಗಿ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಮಳೆಯ ತೀವ್ರ ಕೊರತೆ ಉಂಟಾಗಿದೆ. ಇದರಿಂದಾಗಿ ರಾಜ್ಯವ್ಯಾಪಿ ಕೃಷಿ ಚಟುವಟಿಕೆ ಮೇಲೆ ಪರಿಣಾಮ ಬೀರಿದೆ. ಆದರೆ, ಜುಲೈ ಆರಂಭದ ದಿನದಂದೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚೆನ್ನಾಗಿ ಮಳೆ ಸುರಿದಿದ್ದು, ಭರವಸೆ ಮೂಡಿಸಿದೆ

• ವರುಣ ಹೆಗಡೆ

ರಾಜ್ಯದಲ್ಲಿ ಭಾರಿ ಮಳೆ ಕೊರತೆ ಕಾಣಿಸಿಕೊಂಡಿದೆ. ಜೂನ್ ತಿಂಗಳಲ್ಲಿ ರಾಜ್ಯವ್ಯಾಪಿ ಒಟ್ಟಾರೆ ಶೇ 42ರಷ್ಟು ಕೊರತೆ ಆಗಿದ್ದರೆ, ಮಲೆನಾಡು ಭಾಗದಲ್ಲಿ ಶೇ 58ರಷ್ಟು ಮತ್ತು ಕರಾವಳಿ ಭಾಗದಲ್ಲಿ ಶೇ 49ರಷ್ಟು ಕೊರತೆ ಆಗಿದೆ. ಈ ಎರಡೂ ಪ್ರದೇಶಗಳಲ್ಲಿ ಅಬ್ಬರಿಸಬೇಕಿದ್ದ ಮಳೆ ಆಗೊಮ್ಮೆ ಈಗೊಮ್ಮೆ ಅಲ್ಪ ಪ್ರಮಾಣದಲ್ಲಿ ಸುರಿದು ಹೋಗಿದೆ. ರಾಜ್ಯದ ಪ್ರಮುಖ ನದಿಗಳ ಉಗಮ ಸ್ಥಾನಗಳಾದ ಪಶ್ಚಿಮಘಟ್ಟ ಪ್ರದೇಶದ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆಗಳಲ್ಲಿ ಮಳೆಯ ಕೊರತೆಯಿಂದ ನದಿಗಳೂ ಸೊರಗಿವೆ.

ಜೂನ್ ಮೊದಲ ವಾರ ಮುಂಗಾರು ಕಾಲಿಡಬೇಕಿತ್ತು. ತಡವಾಗಿ ಕಾಲಿಟ್ಟರೂ ಆರಂಭದಲ್ಲೇ ತನ್ನ ಬಿರುಸು ಕಳೆದುಕೊಂಡಿತು. ಎಲ್‌ನಿನೊ ಪ್ರಭಾವ ಒಂದು ಕಡೆಯಾದರೆ, ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿಯಲ್ಲಿ ತೇವಾಂಶಭರಿತ ಮೋಡ ಕಟ್ಟಿಕೊಳ್ಳಲಿಲ್ಲ. ಮಳೆ ಸುರಿಸಲು ಸ್ಥಳೀಯವಾಗಿ ಕಾರಣವಾಗಬಲ್ಲ ವಾತಾವರಣವೂ ರೂಪುಗೊಳ್ಳಲಿಲ್ಲ. ಹೀಗಾಗಿ, ಮುಂಗಾರು ಕ್ಷೀಣವಾಯಿತು, ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮಳೆಯ ಕೊರತೆಗೆ ಕಾರಣವಾಯಿತು. ಇತರೆಡೆ ವ್ಯಾಪಿಸಲೂ ಇಲ್ಲ. ನದಿಗಳ ಉಗಮ ಸ್ಥಾನಗಳಲ್ಲಿ ನೀರಿನ ಒರತೆ ಸಹ ಕ್ಷೀಣವಾಗಿದೆ. ಈ ಪ್ರದೇಶದಲ್ಲಿ ಕೆರೆ, ಬಾವಿಗಳಲ್ಲೂ ನೀರಿನ ಕೊರತೆ ಇದೆ.

‘ಕಳೆದ 50 ವರ್ಷಗಳಲ್ಲಿ ಮೂರ್ನಾಲ್ಕು ಬಾರಿ ಇಂತಹದ್ದೇ ಸ್ಥಿತಿ ನಿರ್ಮಾಣ ಆಗಿತ್ತು. ಜುಲೈನಲ್ಲಿ ಉತ್ತಮ ಮಳೆಯಾದರೆ ಪರಿಸ್ಥಿತಿ ಸುಧಾರಿಸಬಹುದು. ಆದರೆ, ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆ ಆಶಾದಾಯಕವಾಗಿಲ್ಲ. ವಾಡಿಕೆಗಿಂತಲೂ ಕಡಿಮೆ ಆಗಬಹುದು’ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ ಜಿ.ಎಂ.ಶ್ರೀನಿವಾಸ ರೆಡ್ಡಿ ತಿಳಿಸಿದರು.

ಮಳೆ ಪ್ರದೇಶದಲ್ಲಿ ಭಾರಿ ಕೊರತೆ: ಕರಾವಳಿ ಭಾಗದಲ್ಲಿ ಜೂನ್ ತಿಂಗಳ ವಾಡಿಕೆ ಮಳೆ 83.2 ಸೆಂ.ಮೀ. ಆದರೆ, 42 ಸೆಂ.ಮೀ. ಮಾತ್ರ ಮಳೆಯಾಗಿದೆ. ಮಲೆನಾಡು ಭಾಗದಲ್ಲಿ ಮಳೆಯ ಕೊರತೆ ಇನ್ನಷ್ಟು ತೀವ್ರವಾಗಿದೆ. ಈ ಭಾಗದಲ್ಲಿ ವಾಡಿಕೆ ಮಳೆ 36.3 ಸೆಂ.ಮೀ. ಆದರೆ, 15. ಸೆಂ.ಮೀ. ಮಾತ್ರ ಮಳೆಯಾಗಿದೆ.

ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿತ

ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ, ರಾಜ್ಯದಲ್ಲಿ ಮಳೆ ಕೊರತೆಯಿಂದಾಗಿ ಕಾವೇರಿ ಕಣಿವೆಯ ಜಲಾಶಯಗಳ ನೀರಿನ ಮಟ್ಟ ಕಳೆದ ವರ್ಷಕ್ಕೆ ಹೋಲಿಸಿದರೆ ತೀವ್ರವಾಗಿ ಕುಸಿದಿದೆ. ಕೆ.ಆರ್.ಎಸ್., ಹೇಮಾವತಿ, ಕಬಿನಿ ಹಾಗೂ ಹಾರಂಗಿ ಜಲಾಶಯಗಳಿಂದ ಸದ್ಯ ಒಟ್ಟು 24.47 ಟಿಎಂಸಿ ಅಡಿ ನೀರು ಲಭ್ಯವಿದೆ.



150 ವರ್ಷಗಳಲ್ಲಿ ಎಂದೂ ಕಂಡರಿಯದ ಮಳೆ ಕೊರತೆ ರಾಜ್ಯದಲ್ಲಿದೆ. ಇದನ್ನು ಎದುರಿಸಲು ಕ್ರಿಯಾಯೋಜನೆ ಸಿದ್ಧಪಡಿಸಲಾಗಿದ್ದು, ಎಲ್ಲ ಜಿಲ್ಲಾಧಿಕಾರಿಗಳು ಕಾರ್ಯಗತಗೊಳಿಸುವರು
ಜಿ.ಪರಮೇಶ್ವರ, ಉಪಮುಖ್ಯಮಂತ್ರಿ

ಈ ಭಾಗಗಳಿಗೆ ಹೋಲಿಸಿದರೆ ಕರ್ನಾಟಕದ ದಕ್ಷಿಣ ಹಾಗೂ ಉತ್ತರ ಒಳನಾಡಿನಲ್ಲಿ ಕೊರತೆಯ ಪ್ರಮಾಣ ಕೊಂಚ ಕಡಿಮೆಯಿದೆ. ಉತ್ತರ ಒಳನಾಡಿನಲ್ಲಿ ಜೂನ್ ತಿಂಗಳ ವಾಡಿಕೆ ಮಳೆ 10.3 ಸೆಂ.ಮೀ. ಆಗಿದ್ದು, 7.4 ಸೆಂ.ಮೀ. ಮಳೆಯಾಗಿದೆ. ಈ ಭಾಗವು ಶೇ28ರಷ್ಟು ಕೊರತೆ ಎದುರಿಸಿದೆ. ದಕ್ಷಿಣ ಒಳನಾಡಿನಲ್ಲಿ ಶೇ 5ರಷ್ಟು ಕಡಿಮೆ ಮಳೆಯಾಗಿದೆ. ಈ ಭಾಗದಲ್ಲಿ ವಾಡಿಕೆ ಮಳೆ 6.6 ಸೆಂ.ಮೀ. ಆಗಿದ್ದು, 6.2 ಸೆಂ.ಮೀ. ಮಳೆಯಾಗಿದೆ.

8

ಮೂಲ್ಕಿ: 19 ಸೆಂ.ಮೀ ಮಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಮತ್ತಷ್ಟು ಬಿರುಸು ಪಡೆದುಕೊಂಡಿದ್ದು ಮಂಗಳವಾರ ರಾತ್ರಿ ಮತ್ತು ಬುಧವಾರ ಬೆಳಿಗ್ಗೆ ಸುರಿದ ಭಾರಿ ಮಳೆಯಿಂದ ಜಿಲ್ಲೆಯ ವಿವಿಧ ಕಡೆಗಳಲ್ಲಿ ಹಾನಿ ಸಂಭವಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಮುಕ್ತಾಯಗೊಂಡಂತೆ 24 ತಾಸುಗಳಲ್ಲಿ ಮೂಲ್ಕಿ ವ್ಯಾಪ್ತಿಯಲ್ಲಿ 19.76 ಸೆಂಟಿ ಮೀಟರ್ ಮಳೆಯಾಗಿದೆ.

ಮಂಗಳವಾರ ರಾತ್ರಿ ಜಿಲ್ಲೆಯಾದ್ಯಂತ ಭಾರಿ ಮಳೆಯಾಗಿದೆ. ಉಡುಪಿ ಜಿಲ್ಲೆಯಲ್ಲಿ ಬಿಟ್ಟು ಬಿಟ್ಟು ಮಳೆಯಾಗಿದ್ದು ಕುಂದಾಪುರ, ಬೈಂದೂರು, ಬ್ರಹ್ಮಾವರ, ಹೆಬ್ರಿ, ಕಾರ್ಕಳ, ಕಾಪುವಿನಲ್ಲಿ ಸಾಧಾರಣ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲ್ಲೂಕು ತೊಕ್ಕೊಟ್ಟು ಸಮೀಪದ ಕೆರೆಬೈಲ್‌ನ ಎಸ್ಟೇಟ್ ಒಂದರ ಕಾಂಕ್ರೀಟ್ ಆವರಣ ಗೋಡೆ ಕುಸಿದು ಬಿದ್ದು ಪಕ್ಕದಲ್ಲಿದ್ದ ಮನೆ ನೆಲಸಮಗೊಂಡಿದೆ. ಮನೆಯಲ್ಲಿ ಯಾರೂ ಇರಲಿಲ್ಲ.

ದಕ್ಷಿಣ ಕನ್ನಡದ 29 ಪ್ರದೇಶಗಳಲ್ಲಿ 10 ಸೆಂ.ಮೀಟರ್‌ಗೂ ಅಧಿಕ ಮಳೆಯಾಗಿದೆ. ಮೂಲ್ಕಿ ತಾಲ್ಲೂಕಿನ ಕಿಲ್ಪಾಡಿಯಲ್ಲಿ 17.1 ಸೆಂಮೀ ದಾಖಲಾಗಿದ್ದು ಜಿಲ್ಲೆಯಲ್ಲಿ ಅತಿ ಕಡಿಮೆ ಮಳೆ 2.8 ಸೆಂ.ಮೀ ಮಂಗಳೂರಿನ ಮಲ್ಲೂರಿನಲ್ಲಿ ದಾಖಲಾಗಿದೆ. ಉಡುಪಿ ಜಿಲ್ಲೆ ಕಾಪು ಪಲಿಮಾರುವಿನಲ್ಲಿ 14.45 ಸೆಂಮೀ ಮತ್ತು ಕಾರ್ಕಳದ ಇನ್ನಾದಲ್ಲಿ 13.25 ಸೆಂಮೀ, ಬ್ರಹ್ಮಾವರದ ಕೊಕ್ಕರ್ಣೆಯಲ್ಲಿ ಅತಿ ಕಡಿಮೆ 3.3 ಸೆಂ.ಮೀ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸಮುದ್ರದ ಅಲೆಗಳ ಹೊಡೆತಕ್ಕೆ ಅಂಕೋಲಾ ತಾಲ್ಲೂಕಿನ ತರಂಗಮೇಟ ಗ್ರಾಮದ ಕಡಲತೀರದಲ್ಲಿ ತಡೆಗೋಡೆ ಕೊಚ್ಚಿ ಹೋಗಿದೆ

ತಂದೆಗೆ ಸೆಲ್ಯೂಟ್

ಪಿಟಿಐ ಚಿತ್ರ

ಭೂಸೇನೆಯ ನೂತನ ಮುಖ್ಯಸ್ಥರಾಗಿ ಅಧಿಕಾರ ಸ್ವೀಕಾರ ಮಾಡಿದ ಧೀರಜ್ ಸೇಠ್ ಅವರು ತಮ್ಮ ತಂದೆ, ನಿವೃತ್ತ ಲೆಫ್ಟಿನೆಂಟ್ ಜನರಲ್ ಕೆ.ಎಂ. ಸೇಠ್ ಅವರಿಗೆ ದೆಹಲಿಯಲ್ಲಿ ಬುಧವಾರ ಸೆಲ್ಯೂಟ್ ಮಾಡಿದರು

‘ಕುಂಭಮೇಳ’ದಲ್ಲೇ ಕಳವು

ರಾಮಮಂದಿರ ದೇಣಿಗೆಗೆ ಕನ್ನ ಪ್ರಕರಣ : ತನಿಖೆ ವೇಳೆ ಪತ್ತೆ

ಪ್ರಜಾವಾಣಿ ವಾರ್ತೆ

ಲಖನೌ: ರಾಮಮಂದಿರದ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯಲ್ಲಿ ಮಹತ್ವದ ಅಂಶವೊಂದು ಪತ್ತೆಯಾಗಿದೆ. ಕಳೆದ ವರ್ಷ ಜನವರಿಯಲ್ಲಿ ಪ್ರಯಾಗರಾಜ್‌ನಲ್ಲಿ ‘ಮಹಾಕುಂಭ’ ಮೇಳ ನಡೆಯುತ್ತಿದ್ದ ಸಮಯದಲ್ಲಿ ದೇಣಿಗೆ ಹಣವನ್ನು ಗರಿಷ್ಠ ಮಟ್ಟದಲ್ಲಿ ಕಳವು ಮಾಡಲಾಗಿದೆ ಎಂದು ಪೊಲೀಸರು ಪತ್ತೆ ಹಚ್ಚಿದ್ದಾರೆ.

ಕುಂಭಮೇಳದ ಸಂದರ್ಭದಲ್ಲಿ ಕೋಟ್ಯಂತರ ಭಕ್ತರು ರಾಮಮಂದಿರಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡ ಆರೋಪಿಗಳು ದೊಡ್ಡ ಮೊತ್ತದ ಹಣವನ್ನು ಕದ್ದಿದ್ದರು ಎಂದು ಮೂಲಗಳು ತಿಳಿಸಿವೆ.

ಕುಂಭಮೇಳದಲ್ಲಿ ಕೋಟ್ಯಂತರ ಜನರು ಅಯೋಧ್ಯೆಗೆ ತೆರಳಿ ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳು ಸೇರುವ ‘ಸಂಗಮ’ದಲ್ಲಿ ಪುಣ್ಯಸ್ನಾನ ಮಾಡಿದ್ದರು.

‘ಹಲವು ತಿಂಗಳು ದೇಣಿಗೆ ಕಳವು ನಡೆದಿದೆ. ಆದರೆ ಕುಂಭ ಮೇಳದಲ್ಲಿ ಗರಿಷ್ಠ ಪ್ರಮಾಣದ ಅವ್ಯವಹಾರ ನಡೆದಿದೆ’ ಎಂದು ಮೂಲಗಳು ತಿಳಿಸಿವೆ.

ಬಂಧಿತ ಎಂಟು ಆರೋಪಿಗಳ ಪೈಕಿ ಲವಕುಶ ಮಿಶ್ರಾ ಮತ್ತು ಅವರ ಬಾಮೈದ ಅನುಕಲ್ಪ್ ಮಿಶ್ರಾ ಅವರು ಅತಿ ಹೆಚ್ಚು ಹಣವನ್ನು ಕಳವು ಮಾಡಿದ್ದಾರೆ. ಈ ಇಬ್ಬರಿಗೆ ಸೇರಿದ ಸ್ಥಿರಾಸ್ತಿಗಳನ್ನು ಪೊಲೀಸರು ಪತ್ತೆ ಮಾಡಿದ್ದಾರೆ ಎಂದು ತಿಳಿಸಿವೆ.

‘ಭದ್ರತಾ ಸಂಸ್ಥೆ ಪಾತ್ರ ಇಲ್ಲ’

ವಾರಾಣಸಿ: ರಾಮಮಂದಿರದ ದೇಣಿಗೆಯ ನಗದು ನಿರ್ವಹಣಾ ಘಟಕದಲ್ಲಿ ನಿಯೋಜಿಸಿದ್ದ ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಖಾಸಗಿ ಭದ್ರತಾ ಸಂಸ್ಥೆಯು, ಈ ಅವ್ಯವಹಾರದಲ್ಲಿ ತನ್ನ ಪಾತ್ರ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮನವಿಯ ಮೇರೆಗೆ ಬ್ಯಾಂಕ್‌ಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದಾಗಿ ಅದು ತಿಳಿಸಿದೆ. ಬಂಧಿತ ಎಂಟು ಆರೋಪಿಗಳ ಪೈಕಿ ಆರು ಮಂದಿ ಸಂಸ್ಥೆಯಿಂದ ನೇಮಕಗೊಂಡವರು.

ಖಾಸಗಿ ಭದ್ರತಾ ಸಂಸ್ಥೆಯೊಂದರ ನಿರ್ದೇಶಕರಾದ ಗೌರವ್ ಸಿಂಗ್ ಅವರು, ‘ಕಂಪನಿಯು 22 ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಅಯೋಧ್ಯೆಯ ಎಸ್‌ಬಿಐ ಶಾಖೆಗೆ ಹೌಸ್‌ಕೀಪಿಂಗ್ ಕೆಲಸಕ್ಕೆ ಕಳುಹಿಸಿತ್ತು. ಅವರಿಗೆ ಬ್ಯಾಂಕ್ ಯಾವ ಕೆಲಸ ನೀಡಿತ್ತು ಎಂದು ನಮಗೆ ಗೊತ್ತಿಲ್ಲ’ ಎಂದು ತಿಳಿಸಿದ್ದಾರೆ.

ವಿಬಿ–ಜಿ ರಾಮ್ ಜಿ: ದಿನಗೂಲಿ ಏರಿಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ‘ವಿಬಿ-ಜಿ ರಾಮ್ ಜಿ’ ಯೋಜನೆಯಡಿ ಕೆಲಸ ಮಾಡುವ ಕಾರ್ಮಿಕರಿಗೆ ದಿನಗೂಲಿ ದರವನ್ನು ಪರಿಷ್ಕರಿಸಿ ಬುಧವಾರ ಆದೇಶಿಸಿದೆ.

ರಾಷ್ಟ್ರೀಯ ಮಟ್ಟದಲ್ಲಿ ಸರಾಸರಿ ದಿನಗೂಲಿ ದರವನ್ನು ₹298.8ರಿಂದ ₹327.4ಕ್ಕೆ ಪರಿಷ್ಕರಿಸಲಾಗಿದೆ. ದಿನಕ್ಕೆ ₹28.6 ಹೆಚ್ಚಳವಾಗಿದ್ದು, ರಾಷ್ಟ್ರ ಮಟ್ಟದಲ್ಲಿ ಸರಾಸರಿ ಶೇ 10ರಷ್ಟು ಏರಿಕೆಯಾಗಿದೆ. ಈ ಹೊಸ ಯೋಜನೆಯಡಿ ದಿನಗೂಲಿ ₹300ಕ್ಕಿಂತ ಕಡಿಮೆ ಇರುವಂತಿಲ್ಲ ಎಂದು ಸಚಿವಾಲಯ ಹೇಳಲಾಗಿದೆ.

ರಾಜ್ಯದಲ್ಲಿ ₹382ಕ್ಕೆ ಏರಿಕೆ: ಕರ್ನಾಟಕದಲ್ಲಿ ನರೇಗಾದಡಿ 2025–26ರಲ್ಲಿ ದಿನಗೂಲಿ ₹370 ಇತ್ತು. ಅದನ್ನು ₹382ಕ್ಕೆ ಪರಿಷ್ಕರಿಸಲಾಗಿದೆ. ಅಂದರೆ ಶೇ 3.24 ಹೆಚ್ಚಳವಾಗಿದೆ.

ಹರಿಯಾಣದಲ್ಲಿ ಅತ್ಯಧಿಕ ₹409 (ಶೇ 2.25ರಷ್ಟು ಏರಿಕೆ) ದಿನಗೂಲಿ ನಿಗದಿಯಾಗಿದೆ. ಗೋವಾದಲ್ಲಿ ₹406, ಕೇರಳದಲ್ಲಿ ₹401, ತಮಿಳುನಾಡಿನಲ್ಲಿ ₹345, ಮಹಾರಾಷ್ಟ್ರದಲ್ಲಿ ₹317, ತೆಲಂಗಾಣದಲ್ಲಿ ₹308 ದಿನಗೂಲಿ ನಿಗದಿಯಾಗಿದೆ.

9

ಎಸ್‌ಐಆರ್: 54.68 ಲಕ್ಷ ಗಣತಿ ನಮೂನೆ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ಬುಧವಾರ ಸಂಜೆ ವೇಳೆಗೆ ರಾಜ್ಯದಾದ್ಯಂತ ಈವರೆಗೆ 54.68 ಲಕ್ಷ ಮತದಾರರ ಗಣತಿ ನಮೂನೆಯನ್ನು ವಿತರಿಸಲಾಗಿದೆ. ರಾಜ್ಯದ ಒಟ್ಟು 5.54 ಕೋಟಿ ಮತದಾರರ ಪೈಕಿ ಈವರೆಗೆ ಶೇ 9.87ರಷ್ಟು ಪ್ರಗತಿ ಸಾಧಿಸಲಾಗಿದೆ.

ಈವರೆಗೆ ವಿತರಿಸಲಾದ ಗಣತಿ ನಮೂನೆಗಳ ಪೈಕಿ, 2.38 ಲಕ್ಷ ಮತದಾರರ ನಮೂನೆಗಳನ್ನು ಡಿಜಿಟಲೀಕರಿಸಲು ಸಾಧ್ಯವಾಗಿದೆ. 26,213 ಮತದಾರರು ಈವರೆಗೆ ಆನ್‌ಲೈನ್ ಮೂಲಕ ಗಣತಿ ನಮೂನೆಗಳನ್ನು ಭರ್ತಿ ಮಾಡಿದ್ದಾರೆ. ಸ್ಥಳದಲ್ಲಿ ಇಲ್ಲದ, ಬೇರೆ ವಿಳಾಸಕ್ಕೆ ಸ್ಥಳಾಂತರವಾದ, ಮೃತಪಟ್ಟ ಮತ್ತು ಎರಡು ಕಡೆ ನೋಂದಣಿಯಾದ ಒಟ್ಟು 2,565 ಮತದಾರರ ವಿವರ ಲಭ್ಯವಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ಮತಗಟ್ಟೆ ಅಧಿಕಾರಿಗಳ ಮನೆ–ಮನೆ ಭೇಟಿ ಕಾರ್ಯವು ಮಂಗಳವಾರ ಆರಂಭವಾಗಿತ್ತು. ಮಂಗಳವಾರ ಸಂಜೆಯ ಹೊತ್ತಿಗೆ 12.48 ಲಕ್ಷ ಗಣತಿ ನಮೂನೆಗಳನ್ನು ಮಾತ್ರ ವಿತರಿಸಲು ಸಾಧ್ಯವಾಗಿತ್ತು. ಆ ಪೈಕಿ 47,817 ನಮೂನೆಗಳನ್ನು ಡಿಜಿಟಲೀಕರಿಸಲಾಗಿತ್ತು. ಮೊದಲ ದಿನಕ್ಕೆ ಹೋಲಿಸಿದರೆ, ಎರಡನೇ ದಿನ ಗಣನೀಯ ಪ್ರಗತಿ ದಾಖಲಾಗಿದೆ.

ಡೇ ಕೇರ್‌ನಲ್ಲಿ ಗಲಾಟೆ: ವಾಷಿಂಗ್ ಮಷಿನ್‌ಗೆ ಹಾಕಿ ಪುಟ್ಟ ಮಕ್ಕಳಿಗೆ ಹಿಂಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೇ ಕೇರ್‌ನಲ್ಲಿ ಗಲಾಟೆ ಮಾಡಿದ ಪುಟ್ಟ ಮಕ್ಕಳನ್ನು ವಾಷಿಂಗ್ ಮಷಿನ್‌ನಲ್ಲಿ ಹಾಕಿ ಹಿಂಸೆ ನೀಡಿದ್ದ ಸೊಸೈಟಿ ಜನರಲ್ ಬೇಬಿ ಕೇರ್ ಸಂಸ್ಥೆಯ ಐವರು ಕೇರ್‌ಟೇಕರ್‌ಗಳ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೇರ್‌ಟೇಕರ್‌ಗಳಾದ ಮಂಜುಳಾ, ವಿಜಯಲಕ್ಷ್ಮಿ, ಭವಾನಿ, ಸಿಂಧು ಹಾಗೂ ಬಿಂದು ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಎಚ್‌ಎಎಲ್ ಆವರಣದ ‘ಕ್ಯಾಪ್‌ಜೆಮಿನಿ’ ಕಂಪನಿಯ ಆವರಣದಲ್ಲಿರುವ ಡೇ ಕೇರ್‌ನ ಐವರು ಸಿಬ್ಬಂದಿ, ಪುಟ್ಟ ಮಕ್ಕಳ ಮೇಲೆ ದೌರ್ಜನ್ಯ ಎಸಗಿದ್ದಾರೆ. ಘಟನೆಯ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಪೋಷಕರು ಆಕ್ರೋಶ ಹೊರಹಾಕಿದ್ದಾರೆ.

ಬೇಬಿ ಕೇರ್‌ಗೆ ಚಿಕ್ಕ ಮಕ್ಕಳನ್ನು ಬಿಟ್ಟು ಪೋಷಕರು ಕೆಲಸಕ್ಕೆ ಹೋಗುತ್ತಿದ್ದರು. ಮಕ್ಕಳ ಪಾಲನೆ ಹಾಗೂ ಪೋಷಣೆಗೆ ಐವರು ಕೇರ್‌ಟೇಕರ್‌ಗಳನ್ನು ನೇಮಿಸಲಾಗಿತ್ತು. ಗಲಾಟೆ ಮಾಡುವ ಹಾಗೂ ಅಳುವ ಮಕ್ಕಳನ್ನು ಕೇರ್ ಟೇಕರ್‌ಗಳು ವಾಷಿಂಗ್ ಮಷಿನ್‌ಗೆ ಹಾಕಿ ಬೆದರಿಸುವುದು ಹಾಗೂ ಕಮೋಡ್ ಒಳಗೆ ಮಕ್ಕಳನ್ನು ಕೂರಿಸಿ ಬಾಯಿಗೆ ನೀರಿನ ಪೈಪ್ ತುರುಕಿ ನೀರು ಬಿಡುವುದು, ಮಕ್ಕಳನ್ನು ಕೂಡಿ ಹಾಕುವುದು, ಅಲ್ಲದೇ ದೈಹಿಕ ಹಿಂಸೆ ನೀಡುವುದನ್ನು ಮಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಐ.ಟಿ ಕಂಪನಿಯಲ್ಲಿ ಕೆಲಸ ಮಾಡುವ ಉದ್ಯೋಗಿಗಳು ತಮ್ಮ ಮಕ್ಕಳನ್ನು ಇಲ್ಲಿ ಬಿಟ್ಟು ಕೆಲಸಕ್ಕೆ ಹೋಗುತ್ತಿದ್ದರು.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ಆಧರಿಸಿ ಘಟನೆಗೆ ಸಂಬಂಧಿಸಿದಂತೆ ಐವರು ಮಹಿಳಾ ಸಿಬ್ಬಂದಿ ವಿರುದ್ಧ ಬಾಲನ್ಯಾಯ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಸದ್ಯ ಎಫ್‌ಐಆರ್ ದಾಖಲಾಗಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದರು.

ವಾಣಿಜ್ಯ ಎಲ್‌ಪಿಜಿ ದರ ಇಳಿಕೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದ ಬಳಿಕ ಇದೇ ಮೊದಲ ಬಾರಿಗೆ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ದರವನ್ನು ಇಳಿಕೆ ಮಾಡಿವೆ.

ವಾಣಿಜ್ಯ ಉದ್ದೇಶಕ್ಕೆ ಬಳಸುವ 19 ಕೆ.ಜಿ ತೂಕದ ಎಲ್‌ಪಿಜಿ ಸಿಲಿಂಡರ್ ದರ ₹183.50ರಷ್ಟು ಇಳಿಕೆಯಾಗಿದ್ದು, ₹2,930 ಆಗಿದೆ. 5 ಕೆ.ಜಿ ತೂಕದ ಎಫ್‌ಟಿಎಲ್ ಸಿಲಿಂಡರ್ ದರ ₹13ರಷ್ಟು ಕಡಿಮೆಯಾಗಿ ₹808.50 ಆಗಿದೆ.

ಫೆಬ್ರುವರಿ 28ರಂದು ಆರಂಭವಾದ ಪಶ್ಚಿಮ ಏಷ್ಯಾ ಸಂಘರ್ಷದಿಂದ ಕಚ್ಚಾ ತೈಲ ದರವು ಏರಿಕೆಯ ಹಾದಿ ಹಿಡಿದಿತ್ತು. ಇದರಿಂದ ಕಂಪನಿಗಳು ವಾಣಿಜ್ಯ ಸಿಲಿಂಡರ್ ದರವನ್ನು ಹೆಚ್ಚು ಮಾಡಿದ್ದವು. ಕಳೆದ ತಿಂಗಳು ಸಿಲಿಂಡರ್ ದರವು ₹3,113ಕ್ಕೆ ತಲುಪಿತ್ತು. ಇದೀಗ ಸಂಘರ್ಷವು ತಿಳಿಗೊಂಡಿರುವ ಕಾರಣದಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿದಿದೆ. ಹೀಗಾಗಿ ದರ ಇಳಿಕೆಗೆ ಕಂಪನಿಗಳು ಮುಂದಾಗಿವೆ.

14.2 ಕೆ.ಜಿ ತೂಕದ ಗೃಹಬಳಕೆಯ ಸಿಲಿಂಡರ್ ದರ ಯಥಾಸ್ಥಿತಿಯಲ್ಲಿದ್ದು, ₹942 ಇದೆ. ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ದರ ತಗ್ಗಿಸಿದ ನಯಾರಾ: ಖಾಸಗಿ ವಲಯದ ತೈಲೋತ್ಪನ್ನ ಮಾರಾಟ ಕಂಪನಿ ನಯಾರಾ ಎನರ್ಜಿಯು ಪೆಟ್ರೋಲ್ ದರವನ್ನು ಪ್ರತಿ ಲೀಟರ್‌ಗೆ ₹5ರಷ್ಟು ಮತ್ತು ಡೀಸೆಲ್ ದರವನ್ನು ₹3ರಷ್ಟು ಕಡಿಮೆ ಮಾಡಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಶಾಂತಿ ಒಪ್ಪಂದ: ಕತಾರ್ ರಾಜಧಾನಿ ದೋಹಾದಲ್ಲಿ ಉಭಯ ದೇಶಗಳ ಪ್ರತಿನಿಧಿಗಳು

ಇರಾನ್–ಅಮೆರಿಕ ಪರೋಕ್ಷ ಮಾತುಕತೆ

ದುಬೈ/ವಾಷಿಂಗ್ಟನ್ (ಎಎಫ್‌ಪಿ): ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಇರಾನ್ ಮತ್ತು ಅಮೆರಿಕ ನಡುವೆ ಕತಾರ್ ರಾಜಧಾನಿ ದೋಹಾದಲ್ಲಿ ಬುಧವಾರ ಪರೋಕ್ಷ ಮಾತುಕತೆ ನಡೆದಿದೆ.

ಪಾಕಿಸ್ತಾನ ಮತ್ತು ಕತಾರ್ ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಈ ಮಾತುಕತೆ ನಡೆದಿದೆ ಎಂದು ರಾಜತಾಂತ್ರಿಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಯುದ್ಧವನ್ನು ಕೊನೆಗೊಳಿಸುವ ಒಪ್ಪಂದದ ಕುರಿತು ಚರ್ಚಿಸಲು ಅಧಿಕಾರಿಗಳನ್ನು ದೋಹಾಕ್ಕೆ ಕಳುಹಿಸಲಾಗಿದೆ’ ಎಂದು ಇರಾನ್ ಮತ್ತು ಅಮೆರಿಕ ಹೇಳಿವೆ. ಆದರೆ, ನೇರ ಮಾತುಕತೆ ಸಾಧ್ಯವಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ.

ಮತ್ತೊಂದೆಡೆ, ವಾಷಿಂಗ್ಟನ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಕತಾರ್‌ನಲ್ಲಿ ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆ ಉತ್ತಮವಾಗಿ ನಡೆಯುತ್ತಿದೆ’ ಎಂದು ಹೇಳಿದ್ದಾರೆ.

‘ಇರಾನ್ ಅನ್ನು ಅಣ್ವಸ್ತ್ರ ಕಾರ್ಯಕ್ರಮದಿಂದ ದೂರ ಸರಿಯುವಂತೆ ಮಾಡುವ ಕಾರ್ಯ ಕೂಡ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ’ ಎಂದೂ ಟ್ರಂಪ್ ತಿಳಿಸಿದ್ದಾರೆ.

60 ದಿನಗಳ ಕದನವಿರಾಮ ಜಾರಿ, ಹೊರ್ಮುಜ್ ಜಲಸಂಧಿಯ ಮುಕ್ತಗೊಳಿಸುವುದು ಮತ್ತು ಯುದ್ಧ ಕೊನೆಗೊಳಿಸುವ ಅಂತಿಮ ಒಪ್ಪಂದಕ್ಕೆ ಅವಧಿ ನಿಗದಿಪಡಿಸುವುದು ಉದ್ದೇಶಿತ ಒಪ್ಪಂದದ ಪ್ರಮುಖ ಅಂಶಗಳಾಗಿವೆ. ಈ ಒಪ್ಪಂದ ಅಂಶಗಳನ್ನು ಪಾಕಿಸ್ತಾನ ಮತ್ತು ಕತಾರ್ ಮಧ್ಯಸ್ಥಿಕೆಯಲ್ಲಿ ಕಳೆದ ತಿಂಗಳು ಸ್ವಿಟ್ಜರ್ಲೆಂಡ್‌ನಲ್ಲಿ ನಡೆದ ಸಭೆಯಲ್ಲಿ ಸಿದ್ಧಪಡಿಸಲಾಗಿತ್ತು.

ಹೊರ್ಮುಜ್‌ನಲ್ಲಿ ಸಿಲುಕಿದ ಹಡಗು

ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ವೇಳೆ, ಹಡಗೊಂದು ಸಿಕ್ಕಿ ಹಾಕಿಕೊಂಡಿರುವುದಾಗಿ ಇರಾನ್ ಸುದ್ದಿವಾಹಿನಿ ವರದಿ ಮಾಡಿದೆ.

‘ಕಡಿಮೆ ಆಳದ ಜಲಮಾರ್ಗದಲ್ಲಿ ಸಾಗುವ ವೇಳೆ ಹಡಗು ಸಿಕ್ಕಿ ಹಾಕಿಕೊಂಡಿದೆ. ಈ ಮಾರ್ಗದಲ್ಲಿ ಹಡಗುಗಳ ಸಂಚಾರಕ್ಕೆ ತಾನು ಒಪ್ಪಿಗೆ ನೀಡಿರಲಿಲ್ಲ’ ಎಂದು ಇರಾನ್ ಹೇಳಿದ್ದು, ಈ ಕುರಿತ ಹೆಚ್ಚಿನ ವಿವರಗಳನ್ನು ನೀಡಿಲ್ಲ. ಹೊರ್ಮುಜ್ ಅಂತರರಾಷ್ಟ್ರೀಯ ಜಲಮಾರ್ಗ ಎಂಬುದಾಗಿ ಪರಿಗಣಿಸಲಾಗುತ್ತದೆ. ಆದರೆ, ಇದರ ಮೇಲೆ ತಾನು ನಿಯಂತ್ರಣ ಹೊಂದಿರುವುದಾಗಿ ಬಿಂಬಿಸಿಕೊಳ್ಳುವ ಭಾಗವಾಗಿ ಇರಾನ್ ಇಂತಹ ವರದಿಯನ್ನು ಪ್ರಸಾರ ಮಾಡುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ವಾರಾಂತ್ಯದಲ್ಲಿ ನಡೆದ ದಾಳಿಗಳಿಂದಾಗಿ ಹೊರ್ಮುಜ್‌ನಲ್ಲಿ ಸಂಚರಿಸುವ ಹಡಗುಗಳ ಸಂಖ್ಯೆ ಇಳಿಕೆಯಾಗಿದೆ.

‘ತೀಕ್ಷ್ಣ ಪ್ರತ್ಯುತ್ತರ’

ದುಬೈ: ‘ತನ್ನ ಜನರು ಮತ್ತು ನಾಯಕರ ಮೇಲೆ ಯಾವುದೇ ರೀತಿಯಲ್ಲಿ ಬೆದರಿಕೆ ಒಡ್ಡಿದರೆ ತಕ್ಷಣವೇ ತೀಕ್ಷ್ಣ ಪ್ರತ್ಯುತ್ತರ ನೀಡಲಾಗುವುದು’ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಬುಧವಾರ ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಟೆಲ್ ಅವೀವ್‌ನಲ್ಲಿರುವ ತನ್ನ ‘ಸಾಕುಪ್ರಾಣಿ’ಗಳನ್ನು ನಿಯಂತ್ರಣದಲ್ಲಿಡುವುದಾಗಿ ಅಮೆರಿಕ ಅಧ್ಯಕ್ಷರು ಭರವಸೆ ನೀಡಿದ್ದಾರೆ. ಒಂದು ವೇಳೆ ಅವರು ತಮ್ಮ ನಾಯಕನ ಮಾತನ್ನು ನಿರ್ಲಕ್ಷಿಸಿದರೆ ಇರಾನ್ ಅವರಿಗೆ ಪಾಠ ಕಲಿಸಲಿದೆ’ ಎಂದಿದ್ದಾರೆ.

ರೈಲ್ವೆ: ಪ್ರತಿ ನಿಮಿಷಕ್ಕೆ 1.25 ಲಕ್ಷ ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆ

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆಯು ಪ್ರಯಾಣಿಕರ ಟಿಕೆಟ್ ಕಾಯ್ದಿರಿಸುವಿಕೆ ವ್ಯವಸ್ಥೆಯನ್ನು ನವೀಕರಿಸಿದ್ದು, ಪರಿಷ್ಕೃತ ಸೌಲಭ್ಯವು ಪ್ರತಿ ನಿಮಿಷಕ್ಕೆ 1.25 ಲಕ್ಷ ಟಿಕೆಟ್‌ಗಳನ್ನು ಕಾಯ್ದಿರಿಸಲು ಅನುವು ಮಾಡಿಕೊಡುತ್ತದೆ. ಸದ್ಯ ಜಾರಿಯಲ್ಲಿರುವ ಸೌಲಭ್ಯದಡಿ ಪ್ರತಿ ನಿಮಿಷಕ್ಕೆ 25 ಸಾವಿರ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು. ಈ ಸಾಮರ್ಥ್ಯವನ್ನು ಐದು ಪಟ್ಟು ಹೆಚ್ಚಿಸಲಾಗಿದೆ.

‘ತಾಂತ್ರಿಕ ಪರಿಷ್ಕರಣೆಯು ಟಿಕೆಟ್ ಕಾಯ್ದಿರಿಸುವಿಕೆಯ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಿದೆ’ ಎಂದು ರೈಲ್ವೆ ಮಾಹಿತಿ ಕೇಂದ್ರ (ಸಿಆರ್‌ಐಎಸ್) ಪ್ರಕಟಣೆಯಲ್ಲಿ ತಿಳಿಸಿದೆ.

‘ರೈಲ್ ಒನ್’ ಅಪ್ಲಿಕೇಷನ್ ಅನ್ನು ಇದುವರೆಗೆ 4.35 ಕೋಟಿ ಗ್ರಾಹಕರು ಡೌನ್‌ಲೋಡ್ ಮಾಡಿಕೊಂಡಿದ್ದು, ಪ್ರತಿದಿನ ಸರಾಸರಿ 10 ಲಕ್ಷದಷ್ಟು ಮಂದಿ ಈ ಅಪ್ಲಿಕೇಷನ್ ಬಳಸುತ್ತಾರೆ ಎಂದು ಸಿಆರ್‌ಐಎಸ್ ಹೇಳಿದೆ.

ಮದ್ಯ ಮಾರಾಟ ಸನ್ನದು ಇ–ಹರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಗಿತಗೊಂಡಿರುವ ಮತ್ತು ಹಂಚಿಕೆ ಆಗದೇ ಇರುವ 579 ಮದ್ಯ ಮಾರಾಟ ಸನ್ನದುಗಳನ್ನು ಇ-ಹರಾಜು ಮೂಲಕ ಹಂಚಿಕೆ ಮಾಡಲು ಅಬಕಾರಿ ಇಲಾಖೆಯು ಅಧಿಸೂಚನೆ ಹೊರಡಿಸಿದೆ.

ಸ್ಥಗಿತಗೊಂಡಿರುವ, ಹಂಚಿಕೆಯಾಗದೇ ಇರುವ ಸಿಎಲ್–2 ಮತ್ತು ಸಿಎಲ್–11ಸಿ ಸನ್ನದುಗಳನ್ನು ಸಿಎಲ್–2ಎ ಮತ್ತು ಸ್ಥಗಿತಗೊಂಡಿರುವ ಸಿಎಲ್–9 ಸನ್ನದುಗಳನ್ನು ಸಿಎಲ್–9ಎ ಎಂದು ವರ್ಗೀಕರಿಸಿ ಇ-ಹರಾಜು ಹಾಕಲಾಗುತ್ತಿದೆ. ಒಟ್ಟು 483 ಸಿಎಲ್–2ಎ ಮತ್ತು 96 ಸಿಎಲ್–9ಎ ಸನ್ನದುಗಳನ್ನು ಹರಾಜು ಮಾಡಲಾಗುತ್ತಿದೆ. ಈ ಹರಾಜು ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ–ಎ ವರ್ಗದವರಿಗೆ ಶೇ 5.25, ಪರಿಶಿಷ್ಟ ಜಾತಿ–ಬಿ ವರ್ಗದವರಿಗೆ ಶೇ 5.25, ಪರಿಶಿಷ್ಟ ಜಾತಿ–ಸಿ ವರ್ಗದವರಿಗೆ ಶೇ.4.50 ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ 3ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಈ ಇ–ಹರಾಜನ್ನು ಭಾರತ ಸರ್ಕಾರದ ಎಂಎಸ್‌ಟಿಸಿ ಲಿಮಿಟೆಡ್‌ನ ಇ-ಪೋರ್ಟಲ್‌ನಲ್ಲಿ ನಡೆಸಲಾಗುತ್ತದೆ. ಹರಾಜಿಗೆ ಬಿಡ್‌ದಾರರ ನೋಂದಣಿಯು ಜುಲೈ 3ರಿಂದ ಆರಂಭವಾಗಲಿದೆ. ಸಂಭಾವ್ಯ ಬಿಡ್‌ದಾರರಿಗೆ ಮತ್ತು ಜಿಲ್ಲಾ ಇ-ಹರಾಜು ನೋಡಲ್ ಅಧಿಕಾರಿಗಳಿಗೆ ಜುಲೈ 6ರಿಂದ 14ರವರೆಗೆ ತರಬೇತಿ ಆಯೋಜಿಸಲಾಗಿದೆ. ನೇರ ಹರಾಜು (Live Bidding) ಜುಲೈ 24ರಿಂದ 31ರವರೆಗೆ ನಡೆಯಲಿದೆ.

ಹೆಚ್ಚಿನ ಮಾಹಿತಿ https://stateexcise.karnataka.gov.in ಮತ್ತು https://www.mstcecommerce.com ಜಾಲತಾಣಗಳಲ್ಲಿ ಲಭ್ಯ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆ ಸಾಧ್ಯತೆ

ಸಾಂಸ್ಕೃತಿಕ ಮುನ್ನೋಟ

'ಅಡವಿ' ನಾಟಕ ಪ್ರದರ್ಶನ

ಬೆಂಗಳೂರು: ಪಯಣ ರಂಗ ತಂಡವು ಇದೇ 3ರಂದು ಸಂಜೆ 7.15ಕ್ಕೆ ಮಲ್ಲೇಶ್ವರದ ಸೇವಾಸದನದಲ್ಲಿ 'ಅಡವಿ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಅರುಣ್ ಸೂರ್ಯ ಅವರು ಈ ನಾಟಕ ನಿರ್ದೇಶಿಸಿದ್ದಾರೆ. ಕಾಡಿನ ನಡುವೆ ಮನುಷ್ಯನ ಅಸ್ತಿತ್ವದ ಪ್ರಶ್ನೆಯನ್ನು ಎತ್ತಿ ಹಿಡಿಯುವ ಸಂಗೀತಮಯ ನಾಟಕ ಇದಾಗಿದೆ. ನೈಜ ಚಿತ್ರಣವನ್ನು ಕಟ್ಟಿಕೊಡುವ ಈ ಕಾಲ್ಪನಿಕ ಕಥಾಹಂದರ, ಮನುಷ್ಯ ಮತ್ತು ಕಾಡಿನ ನಡುವಿನ ಸಂಘರ್ಷವನ್ನು ರೋಚಕವಾಗಿ ಅನಾವರಣಗೊಳಿಸುತ್ತದೆ. ಹಾಸ್ಯ, ರೋಮಾಂಚನ ಮತ್ತು ಮೈನವಿರೇಳಿಸುವ ಸಂಗೀತದ ಸಮ್ಮಿಶ್ರಣದಲ್ಲಿ ಸಾಗುವ ಈ ನಾಟಕ, ಕೊನೆ ಗಳಿಗೆಯ ತಿರುವುಗಳಿಂದ ಪ್ರೇಕ್ಷಕರ ಕುತೂಹಲವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.

ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡವು ಇದೇ 4ರಂದು ಸಂಜೆ 7 ಗಂಟೆಗೆ ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿ 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಚಂದ್ರಶೇಖರ ಕಂಬಾರ ಅವರ ಕಾದಂಬರಿ ಆಧಾರಿತ ನಾಟಕ ಇದಾಗಿದೆ. ಅಶೋಕ್ ಬಿ. ಅವರ ನಿರ್ದೇಶನದಲ್ಲಿ ಈ ನಾಟಕ ಪ್ರದರ್ಶನ ಕಾಣಲಿದೆ. ಈ ಕಾದಂಬರಿಯ ವಸ್ತು ಪ್ರೀತಿ ಮತ್ತು ಪ್ರೇಮ. ಪ್ರತಿಷ್ಠಿತ ಕಾಲೇಜೊಂದರ ಪ್ರಾಂಶುಪಾಲರು ತಮ್ಮದೇ ಕಾಲೇಜಿನ ವಿದ್ಯಾರ್ಥಿನಿ 'ರೋಜಾ' ಎನ್ನುವ ಹುಡುಗಿಯ ಪ್ರೇಮದ ಬಲೆಯಲ್ಲಿ ಬಿದ್ದು, ಅವರ ಜೀವನದಲ್ಲಿ ಮುಂದೆ ಏನೆಲ್ಲ ಘಟನೆಗಳು ಸಂಭವಿಸುತ್ತವೆ ಎಂಬುದನ್ನು ಈ ನಾಟಕ ಅನಾವರಣ ಮಾಡಲಿದೆ.

ನಾಟಕದ ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯವೆಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9945977184

ಕುವೆಂಪು ಗಾನ ಯಾನ



ಕುವೆಂಪು

ಬೆಂಗಳೂರು: ಸಮುದ್ಯತಾ ಸಾಂಸ್ಕೃತಿಕ ಪ್ರತಿಷ್ಠಾನವು ಇದೇ 4ರಂದು ಸಂಜೆ 5 ಗಂಟೆಗೆ 'ಶಿವ ಕಾವ್ಯದ ಕಣ್ಣೋ' ಶೀರ್ಷಿಕೆಯಡಿ ಕುವೆಂಪು ಗಾನ ಯಾನ ಕಾರ್ಯಕ್ರಮವನ್ನು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.

ಸಾಂಸ್ಕೃತಿಕ ಸಂಜೆಯಲ್ಲಿ ಕುವೆಂಪು ಅವರ ಕವನಗಳ ಗಾಯನ ಮತ್ತು ಸಾಹಿತ್ಯದ ವಿಶ್ಲೇಷಣೆ ನಡೆಯಲಿದೆ. ಪ್ರವೀಣ್ ಮತ್ತು ಪ್ರದೀಪ್ ಅವರು ಗಾಯನ ಪ್ರಸ್ತುತಪಡಿಸಲಿದ್ದು, ಶಿಕ್ಷಣ ತಜ್ಞ ಕೆ.ಈ. ರಾಧಾಕೃಷ್ಣ ಅವರು ವಿಶ್ಲೇಷಿಸಲಿದ್ದಾರೆ. ನಗರ ಕೃಷ್ಣ ಉಡುಪ, ರಮೇಶ್ ಕುಮಾರ್ ಬಿ.ಎಲ್., ಅಮಿತ್ ರಾಜ್, ಯಶೋಧರ್, ಸಮರ್ಥ ದೇಸಾಯಿ ಹಾಗೂ ಸುಮನ್ ರವಿಶಂಕರ್ ಅವರು ಸಾಥ್ ನೀಡಲಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

'ಪೋಲೀ ಕಿಟ್ಟೀ' ನಾಟಕ

ಬೆಂಗಳೂರು: ದೃಶ್ಯ ರಂಗತಂಡವು ಇದೇ 3ರಂದು ಸಂಜೆ 7 ಗಂಟೆಗ ಮಲ್ಲತ್ತಹಳ್ಳಿಯ ಕಲಾ ಗ್ರಾಮದಲ್ಲಿ 'ಪೋಲೀ ಕಿಟ್ಟೀ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಟಿ.ಪಿ. ಕೈಲಾಸಂ ಅವರು ರಚಿಸಿದ ನಾಟಕ ಇದಾಗಿದ್ದು, ದಾಕ್ಷಾಯಿಣಿ ಭಟ್ ಅವರ ನಿರ್ದೇಶನವಿದೆ.

ಸಂಪರ್ಕಕ್ಕೆ: 98457 53944

ಸಂಗೀತ ಕಛೇರಿ

ಬೆಂಗಳೂರು: ಸಪ್ತಕ ಬೆಂಗಳೂರು ಇದೇ 5ರಂದು ಸಂಜೆ 5 ಗಂಟೆಗೆ ಮಲ್ಲೇಶ್ವರದ ಸೇವಾಸದನದಲ್ಲಿ ಸಂಗೀತ ಕಛೇರಿಗಳನ್ನು ಹಮ್ಮಿಕೊಂಡಿದೆ.

ಮೊದಲ ಸಂಗೀತ ಕಛೇರಿಯಲ್ಲಿ ಸುವರ್ಣಾ ಹೆಗಡೆ ಅವರಿಂದ ಗಾಯನ ನಡೆಯಲಿದ್ದು, ತಬಲಾದಲ್ಲಿ ರೂಪಕ್ ವೈದ್ಯ ಹಾಗೂ ಹಾರ್ಮೋನಿಯಂನಲ್ಲಿ ಅಂಜನಾ ಹೆಗಡೆ ಸಾಥ್ ನೀಡಲಿದ್ದಾರೆ. ಎರಡನೇ ಸಂಗೀತ ಕಛೇರಿಯಲ್ಲಿ ಎಂ.ಪಿ. ಹೆಗಡೆ ಅವರು ಗಾಯನ ಪ್ರಸ್ತುತಪಡಿಸಲಿದ್ದಾರೆ. ತಬಲಾದಲ್ಲಿ ಗುರುಮೂರ್ತಿ ವೈದ್ಯ ಹಾಗೂ ಹಾರ್ಮೋನಿಯಂನಲ್ಲಿ ಭರತ್ ಹೆಗಡೆ ಸಾಥ್ ನೀಡಲಿದ್ದಾರೆ.

'ಮಾವಿನ ಗುಡಿ ಕಾಲೊನಿ' ನಾಟಕ

ಬೆಂಗಳೂರು: ರಂಗಸೌರಭ ರಂಗ ತಂಡವು ಇದೇ 3ರಂದು ಸಂಜೆ 7.30ಕ್ಕೆ ಜೆ.ಪಿ. ನಗರದ ರಂಗಶಂಕರದಲ್ಲಿ 'ಮಾವಿನ ಗುಡಿ ಕಾಲೊನಿ' ನಾಟಕ ಪ್ರದರ್ಶನವನ್ನು ಹಮ್ಮಿಕೊಂಡಿದೆ. ಈ ಹಾಸ್ಯ ನಾಟಕವನ್ನು ಶಂಕರ್ ಗಣೇಶ್ ರಚಿಸಿ, ನಿರ್ದೇಶಿಸಿದ್ದಾರೆ. ಎರಡು ಗಂಟೆಗಳ ಈ ನಾಟಕದ ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

'ಯಕ್ಷ ಕಾರ್ತಿಕ' ಮೂರು ಯಕ್ಷಗಾನ ಪ್ರಸಂಗ

ಬಳ್ಕೂರು ಕೃಷ್ಣ ಯಾಜಿ

ಬೆಂಗಳೂರು: ಪೆರ್ಡೂರು ಮೇಳ ಮತ್ತು ಅತಿಥಿ ಕಲಾವಿದರಿಂದ ಇದೇ 4ರಂದು ರಾತ್ರಿ 9.55ಕ್ಕೆ 'ಯಕ್ಷ ಕಾರ್ತಿಕ' ಶೀರ್ಷಿಕೆಯಡಿ ಮೂರು ಯಕ್ಷಗಾನ ಪ್ರಸಂಗಗಳ ಪ್ರದರ್ಶನವನ್ನು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

'ವಿಶ್ವಾಮಿತ್ರ ಮೇನಕೆ', 'ಕಾರ್ತವೀರ್ಯ' ಮತ್ತು 'ಗದಾಯುದ್ಧ' ಯಕ್ಷಗಾನ ಪ್ರಸಂಗ ಪ್ರದರ್ಶನ ಕಾಣಲಿವೆ. ಹಿಮ್ಮೇಳದಲ್ಲಿ ಜನ್ಸಾಲೆ ರಾಘವೇಂದ್ರ ಆಚಾರ್, ಶಂಕರ ಭಟ್ ಬ್ರಹ್ಮೂರು, ಪ್ರಸನ್ನ ಭಟ್ ಬಾಳ್ಕಲ್, ಹಿಲ್ಲೂರು ರಾಮಕೃಷ್ಣ ಹೆಗಡೆ, ಶಶಾಂಕ ಆಚಾರ್ಯ, ಅನಿರುದ್ಧ ಹೆಗಡೆ, ಪ್ರಜ್ವಲ್ ಮುಂಡಾಡಿ, ನಯನ್ ಕುಮಾರ್ ನಿಟ್ಟೂರು ಪಾಲ್ಗೊಳ್ಳಲಿದ್ದಾರೆ.

'ವಿಶ್ವಾಮಿತ್ರ ಮೇನಕೆ' ಯಕ್ಷಗಾನ ಪ್ರಸಂಗದ ಮುಮ್ಮೇಳದಲ್ಲಿ ಬಳ್ಕೂರು ಕೃಷ್ಣಯಾಜಿ, ಕೊಂಡದಕುಳಿ ರಾಮಚಂದ್ರ ಹೆಗಡೆ, ಸುಧೀರ್ ಉಪ್ಪೂರು, ಸನ್ಮಯ್ ಭಟ್, ಪವನ್ ಸಾಣ್ಮನೆ, ಅಶೋಕ್ ಭಟ್ ಸಿದ್ದಾಪುರ, ಪುರಂದರ ಮೂಡ್ಕಣಿ, ಪ್ರಥಮ್ ಆಚಾರ್ಯ, 'ಕಾರ್ತವೀರ್ಯ' ಯಕ್ಷಗಾನ ಪ್ರಸಂಗದಲ್ಲಿ ನಿಲ್ಕೋಡು ಶಂಕರ ಹೆಗಡೆ, ವಿನಯ ಬೇರೊಳ್ಳಿ, ಅಣ್ಣಪ್ಪ ಮಾಗೋಡು, ಭಾಸ್ಕರ ಮರಾಠೆ, ರವೀಂದ್ರ ದೇವಾಡಿಗ, ಪುರಂದರ ಮೂಡ್ಕಣಿ, ನಾಗರಾಜ್ ಕುಂಕಿಪಾಲ, ಸಂತೋಷ್ ಕುಲಾಲ್, 'ಗದಾಯುದ್ಧ' ಯಕ್ಷಗಾನ ಪ್ರಸಂಗದಲ್ಲಿ ಕಾರ್ತಿಕ್ ಚಿಟ್ಟಾಣಿ, ಚಂದ್ರಹಾಸ ಗೌಡ, ಸುಬ್ರಹ್ಮಣ್ಯ ಹೆಗಡೆ ಯಲಗುಪ್ಪ, ಕೆ.ಜಿ. ಕಾರ್ತಿಕ್, ರವೀಂದ್ರ ದೇವಾಡಿಗ, ಅಶೋಕ್ ಭಟ್ ಸಿದ್ದಾಪುರ ಭಾಗವಹಿಸಲಿದ್ದಾರೆ. **ಟಿಕೆಟ್‌ಗಳಿಗೆ ಮೊ.ಸಂಖ್ಯೆ: 94816 69860**

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಕಾರ್ಯಕ್ರಮಗಳ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ ಬುಧವಾರ ಸಂಜೆ 6 ಗಂಟೆ ಒಳಗೆ ಕಳುಹಿಸಿ nagaradalli_indu@prajavani.co.in

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಶೇಷ ವಿಭಾಗ, ರಾ.ರಾ. ನಗರ ವಲಯ–1, ನಂ. 301, 2ನೇ ಮಹಡಿ, ಬೆಮೆಲ್ ಕಾಂಪ್ಲೆಕ್ಸ್ ಹತ್ತಿರ, 3ನೇ ಸ್ಟೇಜ್, ಬೆಮೆಲ್ ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು–560098

ನಂ.: ಬೆಂಪನಪಾ/ಕಾಪಾಅ(ವಿವಿ)/ರಾರಾನವ–1/ಟೆಂಡರ್/02/2026–27 ದಿನಾಂಕ: 01.07.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ ಲಕೋಟೆ ಪದ್ಧತಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ರಾ ರಾ ನಗರ ವಲಯ–1, ಇವರು ಈ ಕೆಳಗಿನ ಕಾಮಗಾರಿಗೆ ಅರ್ಹ ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ಸೇವೆಯ ಹೆಸರು
1	ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ಆರ್. ಆರ್. ನಗರ ವಲಯ–1ಕ್ಕೆ ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಇಂಜಿನಿಯರಿಂಗ್ ಪದವೀಧರ / ಡಿಪ್ಲೊಮಾ ಇನ್ ಇಂಜಿನಿಯರಿಂಗ್ ಉದ್ಯೋಗಿಗಳನ್ನು ಒದಗಿಸುವುದು. ಇಎಂಡಿ ರೂ.ಗಳಲ್ಲಿ: 3,84,000/–

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ **03.07.2026**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ಸಂಬಂಧಿತ ಪ್ರಶ್ನೆಗಳಿಗಾಗಿ ಕೊನೆಯ ದಿನಾಂಕ ಮತ್ತು ಸಮಯ: **04.07.2026ರ ಸಂಜೆ 4:00 ಗಂಟೆವರೆಗೆ.** (3) ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕೊನೆಯ ದಿನಾಂಕ: **10.07.2026ರ ಸಂಜೆ 5:00 ಗಂಟೆವರೆಗೆ.** (4) ತಾಂತ್ರಿಕ ಬಿಡ್ ತೆರೆಯುವುದು: **13.07.2026ರ ಬೆಳಿಗೆ 11:00 ಗಂಟೆಗೆ.** (5) ಆರ್ಥಿಕ ಬಿಡ್ ತೆರೆಯುವುದು: **ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ರಾ.ರಾ. ನಗರ ವಲಯ–1, ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

ರೈತ ಕಾರ್ಮಿಕರ ಸೇವಾ ನಿಯೋಜನೆ
ಜನಾರ್ಧನ್. ಎಸ್. ವಿ
ಹಿರಿಯ ನಾಗರಿಕರು, ಬೆಂಗಳೂರು
ಸ್ಥಳ
ಕಬನ್ ಪಾರ್ಕ್ ಎದುರು ಮಹಾತ್ಮ ಗಾಂಧಿ ಪಾರ್ಕ್ ಬೆಂಗಳೂರು.
ದಿನಾಂಕ - 02-07-2026
ಸಮಯ - ಸಂಜೆ 4:30
ಸರ್ವರಿಗೂ ಹಾಗೂ ಮಾಧ್ಯಮ ಮಿತ್ರರಿಗೂ ಆದರದ ಸ್ವಾಗತ

REAL ESTATE SELLING

Sites

Electronic City

KHB Sites Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

PERSONAL

Change of Name

CHANGE OF NAME
I, **Kritesh Kumar**, Residing at #20/4, 1st Cross, AST Block, Marappa Garden, Benson Town, Bengaluru - 560046, have changed my minor son's name from **SHARATH KUMAR** to **SHIVANSH KUMAR** vide affidavit dated 30.06.2026 before notary A. Idinabba, Bengaluru. Henceforth he shall be called as **SHIVANSH KUMAR** only

CHANGE OF NAME
I, **Mohammed Munawar**, residing at No. 27, Arekempana halli, Jayanagar 1st Block, Bengaluru-560011, declare that in some of my documents my father's name is mentioned as **K ABDUL KHADER** and **USMAN KHAN** both names are one and the same person of my late father, vide affidavit dated 01-07-2026 before notary Mohammed Hussain K, Reg No. 20459, Bengaluru.

CHANGE OF NAME
I, **KARPAGA VIKRAMAN VISWANATHAN,** residing at No.D-0, Samhita Enclave Apartment, No.8, Stephens Road, Fraser Town, Bengaluru- 560005 have changed my name to **KARPAGA VIKRAMAN** vide affidavit dated 30-06-2026 sworn before notary L.Gopalakrishna, Bengaluru. Henceforth I shall be called as **KARPAGA VIKRAMAN** only.

CHANGE OF NAME
I, **KUSHAL KATAM REDDY** and **KUSHAL REDDY KATAM REDDY** residing at Villa No. 59, Prestige Agustha Golf Village, Kada Agrahara, Anagalapura Main Road, Bengaluru-560077, declare that the above names pertain to me only & henceforth I shall be known as **KUSHAL REDDY KATAM REDDY** vide affidavit dated 01-07-2026 before notary L Gopalakrishna, Bengaluru.

Lost

LOST AND FOUND
I, Thulasiram A. N S/o Late A. C. Nagaraj R/o No. 148, 6th Main, H.H.R.W Layout, Arehalli, Banashankari, 4th stage, Bangalore 560061, do hereby inform the general public that I have Lost my Original Absolute Sale Deed of Sy no 72/3 , Kannali Village, Yeswathapur Hobli, Bangalore North (Document no 843/ 2011-12).
If found call **9731425665**

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಮುಡಾ: ದಿನೇಶ್ ಕುಮಾರ್‌ಗೆ ಜಾಮೀನು

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ಪ್ರಕರಣದಲ್ಲಿ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಪ್ರಕರಣದ ಐದನೇ ಆರೋಪಿಯಾಗಿರುವ ಜಿ.ಟಿ. ದಿನೇಶ್ ಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು ನಡೆಸಿ, ಈ ಕುರಿತು ಆದೇಶಿಸಿದೆ.

'ಪ್ರತ್ಯಕ್ಷ– ಪರೋಕ್ಷವಾಗಿ ಸಾಕ್ಷ್ಯ ತಿರುಚಲು ಹಾಗೂ ತನಿಖೆಗೆ ಅಡ್ಡಿಪಡಿಸಲು ಯತ್ನಿಸಬಾರದು. ಸಕಾರಣಕ್ಕೆ ವಿಚಾರಣಾ ನ್ಯಾಯಾಲಯದಿಂದ ವಿನಾಯ್ತಿ ಪಡೆಯುವುದರ ಹೊರತಾಗಿ ಎಲ್ಲಾ ನಿಗದಿತ ದಿನಾಂಕಗಳಂದು ವಿಚಾರಣೆಗೆ ಕಡ್ಡಾಯವಾಗಿ ಹಾಜರಾಗಬೇಕು. ಷರತ್ತು ಉಲ್ಲಂಘನೆ ಮಾಡಿದರೂ ಅರ್ಜಿದಾರರ ಜಾಮೀನು ಆದೇಶ ರದ್ದುಪಡಿಸುವಂತೆ ಕೋರಲು ಇ.ಡಿ ಸ್ವತಂತ್ರವಾಗಿದೆ' ಎಂದು ನ್ಯಾಯಪೀಠ ವಿವರಿಸಿದೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೂರವಾಣಿ ಫ್ಯಾಕ್ಸ್: 080–27934470/27935412

ಇ–ಮೇಲ್: hosakote.pa@gmail.com ವೆಬ್‌ಸೈಟ್: www.hoskote.tpa.gov.in

ಸಂ: ಹೊಯೋಪ್ರಾ/ಭೂಉಬ/25/2026–27 ದಿನಾಂಕ: 29.06.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದಿಸಲಾದ ಮಹಾಯೋಜನೆಯಂತೆ **"ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂಉಪಯೋಗ ಬದಲಾವಣೆ"** ಮಾಡಲು ಕೋರಿರುತ್ತಾರೆ. ಹಾಗಾಗಿ, ಸದರಿ ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ಇತರರಿಗೆ/ ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ.ಗಳ ವಿವರ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ	ವಿಸ್ತೀರ್ಣ
1	M/s Dream Big Housing Rep by its Managing Partner Mr. Srinivasa Babu Garlapati s/o Sambasiva Rao	56/14 ರ ಪೈಕಿ	00-05 ½
2		57 ರ ಪೈಕಿ	02-09

ಷರಾ:–ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು/ ಬರುತ್ತಿದ್ದು, "ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ ಹೊಸಕೋಟೆ.

DIPR/CP/1422/SA/2026-27

Kia Seltos

The all-new Seltos is seamlessly connected with Kia Connect 2.0#, offering 85+ connected car features including navigation and voice recognition to keep you in control, whether you're on the move or off the grid. From real-time updates and remote access to essential vehicle information, every drive stays smarter. And with Over-the-Air Software Updates, the all-new Seltos continues to evolve, getting smarter, and sharper over time.

Commanding Presence Advanced, with attitude

Head-up Display - Windshield Projection

Digital Key

31.24 cm (12.3") HD Touchscreen Navigation Cockpit

Smart Dashcam with Front & Rear Camera (With Mobile App)

Smart Air Purifier with AQI Display

All Door Windows One Touch Auto Up/ Down with Safety

Robust 24 Hi-Safety Package
STANDARD ACROSS ALL VARIANTS

Front Dual Airbags | Front Seat Side Airbags | Side Curtain Airbags | Highline Tyre Pressure Monitor | ABS (Anti-lock Brake System) | BAS (Brake Assist System) | ESC (Electronic Stability Control) | VSM (Vehicle Stability Management) | HAC (Hill-start Assist Control) | ESS (Emergency Stop Signal) | Child Lock | All Wheel Disc Brakes | Rear Parking Sensors (x4) | Speed Sensing Auto Door Lock | Impact Sensing Auto Door Unlock | Front & Rear All-Seat 3-Point Seat Belts with Reminder | ISOFIX (Rear Anchors) | Front Passenger Airbag On/ Off Switch | Front Passenger Airbag On/ Off Indicator | Rear Occupant Alert | DBC (Downhill Brake Control) | Rollover Sensor | Auto Light Control & Headlamp Escort Function | Rear View Camera with Dynamic Guidelines

Kia Service
Connected · Adaptive · Responsive · Engage

3 Years Unlimited km Warranty | Extended Warranty* Up to 7 Years | My Convenience Plus* Best-in-class Cost of Ownership | IoT Based Smart Services* | 24x7 | 3 Years Nationwide RSA*

Upgrade to the all-new Seltos with exclusive loyalty privileges for Kia owners.

Book now | **Call** 1800 108 5000 | 093195 91407 | **Visit** www.kia.com | Kia Seltos | Look for "Kia India" @

Scan the QR code to locate your nearest dealership.

*Terms & Conditions Apply. Ex-showroom price all India. The product & feature images shown in this ad is for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this ad. The specifications and features may vary depending on models/ variants. Segment is defined as Mid SUV whose length lies between 4 220 - 4 460 mm and width between 1 760 - 1 830 mm. #Kia Connect 2.0 comes with 3 years free subscription. Kia Connect 2.0 functionality is dependent on mobile network strength. The driver shall remain responsible for safe, vigilant, and attentive driving. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect 2.0 features and other details of any model as mentioned in this ad to discontinue any model without prior notice. For more details visit your local Kia dealership. Kia India Pvt. Ltd. urges you to follow traffic rules, these are meant to keep you safe on roads. We do not endorse vandalism or illegal activities related to road safety. Safety is a top priority, and we urge responsible behavior regarding traffic regulations and road safety.

INNOCEAN-020/26

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ

- ಕರೀಗೌಡ-ಸಿಇಒ-77605 04651
- ರಮಾಮಣಿ-ಸಿಒಒ-94481 97256
- ರಾಜೇಶ್-ಸಿಜಿಎಂ-94806 84046
- ರಾಘವೇಂದ್ರ ಪ್ರಸಾದ್-ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು ನಿಮ್ಮ ಹೆಸರು ಹಾಗೂ ವಿಳಾಸದೊಂದಿಗೆ 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಕಸ ತೆರವು ಮಾಡಿದ ಮೇಲೆ ಅದರ ಚಿತ್ರ ಮಾಹಿತಿಯನ್ನೂ ಕಳುಹಿಸಿ. ಅದನ್ನೂ ಪ್ರಕಟಿಸಲಾಗುತ್ತದೆ.

ಬೆಂಗಳೂರಿನ ಪುಲಕೇಶಿನಗರದ ಚೆಲುವರಾಯ ಮುದಲಿಯಾರ್ ರಸ್ತೆಯಲ್ಲಿ ತ್ಯಾಜ್ಯ ವಿಲೇವಾರಿಯಾಗದೇ ಉಳಿದಿದೆ


ಮಹದೇವಪುರ ವಿಧಾನಸಭಾ ಕ್ಷೇತ್ರದ ಮರಗೊಂಡನಹಳ್ಳಿ ಕನಕನಗರ ಹತ್ತಿರ ರಾಶಿ ಬಿದ್ದಿರುವ ಕಸ ಜಿ.ಎನ್.ಶ್ರೀನಿವಾಸ್ ಗೌಡ

ಫ್ರೇಜರ್ ಟೌನ್‌ನ ಕೋಲ್ಸ್ ರಸ್ತೆಯಲ್ಲಿ ರಾಶಿ ಬಿದ್ದಿರುವ ತ್ಯಾಜ್ಯ

ನಾಗರಬಾವಿ ಹೊರ ವರ್ತುಲ ರಸ್ತೆಯಲ್ಲಿ ಬಟ್ಟೆಯ ರಾಶಿ ಬಿದ್ದಿರುವುದು

ಬೆಂಗಳೂರಿನ ಪುಲಕೇಶಿನಗರದ ಸ್ಪೆನ್ಸರ್ ರಸ್ತೆ ಬದಿಯಲ್ಲಿ ಬಿದ್ದಿರುವ ಕಸ

ಕೋಗಿಲು ಮುಖ್ಯರಸ್ತೆಯ ಅನ್ನಪೂರ್ಣೇಶ್ವರಿ ಲೇಔಟ್‌ನಲ್ಲಿ ಆದಿತ್ಯ ಕಾಲೇಜು ಹತ್ತಿರ ಕಸ ಬಿದ್ದಿರುವುದು ಬಿ.ವಿ. ದಯಾನಂದ

ವಸಂತನಗರದ 10ನೇ ಕ್ರಾಸ್ ರಸ್ತೆಯಲ್ಲಿ ಬಿದ್ದಿರುವ ಮರದ ತ್ಯಾಜ್ಯ ವಿಲೇವಾರಿಯಾಗಿಲ್ಲ

ವಿಶ್ವೇಶ್ವರಯ್ಯ ಬಡಾವಣೆಯ 4ನೇ ಬ್ಲಾಕ್‌ನ ರಸ್ತೆಯಲ್ಲಿ ವಿಲೇವಾರಿಯಾಗದೇ ಬಿದ್ದಿರುವ ಕಸದ ರಾಶಿ

ಅಪರಾಧ ಸುದ್ದಿಗಳು

ವ್ಯಕ್ತಿಗೆ ಚಾಕು ಇರಿತ ಐವರ ಬಂಧನ

ಬೆಂಗಳೂರು: ಶುದ್ಧ ಕುಡಿಯುವ ನೀರಿನ ಘಟಕ ನಡೆಸುತ್ತಿದ್ದ ವ್ಯಕ್ತಿಗೆ ಹಳೇ ದ್ವೇಷದ ಕಾರಣಕ್ಕೆ ಚಾಕುವಿನಿಂದ ಇರಿದಿದ್ದ ಐವರನ್ನು ತಿಲಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಯನಗರದ ಬಾಲು, ರವಿ, ಶಂಕರ್, ಪುನೀತ್ ಹಾಗೂ ವಿಷ್ಣು ಬಂಧಿತರು. ಜೂನ್ 24ರಂದು ಸಂಜೆ 5.30ರ ಸುಮಾರಿಗೆ ಸೋಮಶೇಖರ್ ರೆಡ್ಡಿ ಅವರ ಕೊಲೆಗೆ ಆರೋಪಿಗಳು ಯತ್ನಿಸಿ ಪರಾರಿ ಆಗಿದ್ದರು. ಕೃತ್ಯದ ಸಂಬಂಧ ದಾಖಲಾದ ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ.

ಸೋಮಶೇಖರ್ ಹಾಗೂ ಬಾಲು ಇಬ್ಬರೂ ಪರಿಚಯಸ್ಥರು. ಕನಕಪುರದಲ್ಲಿ ಇಬ್ಬರ ನಡುವೆ ಈ ಹಿಂದೆ ಗಲಾಟೆ ನಡೆದಿತ್ತು ಎಂದು ಪೊಲೀಸರು ಹೇಳಿದರು.

ಅಪಘಾತ: ಸ್ಥಳದಲ್ಲೇ ಶುಶ್ರೂಷಕ ಸಾವು

ಬೆಂಗಳೂರು: ಬಾಣಸವಾಡಿ ಬಳಿಯ ಕಲ್ಯಾಣ ನಗರ ಜಂಕ್ಷನ್‌ನಲ್ಲಿ ಮಂಗಳವಾರ ರಾತ್ರಿ 10ರ ಸುಮಾರಿಗೆ ಕಂಟೇನರ್ ವಾಹನ ಹಾಗೂ ದ್ವಿಚಕ್ರ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಶುಶ್ರೂಷಕರೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆಲ್ವಿನ್ (28) ಮೃತಪಟ್ಟ ಶುಶ್ರೂಷಕ.

ತಮಿಳುನಾಡಿನ ಕೆಲ್ವಿನ್ ಅವರು ರಾಮಮೂರ್ತಿ ನಗರದಲ್ಲಿ ವಾಸವಾಗಿದ್ದರು. ಖಾಸಗಿ ಆಸ್ಪತ್ರೆಯಲ್ಲಿ ಶುಶ್ರೂಷಕರಾಗಿ ಕೆಲಸ ಮಾಡುತ್ತಿದ್ದರು. ಮಂಗಳವಾರ ರಾತ್ರಿ ಕೆಲಸ ಮುಗಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಮನೆಗೆ ಹೋಗುವಾಗ ಕಲ್ಯಾಣ ನಗರದ ಜಂಕ್ಷನ್ ಬಳಿ,ದ್ದ ಕಂಟೇನರ್ ವಾಹನವು ಕೆಲ್ವಿನ್ ಅವರ ದ್ವಿಚಕ್ರ ವಾಹನಕ್ಕೆ ತಾಗಿ ಅಪಘಾತ ಸಂಭವಿಸಿದೆ.

ಆರೋಪಿ ಕಾಲಿಗೆ ಗುಂಡು ಹಾರಿಸಿ ಬಂಧನ

ಬೆಂಗಳೂರು: ರೌಡಿಶೀಟರ್ ರಾಜುಬಾಯ್ ಕೊಲೆ ಪ್ರಕರಣದಲ್ಲಿ ಬಂಧಿಸಿ ಸ್ಥಳ ಮಹಜರಿಗೆ ಕರೆದೊಯ್ದ ವೇಳೆ ಪೊಲೀಸರ ಮೇಲೆಯೇ ಕಲ್ಲು ತೂರಾಟ ನಡೆಸಿ ಪರಾರಿಯಾಗಲು ಯತ್ನಿಸಿದ್ದ ಆರೋಪಿ, ರೌಡಿಶೀಟರ್ ಸಂತೋಷ್ ಕುಮಾರ್ ಕಾಲಿಗೆ ಜೆ.ಪಿ.ನಗರ ಠಾಣೆಯ ಪೊಲೀಸರು ಗುಂಡು ಹಾರಿಸಿ ಮತ್ತೆ ಬಂಧಿಸಿದ್ದಾರೆ.

ತಲಘಟ್ಟಪುರದ ಹೆಮ್ಮಿಗೆಪುರದಲ್ಲಿ ಬುಧವಾರ ಸಂಜೆ ಘಟನೆ ನಡೆದಿದೆ. ಸಂತೋಷ್ ವಿರುದ್ಧ ಎರಡು ಕೊಲೆ ಹಾಗೂ ಐದು ಕೊಲೆ ಯತ್ನ ಪ್ರಕರಣಗಳೂ ಸೇರಿ 14 ಪ್ರಕರಣಗಳು ದಾಖಲಾಗಿವೆ. ಜೂನ್ 27ರಂದು ಸಂತೋಷ್ ತನ್ನ ಸಹಚರರ ಜತೆಗೆ ಸೇರಿ ರೌಡಿಶೀಟರ್ ರಾಜುಬಾಯ್ ಅವರನ್ನು ಕೊಲೆ ಮಾಡಿದ್ದ. ಅದೇ ದಿನ ರಾತ್ರಿ ಕೆ.ಆರ್.ಪುರ ಠಾಣೆ ವ್ಯಾಪ್ತಿಯಲ್ಲಿ ಖಾರದಪುಡಿ ಎರಚಿ, ಸರ ಕಳವು ಮಾಡಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಯುವತಿ ಮೇಲೆ ಲೈಂಗಿಕ ದೌರ್ಜನ್ಯ: ಸೆರೆ

ಬೆಂಗಳೂರು: ಮದುವೆ ಆಗುವುದಾಗಿ ನಂಬಿಸಿ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಆಕೆಯಿಂದ ₹5 ಲಕ್ಷ ಪಡೆದು ಬೆದರಿಕೆ ಹಾಕಿದ್ದ ಆರೋಪಿ ಹಾಗೂ ಆತನ ಸೋದರ ಮಾವನನ್ನು ಮೈಕೊಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚೇತನ್ ಕುಮಾರ್ ಕೃತ್ಯ ಎಸಗಿದ್ದ ಆರೋಪಿ. 35 ವರ್ಷದ ಯುವತಿ ನೀಡಿದ ದೂರಿನ ಆಧಾರದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ.

ಸಂತ್ರಸ್ತೆ, ಮೈಕೊ ಲೇಔಟ್‌ನ ಬಿಟಿಎಂ ಎರಡನೇ ಹಂತದಲ್ಲಿ ವಾಸವಾಗಿದ್ದರು. ಈ ವೇಳೆ ಟ್ರಾವೆಲ್ಸ್ ಮಾಲೀಕ ಚೇತನ್ ಕುಮಾರ್ ಪರಿಚಯವಾಗಿದ್ದು, ಇಬ್ಬರೂ ಪ್ರೀತಿಸುತ್ತಿದ್ದರು. ಎರಡು ವರ್ಷಗಳಿಂದ ಆಕೆಯೊಂದಿಗೆ ಸಲುಗೆಯಿಂದ ಇದ್ದ ಆರೋಪಿ, ಕಾರುಗಳ ಇಎಂಐ ಕಟ್ಟಬೇಕೆಂದು ₹5 ಲಕ್ಷ ಪಡೆದು ಮದುವೆ ಮಾಡಿಕೊಳ್ಳದೆ ವಂಚಿಸಿದ್ದಾನೆ. ಸಂತ್ರಸ್ತೆ ಪ್ರಶ್ನಿಸಿದಾಗ ಖಾಸಗಿ ಕ್ಷಣಗಳ ವಿಡಿಯೊಗಳನ್ನು ಜಾಲತಾಣದಲ್ಲಿ ಹರಿಯಬಿಡುವುದಾಗಿ ಬೆದರಿಕೆ ಹಾಕಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾದಚಾರಿ ಮಾರ್ಗದಲ್ಲಿನ ಒತ್ತುವರಿ ತೆರವು

ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ 'ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ'ದ ಅಂಗವಾಗಿ ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆಯು ಬುಧವಾರ ಆರಂಭಗೊಂಡಿತು.

ಚಿಕ್ಕಪೇಟೆ, ಬಸವನಗುಡಿ, ಮಾರತ್‌ಹಳ್ಳಿ, ಗುಬ್ಬಿ ತೋಟದಪ್ಪ ರಸ್ತೆ, ಜಯನಗರ, ವಿಜಯನಗರ, ಯಲಹಂಕ ಸೇರಿದಂತೆ ನಗರದ ವಿವಿಧೆಡೆ ಒತ್ತುವರಿ ತೆರವು ವಾಹನಗಳದ್ದೇ ಸದ್ದು ಕೇಳಿತು. ಸ್ಥಳೀಯರ ಪ್ರತಿಭಟನೆಯನ್ನು ಲೆಕ್ಕಿಸದೇ ತೆರವು ನಡೆಯಿತು.

ಪಾದಚಾರಿ ಮಾರ್ಗಗಳ ಮೇಲೆ ಅನಧಿಕೃತವಾಗಿ ಅಳವಡಿಸಲಾಗಿದ್ದ ನಾಮಫಲಕಗಳು, ಮೆಟ್ಟಿಲುಗಳು, ಒಎಫ್‌ಸಿ ಕೇಬಲ್‌ಗಳು, ಅಂಗಡಿಗಳ ಮೇಲ್ಭಾಗದಲ್ಲಿ ಅಳವಡಿಸಿರುವ ಶೀಟ್‌ಗಳು, ಕಟ್ಟಡ ತ್ಯಾಜ್ಯ, ತಳ್ಳು ಗಾಡಿಗಳು, ಶಾಶ್ವತ ಪೆಟ್ಟಿಗೆಗಳು, ತಾತ್ಕಾಲಿಕ ಶೆಡ್‌ಗಳು ಸೇರಿದಂತೆ ಸಾರ್ವಜನಿಕರ ಓಡಾಟಕ್ಕೆ ಅಡ್ಡಿಯಾಗಿರುವ ಎಲ್ಲ ರೀತಿಯ ಅತಿಕ್ರಮಣಗಳನ್ನು ತೆರವುಗೊಳಿಸಲಾಯಿತು.

ಪಾಲಿಕೆ ಸಿಬ್ಬಂದಿ ಮತ್ತು ಅಧಿಕಾರಿಗಳು ಪೊಲೀಸ್ ಭದ್ರತೆಯೊಂದಿಗೆ, ಜೆಸಿಬಿ, ಟ್ರ್ಯಾಕ್ಟರ್ ಹಾಗೂ ಇತರೆ ವಾಹನಗಳನ್ನು ಬಳಸಿಕೊಂಡು ತೆರವು ಕಾರ್ಯಾಚರಣೆ ನಡೆಸಿದರು. ಮೊದಲ ದಿನ ಸುಮಾರು 75 ಕಿ.ಮೀ. ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಲ್ಲಿ ಒತ್ತುವರಿ ತೆರವು ಮಾಡಲಾಯಿತು. 1,500 ಕಿ.ಮೀ. ರಸ್ತೆಯಲ್ಲಿ ತೆರವು ಕಾರ್ಯಾಚರಣೆ ಮಾಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಗಡಿ ಮಾಲೀಕರು, ವಾಣಿಜ್ಯ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಹಾಗೂ ಬೀದಿಬದಿ ವ್ಯಾಪಾರಿಗಳು ಸ್ವಯಂಪ್ರೇರಿತವಾಗಿ ಪಾದಚಾರಿ ಮಾರ್ಗಗಳ ಮೇಲಿನ ಒತ್ತುವರಿಗಳನ್ನು ತೆರವುಗೊಳಿಸುವಂತೆ ಮನವಿ ಮಾಡಲಾಯಿತು. ಸ್ವಯಂಪ್ರೇರಿತವಾಗಿ ತೆರವುಗೊಳಿಸದಿದ್ದಲ್ಲಿ ನಿಯಮಾನುಸಾರ ತೆರವು ಕಾರ್ಯಾಚರಣೆ ನಡೆಸಿ, ಅಗತ್ಯವಿದ್ದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಲಾಯಿತು.

ಉತ್ತರಹಳ್ಳಿಯಲ್ಲಿ ಪಾದಚಾರಿ ರಸ್ತೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಿತು – ಪ್ರಜಾವಾಣಿ ಚಿತ್ರ (ಎಡಚಿತ್ರ) ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಕ್ಕೆ ವಿಸ್ತರಿಸಿದ್ದ ಅಂಗಡಿಗಳನ್ನು ತೆರವು ಮಾಡಲಾಯಿತು

ಎಲ್ಲೆಲ್ಲಿ ಕಾರ್ಯಾಚರಣೆ?

ಬೆಂಗಳೂರು ಪೂರ್ವ ನಗರ ಪಾಲಿಕೆ: ಪಾಲಿಕೆಯ ಆಯುಕ್ತ ರಮೇಶ್ ಡಿ. ನೇತೃತ್ವದಲ್ಲಿ ಮಾರತ್‌ಹಳ್ಳಿಯಿಂದ ಇಬ್ಲೂರು ಜಂಕ್ಷನ್, ಹೋಪ್ ಫಾರ್ಮ್‌ನಿಂದ ವರ್ತೂರು, ಐಟಿಪಿಎಲ್ ಮುಖ್ಯ ರಸ್ತೆ, ಹೊರ ವರ್ತುಲ ರಸ್ತೆ, ಟಿನ್ ಫ್ಯಾಕ್ಟರಿ, ರಾಮಮೂರ್ತಿನಗರ ಮುಖ್ಯ ರಸ್ತೆ, ಕುಂದಲಹಳ್ಳಿ, ಹೂಡಿ ರಸ್ತೆಗಳಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು.

ಬೆಂಗಳೂರು ಕೇಂದ್ರ ನಗರ ಪಾಲಿಕೆ: ಆಯುಕ್ತ ಜಿ. ಜಗದೀಶ್ ನೇತೃತ್ವದಲ್ಲಿ ಟ್ರಿನಿಟಿ ಜಂಕ್ಷನ್‌ನಿಂದ ಎಂ.ಜಿ ಉದ್ಯಾನದವರೆಗೆ, ಇಂದಿರಾನಗರದ 100 ಅಡಿ ರಸ್ತೆಯಿಂದ ದೊಮ್ಮಲೂರು ಮೇಲ್ಸೇತುವೆಯವರೆಗೆ, ವಿವೇಕಾನಂದ ಮೆಟ್ರೊ ನಿಲ್ದಾಣದಿಂದ ಬೆನ್ನಿಗಾನಹಳ್ಳಿ ರೈಲು ಸೇತುವೆವರೆಗೆ, ಅಶೋಕ ಪಿಲ್ಲರ್‌ನಿಂದ ಮಾದವನ್ ಪಾರ್ಕ್ ವರೆಗೆ, 8ನೇ ಮುಖ್ಯ ಹಾಗೂ 9ನೇ ಮುಖ್ಯ ರಸ್ತೆ ಕನಕನಪಾಳ್ಯ ರಸ್ತೆಯಿಂದ 15ನೇ ಅಡ್ಡ ರಸ್ತೆ ಜಯನಗರವರೆಗೆ, ಆರ್.ವಿ ರಸ್ತೆ ಟೀಚರ್ಸ್ ಕಾಲೇಜಿನಿಂದ ಸೌತ್ ಎಂಡ್ ಸರ್ಕಲ್‌ವರೆಗೆ, ಓಕಳೀಪುರ, ಮೆಜೆಸ್ಟಿಕ್ ಪ್ರದೇಶದಲ್ಲಿ ಒತ್ತುವರಿ ತೆರವು ಮಾಡಲಾಯಿತು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ: ಆಯುಕ್ತ ರಮೇಶ್ ಕೆ.ಎನ್. ನೇತೃತ್ವದಲ್ಲಿ ಉತ್ತರಹಳ್ಳಿ, 80 ಅಡಿ ರಸ್ತೆ ಆರ್.ವಿ ಇನ್‌ಸ್ಟಿಟ್ಯೂಟ್, ಕೊತ್ತನೂರು, ವಿಶ್ವಪ್ರಿಯ ಲೇಔಟ್, ಪದ್ಮನಾಭನಗರದ ಗುರುರಾಜ ಲೇಔಟ್, ಜಯನಗರ ಆರ್.ವಿ ರಸ್ತೆ, ಜೆ.ಪಿ. ನಗರ, ಎಚ್.ಎಸ್.ಆರ್. ಲೇಔಟ್, ಕೋರಮಂಗಲ, ಬಿಟಿಎಂ 2ನೇ ಹಂತ ಸೇರಿದಂತೆ ಇತರೆ ಪ್ರಮುಖ ರಸ್ತೆಗಳಲ್ಲಿ ಬೀದಿಬದಿ ವ್ಯಾಪಾರಿಗಳು ಹಾಗೂ ಅಂಗಡಿ ಮಾಲೀಕರು ಮಾಡಿಕೊಂಡಿದ್ದ ಒತ್ತುವರಿಗಳನ್ನು ತೆರವುಗೊಳಿಸಲಾಯಿತು.

ಬೆಂಗಳೂರು ಉತ್ತರ ನಗರ ಪಾಲಿಕೆ: ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ನೇತೃತ್ವದಲ್ಲಿ ಯಲಹಂಕದ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಹೆಬ್ಬಾಳದ ಮುನಿರೆಡ್ಡಿ ಪಾಳ್ಯ ರಸ್ತೆ, ವಿದ್ಯಾರಣ್ಯಪುರ ಮುಖ್ಯ ರಸ್ತೆ, ಸಹಕಾರ ನಗರ, ಕ್ಲಾರ್ಕ್ ರಸ್ತೆ, ಬಾಣಸವಾಡಿ ರಸ್ತೆಗಳಲ್ಲಿ ಒತ್ತುವರಿ ತೆರವು ಮಾಡಲಾಯಿತು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ: ಆಯುಕ್ತ ರಾಜೇಂದ್ರ ಕೆ.ವಿ. ನೇತೃತ್ವದಲ್ಲಿ ತುಮಕೂರು ಮುಖ್ಯ ರಸ್ತೆ, ಮೈಸೂರು ರಸ್ತೆ, ಹೊರ ವರ್ತುಲ ರಸ್ತೆ, ಮಾಗಡಿ ಮುಖ್ಯ ರಸ್ತೆ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಎಂ.ಇ.ಐ ರಸ್ತೆ, ಎಂ.ಕೆ.ಕೆ ರಸ್ತೆ, ದಾಸರಹಳ್ಳಿ (ಲೇಕ್ ರಸ್ತೆ), ಚಂದ್ರಾ ಲೇಔಟ್, ಗೋವಿಂದರಾಜನಗರ, ಪಾಲಿಕೆ ಬಜಾರ್, ಸಂಪಿಗೆ ರಸ್ತೆ, ರಾಜಾಜಿನಗರ, ಡಿವಿಜಿ ರಸ್ತೆ, ಬುಲ್ ಟೆಂಪಲ್ ರಸ್ತೆ, ಕತ್ರಿಗುಪ್ಪೆ ರಸ್ತೆ, ಭುವನೇಶ್ವರಿ ನಗರದಲ್ಲಿ ಕಾರ್ಯಾಚರಣೆ ನಡೆಯಿತು.

ಸಂಘಟನೆಗಳ ವಿರೋಧ

ಸ್ಥಳೀಯ ವ್ಯಾಪಾರಿಗಳು, ಬೀದಿಬದಿ ವ್ಯಾಪಾರಿಗಳ ಸಂಘಟನೆಗಳು ಒತ್ತುವರಿ ತೆರವಿಗೆ ವಿರೋಧ ವ್ಯಕ್ತಪಡಿಸಿದವು. ಪರ್ಯಾಯ ವ್ಯವಸ್ಥೆ ಮಾಡದೇ, ಆಯ್ದ ಜಾಗಗಳಲ್ಲಿ ಮಾತ್ರ ಒತ್ತುವರಿ ತೆರವು ಮಾಡಲಾಗುತ್ತಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.

'ಸುರಕ್ಷಿತ ಮತ್ತು ಅಡಚಣೆಯಿಲ್ಲದ ಪಾದಚಾರಿ ಮಾರ್ಗಗಳು ಪಾದಚಾರಿಗಳ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಅದರಂತೆ ಅಭಿಯಾನ ನಡೆಸಲಾಗುತ್ತಿದೆ. ಜುಲೈ 3ರಿಂದ ಪಾದಚಾರಿ ಮಾರ್ಗಗಳಿಗೆ ಅಡ್ಡಿಪಡಿಸುವವರಿಗೆ ₹5,000ದವರೆಗೆ ದಂಡ ವಿಧಿಸಿ, ವಸ್ತುಗಳನ್ನು ವಶಪಡಿಸಿಕೊಳ್ಳಲಾಗುವುದು' ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದರು.

'ಅಭಿಯಾನವನ್ನು ನಿರಂತರವಾಗಿ ಮುಂದುವರಿಸಲಾಗುವುದು. ಸಾರ್ವಜನಿಕರಿಂದ ಬರುವ ದೂರುಗಳಿಗೂ ತ್ವರಿತವಾಗಿ ಸ್ಪಂದಿಸಿ, ಒತ್ತುವರಿ ತೆರವು ಕಾರ್ಯಾಚರಣೆಯನ್ನು ಮತ್ತಷ್ಟು ಪರಿಣಾಮಕಾರಿ ಆಗಿ ನಡೆಸಲಾಗುವುದು' ಎಂದು ಅಧಿಕಾರಿಗಳು ತಿಳಿಸಿದರು.

ಜನಾಂದೋಲನವಾಗಬೇಕು: ಸಚಿವ ಕೃಷ್ಣ ಬೈರೇಗೌಡ

'ಬೆಂಗಳೂರಿನ ನಿವಾಸಿಗಳಿಗೆ, ನಾಗರಿಕರಿಗೆ ಸುರಕ್ಷಿತ ಪಾದಚಾರಿ ಮಾರ್ಗ ಬಳಸುವ ಹಕ್ಕಿದೆ. ಆದ್ದರಿಂದ ಪಾದಚಾರಿ ಮಾರ್ಗಗಳನ್ನು ಒತ್ತುವರಿರಹಿತವಾಗಿಡಲು ಸಾರ್ವಜನಿಕರು, ವ್ಯಾಪಾರಿಗಳು ಹಾಗೂ ಎಲ್ಲಾ ವಾಣಿಜ್ಯ ಸಂಸ್ಥೆಗಳು ನಗರ ಆಡಳಿತದೊಂದಿಗೆ ಕೈಜೋಡಿಸಬೇಕು. ಇದು ಸರ್ಕಾರದ ಅಭಿಯಾನ ಮಾತ್ರವಲ್ಲ, ನಾಗರಿಕರ ಸಹಭಾಗಿತ್ವದ ಜನಾಂದೋಲನವಾಗಬೇಕು . ಬೀದಿ ಬದಿ ವ್ಯಾಪಾರಿಗಳ ಜೀವನೋಪಾಯಕ್ಕೂ ಸರ್ಕಾರ ಬದ್ಧವಾಗಿದ್ದು, ಶೇ 20ರಷ್ಟು ಆದ್ಯತೆಯ ರಸ್ತೆಗಳನ್ನು ಹೊರತುಪಡಿಸಿ, ಉಳಿದ ರಸ್ತೆಗಳಲ್ಲಿ ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗದಂತೆ ವ್ಯಾಪಾರ ಮಾಡಿಕೊಳ್ಳಬಹುದು' ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಶೇ 10ರಷ್ಟು ದರ ಏರಿಕೆ: ಬುಧವಾರದಿಂದಲೇ ಪರಿಷ್ಕೃತ ದರ ಜಾರಿ • ವಾರ್ಷಿಕ ಪ್ರಕ್ರಿಯೆ

ನೈಸ್, ಇ-ಸಿಟಿ ಫ್ಲೈಓವರ್ ಟೋಲ್ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆ, ಎಲೆಕ್ಟ್ರಾನಿಕ್ಸ್ ಸಿಟಿ ಎಕ್ಸ್‌ಪ್ರೆಸ್ ವೇ ಮತ್ತು ಹೊಸೂರು ರಸ್ತೆಯ ಟೋಲ್ ದರವನ್ನು ಶೇ 10ರಷ್ಟು ಹೆಚ್ಚಿಸಲಾಗಿದ್ದು, ಬುಧವಾರದಿಂದ ಜಾರಿಯಾಗಿದೆ.

ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ (ನೈಸ್) ಹೊರಡಿಸಿರುವ ಸಾರ್ವಜನಿಕ ಪ್ರಕಟಣೆಯಲ್ಲಿ, ಬೆಂಗಳೂರು-ಮೈಸೂರು ಮೂಲಸೌಕರ್ಯ ಕಾರಿಡಾರ್ (ಬಿಎಂಐಸಿ) ಯೋಜನೆಯ ಪೆರಿಫೆರಲ್ ರಸ್ತೆ ಮತ್ತು ಲಿಂಕ್ ರಸ್ತೆ ಘಟಕಗಳ ಟೋಲ್ ದರಗಳನ್ನು ಪರಿಷ್ಕರಿಸುತ್ತಿರುವುದಾಗಿ ತಿಳಿಸಿದೆ. 2000ನೇ ಇಸವಿಯ ಸೆಪ್ಟೆಂಬರ್ 4ರಂದು ರಾಜ್ಯ ಸರ್ಕಾರದೊಂದಿಗೆ ಸಹಿ ಮಾಡಲಾದ ರಿಯಾಯಿತಿ ಒಪ್ಪಂದದ ಪ್ರಕಾರ ಇದು ವಾರ್ಷಿಕ ಪ್ರಕ್ರಿಯೆಯಾಗಿದೆ ಎಂದು ಹೇಳಿದೆ.

ತುಮಕೂರು ರಸ್ತೆಯಿಂದ ಹೊಸೂರು ರಸ್ತೆಯವರೆಗೆ ಚಲಿಸುವ ಬೆಂಗಳೂರಿನ ಅರೆ-ಸುತ್ತು ರಸ್ತೆಯಾದ ಪೆರಿಫೆರಲ್ ರಸ್ತೆಯು 40.8 ಕಿ.ಮೀ. ವ್ಯಾಪಿಸಿದ್ದರೆ, ಲಿಂಕ್ ರಸ್ತೆಯು 8.1 ಕಿ.ಮೀ. ಉದ್ದವಿದೆ.

ದ್ವಿಚಕ್ರ ವಾಹನಗಳು ಮತ್ತು ಕಾರುಗಳು ಕ್ರಮಿಸುವ ದೂರ ಮತ್ತು ರಸ್ತೆಯ ಆಧಾರದ ಮೇಲೆ ಕನಿಷ್ಠ ಶೇಕಡ 10ರಷ್ಟು ಹೆಚ್ಚು ಹಣವನ್ನು ಪಾವತಿಸಬೇಕಾಗುತ್ತದೆ.

ಬನಶಂಕರಿ, ತಾವರೆಕೆರೆ, ಎಲೆಕ್ಟ್ರಾನಿಕ್ಸ್ ಸಿಟಿ ಮತ್ತು ಇತರ ಪ್ರದೇಶಗಳನ್ನು ಸಂಪರ್ಕಿಸುವ ನೈಸ್ ರಸ್ತೆ ಮೂಲಕ ಬಸ್ ಸೇವೆಗಳನ್ನು ನಿರ್ವಹಿಸುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಈ ಹೆಚ್ಚುವರಿ ವೆಚ್ಚವನ್ನು ಪ್ರಯಾಣಿಕರಿಗೆ ವರ್ಗಾಯಿಸುವ ಸಾಧ್ಯತೆಯಿದೆ.

ಇ-ಸಿಟಿ ಫ್ಲೈಓವರ್: ಅದೇ ರೀತಿ, ಬೆಂಗಳೂರು ಎಲಿವೇಟೆಡ್ ಟೋಲ್‌ವೇ ಪ್ರೈವೇಟ್ ಲಿಮಿಟೆಡ್ (ಬಿಇಟಿಪಿಎಲ್) ಕೇಂದ್ರ ರೇಷ್ಮೆ ಮಂಡಳಿ ಜಂಕ್ಷನ್‌ನಿಂದ ಎಲೆಕ್ಟ್ರಾನಿಕ್ಸ್ ಸಿಟಿಯನ್ನು ಸಂಪರ್ಕಿಸುವ 9.98 ಕಿ.ಮೀ. ಎಕ್ಸ್‌ಪ್ರೆಸ್ ವೇ ಮತ್ತು ಕೇಂದ್ರ ರೇಷ್ಮೆ ಮಂಡಳಿ ಜಂಕ್ಷನ್‌ನಿಂದ ಕರ್ನಾಟಕ-ತಮಿಳುನಾಡು ಗಡಿಯವರೆಗಿನ 24.36 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ 44ರ ಟೋಲ್ ದರಗಳನ್ನು ಹೆಚ್ಚಿಸಲಿದೆ. 2026ರ ಮಾರ್ಚ್ 31ರ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಪ್ರಕಾರ ದರಗಳನ್ನು ಪರಿಷ್ಕರಿಸಲಾಗಿದ್ದು, ಮುಂದಿನ ವರ್ಷ ಜೂನ್ 30ರವರೆಗೆ ಜಾರಿಯಲ್ಲಿರುತ್ತವೆ ಎಂದು ತಿಳಿಸಿದೆ.

ಈ ಎತ್ತರಿಸಿದ ಎಕ್ಸ್‌ಪ್ರೆಸ್ ವೇ ನಾಲ್ಕು ಪಥಗಳನ್ನು ಹೊಂದಿರುವ ಬೆಂಗಳೂರಿನ ಅತ್ಯಂತ ಉದ್ದದ, ನಿರಂತರ ಫ್ಲೈಓವರ್ ಆಗಿದೆ.

ಫ್ಲೈಓವರ್‌ನಲ್ಲಿ, ಕಾರು, ಜೀಪು, ವ್ಯಾನ್ ಚಾಲಕರು ₹95 (ಒಂದೇ ದಿನದಲ್ಲಿ ಬಹು ಪ್ರಯಾಣಗಳು) ಮತ್ತು ₹1,885 (ಮಾಸಿಕ ಪಾಸ್) ಪಾವತಿಸಬೇಕಾಗುತ್ತದೆ, ಇದು ಕ್ರಮವಾಗಿ ₹100 ಮತ್ತು ₹1,960 ರಿಂದ ಬದಲಾಗಿದೆ. ಒಂದೇ ಪ್ರಯಾಣದ ದರಗಳಲ್ಲಿ ಯಾವುದೇ ಬದಲಾವಣೆ ಇಲ್ಲ. ದ್ವಿಚಕ್ರ ವಾಹನ ಸವಾರರು ಮಾಸಿಕ ಪಾಸ್‌ಗಾಗಿ ₹ 755ರ ಬದಲು ₹ 785 ಪಾವತಿಸಬೇಕಾಗುತ್ತದೆ. ಒಂದೇ ಅಥವಾ ಬಹು ಪ್ರಯಾಣದ ಟೋಲ್ ದರಗಳಲ್ಲಿ ಯಾವುದೇ ಬದಲಾವಣೆ ಇಲ್ಲ.

ಅತ್ತಿಬೆಲೆ ಟೋಲ್ ಪ್ಲಾಜಾದಲ್ಲಿ, ಕಾರು, ಜೀಪು, ವ್ಯಾನ್‌ಗಳು ₹55ರ ಬದಲು ₹60 ಪಾವತಿಸಬೇಕಾಗುತ್ತದೆ. ಬಿಇಟಿಪಿಎಲ್ ಎಂಬುದು ರಾಷ್ಟ್ರೀಯ ಹೆದ್ದಾರಿ-44 ರ 24.365 ಕಿ.ಮೀ. ವಿಭಾಗವನ್ನು ನಿರ್ವಹಿಸುವ ವಿಶೇಷ ಉದ್ದೇಶದ ಮುಂಬೈ ಸಂಸ್ಥೆಯಾಗಿದೆ.

ನೈಸ್ ರಸ್ತೆ (ಬಿಎಂಐಸಿ) ಟೋಲ್ ದರ (ಜುಲೈ 1ರಿಂದ ಜಾರಿ)

ವಿಭಾಗ (ರಸ್ತೆ)	ಉದ್ದ (ಕಿ.ಮೀ)	ಕಾರು	ಬಸ್	ಟ್ರಕ್	ಎಲ್‌ಸಿವಿ	ಎಂಎವಿ	ದ್ವಿಚಕ್ರ ವಾಹನ
ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ	8.74	72	215	141	83	143	33
ಬನ್ನೇರುಘಟ್ಟ ರಸ್ತೆಯಿಂದ ಕನಕಪುರ ರಸ್ತೆ	6.79	53	171	108	55	110	17
ಕನಕಪುರ ರಸ್ತೆಯಿಂದ ಕ್ಲೋವರ್ ಲೀಫ್ ಜಂಕ್ಷನ್	4.36	39	105	66	44	61	11
ಕ್ಲೋವರ್ ಲೀಫ್ ಜಂಕ್ಷನ್‌ನಿಂದ ಮೈಸೂರು ರಸ್ತೆ	3.88	36	94	55	44	61	11
ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ	9.55	77	226	154	94	149	33
ಮಾಗಡಿ ರಸ್ತೆಯಿಂದ ತುಮಕೂರು ರಸ್ತೆ	7.48	61	176	116	66	116	17
ಲಿಂಕ್ ರಸ್ತೆ (ಸಂಪರ್ಕ ರಸ್ತೆ)	8.10	83	220	149	88	165	25

ಎಲೆಕ್ಟ್ರಾನಿಕ್ ಸಿಟಿ ಟೋಲ್ ಪ್ಲಾಜಾದ ಪರಿಷ್ಕೃತ ದರ

ವಾಹನಗಳ ವರ್ಗ	ಏಕಮುಖ ಪ್ರಯಾಣ	ಬಹುಮುಖ ಪ್ರಯಾಣ	ಮಾಸಿಕ ಪಾಸ್
ದ್ವಿಚಕ್ರ ವಾಹನ	25	40	785
ಕಾರು, ಜೀಪು, ವ್ಯಾನ್	65	100	1960
ಎಲ್‌ಸಿವಿ / ಮಿನಿ ಬಸ್	90	135	2745
ಬಸ್ ಮತ್ತು ಟ್ರಕ್	185	275	5495
ಎಂಎವಿ (ಮಲ್ಟಿ ಆಕ್ಸೆಲ್ ವಾಹನ)	365	550	10,985

'ಶ್ವೇತಾ-ಕೆನೆತ್ ಪ್ರೇಮಿಗಳಲ್ಲ, ಸ್ನೇಹಿತರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೀಗೇಹಳ್ಳಿಯ ಡಾಮಿನಿಕ್ ಲೇಔಟ್‌ನ ಸಾಯಿಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ನಡೆದಿದ್ದ ತ್ರಿವಳಿ ಕೊಲೆ ಪ್ರಕರಣದ ಆರೋಪಿಗಳಾದ ಶ್ವೇತಾ ಹಾಗೂ ಕೆನೆತ್‌ನನ್ನು ವಶಕ್ಕೆ ಪಡೆದಿರುವ ಕೆ.ಆರ್ ಪುರ ಠಾಣೆಯ ಪೊಲೀಸರು, ಇಬ್ಬರ ವಿಚಾರಣೆಯನ್ನು ತೀವ್ರಗೊಳಿಸಿದ್ದಾರೆ.

'ನ್ಯಾಯಾಲಯವು ಇಬ್ಬರನ್ನೂ 15 ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿತ್ತು. ಕಳೆದ ಐದು ದಿನಗಳಿಂದ ಇಬ್ಬರನ್ನೂ ವಿಚಾರಣೆ ನಡೆಸಿ, ಹೇಳಿಕೆ ದಾಖಲು ಮಾಡಿಕೊಳ್ಳಲಾಗುತ್ತಿದೆ. ಪ್ರತ್ಯೇಕವಾಗಿ ಕೂರಿಸಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ಆರೋಪಿಗಳಾದ ಶ್ವೇತಾ–ಕೆನೆತ್ ಪ್ರೇಮಿಗಳು, ಒಂದೇ ಫ್ಲ್ಯಾಟ್‌ನಲ್ಲಿ ಸಹಜೀವನ ನಡೆಸುತ್ತಿದ್ದರು ಎಂದು ಹೇಳಲಾಗಿತ್ತು. ಆದರೆ, ಇಬ್ಬರೂ ಪ್ರೇಮಿಗಳು ಅಲ್ಲ. ಸ್ನೇಹಿತರು ಅಷ್ಟೇ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

'ಎಚ್‌ಎಎಲ್ ಹಾಗೂ ಕೆ.ಆರ್. ಪುರದಲ್ಲಿ ಪ್ರತ್ಯೇಕ ಮನೆಗಳನ್ನು ಕೆನೆತ್ ಬಾಡಿಗೆಗೆ ಪಡೆದುಕೊಂಡಿದ್ದ. ಆತನಿಗೆ ಪ್ರೇಯಸಿಯೂ ಇದ್ದಾಳೆ ಎಂಬುದು ಪತ್ತೆಯಾಗಿದೆ. ಹಣದ ವಿಚಾರಕ್ಕಾಗಿ ಸ್ನೇಹಿತೆ ಶ್ವೇತಾ ಕುಟುಂಬದ ಮೂವರನ್ನು ಕೊಲೆ ಮಾಡಿರುವುದಾಗಿ ಕೆನೆತ್ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

'ಶ್ವೇತಾ ತನ್ನ ಕಷ್ಟಗಳನ್ನು ಕೆನೆತ್ ಬಳಿ ಹೇಳಿಕೊಂಡಿದ್ದಳು. ಆಗ ನೆರವು ನೀಡುವುದಾಗಿ ಕೆನೆತ್ ನಂಬಿಸಿದ್ದ. ಶ್ವೇತಾ ಸ್ವಂತ ಉದ್ಯಮ ಸ್ಥಾಪಿಸಲು ಬ್ಯಾಂಕ್‌ನಿಂದ ₹30 ಲಕ್ಷ ಸಾಲ ಪಡೆದಿದ್ದಳು. ಸಾಲ ಮರುಪಾವತಿ ಮಾಡಲು ಆಕೆಗೆ ಸಾಧ್ಯ ಆಗುತ್ತಿರಲಿಲ್ಲ. ಬ್ಯಾಂಕ್‌ನಿಂದ ತಂದೆಗೂ ನೋಟಿಸ್ ಬಂದಿತ್ತು. ನೋಟಿಸ್ ಬಂದ ಮೇಲೆ ತಂದೆಯೂ ಪುತ್ರಿ ಮೇಲೆ ಕೋಪಗೊಂಡಿದ್ದರು. ಒತ್ತಡದಲ್ಲಿದ್ದ ಸ್ನೇಹಿತೆಗೆ ನೆರವು ನೀಡಲು ಕೆನೆತ್ ಮನೆಯೊಂದರಲ್ಲಿ ಕಳ್ಳತನ ಸಹ ಮಾಡಿದ್ದ' ಎಂದು ಮೂಲಗಳು ಹೇಳಿವೆ.

'ತಂದೆ–ತಾಯಿಗಿಂತ ಹೆಚ್ಚಾಗಿ ಕೆನೆತ್‌ನನ್ನೇ ಶ್ವೇತಾ ನಂಬುತ್ತಿದ್ದಳು. ಬ್ಯಾಂಕ್‌ನಿಂದ ಪಡೆದ ಸಾಲದಲ್ಲಿ ಸ್ವಲ್ಪ ಹಣವನ್ನು ಕೆನೆತ್‌ಗೆ ಶ್ವೇತಾ ನೀಡಿದ್ದಳು. ಕೆನೆತ್‌ನಿಂದ ಹಣ ವಾಪಸ್ ಪಡೆಯುವಂತೆ ಶ್ವೇತಾ ತಾಯಿ ಮುತ್ತುಲಕ್ಷ್ಮಿ ಪದೇ ಪದೇ ಒತ್ತಾಯಿಸುತ್ತಿದ್ದರು. ಈ ವಿಚಾರವು ಕೆನೆತ್‌ಗೆ ತಿಳಿದು ಕೊಲೆಗೆ ಸಂಚು ರೂಪಿಸಿದ್ದ' ಎಂದು ಮೂಲಗಳು ತಿಳಿಸಿವೆ.

ಸ್ನೇಹಿತೆಯೊಂದಿಗೆ ಮಾತು; ಪ್ರೇಯಿಸಿ ಗಲಾಟೆ

'ಸ್ನೇಹಿತೆ ಶ್ವೇತಾ ಜತೆಗೆ ಪದೇ ಪದೇ ಮೊಬೈಲ್‌ನಲ್ಲಿ ಮಾತನಾಡುತ್ತಿರುವುದಕ್ಕೆ ಕೆನೆತ್ ಪ್ರೇಯಸಿ ಗಲಾಟೆ ಮಾಡಿದ್ದಳು. ಅದಕ್ಕಾಗಿಯೇ ಆರೋಪಿ ಎರಡು ಮನೆಗಳನ್ನು ಬಾಡಿಗೆಗೆ ಪಡೆದುಕೊಂಡಿದ್ದ. ಒಂದು ಮನೆಯಲ್ಲಿ ಸ್ನೇಹಿತೆಯನ್ನು ಇರಿಸಿದ್ದ. ಮತ್ತೊಂದು ಮನೆಯಲ್ಲಿ ಪ್ರೇಯಸಿಯನ್ನು ಬಿಟ್ಟಿದ್ದ' ಎಂದು ಮೂಲಗಳು ಹೇಳಿವೆ.

ಕೆನೆತ್

ಶ್ವೇತಾ

ಸ್ನೇಹಿತನನ್ನು ಪಾರು ಮಾಡಲು ಪ್ರಯತ್ನ: 'ತಾಯಿ, ನನ್ನ ಜೀವನವನ್ನು ಸಂಪೂರ್ಣವಾಗಿ ನಿಯಂತ್ರಣ ಮಾಡುತ್ತಿದ್ದರು. ನಾನು ಸ್ವತಂತ್ರವಾಗಿ ಯಾವುದೇ ಕೆಲಸ ಮಾಡುವುದಕ್ಕೂ ಬಿಡುತ್ತಿರಲಿಲ್ಲ. ಯಾವುದಕ್ಕೂ ಅವಕಾಶ ಕೊಡುತ್ತಿರಲಿಲ್ಲ. ಅವರು ನನ್ನ ಜೀವನವನ್ನು ಹಾಳು ಮಾಡಿದ್ದಾರೆ. ಅದಕ್ಕಾಗಿಯೇ ನಾನೇ ಅವರ ಜೀವ ತೆಗೆದೆ ಎಂಬುದಾಗಿ ವಿಚಾರಣೆ ವೇಳೆ ಶ್ವೇತಾ ತಿಳಿಸಿದ್ದಳು. ಅಲ್ಲದೇ ಕೊಲೆ ಪ್ರಕರಣದಲ್ಲಿ ಕೆನೆತ್ ಪಾತ್ರವಿಲ್ಲ ಎಂದು ಆರಂಭದಲ್ಲಿ ತಿಳಿಸಿದ್ದಳು. ಕೆನೆತ್‌ನನ್ನು ಕಾನೂನು ಸಂಕಷ್ಟದಿಂದ ಪಾರು ಮಾಡಲು ಪ್ರಯತ್ನಿಸಿದ್ದಳು. ಆದರೆ, ಪುದುಚೆರಿಯಲ್ಲಿ ಕೆನೆತ್‌ನನ್ನು ಬಂಧಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ ಕೊಲೆಯ ಹಿಂದಿನ ಸಂಚು ಪತ್ತೆಯಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ತಮಿಳುನಾಡಿನ ಸೋಮಸುಂದರ್ (52), ಅವರ ಪತ್ನಿ ಮುತ್ತುಲಕ್ಷ್ಮಿ (48) ಹಾಗೂ ಕಿರಿಯ ಮಗಳು ಸುಪ್ರಿಯಾ (19) ಅವರ ಕೊಲೆ ನಡೆದಿತ್ತು. ಸೋಮಸುಂದರ್– ಮುತ್ತುಲಕ್ಷ್ಮಿ ಅವರ ಹಿರಿಯ ಪುತ್ರಿ ಶ್ವೇತಾ ಹಾಗೂ ಕೆನೆತ್ ಸೇರಿಕೊಂಡು ಮೂವರನ್ನೂ ಜೂನ್ 22ರ ರಾತ್ರಿ ಕೊಲೆ ಮಾಡಿ, ಪುದುಚೆರಿಗೆ ತೆರಳಿ ತಲೆಮರೆಸಿಕೊಂಡಿದ್ದರು. ಆರೋಪಿಗಳನ್ನು ಬಂಧಿಸಿರುವ ಪೊಲೀಸರು, ವಿಚಾರಣೆ ನಡೆಸುತ್ತಿದ್ದಾರೆ.

ಚಿತ್ರಾವಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಯೋಜಿಸಿದ್ದ ಗಿಡ ನೆಡುವ ಅಭಿಯಾನದಲ್ಲಿ ಪಾಲ್ಗೊಂಡಿದ್ದ 'ಯೂತ್ ಫಾರ್ ಸೇವಾ' ಸಂಸ್ಥೆಯ 626 ಸ್ವಯಂ ಸೇವಕರು 2,500 ಗಿಡ ನೆಟ್ಟು ಸಂಭ್ರಮಿಸಿದರು. ಸಂಸ್ಥೆಯ ಸಂಯೋಜಕ ಬಿ.ಎಸ್‌. ರಾಘವೇಂದ್ರ, ಸುಧೀಷ್ಣ ಜೋಶಿ, ಜ್ಯೋತಿ ಭಾಗವಹಿಸಿದ್ದರು

ವೈಯಾಲಿಕಾವಲ್‌ನ ಶ್ರೀರಾಮ ಸಭಾ ಮಂಟಪದಲ್ಲಿ 'ವೈಯಾಲಿಕಾವಲ್ ವಿಸ್ತರಣಾ ಸಂಘ'ವು ಆಯೋಜಿಸಿದ್ದ 'ಯತ್ನ' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸ್ಮೃತಿ ರಮೇಶ್ ಕೌಶಿಕ್, ಬಿಸ್ಮಿ ಶೈನ್ ಮತ್ತು ದೀಪಾ ಕೃಷ್ಣಕುಮಾರ್ ಅವರು ಭರತನಾಟ್ಯ ಪ್ರದರ್ಶಿಸಿದರು

—ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ ಮಹಾ ಕುಂಭಾಭಿಷೇಕ: ಆಯೋಜನೆ ಮತ್ತು ಸ್ಥಳ: ದೇವಾಲಯ ಆವರಣ, ತಂಬುಚೆಟ್ಟಿ ರಸ್ತೆ, ಕಾಕ್ಸ್ ಟೌನ್, ಬೆಳಿಗ್ಗೆ 6

'ಸಂಹಿತ' ವಾರ್ಷಿಕೋತ್ಸವ: ಅತಿಥಿ: ಕೆ.ಭಕ್ತವತ್ಸಲ, ವೂಡೇ ಪಿ.ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಕಾನೂನು ಕಾಲೇಜು, ಗೋವಿಂದರಾವ್ ರಸ್ತೆ, ಶೇಷಾದ್ರಿಪುರಂ, ಬೆಳಿಗ್ಗೆ 10

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಶತಮಾನೋತ್ಸವ: ಉದ್ಘಾಟನೆ: ಕೆ.ಸಿ.ವೀರಣ್ಣ, ಅತಿಥಿ: ಬಿ.ಎಂ.ನವೀನ, ರಾಘವೇಂದ್ರ ಭಟ್ಟ, ಆರ್. ವಿನೋತ್ ಪ್ರಿಯಾ, ಸಿ.ಟಿ.ಶಿಲ್ಪಾನಾಗ್, ಆಯೋಜನೆ: ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ, ಸ್ಥಳ: ಕರ್ನಾಟಕ ಪಶುವೈದ್ಯಕೀಯ ಪರಿಷತ್ ಸಭಾಂಗಣ, ಹೆಬ್ಬಾಳ, ಬೆಳಿಗ್ಗೆ 11

ಫ.ಗು.ಹಳಕಟ್ಟಿ ಜನ್ಮದಿನ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಜಿ.ಪರಮೇಶ್ವರ, ಕೆ.ವಿ. ನಾಗರಾಜಮೂರ್ತಿ, ಸುಶೀಲಮ್ಮ, ಅಧ್ಯಕ್ಷತೆ: ಉದಯ ಬಿ.ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಮಧ್ಯಾಹ್ನ 12

'ದಾಸವಾಣಿ' ಕಾರ್ಯಕ್ರಮ: ಗಾಯನ: ಭವಾನಿ ಎಂ.ರಾವ್, ಗಾಯತ್ರಿ ವಿ.ಶ್ರೀನಿಧಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, 5ನೇ ಬ್ಲಾಕ್, ಜಯನಗರ, ಸಂಜೆ 5.15

'ಯೋಗದ ಮಹತ್ವ' ಉಪನ್ಯಾಸ: ಶಿವಕುಮಾರ್, ಉಪಸ್ಥಿತಿ: ಎಂ.ಸಿ.ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ, ಎಚ್.ಸಿದ್ಧಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

'ನಗರದಲ್ಲಿ ಇಂದು' ಅಂಕಣದಲ್ಲಿ ಕಾರ್ಯಕ್ರಮಗಳ ವಿವರಗಳನ್ನು ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಹಿಂಗಾರಿನಲ್ಲೂ ಮಳೆ ಕೊರತೆ: ಎಚ್‌.ಎಂ.ಎಸ್‌. ಪ್ರಕಾಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗಾಗಲೇ ಮುಂಗಾರು ಮಳೆಯ ಕೊರತೆ ಆಗಿದ್ದು, ಇದೇ ಪರಿಸ್ಥಿತಿ ಹಿಂಗಾರಿಗೂ ಮುಂದುವರಿಯಲಿದೆ ಎಂದು ಭೂವಿಜ್ಞಾನಿ ಎಚ್.ಎಂ.ಎಸ್.ಪ್ರಕಾಶ್ ಹೇಳಿದ್ದಾರೆ.

'ಭಾರತದ ಸುತ್ತಮುತ್ತ ಹಾಗೂ ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಇರುವ ಆವಿ ಮೂಲಗಳಾದ ಜ್ವಾಲಾಮುಖಿಗಳ ಚಟುವಟಿಕೆಗಳು ತುಂಬಾ ಇಳಿಮುಖವಾಗಿದೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'2026ರ ಹಿಂಗಾರು ಅವಧಿಯಾದ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೂ ಇದೇ ಪರಿಸ್ಥಿತಿ ಮುಂದುವರೆಯುವ ಸಾಧ್ಯತೆ ಇದೆ. ಮತ್ತಷ್ಟು ಮಳೆಯ ಕೊರತೆ ಕಾಡಲಿದೆ' ಎಂದು ಅವರು ಹೇಳಿದ್ದಾರೆ.

'ಎಲ್ ನಿನೊ ಪರಿಸ್ಥಿತಿಗೂ ಸಹ ಸಮುದ್ರದೊಳಗಿನ ಭೀಕರ ಜ್ವಾಲಾಮುಖಿಗಳು ಕಾರಣ ಎನ್ನುವುದನ್ನು ವಿಜ್ಞಾನಿಗಳು ಗಮನಿಸಬೇಕು. ಇದರ ಬಗ್ಗೆ ಸರ್ಕಾರ ಹಾಗೂ ಇತರ ಸಂಸ್ಥೆಗಳು ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು' ಎಂದು ಪ್ರಕಾಶ್ ಮನವಿ ಮಾಡಿದ್ದಾರೆ.

ಕೆನರಾ ಬ್ಯಾಂಕ್ ಸಂಸ್ಥಾಪನಾ ದಿನಾಚರಣೆ

ಬೆಂಗಳೂರು: ಕೆನರಾ ಬ್ಯಾಂಕ್ ತನ್ನ 121ನೇ ಸಂಸ್ಥಾಪನಾ ದಿನವನ್ನು ಬುಧವಾರ ಆಚರಿಸಿಕೊಂಡಿದೆ.

ಕಳೆದ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಬ್ಯಾಂಕ್‌ನಲ್ಲಿ ಸರ್ಕಾರದ ಪಾಲು ಶೇ 62.93ರಷ್ಟಿದೆ. ಬ್ಯಾಂಕ್‌ನ ಒಟ್ಟು ವಹಿವಾಟು ₹28 ಲಕ್ಷ ಕೋಟಿ ದಾಟಿದೆ. ಜಾಗತಿಕವಾಗಿ ಬ್ಯಾಂಕ್ ನೀಡಿರುವ ಸಾಲವು ₹12.37 ಲಕ್ಷ ಕೋಟಿ ಮತ್ತು ಠೇವಣಿಯು ₹15.68 ಲಕ್ಷ ಕೋಟಿಯಷ್ಟಿದೆ. ಬ್ಯಾಂಕ್ ಒಟ್ಟು 10,097 ಶಾಖೆ ಮತ್ತು 11 ಸಾವಿರಕ್ಕೂ ಹೆಚ್ಚು ಎಟಿಎಂಗಳನ್ನು ಹೊಂದಿದೆ. ಬ್ಯಾಂಕ್ 12 ಕೋಟಿಗೂ ಅಧಿಕ ಗ್ರಾಹಕರನ್ನು ಹೊಂದಿದೆ.

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರೀಯ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427

ಪ್ರೊಬೆಷನರಿ ಅಧಿಕಾರಿಗಳ ನೇಮಕಾತಿ

ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಪ್ರೊಬೆಷನರಿ ಅಧಿಕಾರಿಗಳ ನೇಮಕಾತಿಗಾಗಿ ಅರ್ಹ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಖಾಲಿ ಹುದ್ದೆಗಳ ಸಂಖ್ಯೆ : 1500

ಅರ್ಹತೆಯ ಮಾನದಂಡಗಳು (ವಯಸ್ಸು, ವಿದ್ಯಾರ್ಹತೆ, ಇತ್ಯಾದಿ), ಅವಶ್ಯಕ ಶುಲ್ಕ ಮತ್ತು ಇತರೆ ವಿವರಗಳು, ಅರ್ಜಿಯನ್ನು ಆನ್ ಲೈನ್ ನಲ್ಲಿ ಸಲ್ಲಿಸಲು ಲಿಂಕ್ ಮತ್ತು ಅರ್ಜಿ ಶುಲ್ಕದ ಆನ್ ಲೈನ್ ಪಾವತಿ ವಿವರಗಳು, ಜಾಹೀರಾತು ನಂ. **CPRD/PO/2026-27/09** ಅಡಿಯಲ್ಲಿ ಬ್ಯಾಂಕಿನ ವೆಬ್ ಸೈಟ್ https://sbi.bank.in/careers/current-openings ಗೆ ಲಾಗಿನ್ ಮಾಡಿ. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಹಾಗೂ ಶುಲ್ಕವನ್ನು ಪಾವತಿಸುವ ಮೊದಲು ಜಾಹೀರಾತನ್ನು ವಿವರವಾಗಿ ಪರಿಶೀಲಿಸಿ ತಮ್ಮ ಅರ್ಹತೆಯನ್ನು ಖಚಿತಪಡಿಸಿಕೊಳ್ಳುವಂತೆ ಕೋರಲಾಗಿದೆ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ: 18.06.2026 ರಿಂದ 08.07.2026**

ಸಂದೇಹಗಳೇನಾದರೂ ಇದ್ದಲ್ಲಿ ದಯವಿಟ್ಟು ಮೇಲೆ ತಿಳಿಸಿರುವ ಬ್ಯಾಂಕಿನ ಅಧಿಕೃತ ವೆಬ್ ಸೈಟ್ ನಲ್ಲಿ ಲಭ್ಯವಿರುವ **"CONTACT US"** ಈ ಲಿಂಕ್ ಮೂಲಕ ನಮಗೆ ಬರೆಯಿರಿ.

ಸ್ಥಳ : ಮುಂಬೈ
ದಿನಾಂಕ : 18.06.2026
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಂ)

"त्रिभुवन" सहकारी यूनिवर्सिटी
"Tribhuvan" Sahkari University
IRMA
(An Institution of National Importance under Ministry of Cooperation, Government of India)

ANNOUNCING ADMISSIONS 2026

Bhubaneswar (Odisha), Gandhinagar (Gujarat), and Gadag (Karnataka) Campuses

Applications are invited for the
MBA in Development Management and Cooperation
2026-28

- Erstwhile Institute of Rural Management Anand (IRMA) has been transformed into the "Tribhuvan" Sahkari University.
- Two year full-time MBA programme.
- The programme will have focus on Public Policy & Managing Non-Profits.
- A graduate (10+2+3) with a minimum of 50% marks (45% for SC, ST, OBC-NC, EWS, and PwD (Persons with Benchmark Disabilities) is eligible to apply. Candidates in the final year of graduation can also apply.
- Graduates with/without work experience are eligible.
- Means-cum-merit scholarship is available for up to 10% of the batch size, subject to continuous performance monitoring.
- Test scores accepted: CUET PG-2025/CUET PG-2026/CAT 2025/XAT 2025/XAT 2026/CMAT 2026/ GATE 2025/GATE 2026/GMAT (valid score) / GRE (valid score).

Application Deadline: July 27, 2026
For more information visit: www.tsu.ac.in
Admissions Helpline: 99798 91277 | admissions@irma.ac.in
Tribhuvan Sahkari University | tribhuvansahkariuniversity | Tribhuvan Sahkari University | tsuofficial

FARNAZ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು

ಡಾ. ಜಿ. ಪರಮೇಶ್ವರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಡಾ|| ಫ.ಗು. ಹಳಕಟ್ಟಿಯವರ ಜನ್ಮದಿನದ ಅಂಗವಾಗಿ
ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ

ದಿನಾಂಕ: 02.07.2026 ಗುರುವಾರ । ಸಮಯ: ಮಧ್ಯಾಹ್ನ: 12.00 ಗಂಟೆಗೆ
ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರು ನಾಡಪ್ರಭು ಕೆಂಪೇಗೌಡರ ಜಯಂತಿ ಸಮಾರಂಭದಲ್ಲಿ ಸಭಿಕರನ್ನುದ್ದೇಶಿಸಿ ಮಾತನಾಡುತ್ತಿರುವುದು.

ಉದ್ಘಾಟನೆ
ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ಉದಯ ಬಿ. ಗರುಡಾಚಾರ್
ಮಾನ್ಯ ಶಾಸಕರು
ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಸಾಂಸ್ಕೃತಿಕ ಕಾರ್ಯಕ್ರಮಗಳು
ಬೆಳಿಗ್ಗೆ: 10.30 ರಿಂದ 11.30ರ ವರೆಗೆ — ವಚನ ಗಾಯನ
ಬೆಳಿಗ್ಗೆ 11.30 ರಿಂದ 12.00ರ ವರೆಗೆ — ಡಾ. ಫ.ಗು. ಹಳಕಟ್ಟಿ ಯವರ ಸಾಕ್ಷ್ಯಚಿತ್ರ ಪ್ರದರ್ಶನ

ತಮಗೆ ಆತ್ಮೀಯ ಸ್ವಾಗತ
ಜೆ. ಮಂಜುನಾಥ, ಭಾ.ಆ.ಸೇ — ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಡಾ. ಬಿ.ಎಸ್. ಮಂಜುನಾಥ ಸ್ವಾಮಿ, ಕ.ಆ.ಸೇ — ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.



ನಿನ್ನ ವೆಚ್ಚಕ್ಕಿಂತ ಪ್ಯಾಸಿವ್ ಆದಾಯ ಹೆಚ್ಚಿದ್ದಾಗ ನೀನು ಆರ್ಥಿಕವಾಗಿ ಸ್ವತಂತ್ರನಾಗುವೆ
ಟಿ. ಹಾರ್ವ್ ಎಕರ್, ಉದ್ಯಮಿ ಹಾಗೂ ಲೇಖಕ

ದುಡ್ಡಿನಂಥಾ ಮಾತು

ಮುಂಗಾರು ದುರ್ಬಲ ಮಾರುಕಟ್ಟೆ?

ದೇಶದ ಅರ್ಥ ವ್ಯವಸ್ಥೆಯ ಜೀವನಾಡಿಯಂತೆ ಇರುವ ಮುಂಗಾರು ಮಳೆ ಜೂನ್‌ನಲ್ಲಿ ವಾಡಿಕೆಗೆ ಅನುಗುಣವಾಗಿ ಆಗಿಲ್ಲ. ಇದರ ಪರಿಣಾಮವು ಷೇರುಪೇಟೆಯ ಮೇಲೆ ಯಾವ ರೂಪದಲ್ಲಿ ಇರಬಹುದು? ಹೂಡಿಕೆದಾರರು ಗಮನಿಸಬೇಕಿರುವುದು ಏನು? ಈ ಕುರಿತ ವಿಶ್ಲೇಷಣೆ ಇಲ್ಲಿದೆ...

• ವಿ.ಕೆ.ವಿಜಯಕುಮಾರ್

ಈ ವರ್ಷದ ಫೆಬ್ರುವರಿ 28ರವರೆಗೂ ದೇಶದ ಅರ್ಥ ವ್ಯವಸ್ಥೆಯ ಸ್ಥಿತಿ ಬಹಳ ಚೆನ್ನಾಗಿಯೇ ಇತ್ತು. 2025–26ನೆಯ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ ಬೆಳವಣಿಗೆ ಪ್ರಮಾಣ ಶೇ 7.6ರಷ್ಟು ಇತ್ತು, ದೇಶದಲ್ಲಿ ಹಣದುಬ್ಬರ ಪ್ರಮಾಣ ಶೇ 2.75ರಷ್ಟು ಇತ್ತು, ವಿತ್ತೀಯ ಕೊರತೆ ಹಾಗೂ ಚಾಲ್ತಿ ಖಾತೆ ಕೊರತೆ ಪ್ರಮಾಣವು ಕ್ರಮವಾಗಿ ಶೇ 4.4 ಹಾಗೂ ಶೇ 1ರ ಮಟ್ಟದೊಳಗೆ ಇದ್ದವು, ವಿದೇಶಿ ವಿನಿಮಯ ಸಂಗ್ರಹವು 720 ಬಿಲಿಯನ್ ಡಾಲರ್‌ನಷ್ಟು ಇತ್ತು, ಬ್ರೆಂಟ್ ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ 70 ಡಾಲರ್ ಆಸುಪಾಸಿನಲ್ಲಿತ್ತು.

ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ 2025ರಲ್ಲಿ ಜಾರಿಗೆ ತಂದ ವಿತ್ತೀಯ ಮತ್ತು ಹಣಕಾಸಿನ ಉತ್ತೇಜನಾ ಕ್ರಮಗಳು 2026–27ರಲ್ಲಿ ಕಂಪನಿಗಳ ವರಮಾನದ ಏರಿಕೆ ಆಗಬಹುದಾದ ಸಾಧ್ಯತೆಯನ್ನು ಹೆಚ್ಚು ಮಾಡಿದ್ದವು. ಆ ಸಂದರ್ಭದಲ್ಲಿ ನಿಫ್ಟಿ ಸೂಚ್ಯಂಕವು 26 ಸಾವಿರದ ಮಟ್ಟದಲ್ಲಿತ್ತು, ಗಟ್ಟಿತನ ಪ್ರದರ್ಶಿಸಿತ್ತು.

ಆದರೆ ಫೆಬ್ರುವರಿ 28ರಂದು ಪಶ್ಚಿಮ ಏಷ್ಯಾದಲ್ಲಿ ಶುರುವಾದ ಯುದ್ಧವು ಅರ್ಥ ವ್ಯವಸ್ಥೆಯ ಚಿತ್ರಣವನ್ನು ಸಂಪೂರ್ಣವಾಗಿ ಬದಲಾಯಿಸಿತು. ಯುದ್ಧದಿಂದಾಗಿ ಸೃಷ್ಟಿಯಾದ ಇಂಧನ ಬಿಕ್ಕಟ್ಟು ದೇಶದ ಅರ್ಥವ್ಯವಸ್ಥೆಯ ದೌರ್ಬಲ್ಯವನ್ನು ತೋರಿಸಿತು – ಅಂದರೆ, ಇಂಧನ ಆಮದಿನ ಮೇಲೆ ದೇಶವು ಅದೆಷ್ಟು ಅವಲಂಬಿತವಾಗಿದೆ, ಬೇರೆಡೆಗಳಲ್ಲಿ ಸೃಷ್ಟಿಯಾಗುವ ಸಮಸ್ಯೆಗಳಿಂದಾಗಿ ದೇಶದ ಇಂಧನ ಲಭ್ಯತೆಯ ಮೇಲೆ ಆಗುವ ಅಪಾಯ ಏನು ಎಂಬುದನ್ನು ಇದು ತೋರಿಸಿತು. ಯುದ್ಧದಿಂದಾಗಿ ಸೃಷ್ಟಿಯಾದ ಇಂಧನ ಬಿಕ್ಕಟ್ಟು, ಶಕ್ತಿಶಾಲಿಯಾಗಿದ್ದ ದೇಶದ ಅರ್ಥ ವ್ಯವಸ್ಥೆಯನ್ನು ಕುಗ್ಗಿಸುವ ಕೆಲಸ ಮಾಡಿತು. ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಹೂಡಿಕೆಯನ್ನು ಹಿಂದಕ್ಕೆ ಪಡೆಯುತ್ತಿರುವುದು ಚಾಲ್ತಿ ಖಾತೆ ಕೊರತೆಯ (ಸಿಎಡಿ) ಸಮಸ್ಯೆಯ ತೀವ್ರತೆಯನ್ನು ಹೆಚ್ಚಿಸಿತು. ಇದರಿಂದಾಗಿ ರೂಪಾಯಿ ಮೌಲ್ಯ ತಗ್ಗಿತು. ಈ ಪರಿಣಾಮವಾಗಿ ವಿದೇಶಿ ಬಂಡವಾಳದ (ಎಫ್‌ಪಿಐ) ಹೊರಹರಿವು ಇನ್ನಷ್ಟು ಜಾಸ್ತಿ ಆಯಿತು.

ಅರ್ಥ ವ್ಯವಸ್ಥೆಗೆ ಹಾಗೂ ಕಾರ್ಪೊರೇಟ್ ಕಂಪನಿಗಳ ವರಮಾನಕ್ಕೆ ಏಟು ಬೀಳಲಿದೆ ಎಂಬುದನ್ನು ಗ್ರಹಿಸಿದ ಷೇರುಪೇಟೆಯು ಇಳಿಮುಖವಾಯಿತು. ಮಾರ್ಚ್ 30ರಂದು ನಿಫ್ಟಿ 22,331ರ ಮಟ್ಟಕ್ಕೆ ಕುಸಿಯಿತು. ಇದು ಈ ವರ್ಷದ ಗರಿಷ್ಠ ಮಟ್ಟಕ್ಕೆ ಹೋಲಿಸಿದರೆ ಶೇ 15ರಷ್ಟು ಕುಸಿತ.

ಬಿಕ್ಕಟ್ಟು ನಿವಾರಣೆ: ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇನ್ನೂ ಕೆಲವು ತಿಂಗಳುಗಳವರೆಗೆ ಪ್ರತಿ ಬ್ಯಾರಲ್‌ಗೆ 95 ಡಾಲರ್‌ಗಿಂತ ಹೆಚ್ಚಿನ ಮಟ್ಟದಲ್ಲಿ ಉಳಿದಿದ್ದರೆ ದೇಶದ ಅರ್ಥ ವ್ಯವಸ್ಥೆಯ ಮೇಲೆ ತೀವ್ರ ಒತ್ತಡ ಸೃಷ್ಟಿಯಾಗುತ್ತಿತ್ತು. ಆದರೆ ಅದೃಷ್ಟದ ಸಂಗತಿಯೆಂದರೆ ಅಮೆರಿಕ ಮತ್ತು ಇರಾನ್ ನಡುವೆ ಒಪ್ಪಂದವೊಂದು ಸಾಧ್ಯವಾಗಿದೆ ಹಾಗೂ ಇದರ ಪರಿಣಾಮವಾಗಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬಹಳಷ್ಟು ಕಡಿಮೆ ಆಗಿದೆ. ಅದು ಈಗ ಬ್ಯಾರಲ್‌ಗೆ 75 ಡಾಲರ್‌ಗಿಂತ ಕಡಿಮೆ ಇದೆ. ಇದು ದೇಶದ ಅರ್ಥ ವ್ಯವಸ್ಥೆಯ ಪಾಲಿಗೆ ದೊಡ್ಡ ಸಮಾಧಾನದ ಸಂಗತಿ.

ಕಲೆ: ಸಂತೋಷ್ ಸಸಿಹಿತ್ಲು

ಎಲ್‌–ನಿನೊ ಅಪಾಯ: ಈಗ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರುವ ಹೊಸ ಅಪಾಯವೊಂದು ಎದುರಾಗಿದೆ. ದೀರ್ಘಾವಧಿಯ ಸರಾಸರಿಗೆ ಹೋಲಿಸಿದರೆ ಈ ಬಾರಿ ಮುಂಗಾರು ಮಳೆಯು ಶೇ 90ರಷ್ಟು ಮಾತ್ರ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಅಂದಾಜಿಸಿದೆ. ಖಾಸಗಿ ಸಂಸ್ಥೆಯಾದ ಸ್ಕೈಮೆಟ್ ಪ್ರಕಾರ ಮುಂಗಾರು ಮಳೆ ಶೇ 94ರಷ್ಟು ಆಗಲಿದೆ. ನಮ್ಮಲ್ಲಿ ಆಹಾರ ಧಾನ್ಯಗಳ ಸಂಗ್ರಹ ಚೆನ್ನಾಗಿದೆ, ಕಳೆದ ಎರಡು ವರ್ಷಗಳಲ್ಲಿ ಮುಂಗಾರು ಮಳೆಯು ವಾಡಿಕೆಗಿಂತ ಚೆನ್ನಾಗಿ ಸುರಿದ ಕಾರಣದಿಂದಾಗಿ ಜಲಾಶಯಗಳಲ್ಲಿ ನೀರಿನ ಮಟ್ಟವೂ ಚೆನ್ನಾಗಿದೆ. ಹೀಗಾಗಿ ಮುಂಗಾರು ಈ ಬಾರಿ ಶೇ 10ರಷ್ಟು ಕಡಿಮೆ ಆಗುವುದರಿಂದ ದೊಡ್ಡ ಅಪಾಯ ಉಂಟಾಗಲಿಕ್ಕಿಲ್ಲ.

ದೇಶದಲ್ಲಿ ನೀರಾವರಿ ಸೌಲಭ್ಯವಿರುವ ಕೃಷಿ ಜಮೀನಿನ ವ್ಯಾಪ್ತಿ ಸ್ಥಿರ ಪ್ರಮಾಣದಲ್ಲಿ ಹೆಚ್ಚುತ್ತಿದೆ, ಈಗ ಕೃಷಿ ಜಮೀನಿನಲ್ಲಿ ಶೇ 55ರಷ್ಟು ಭಾಗಕ್ಕೆ ನೀರು ಪೂರೈಕೆಯ ಖಾತರಿ ಇದೆ. ಹೀಗಾಗಿ, ಆಹಾರ ಧಾನ್ಯಗಳ ಉತ್ಪಾದನೆಯ ಮೇಲೆ ಗಣನೀಯ ಪರಿಣಾಮ ಆಗದು. ಆದರೂ ಕೃಷಿ ವಲಯದ ಬೆಳವಣಿಗೆ ತಗ್ಗಿದಾಗ ಒಟ್ಟಾರೆ ಜಿಡಿಪಿ ಬೆಳವಣಿಗೆ ಕೂಡ ತುಸು ಕಡಿಮೆ ಆಗುತ್ತದೆ. ಅದು ಶೇ 6.5ರ ಆಸುಪಾಸಿಗೆ ಬರಬಹುದು. ಹೆಚ್ಚು ನೀರು ಬೇಕಾಗುವ ತರಕಾರಿ ಬೆಳೆಯುವ ಬದಲು ರೈತರು ಸಿರಿ-ಧಾನ್ಯಗಳನ್ನು ಬೆಳೆಯಲು ಮುಂದಾದರೆ ತರಕಾರಿಗಳ ಬೆಲೆ ದುಬಾರಿ ಆಗಬಹುದು ಎಂಬ ಕಳವಳವೊಂದು ಇದೆ.

ಎಲ್ಲ ಬಾರಿಯೂ ಕಡಿಮೆ ಮಳೆ ಆಗಬೇಕೆಂದಿಲ್ಲ: ಎಲ್‌–ನಿನೊ ಪರಿಸ್ಥಿತಿಯು ಎಲ್ಲ ಬಾರಿಯೂ ಮುಂಗಾರು ಕೊರತೆಗೆ ದಾರಿ ಮಾಡಿಕೊಡುತ್ತದೆ ಎನ್ನಲಾಗದು. 1951ರಿಂದ 2022ರ ನಡುವೆ ಒಟ್ಟು 15 ಎಲ್‌–ನಿನೊ ವರ್ಷಗಳು ಇದ್ದವು. ಈ 15 ವರ್ಷಗಳ ಪೈಕಿ ಆರು ವರ್ಷಗಳಲ್ಲಿ (ಅಂದರೆ ಶೇ 40ರಷ್ಟು) ಮುಂಗಾರು ಮಳೆಯು ವಾಡಿಕೆಯಷ್ಟು ಆಗಿತ್ತು ಅಥವಾ ವಾಡಿಕೆಗಿಂತ ಹೆಚ್ಚೇ ಆಗಿತ್ತು. 1997ರಲ್ಲಿ ಸೂಪರ್ ಎಲ್‌–ನಿನೊ ಇದ್ದರೂ ದೇಶದಲ್ಲಿ ವಾಡಿಕೆಗೆ ಹೋಲಿಸಿದರೆ ಶೇ 94.4ರಷ್ಟು ಮಳೆ ಆಗಿತ್ತು. ಹೀಗಾಗಿ ಮಳೆ ಕೊರತೆ ಆಗಲಿದೆ ಎಂದು ಈಗಲೇ ಅಂದುಕೊಳ್ಳಬೇಕಿಲ್ಲ.

ಷೇರುಪೇಟೆ ಮೇಲೆ ಪರಿಣಾಮ: ಮುಂಗಾರು ಮಳೆಯ ಪ್ರಮಾಣವು ದೀರ್ಘಾವಧಿ ಸರಾಸರಿಯ ಶೇ 90ಕ್ಕಿಂತ ಕಡಿಮೆ ಮಟ್ಟಕ್ಕೆ ಕುಸಿದರೆ, ಬರದಂತಹ ಸನ್ನಿವೇಶ ಸೃಷ್ಟಿಯಾದರೆ ದೇಶದ ಅರ್ಥವ್ಯವಸ್ಥೆ ಹಾಗೂ ಷೇರುಪೇಟೆಗಳ ಮೇಲೆ ಪರಿಣಾಮ ಆಗುತ್ತದೆ. ಮುಂಗಾರು ಮಳೆಯ ಆರಂಭಿಕ ಗತಿಯನ್ನು ಗಮನಿಸಿದರೆ ಕೊರತೆ ದೊಡ್ಡ ಮಟ್ಟದಲ್ಲಿದೆ ಎಂಬಂತೆ ಕಾಣುತ್ತಿದೆ. ಜೂನ್ 23ರವರೆಗಿನ ದತ್ತಾಂಶದ ಪ್ರಕಾರ ಮುಂಗಾರು ಕೊರತೆಯು ಶೇ 43.2ರಷ್ಟಿದೆ. ಮುಂಬರುವ ವಾರಗಳಲ್ಲಿ ಮಳೆ ಚೆನ್ನಾಗಿ ಆಗದಿದ್ದರೆ ಹವಾಮಾನ ಇಲಾಖೆಯ ಅಂದಾಜು ನಿಜವಾಗಬಹುದು, ಪರಿಸ್ಥಿತಿಯು ಇನ್ನಷ್ಟು ವಿಷಮಗೊಳ್ಳಬಹುದು.

ಲೇಖಕ ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಮುಖ್ಯ ಹೂಡಿಕೆ ತಜ್ಞ

ಮುಂಗಾರು ಕೊರತೆಯ ವಲಯವಾರು ಪರಿಣಾಮ

ರಸಗೊಬ್ಬರ, ಟ್ರ್ಯಾಕ್ಟರ್, ಎಫ್‌ಎಂಸಿಜಿ (ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳು) ಹಾಗೂ ಆರಂಭಿಕ ಹಂತದ ದ್ವಿಚಕ್ರ ವಾಹನ ವಲಯಗಳು ಮುಂಗಾರು ಮಳೆಯ ಕೊರತೆಯ ಪರಿಣಾಮ ಅನುಭವಿಸುತ್ತವೆ. ಈ ವಲಯಗಳು ಒಂದೋ ಕೃಷಿ ಆದಾಯವನ್ನು ಅಥವಾ ಗ್ರಾಮೀಣ ಪ್ರದೇಶಗಳಲ್ಲಿನ ಬೇಡಿಕೆಯನ್ನು ಆಧರಿಸಿವೆ. ರಸಗೊಬ್ಬರ ಹಾಗೂ ಟ್ರ್ಯಾಕ್ಟರ್‌ಗಳಿಗೆ ಬರುವ ಬೇಡಿಕೆಯು ಮುಂಗಾರಿನ ಜೊತೆ ನೇರ ಸಂಬಂಧ ಹೊಂದಿವೆ. ಆರಂಭಿಕ ಹಂತದ ದ್ವಿಚಕ್ರ ವಾಹನಗಳ ಬೇಡಿಕೆಯಲ್ಲಿ ಶೇ 54ರಷ್ಟು ಗ್ರಾಮೀಣ ಪ್ರದೇಶಗಳಿಂದ ಬರುತ್ತದೆ. ಹೀರೊ ಮೋಟೊಕಾರ್ಪ್ ಹಾಗೂ ಟಿವಿಎಸ್‌ನಂತಹ ಕಂಪನಿಗಳಿಗೆ ಇದು ಶೇ 60ಕ್ಕಿಂತ ಜಾಸ್ತಿ.

ಬೇಡಿಕೆ ತಗ್ಗಿದರೆ ಟ್ರ್ಯಾಕ್ಟರ್ ತಯಾರಿಕಾ ಕಂಪನಿಗಳಾದ ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಫೆ, ಎಸ್ಕಾರ್ಟ್ಸ್ ಕುಬೊಟಾ ಮೇಲೆ ಪರಿಣಾಮ ಆಗಬಹುದು. ಆದರೆ ಪರಿಣಾಮದ ತೀವ್ರತೆಯು ಎಲ್ಲ ಕಂಪನಿಗಳ ಮೇಲೆಯೂ ಒಂದೇ ಬಗೆಯಲ್ಲಿ ಇರುವುದಿಲ್ಲ. ಟ್ರ್ಯಾಕ್ಟರ್ ತಯಾರಿಕಾ ವಲಯದಲ್ಲಿ ಅತಿದೊಡ್ಡ ಕಂಪನಿಯಾದ ಮಹೀಂದ್ರ ಆ್ಯಂಡ್ ಮಹೀಂದ್ರ ಪಾಲಿಗೆ ಟ್ರ್ಯಾಕ್ಟರ್ ಮಾರಾಟದಿಂದ ಬರುವ ವರಮಾನವು ಒಟ್ಟು ವರಮಾನದ ಶೇ 21ರಷ್ಟು ಮಾತ್ರ. ಈ ಕಂಪನಿಯ ವಾಹನ ವಿಭಾಗವು ಉತ್ತಮ ಸಾಧನೆ ತೋರುತ್ತಿರುವ ಕಾರಣದಿಂದಾಗಿ, ಕಂಪನಿಯ ಮೇಲೆ ಗಣನೀಯ ಪರಿಣಾಮ ಆಗಲಿಕ್ಕಿಲ್ಲ.

ಟಾಫೆ ಕಂಪನಿಯು ಷೇರುಪೇಟೆ ನೋಂದಾಯಿತ ಅಲ್ಲ. ಎಸ್ಕಾರ್ಟ್ಸ್ ಕುಬೊಟಾ ಪಾಲಿಗೆ ಒಟ್ಟು ವರಮಾನದಲ್ಲಿ ಶೇ 80ಕ್ಕಿಂತ ಹೆಚ್ಚು ಟ್ರ್ಯಾಕ್ಟರ್ ಹಾಗೂ ಇತರ ಕೃಷಿ ಉಪಕರಣಗಳ ವಿಭಾಗದಿಂದ ಬರುತ್ತದೆ. ಮುಂಗಾರು ಮಳೆ ದುರ್ಬಲವಾಗುವುದರಿಂದ ರಸಗೊಬ್ಬರಗಳು ಹಾಗೂ ಬೆಳೆ ರಕ್ಷಣೆಯ ವಲಯದ ಕಂಪನಿಗಳ ಮೇಲೆ ಪರಿಣಾಮ ಆಗುತ್ತದೆ.

ರಕ್ಷಣಾತ್ಮಕ ವಲಯಗಳು: ಪ್ರೀಮಿಯಂ ವರ್ಗದ ಗ್ರಾಹಕರನ್ನು ತಲುಪುವ ವಲಯಗಳು, ನಗರ ಕೇಂದ್ರಿತ ಬೇಡಿಕೆ ಪೂರೈಸುವ ವಲಯಗಳು, ಐ.ಟಿ ಮತ್ತು ರಫ್ತು ಆಧಾರಿತ ವಲಯಗಳು ಮುಂಗಾರು ಕೊರತೆಯಿಂದ ಬಾಧಿತ ಆಗುವುದಿಲ್ಲ. ಈಗ ಚಾಲ್ತಿಯಲ್ಲಿರುವ ಎಫ್‌ಸಿಎನ್‌ಆರ್ ಬಿ ಠೇವಣಿ ಸಂಗ್ರಹ ಅಭಿಯಾನದ ಕಾರಣದಿಂದಾಗಿ ದೊಡ್ಡ ಗಾತ್ರದ ಬ್ಯಾಂಕ್‌ಗಳಿಗೆ ಪ್ರಯೋಜನ ಆಗುತ್ತದೆ. ದೇಶದ ಅರ್ಥ ವ್ಯವಸ್ಥೆಯಲ್ಲಿ ಸಾಲ ನೀಡಿಕೆ ಪ್ರಮಾಣ ಕೂಡ ಉತ್ತಮ ಬೆಳವಣಿಗೆ ಕಾಣುತ್ತಿದೆ. ಅದಕ್ಕಿಂತ ಹೆಚ್ಚಾಗಿ, ಈ ವಲಯದ ಷೇರುಗಳ ಮೌಲ್ಯವು ಆಕರ್ಷಕವಾಗಿದೆ. ಫಾರ್ಮಾ ಹಾಗೂ ಆರೋಗ್ಯಸೇವಾ ವಲಯಗಳು ಸುರಕ್ಷಿತವಾದವುಗಳು. ಮುಂಗಾರು ಮಳೆ ದುರ್ಬಲವಾಗಿರುವ ವರ್ಷಗಳಲ್ಲಿ ಫಾರ್ಮಾ ವಲಯವು ಸಾಮಾನ್ಯವಾಗಿ ಇತರ ವಲಯಗಳಿಗಿಂತ ಹೆಚ್ಚಿನ ಗಳಿಕೆ ನೀಡುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಮುಂಗಾರು ಮಳೆಯ ಗತಿ ಹೇಗಿರುತ್ತದೆ ಎಂಬುದನ್ನು ಹೂಡಿಕೆದಾರರು ಗಮನಿಸಬೇಕು. ಹಿಂದಿನ ಹಲವು ವರ್ಷಗಳಲ್ಲಿ ಜೂನ್‌ನಲ್ಲಿ ಮಳೆ ಕೊರತೆ ಇದ್ದರೂ, ನಂತರದ ತಿಂಗಳುಗಳಲ್ಲಿ ಸುರಿದ ಮಳೆಯು ಆ ಕೊರತೆಯನ್ನು ತುಂಬಿಕೊಡುವ ಕೆಲಸ ಮಾಡಿದೆ. ಹೀಗಾಗಿ, ಮುಂಗಾರಿನ ಪ್ರಮಾಣವನ್ನು ಗಮನಿಸಬೇಕು, ಅದರ ಗತಿಗೆ ಅನುಗುಣವಾಗಿ ಪೋರ್ಟ್‌ಫೋಲಿಯೊವನ್ನು ಈಗ ಹೇಳಿರುವ ಅಂಶಗಳನ್ನು ಆಧರಿಸಿ ಮರುಹೊಂದಿಸಬೇಕು. ಮಳೆ ಕೊರತೆಯು ಹೆಚ್ಚಿನ ಅವಧಿಗೆ ಇದ್ದರೆ ರಕ್ಷಣಾತ್ಮಕ ವಲಯಗಳಿಗೆ ಹೆಚ್ಚಿನ ಹಣ ಇರಿಸಿ, ತೊಂದರೆಗೆ ಒಳಗಾಗುವ ವಲಯಗಳಲ್ಲಿನ ಮೊತ್ತವನ್ನು ಕಡಿಮೆ ಮಾಡಬೇಕು.

ಎನ್‌ಪಿಎಸ್‌–ವಾತ್ಸಲ್ಯ : ಚಂದಾದಾರರ ಸಂಖ್ಯೆ ದುಪ್ಪಟ್ಟು

ಮಕ್ಕಳಿಗಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ 'ಎನ್‌ಪಿಎಸ್‌–ವಾತ್ಸಲ್ಯ' ಯೋಜನೆಯಲ್ಲಿನ ಚಂದಾದಾರರ ಸಂಖ್ಯೆ ಒಂದೇ ವರ್ಷದಲ್ಲಿ ದುಪ್ಪಟ್ಟು ಆಗಿದೆ.

2025ರ ಮಾರ್ಚ್‌ನಲ್ಲಿ 'ಎನ್‌ಪಿಎಸ್‌–ವಾತ್ಸಲ್ಯ' ಯೋಜನೆಯಲ್ಲಿನ ಚಂದಾದಾರರ ಸಂಖ್ಯೆ 1.07 ಲಕ್ಷದಷ್ಟಿತ್ತು. ಪ್ರಸಕ್ತ ವರ್ಷದ ಮಾರ್ಚ್ 31ರ ವೇಳೆಗೆ 2.15 ಲಕ್ಷ ದಾಟಿದೆ. ಇದೇ ಅವಧಿಯಲ್ಲಿ ಈ ಯೋಜನೆಯ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹92 ಕೋಟಿಯಿಂದ ₹267 ಕೋಟಿಗೆ ಹೆಚ್ಚಳವಾಗಿದ್ದು ಶೇ 187ರಷ್ಟು ಬೆಳವಣಿಗೆ ದಾಖಲಿಸಿದೆ.

ಇದೇ ಅವಧಿಯಲ್ಲಿ ಅಟಲ್ ಪಿಂಚಣಿ ಯೋಜನೆಯ (ಎಪಿವೈ) ಫಲಾನುಭವಿಗಳ ಸಂಖ್ಯೆಯು 6.41 ಕೋಟಿಯಿಂದ 7.45 ಕೋಟಿಗೆ ಹೆಚ್ಚಳವಾಗಿದ್ದು ಶೇ 16ರಷ್ಟು ಬೆಳವಣಿಗೆ ದಾಖಲಿಸಿದೆ. ಎನ್‌ಪಿಎಸ್ ಮತ್ತು ಎಪಿವೈನ ಒಟ್ಟು ಎಯುಎಂ ₹16.48 ಲಕ್ಷ ಕೋಟಿಗೂ ಹೆಚ್ಚಿದೆ. ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಪಿಎಫ್‌ಆರ್‌ಡಿಎ) ಪ್ರಕಾರ ಜೂನ್ 21ರ ವೇಳೆಗೆ ಎನ್‌ಪಿಎಸ್‌ನ ಒಟ್ಟು ಚಂದಾದಾರರ ಸಂಖ್ಯೆ 2.25 ಕೋಟಿಯಷ್ಟಿದ್ದು ₹17,12,461 ಕೋಟಿಗೆ ಹೆಚ್ಚಳವಾಗಿದೆ. ಅಟಲ್ ಪಿಂಚಣಿ ಯೋಜನೆಯ ಒಟ್ಟು ಎಯುಎಂ ₹56,795 ಕೋಟಿಯಾಗಿದೆ.

ವಿವಿಧ ಯೋಜನೆಗಳಲ್ಲಿನ ಚಂದಾದಾರರು



ಎನ್‌ಪಿಎಸ್ ಮತ್ತು ಎಪಿವೈನ ಒಟ್ಟು ಎಯುಎಂ (₹ಕೋಟಿಗಳಲ್ಲಿ)



ಮಾಹಿತಿ ಸಂಗ್ರಹ: **ಗಂಜಿ ಆದಿಶೇಷ** ಆಧಾರ: ಪಿಎಫ್‌ಆರ್‌ಡಿಎ

ಅದಾನಿ ಪೋರ್ಟ್ಸ್ ಆ್ಯಂಡ್ ಎಸ್‌ಇಝಡ್

ಮಾಹಿತಿ ಕಣಜ

ಅದಾನಿ ಸಮೂಹದ ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ (ಎಪಿಎಸ್‌ಇಝಡ್) ಕಂಪನಿಯ ಷೇರು ಬೆಲೆಯು ₹2,050ಕ್ಕೆ ತಲುಪಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಜಾಗತಿಕ ಕಂಪನಿಯಾದ ಮೆಡಿಟರೇನಿಯನ್ ಶಿಪ್ಪಿಂಗ್ ಕಂಪನಿ (ಎಂಎಸ್‌ಸಿ) ಸಮೂಹದೊಂದಿಗೆ ಎಪಿಎಸ್‌ಇಝಡ್ ಪ್ರಮುಖ ಪಾಲುದಾರಿಕೆ ಹೊಂದಿದೆ. ಇದು ವಿಳಿಂಝಂ ಬಂದರಿನಿಂದ ಸರಕುಗಳ ಸಾಗಣೆ ಸಾಮರ್ಥ್ಯ ಮತ್ತು ಬಂದರಿನ ಸಾಮರ್ಥ್ಯವನ್ನು ಹೆಚ್ಚಿಸಲಿದೆ ಎಂದು ಮೋತಿಲಾಲ್ ಹೇಳಿದೆ.

ಕಂಪನಿಯು ಬಗೆಬಗೆಯ ಸರಕುಗಳ ಸಾಗಣೆಯ ಸೇವೆ ಒದಗಿಸುತ್ತಿದೆ. ಮೂಲಸೌಕರ್ಯ ವಲಯದಲ್ಲಿ ಹೂಡಿಕೆ ಮಾಡುತ್ತಿದೆ. 2025–26ರಿಂದ 2027–28ರ ಆರ್ಥಿಕ ವರ್ಷದ ಅವಧಿಯಲ್ಲಿ ಸರಕುಗಳ ಸಾಗಣೆಯು ಶೇ 11ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ. ಕಂಪನಿಯ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 17ರಷ್ಟು ಮತ್ತು ತೆರಿಗೆ ನಂತರದ ಲಾಭದ ಸಿಎಜಿಆರ್ ಶೇ 22ರಷ್ಟಾಗಬಹುದು ಎಂದು ಹೇಳಿದೆ. ಬುಧವಾರ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹1,848.15 ಇತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

Second Language ENGLISH
Unit-2 PROSE
There's a Girl by the Tracks!
(.........Contd)

Ans:- Baleshwar Mishra was a bold young man. Even when he was face-to-face with death, he never had a second thought. Rather he made up his mind to save the life of the girl. He was doing all he could do, while others stood watching him tongue-tied. None backed him up except a tempo truck driver. After a while, he carried the girl to a hospital and arm -twisted the duty doctor to admit the girl. What can we make out from this incident? Some people like Baleshwar remain undisturbed keep their cool in moments of crisis.

Listen and comprehend

Task -1 : Listen carefully to the reading of the following passage and take notes by drawing and filling information in the flow-chart. If required, the teacher will read the passage twice.

The boy was studing in
1
He was given
2
The Last question was
3
The Cleaning woman appeared
4 | 5 | and 6
The name of the Cleaning woman was
7

Ans:-

The boy was studying in
1. Nursing School
He was give
2. a pop quiz
The last question was
3. What is the first name of the woman who cleans the school?
The cleaning woman appeared
4. Take 5. dark - haired and 6. in her 50s
The name of the cleaning woman was...
7. Dimple

Speak well

Task -1: ***Imagine some of Roma's colleagues (Ramani, Tejas and Shalini) visit Roma's house some days later, after the incident. They begin to talk. Read the dialogues taking the roles.***

Shalini: Hi! Roma, how're you now? We're sorry to hear about the accident.
Roma: Please come in. I'm ok. Still, That accident haunts me.
Tejas: That's really a pity. We can't even imagine how all that happened.
Roma: Yes, it was really horrible. You know, I was in a hurry that day. Foolishly, I tried to board the running train.
Ramani: Really? You shouldn't have done that!
Roma: Well, with great risk I boarded it. The train was full and I got squeezed and a minute or two later, I was pushed out.
Tejas: How dreadful!
Roma: The very next moment, I was on the track. I didn't know how I got there.
Shalini: How terrible!
Roma: It was all God's grace that I didn't die. A young chap risked his life and saved me.
Tejas: Did he? Anyway, take care Roma. For heaven's sake, don't you ever run any more risks.
Roma: Thank you all.
Ramani: Meet you again. Take care. Bye!
Roma: Bye, friends.

Task 2: ***Imagine something bad has happened in your friend's life. You meet him/her. You need to sympathise with and instill confidence in him/her. Write a dialogue.***

Note: The following expressions are used to convey sympathy.

I'm sorry to hear about ....
That's so sad........
I'm awfully/dreadfully sorry about ......
That's a pity/hard luck/I know how it feels ....
How upsetting/ annoying/ oh, how dreadful/ terrible/ awful ......
You must be very upset ....
I'm extremely sorry to hear that/ Im/was deeply sorry to hear/ learn about ....
Bad luck ....
Can I help you in any way ...?
Don't worry it'll turn out all right...
It may not be as bad as it looks...
Well, these things happen, don't they ...?

Dialogue –

Me: Hi Vinay! How are you?
Vinay: I am sad friend. I lost my cousin brother in a bike accident last week.
Me: I'm sorry to hear about that.
Vinay: He was just 21 years old. *(Contd....)*

Biology

II PUC : BIOLOGY
REPRODUCTION

Human Reproduction

Multiple Choice questions:- *(....Contd)*

5. Gestation period in humans is......
A) 10 weeks B) 25 weeks
C) 7 months D) 9 months

6. Clupein protein occurs in......
A) Human sperms B) Avian sperms
C) Human ova D) Avian ova

7. Amniotic fluid protects the foetus from......
A) Shock B) Encystment
C) Degeneration D) Disease

8. Human placenta is............
A) Haemochorial B) Syndesmochorial
C) Yolk sac D) Haemo-endothelial

9. The best definition of the process of gastrulation is that it is a process where the........
A) Simple layered blastula becomes two layered
B) Archenteron is formed
C) Cells move to occupy their definite position
D) Zygote gets converted into larva.

10. Placenta is the region where
A) Foetus is attached to mother by umbilical cord
B) Foetus is provided with mother's blood
,C) Foetus receives nourishment from mother's blood
D) Foetus is covered by membranes

11. If the ectoderm from neutral tissue area is removed from the embryo and transplanted in place of presumptive belly ectoderm, embryo will develop................
A) Without a neural tube
B) With a neural tube
C) With two ectodermal coats
D) With two neural tubes.

12. The mesoderm gives rise to all the following structures in the fully developed animal except....
A) Muscular system B) Nervous system
C) Circulatory system D) Gonads

13. After a sperm has penetrated an ovum, entry of other sperm is prevented by............
A) Condensation of yolk
B) Formation of pigment coat
C) Development of vitelline membrane
D) Development of fertilization membrane

14. Allantosis of the mammalian embryo helps in
A) Respiration B) Excretion
C) Protection D) Nutrition

15. In development, nervous system (brain, spinal cord, nerve cells) is.............
A) Ectodermal B) Endodermal
C) Ectomesodermal D) Endomesodermal

16. Graafian follicles are found in........
A) Testis of mammal B) Ovary of frog
C) Ovary of cockroach D) Ovary of mammals

17. Clitoris in mammals is..........
A) Homologous to penis B) Analogous penis
C) Functional penis in female
D) Non-functional

18. Amnion is helpful to embryo in............
A) Nutrition B) protection from shock
C) Excretion D) Respiration

19. Human embryo is protected by..............
A) Allantois B) Amniotic cavity
C) Pleural cavity D) Peritoneal cavity

20. Umbilical cord contains..........
A) Umblicus B) Placenta
C) Discus proligerus
D) Allantoic artery and vein.

21. Cryptorchidism is a condition of testes........
A) Unable to descend in scrotal sacs
B) Unable to produce sperms
C) Having been surgically removed
D) having remained undeveloped

22. Egg is liberated from ovary in..........
A) Secondary oocyte stage
B) Primary oocyte stage C) Oogonial stage
D) Mature ovum stage

23. Cells become variable in morphology and function in different regions of the embryo. The process is:...............
,A) Differentiation B) metamorphosis
C) Organisation D) Rearrangement

24. Site of fertilization in a mammal is.........
A) Ovary B) Uterus
C) Vagina ,D) Fallopian tube

25. Allantois is embryonic membrane found in...
A) Mammals B) Birds
C) Reptiles
, D) Birds, mammals and reptiles

26. Gonads develop from embryonic..........
A) Ectoderm B) Endoderm
C) Mesoderm
D) Both mesoderm and endoderm.

27. How many sperms are formed from a secondary spermatocyte?
A) 4 B) 8 C) 2 D) 1

28. Human eggs are.............
,A) Alecithal B) Microlecithal
C) Mesolecithal D) Macrolecithal

29. Location and secretion of Leyding cells are ...
A) Liver-cholesterol B) Ovary-estrogen
C) Testis-testosterone D) Pancreas-glucagon

30. Middle piece of mammalian sperm possesses...
A) Mitochondria and centriole
B) Mitochondria only C) Centriole only
D) Nucleus and mitochondria

31. Freshly released human egg has........
A) One Y –chromosome
B) One X- chromosome
C) Two X- chromosome
D) One X- chromosome and one Y – chromosome

Ans:- 1. (A)	2. (C)	3. (B)	4. (C)	5. (D)
6. (B)	7. (A)	8. (A)	9. (C)	10.(C)
11.(D)	12.(B)	13.(D)	14.(B)	15.(A)
16.(D)	17.(A)	18.(B)	19.(B)	20.(D)
21.(A)	22.(A)	23.(A)	24.(D)	25.(D)
26.(C)	27.(C)	28.(A)	29.(C)	30.(A)
31.(B)				

(Contd.......)

ಚಿಟಿಕೆ ಸುದ್ದಿ

ಮತ್ತೆ ನ್ಯಾಯಾಂಗ ಬಂಧನಕ್ಕೆ ಶಂಕಿತ ಉಗ್ರ ಸೊಹೇಲ್

ದಾವಣಗೆರೆ: ಈಚೆಗೆ ಬಂಧನಕ್ಕೊಳಗಾಗಿದ್ದ ಶಂಕಿತ ಉಗ್ರ ಸೊಹೇಲ್‌ನನ್ನು ವಿಚಾರಣೆಗಾಗಿ ವಶಕ್ಕೆ ಪಡೆದಿದ್ದ ಹರಿಹರ ಗ್ರಾಮಾಂತರ ಠಾಣೆ ಪೊಲೀಸರು ಅವಧಿಗೂ ಮುನ್ನವೇ ಮತ್ತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಪಾಕಿಸ್ತಾನದ ಜೊತೆ ನಂಟು ಹೊಂದಿದ್ದ ಆರೋಪದಡಿ ಉತ್ತರಪ್ರದೇಶದ ಸೊಹೇಲ್‌ನನ್ನು ಹರಿಹರ ತಾಲ್ಲೂಕಿನ ಬನ್ನಿಕೋಡು ಗ್ರಾಮದಲ್ಲಿ ಬಂಧಿಸಲಾಗಿತ್ತು. ಬಳಿಕ ನ್ಯಾಯಾಂಗದ ಸುಪರ್ದಿಗೆ ಒಪ್ಪಿಸಿದ್ದ ಪೊಲೀಸರು ಹೆಚ್ಚಿನ ವಿಚಾರಣೆಗಾಗಿ ತಮ್ಮ ವಶಕ್ಕೆ ನೀಡುವಂತೆ ಹರಿಹರದ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯ 10 ದಿನ ಪೊಲೀಸ್ ವಶಕ್ಕೆ ನೀಡಿ ಜೂನ್ 26ರಂದು ಆದೇಶಿಸಿತ್ತು. ಬಳಿಕ ಪೊಲೀಸರು ಹಾಗೂ ಎನ್‌ಐಎ ಅಧಿಕಾರಿಗಳು ಠಾಣೆಯಲ್ಲಿ ಆರೋಪಿಯ ವಿಚಾರಣೆ ನಡೆಸಿದ್ದರು.

‘ಸೊಹೇಲ್‌ನ ಮೊಬೈಲ್ ಫೋನ್ ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ವರದಿ ಬಂದ ಬಳಿಕ ಆತನನ್ನು ಮತ್ತೆ ವಶಕ್ಕೆ ಪಡೆಯುತ್ತೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್‌.ಟಿ. ಶೇಖರ್ ತಿಳಿಸಿದರು.

ಸುಧಾಕರ್ ವಿರುದ್ಧ ಬಲಿಜಿಗರ ದೂರು

ಚಿಕ್ಕಬಳ್ಳಾಪುರ: ಕೆಂಪೇಗೌಡ ಜಯಂತಿ ವೇಳೆ ಶಾಸಕ ಪ್ರದೀಪ್ ಈಶ್ವರ್ ಕಡೆಗೆ ಚಪ್ಪಲಿ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಹೊರವಲಯದ ಹಾರೋಬಂಡೆ ಬಳಿ ಬುಧವಾರ ಕಾಂಗ್ರೆಸ್ ಮತ್ತು ಬಲಿಜ ಸಂಘದ ಮುಖಂಡರ ಸಭೆ ನಡೆಯಿತು.

ನಂತರ ಮುಖಂಡರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಭೇಟಿ ಮಾಡಿ, ‘ಸಂಸದ ಡಾ. ಕೆ.ಸುಧಾಕರ್ ಮತ್ತು ಅವರ ತಂದೆ ಹಾಗೂ ಚಿಕ್ಕಬಳ್ಳಾಪುರ ಒಕ್ಕಲಿಗರ ಸಂಘದ ಅಧ್ಯಕ್ಷ ಕೇಶವ ರೆಡ್ಡಿ ಮತ್ತಿತರರು ಸಮುದಾಯಗಳನ್ನು ಪ್ರಚೋದಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ದೂರು ನೀಡಿದರು.

8ರಂದು ಪ್ರತಿಭಟನೆ: ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಜುಲೈ 8ರಂದು ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ಈ ಸಂಬಂಧ ನಗರದಲ್ಲಿ ಜೆಡಿಎಸ್ ಮುಖಂಡರು ಬುಧವಾರ ಸಭೆ ನಡೆಸಿದರು.

ಮತ್ತೆ ಬಂತು ಬೈಕ್ ಆಂಬುಲೆನ್ಸ್

ತುರ್ತು ಸಂದರ್ಭದಲ್ಲಿ ರೋಗಿಗೆ ತ್ವರಿತವಾಗಿ ಚಿಕಿತ್ಸೆ ಕಲ್ಪಿಸಲು ಸಂಚಾರ

• ವರುಣ ಹೆಗಡೆ

ಬೆಂಗಳೂರು: ನಿರ್ವಹಣೆ ಕೊರತೆ ಹಾಗೂ ನೀರಸ ಸ್ಪಂದನೆಯಿಂದ ಸೇವೆ ಸ್ಥಗಿತಗೊಳಿಸಿದ್ದ ಬೈಕ್ ಆಂಬುಲೆನ್ಸ್‌ಗಳು ಮತ್ತೆ ರಸ್ತೆಗಿಳಿಯಲಿವೆ. ತುರ್ತು ಸಂದರ್ಭಗಳಲ್ಲಿ ಮಹಾನಗರಗಳಲ್ಲಿನ ರೋಗಿಗಳಿಗೆ ತ್ವರಿತವಾಗಿ ಚಿಕಿತ್ಸೆ ಕಲ್ಪಿಸಲು ನೆರವಾಗಲಿವೆ.

ತಮಿಳುನಾಡು, ಮಹಾರಾಷ್ಟ್ರ ಸೇರಿ ದೇಶದ ವಿವಿಧೆಡೆ ಈ ಬೈಕ್ ಆಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ 2015ರಲ್ಲಿಯೇ ಈ ಸೇವೆಯನ್ನು ಪ್ರಾರಂಭಿಸಲಾಗಿತ್ತು. ಆ ವೇಳೆ 30 ಬೈಕ್ ಆಂಬುಲೆನ್ಸ್‌ಗಳನ್ನು ಪ್ರಾಯೋಗಿಕವಾಗಿ ಪರಿಚಯಿಸಲಾಗಿತ್ತು. ಅವು ರಾಜ್ಯದ ವಿವಿಧೆಡೆ ಕಾರ್ಯಾಚರಣೆ ನಡೆಸಿ, ಸಾವಿರಾರು ಮಂದಿಗೆ ಸೇವೆ ಒದಗಿಸಿದ್ದವು. ನಿರ್ವಹಣೆ ಸಮಸ್ಯೆ, ದುರಸ್ತಿ ಮಾಡದಿರುವುದು, ನರ್ಸಿಂಗ್ ಪದವೀಧರರ ನಿರಾಸಕ್ತಿ ಸೇರಿ ವಿವಿಧ ಕಾರಣದಿಂದ ಒಂದೊಂದೇ ಬೈಕ್ ಆಂಬುಲೆನ್ಸ್ ಮೂಲೆ ಸೇರಿದ್ದವು. ರಾಜ್ಯ ಸರ್ಕಾರ ಈಗ ಮತ್ತೆ ಬೈಕ್ ಆಂಬುಲೆನ್ಸ್ ಸೇವೆ ಪರಿಚಯಿಸಲು ಆಸಕ್ತಿ ತೋರಿದ್ದು, 100 ಬೈಕ್ ಆಂಬುಲೆನ್ಸ್‌ಗಳು ಶೀಘ್ರದಲ್ಲಿಯೇ ಕಾರ್ಯಾಚರಣೆ ನಡೆಸಲಿವೆ.

ದೇಶದಲ್ಲಿಯೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಬೈಕ್ ಆಂಬುಲೆನ್ಸ್‌ಗಳನ್ನು ಪರಿಚಯಿಸಲಾಗಿತ್ತು. ರಸ್ತೆ ಅಪಘಾತಗಳಿಂದ ಸಂಭವಿಸುತ್ತಿದ್ದ ಮರಣ ಪ್ರಮಾಣವನ್ನು ಕಡಿಮೆ ಮಾಡುವುದು ಹಾಗೂ ಸಂಚಾರ ದಟ್ಟಣೆಯ ನಡುವೆ ಆದಷ್ಟು ಶೀಘ್ರ ವೈದ್ಯಕೀಯ ಸೇವೆ ಒದಗಿಸುವುದು ಇದರ ಹಿಂದಿನ ಉದ್ದೇಶವಾಗಿತ್ತು. ರೋಗಿಯನ್ನು ಆಸ್ಪತ್ರೆಗೆ ಕರೆದೊಯ್ಯುವ ಅವಕಾಶ ಇಲ್ಲದಿರುವುದರಿಂದ ರೋಗಿಗಳು ಹಾಗೂ ಅವರ ಕಡೆಯವರು ಈ ಸೇವೆಗೆ ನಿರಾಸಕ್ತಿ ತೋರಿದ್ದರು.

ವೇಗದ ಸೇವೆ: ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಸಂಚಾರ ದಟ್ಟಣೆ ಹೆಚ್ಚುತ್ತಿರುವ ಕಾರಣ, ತುರ್ತು ಸಂದರ್ಭದಲ್ಲಿ ನಿಗದಿತ ಸ್ಥಳವನ್ನು ಅಲ್ಪಾವಧಿಯಲ್ಲಿ ತಲುಪುವುದು ‘108 ಆಂಬುಲೆನ್ಸ್’ಗೆ ಕಷ್ಟಸಾಧ್ಯವಾಗುತ್ತಿದೆ. ರಾಷ್ಟ್ರೀಯ ಮಾನದಂಡದ ಪ್ರಕಾರ, ರೋಗಿಯನ್ನು ಚಿಕಿತ್ಸಾ ಕೇಂದ್ರಕ್ಕೆ ಕರೆದೊಯ್ಯುವ ಆಂಬುಲೆನ್ಸ್‌ನ ಸಮಯದ ಮಿತಿ (ಗೋಲ್ಡನ್ ಅವರ್) 20 ನಿಮಿಷ. ಸಂಚಾರ ದಟ್ಟಣೆ ಸೇರಿ ವಿವಿಧ ಕಾರಣಗಳಿಂದ ಈ ಸಮಯದ ಮಿತಿಯೊಳಗೆ ರೋಗಿಯನ್ನು ಚಿಕಿತ್ಸಾ ಕೇಂದ್ರಕ್ಕೆ ಕರೆದೊಯ್ಯುವುದು ಕಷ್ಟಸಾಧ್ಯ. ಆದ್ದರಿಂದ ಮತ್ತೆ ಬೈಕ್ ಆಂಬುಲೆನ್ಸ್‌ಗೆ ಆದ್ಯತೆ ನೀಡಲಾಗುತ್ತಿದೆ. ‘108 ಆಂಬುಲೆನ್ಸ್’ಗೆ ಹೋಲಿಸಿದಲ್ಲಿ ಬೈಕ್ ಆಂಬುಲೆನ್ಸ್ ತೆಗೆದುಕೊಳ್ಳುವ ಸಮಯ ಶೇ 40ರಷ್ಟು ಕಡಿಮೆ.

‘ಹೃದಯಾಘಾತ, ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ವ್ಯಕ್ತಿಗೆ ಕೂಡಲೇ ಚಿಕಿತ್ಸೆ ನೀಡಿದಲ್ಲಿ ಪ್ರಾಣಾಪಾಯದಿಂದ ಪಾರು ಮಾಡಬಹುದು. ಸಂಚಾರ ದಟ್ಟಣೆಯಿಂದಾಗಿ ಕೆಲ ಪ್ರಕರಣಗಳಲ್ಲಿ ಚಿಕಿತ್ಸೆ ವಿಳಂಬವಾಗಿ, ರೋಗಿಯ ಆರೋಗ್ಯ ಇನ್ನಷ್ಟು ಹದಗೆಟ್ಟಿರುವ ಉದಾಹರಣೆಗಳಿವೆ. ಬೈಕ್ ಆಂಬುಲೆನ್ಸ್‌ಗಳು ಕಿರಿದಾದ ಹಾದಿಯಲ್ಲಿಯೂ ಸಾಗಿ, ನಿಗದಿತ ಸ್ಥಳ ತಲುಪಲಿವೆ. ಇವುಗಳ ನಿರ್ವಹಣಾ ವೆಚ್ಚವೂ ಕಡಿಮೆ. ಆದ್ದರಿಂದ ಮತ್ತೆ ಪರಿಚಯಿಸಲು ಸರ್ಕಾರದ ಮಟ್ಟದಲ್ಲಿ ಕ್ರಮವಹಿಸಲಾಗಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ರಾಜ್ಯದಲ್ಲಿ ಬೈಕ್ ಆಂಬುಲೆನ್ಸ್ ಸೇವೆ ಯಶಸ್ವಿಯಾದ ಕಾರಣ ಬೇರೆ ರಾಜ್ಯಗಳೂ ಈ ಸೇವೆ ಪರಿಚಯಿಸಿವೆ. ಸಣ್ಣ ಪುಟ್ಟ ಗಾಯಗಳ ನಿರ್ವಹಣೆ ಜತೆಗೆ, 108 ಆಂಬುಲೆನ್ಸ್ ಬರುವವರೆಗೆ ತುರ್ತುಚಿಕಿತ್ಸೆಗೆ ಸಹಕಾರಿಯಾಗಲಿದೆ

ಯು.ಟಿ. ಖಾದರ್, ಆರೋಗ್ಯ ಸಚಿವ

ಏನೆಲ್ಲ ಇರಲಿದೆ?

ಗ್ಲುಕೊಮೀಟರ್, ಆಕ್ಸಿಜನ್ ಸಿಲಿಂಡರ್, ಹೃದಯಬಡಿತ ಹಾಗೂ ರಕ್ತದೊತ್ತಡ ಪರೀಕ್ಷಿಸುವ ಉಪಕರಣಗಳು, ಇನ್ಕ್ಯುಬೇಟರ್ ಕಿಟ್, ಬ್ಯಾಂಡೇಜ್, ಜೀವರಕ್ಷಕ ಔಷಧಗಳು ಮತ್ತು ಉಪಕರಣಗಳು

ನರ್ಸಿಂಗ್ ಪದವೀಧರರ ಬಳಕೆ

ಗಾಯಗೊಂಡವರಿಗೆ ಬೈಕ್ ಆಂಬುಲೆನ್ಸ್‌ನ ಸವಾರರೇ ಶುಶ್ರೂಷೆ ಮಾಡಬೇಕಾಗುತ್ತದೆ. ಹೀಗಾಗಿ, ನರ್ಸಿಂಗ್ ಕೋರ್ಸ್ ಓದಿದವರನ್ನು ಮಾತ್ರ ಈ ಸೇವೆಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ಹಿಂದೆ ಈ ಸೇವೆ ಪ್ರಾರಂಭಿಸಿದಾಗ ನರ್ಸಿಂಗ್ ಪದವೀಧರರು ಬೈಕ್ ಆಂಬುಲೆನ್ಸ್ ಸೇವೆ ಒದಗಿಸಲು ಅಷ್ಟಾಗಿ ಮುಂದೆ ಬಂದಿರಲಿಲ್ಲ. ಆಸ್ಪತ್ರೆಗಳಲ್ಲಿಯೇ ಸೇವೆ ಸಲ್ಲಿಸಲು ಹೆಚ್ಚು ಆಸಕ್ತಿ ತೋರಿದ ಪರಿಣಾಮ, ನಿರ್ವಾಹಕರ ಸಮಸ್ಯೆಯೂ ಎದುರಾಗಿತ್ತು.

ಗೃಹಜ್ಯೋತಿಗೆ ಜಾತಿ ವಿವರ ಏಕೆ ಬೇಕು: ಅಶೋಕ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹಜ್ಯೋತಿ ಫಲಾನುಭವಿಗಳ ಮರುಪರಿಶೀಲನೆಗೆ ಪ್ಯಾನ್‌ಕಾರ್ಡ್ ಮತ್ತು ಜಾತಿ ಪ್ರಮಾಣಪತ್ರವನ್ನು ಸಂಗ್ರಹಿಸುತ್ತಿರುವುದು ಏಕೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.

‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಕಾಕಾ ಪಾಟೀಲನಿಗೂ ಫ್ರೀ, ಮಹದೇವಪ್ಪನಿಗೂ ಫ್ರೀ, ಎಲ್ಲರಿಗೂ ಫ್ರೀ’ ಎಂದು ಗಂಟಲು ಹರಿದುಕೊಳ್ಳುವಂತೆ ಬೊಬ್ಬೆ ಹೊಡೆದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿತು. ಈಗ ಇಂದು ಕರ್ನಾಟಕದ ಜನತೆಗೆ ದ್ರೋಹ ಬಗೆಯಲು ಹೊರಟಿದೆ’ ಎಂದು ಆಪಾದಿಸಿದ್ದಾರೆ.

‘ಗೃಹಜ್ಯೋತಿ ಫಲಾನುಭವಿಗಳು ನಮ್ಮ ರಾಜ್ಯದ ನಿವಾಸಿಗಳೋ ಅಥವಾ ಅಲ್ಲವೋ ಅಂತ ನಿರ್ಧಾರ ಮಾಡುವುದಕ್ಕೆ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಸಾಕು. ಆದರೆ, ಅವರ ಜಾತಿ ಮತ್ತು ಆದಾಯ ಎಷ್ಟು ಎನ್ನುವ ಮಾಹಿತಿ ಯಾಕೆ ಬೇಕು? ಯೋಜನೆ ಮುಂದುವರೆಸುವಷ್ಟು ಹಣವಿಲ್ಲದೆ ಸರ್ಕಾರ ದಿವಾಳಿಯಾಗಿದೆ. ಆದಾಯದ ಹೆಸರಿನಲ್ಲಿ ಫಲಾನುಭವಿಗಳನ್ನು ಯೋಜನೆಯಿಂದ ಹೊರಗಿಡಲು ಹೀಗೆ ಮಾಡಲಾಗುತ್ತಿದೆ’ ಎಂದು ದೂರಿದ್ದಾರೆ.

ಗೃಹಲಕ್ಷ್ಮಿ–ತನಿಖೆಗೆ ಆಗ್ರಹ: ‘ಗೃಹಲಕ್ಷ್ಮಿ ಯೋಜನೆಯಲ್ಲಿ ₹225 ಕೋಟಿಯಷ್ಟು ಅಕ್ರಮವಾಗಿದೆ ಎಂಬುದನ್ನು ಮಹಾಲೇಖಪಾಲರು ಪತ್ತೆ ಮಾಡಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ಆಗಬೇಕು’ ಎಂದು ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಸಿ.ಟಿ.ರವಿ ಆಗ್ರಹಿಸಿದ್ದಾರೆ.

ಸಫಾರಿ ಪುನರ್ ಆರಂಭಕ್ಕೆ ಸೂಚನೆ

ಬೆಂಗಳೂರು: ಅಗತ್ಯ ಸುರಕ್ಷತಾ ಕ್ರಮಗಳನ್ನು ಪಾಲಿಸಿ, ಬಂಡೀಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳಲ್ಲಿ ಸಫಾರಿ ಹಾಗೂ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಪುನರಾರಂಭಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಂಗಳವಾರ ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಸದಸ್ಯರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜತೆಗೆ ನಡೆಸಿದ ಸಭೆಯಲ್ಲಿ ಅವರು ಈ ಸೂಚನೆ ನೀಡಿದ್ದಾರೆ.

ಎರಡೂ ರಾಷ್ಟ್ರೀಯ ಉದ್ಯಾನಗಳಲ್ಲಿ ಹುಲಿ ಮತ್ತು ಚಿರತೆ ಸಾಂದ್ರತೆ ಹೆಚ್ಚಾಗಿದೆ. ಮಾನವ–ವನ್ಯಜೀವಿ ಸಂಘರ್ಷಕ್ಕೆ ದಾರಿಯಾಗದಂತೆ ಸಫಾರಿಯನ್ನು ಆರಂಭಿಸಬೇಕು ಎಂದು ಅವರು ಸಭೆಯಲ್ಲಿ ಅಧಿಕಾರಿಗಳಿಗೆ ಹೇಳಿದ್ದಾರೆ. ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್‌ನ ಕಾರಣದಿಂದಾಗಿ ಆನೆ, ಹುಲಿ ಹಾಗೂ ಚಿರತೆಗಳ ಸಾಂಪ್ರದಾಯಿಕ ಸಂಚಾರ ಮಾರ್ಗಗಳಿಗೆ ಧಕ್ಕೆಯಾಗಿದೆ. ಇದರಿಂದಾಗಿ ಅವು ರಾಮನಗರ, ಚನ್ನಪಟ್ಟಣದ ವಸತಿ ಪ್ರದೇಶಗಳಿಗೆ ಬರುತ್ತಿದ್ದು, ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಿದೆ ಎಂಬುದು ಸಭೆಯಲ್ಲಿ ಚರ್ಚೆಯಾಗಿದೆ.

ಉಗಾಂಡಾದಲ್ಲಿ ಕೊಟ್ಟೂರಿನ ಮಹಿಳೆ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಕೊಟ್ಟೂರು (ವಿಜಯನಗರ ಜಿಲ್ಲೆ): ತಾಲ್ಲೂಕಿನ ಕನ್ನನಾಯಕನಕಟ್ಟೆ ಗ್ರಾಮದ ಬಿ.ಬಿಂದು (24) ಎಂಬುವರು ಉಗಾಂಡಾದಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಮೃತದೇಹವನ್ನು ಭಾರತಕ್ಕೆ ತರುವುದಕ್ಕೆ ತರಳಬಾಳು ಜಗದ್ಗುರು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ನೆರವಾಗಿದ್ದಾರೆ.

‘ಮಹಿಳೆಯ ಸಾವು ಹೇಗೆ ಸಂಭವಿಸಿದೆ ಎಂಬ ಮಾಹಿತಿ ಇಲ್ಲ. ಮೃತದೇಹವನ್ನು ಇಲ್ಲಿಗೆ ತಂದ ಬಳಿಕ ಪ್ರಕರಣ ದಾಖಲಿಸಬೇಕಿದೆ. ಜರ್ಮನಿಯಲ್ಲಿ ಧರ್ಮ ವಚನ ಪ್ರಸಾರ ಯಾತ್ರೆಯಲ್ಲಿರುವ ತರಳಬಾಳು ಶ್ರೀಗಳು ರಾಯಭಾರ ಕಚೇರಿಗಳನ್ನು ಸಂಪರ್ಕಿಸಿ ಮೃತದೇಹವನ್ನು ಕರ್ನಾಟಕಕ್ಕೆ ತರಿಸುವಲ್ಲಿ ನೆರವಾಗಿದ್ದಾರೆ ಎಂಬ ಮಾಹಿತಿ ದೊರೆತಿದೆ. ಮೃತದೇಹ ಇಲ್ಲಿಗೆ ಗುರುವಾರ ತಲುಪುವ ನಿರೀಕ್ಷೆ ಇದೆ’ ಎಂದು ಕೊಟ್ಟೂರು ಠಾಣೆ ಪಿಎಸ್‌ಐ ಗೀತಾಂಜಲಿ ಶಿಂಧೆ ‘ಪ್ರಜಾವಾಣಿ’ಗೆ ತಿಳಿಸಿದರು.

ಬಿ.ಬಿಂದು

ಈ ಮಧ್ಯೆ, ತರಳಬಾಳು ಮಠ ಪ್ರಕಟಣೆ ಪ್ರಕಾರ, ಬಿಂದು ಅವರ ಪತಿ ಚಂದ್ರಶೇಖರ ಗುಟ್ಟ ಅವರ ಪಾಸ್‌ಪೋರ್ಟ್ ಉಗಾಂಡಾ ಪೊಲೀಸರ ವಶದಲ್ಲಿದೆ. ಮೃತದೇಹ ಉಗಾಂಡಾದ ಎಂಟೆಬ್ಬೆ ನಗರದಿಂದ ದುಬೈ ಮೂಲಕ ಬೆಂಗಳೂರಿಗೆ ಗುರುವಾರ ಬೆಳಿಗ್ಗೆ ತಲುಪಲಿದೆ. ಅಂತ್ಯಕ್ರಿಯೆಗೆ ತೊಂದರೆ ಆಗದಿರಲಿ ಎಂಬ ಕಾರಣಕ್ಕೆ ಮೃತದೇಹದ ಜತೆ ಪತಿ ಚಂದ್ರಶೇಖರ್ ಅವರನ್ನೂ ಕಳುಹಿಸಿಕೊಡಲಾಗಿದೆ.

ಕರ್ಜಗಿ ಬಂಡಿ ಉತ್ಸವ

ಪ್ರಜಾವಾಣಿ ಚಿತ್ರ
ಮಾಲತೇಶ ಇಚ್ಚಂಗಿ

ಹಾವೇರಿ ತಾಲ್ಲೂಕಿನ ಕರ್ಜಗಿ ಗ್ರಾಮದಲ್ಲಿ ಕಾರ ಹುಣ್ಣಿಮೆಯ ಬ್ರಹ್ಮಲಿಂಗೇಶ್ವರ ಜಾತ್ರೆ ನಿಮಿತ್ತ ಎತ್ತಿನ ಬಂಡಿ ಉತ್ಸವವು ಸಾವಿರಾರು ಜನರ ಸಮ್ಮುಖದಲ್ಲಿ ಬುಧವಾರ ವಿಜೃಂಭಣೆಯಿಂದ ನಡೆಯಿತು

ಗೃಹಜ್ಯೋತಿ: ‘ಅನರ್ಹರನ್ನಷ್ಟೇ ಕೈಬಿಡಲಾಗುವುದು’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಪಟ್ಟಿ ಪರಿಷ್ಕರಣೆ ಮಾಡುತ್ತಿಲ್ಲ. ಅನರ್ಹರಿದ್ದರೆ ಮಾತ್ರ ಅವರನ್ನು ಕೈಬಿಡಲು ವಿವರ ಪಡೆಯಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯದಲ್ಲಿ 1.64 ಕೋಟಿ ಫಲಾನುಭವಿಗಳಿದ್ದಾರೆ. ಚುನಾವಣಾ ಪ್ರಣಾಳಿಕೆಯಲ್ಲಿ 200 ಯುನಿಟ್ ತನಕ ಉಚಿತ ವಿದ್ಯುತ್ ನೀಡುವ ಭರವಸೆ ನೀಡಿದ್ದೆವು, ಅದು ಮುಂದುವರಿಯಲಿದೆ. ಅನರ್ಹರಿದ್ದಾರೆ ಎಂಬ ದೂರುಗಳು ಬರುತ್ತಿರುವುದರಿಂದ ವಿವರ ಪಡೆಯಲಾಗುತ್ತಿದೆ ಅಷ್ಟೆ’ ಎಂದು ಪ್ರತಿಕ್ರಿಯಿಸಿದರು.

The Printers (Mysore) Pvt. Ltd

Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad , Mangalore, Harihara, Mysore, Gulbarga and Hospet. For the period **July to September - 2026**

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH & PV Print waste & unsolds (Voucher & Office copies)	12	6	4.5	4	4	4.5	2
Mixed Print & Folded waste	3	1.5	0.6	0.3	0.2	0.3	0.2
DH, PV, Sudha & Mayura White cut Peel waste	4	0.6	0.2	0.5	0.4	0.3	0.3
White Reel ends including core DH, PV, Sudha & Mayura	8	1.8	0.6	1	2	1	1
DH, PV, Sudha & Mayura Reel wrappers / Miscellaneous sweep / Bale pattie waste	6	2	0.9	1.2	1.2	0.9	0.9
Sudha & Mayura Print waste & unsolds - Magazine	1	0.4	0.9	0.4	0.6	0.9	0.05
Miscellaneous Tissue/Mixed White waste / Carton boxs	2	0.2	0.3	0.4	0.2	0.5	0.2

For clarification, Contact the Procurement Head at **45557345/ Mobile No: 9900042650**. Sealed Quotes/Tenders/mail may be addressed to Procurement Head **babu.v@printersmysore.co.in, venu.tl@printersmysore.co.in** and sent to the above address within 7 days from the date of this advertisement.

Fashion Partner: TRENDS
Mobility Partner: Akshaya Motors
Banking Partner: ಕೆನರಾ ಬ್ಯಾಂಕ್ Canara Bank — Together We Can
Wardrobe Partner: MALLESHWARAM Sudarshan Silks
Mobile Partner: HUMAN MOBILE DEVICES HMD
Taste Partner: Sunpure
EV Partner: VIDA Powered by Hero
Travel Partner: ಅಡಿಗಾಸ್ ಯಾತ್ರಾ
Knowledge Partners: GM UNIVERSITY DAVANAGERE, INSIGHTSIAS, GITAM DEEMED TO BE UNIVERSITY
State Partner: उत्तराखण्ड शासन
Associate Sponsors: Amruth ಅಮೃತ್ ಆರ್ಗ್ಯಾನಿಕ್ ಫರ್ಟಿಲೈಸರ್ಸ್, ಒಡ್ಕರ್, MSIL ಚಿಟ್ಸ್ Chits, The Janatha Co-operative Bank Ltd., Malleswaram, Bangalore, AYURVEDIC MEDICINE KAYAM TABLET, Bindu, NBCC A Navratna CPSE
Audit Partner: EY

ಚಿಟಿಕೆ ಸುದ್ದಿ

ತಮಿಳುನಾಡಿಗೆ ನೀರು: 'ಪ್ರಾಧಿಕಾರದ ನಿರ್ಧಾರ'

ಹಾಸನ: 'ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುವ ಬಗ್ಗೆ ತೀರ್ಮಾನಿಸುವುದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ. ರಾಜ್ಯದಲ್ಲಿನ ನೀರಿನ ಲಭ್ಯತೆ ಹಾಗೂ ಕುಡಿಯುವ ನೀರಿನ ಅವಶ್ಯಕತೆ ಪರಿಶೀಲಿಸಿ ನಿರ್ಧರಿಸುತ್ತದೆ' ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಜಿಲ್ಲೆಯಲ್ಲಿ ಎತ್ತಿನಹೊಳೆ ಯೋಜನೆ ಕಾಮಗಾರಿ ಪರಿಶೀಲಿಸಿದ ನಂತರ ಮಾತನಾಡಿದ ಅವರು, 'ನೀರು ಇದ್ದರೆ ಬಿಡುವಂತೆ, ಇಲ್ಲದಿದ್ದರೆ ಮಳೆ ಬರುವವರೆಗೆ ಕಾಯುವಂತೆ ಪ್ರಾಧಿಕಾರ ಸೂಚಿಸುತ್ತದೆ. ಶೀಘ್ರ ಮಳೆಯಾಗಿ ಜಲಾಶಯಗಳು ಭರ್ತಿಯಾಗಲಿ' ಎಂದು ಆಶಿಸಿದರು.

'ಸಚಿವ ಸಂಪುಟ ಆದಷ್ಟು ಬೇಗ ವಿಸ್ತರಣೆ ಆಗಲಿದೆ. ಹಲವು ಹಿರಿಯ ಶಾಸಕರು ಅವಕಾಶದ ನಿರೀಕ್ಷೆಯಲ್ಲಿದ್ದಾರೆ. ಎಲ್ಲ ಜಿಲ್ಲೆಗಳಿಗೆ ಪ್ರಾತಿನಿಧ್ಯ ಸಿಗಬೇಕು ಎನ್ನುವುದು ನನ್ನ ಅಭಿಪ್ರಾಯ' ಎಂದರು.

ಲೋಕಾಯುಕ್ತ ಬಲೆಗೆ ಹೆಸ್ಕಾಂ ಇಇ

ಬಸವನಬಾಗೇವಾಡಿ (ವಿಜಯಪುರ ಜಿಲ್ಲೆ): ಗುತ್ತಿಗೆದಾರರೊಬ್ಬರಿಂದ ₹ 10 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಬಸವನಬಾಗೇವಾಡಿ ವಿಭಾಗದ ಹೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್(ಇಇ) ಸಿದ್ರಾಮ ಬಿರಾದಾರ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಸಿದ್ರಾಮ ಬಿರಾದಾರ

'ಗುತ್ತಿಗೆದಾರ ಸಂತೋಷ ಕುಮಾರ ಹುಲಸೂರು ಅವರು ಮಾಡಿದ ಐದು ಕಾಮಗಾರಿಗೆ ಸಂಬಂಧಿಸಿದ ₹ 2 ಲಕ್ಷ ಮೊತ್ತದ ಬಿಲ್ ಪಾವತಿಸಲು ಸಿದ್ರಾಮ ಬಿರಾದಾರ ₹ 15 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈಗಾಗಲೇ ₹ 5 ಸಾವಿರ ಪಡೆದು, ಇನ್ನುಳಿದ ₹ 10 ಸಾವಿರ ಲಂಚವನ್ನು ತಮ್ಮ ಕಚೇರಿಯಲ್ಲಿ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದರು.

'ಕಸಾಪ ದತ್ತಿ ಪ್ರಶಸ್ತಿ' ಪ್ರಕಟ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ'ಗೆ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಹಾಗೂ ಕನ್ನಡ ಕ್ರೈಸ್ತ ಸಾಧಕ ಬೆಂಜಮಿನ್ ಫ್ರಾನ್ಸಿಸ್ ಆಯ್ಕೆಯಾಗಿದ್ದಾರೆ.

ಕೋಟಿಗಾನಹಳ್ಳಿ ರಾಮಯ್ಯ

ಬೆಂಜಮಿನ್ ಫ್ರಾನ್ಸಿಸ್

ಈ ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ. ಕಸಾಪ ಆಡಳಿತಾಧಿಕಾರಿ ಕೆ.ಎ. ದಯಾನಂದ ಅವರ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ.

ಈ ಪ್ರಶಸ್ತಿಯನ್ನು ಪ್ರತಿ ವರ್ಷ ಕನ್ನಡ ಕ್ರೈಸ್ತ ಸಾಧಕರೊಬ್ಬರು ಹಾಗೂ ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಇರುವ ಒಬ್ಬರಿಗೆ ನೀಡಲಾಗುತ್ತಿದೆ ಎಂದು ಕಸಾಪ ಪ್ರಕಟಣೆ ತಿಳಿಸಿದೆ.

ಗ್ರಾಮಗಳಿಗೆ ಸಿಗದ ಕುಡಿಯುವ ನೀರು

ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಬಹುಗ್ರಾಮ ಯೋಜನೆಗೆ ಹಿನ್ನಡೆ

- ಇಮಾಮಹುಸೇನ ಗೂಡುನವರ
- ಬಸವರಾಜ ಹವಾಲ್ದಾರ

ಬೆಳಗಾವಿ/ಬಾಗಲಕೋಟೆ: ವಾಡಿಕೆಯಂತೆ ಮಳೆಯಾಗದ ಕಾರಣ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ನದಿಗಳು ನೀರಿಲ್ಲದೇ ಬರಿದಾಗುತ್ತಿವೆ. ಇದರಿಂದಾಗಿ ಎರಡೂ ಜಿಲ್ಲೆಗಳಲ್ಲಿ ಇರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಹಿನ್ನಡೆಯಾಗಿದ್ದು, ಗ್ರಾಮಗಳಿಗೆ ಸಮರ್ಪಕವಾಗಿ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ 62 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿವೆ. ಈ ಪೈಕಿ 11 ಯೋಜನೆ ಬಂದ್ ಆಗಿವೆ. ಬಾಗಲಕೋಟೆ ಜಿಲ್ಲೆಯಲ್ಲಿ 39 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿದ್ದು, ಐದು ಯೋಜನೆ ಸ್ಥಗಿತಗೊಂಡಿವೆ. ಹಾಗಾಗಿ ಈ ಯೋಜನೆಗಳನ್ನೇ ನೆಚ್ಚಿಕೊಂಡಿದ್ದ ಗ್ರಾಮಗಳಿಗೆ ನೀರು ಪೂರೈಸಲು ಬೇರೆ ಜಲಮೂಲಗಳನ್ನು ಅಧಿಕಾರಿಗಳು ಹುಡುಕುವಂತಾಗಿದೆ.

'ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ನೀರಿಗಾಗಿ ನದಿಗಳನ್ನೇ ಆಶ್ರಯಿಸಿವೆ. ಪ್ರತಿವರ್ಷ ಈ ಹೊತ್ತಿಗೆ ನದಿಗಳು ಉಕ್ಕಿ ಹರಿಯುತ್ತಿದ್ದವು. ಹಾಗಾಗಿ ಈ ಯೋಜನೆಗಳ ಮೂಲಕ ಗ್ರಾಮಸ್ಥರಿಗೆ ಬೇಡಿಕೆಯಂತೆ ನೀರು ಕೊಡುತ್ತಿದ್ದೆವು. ಈ ಬಾರಿ ಮಳೆ ಕೈಕೊಟ್ಟಿದ್ದರಿಂದ ಜಾಕ್‌ವೆಲ್‌ಗಿಂತ ಕೆಳಕ್ಕೆ ನೀರಿನ ಮಟ್ಟ ಕುಸಿದಿದೆ. ಹಾಗಾಗಿ ನೀರು ಮೇಲೆತ್ತಲು ಆಗುತ್ತಿಲ್ಲ' ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ತಿಳಿಸುತ್ತಾರೆ.

ಇಲಾಖೆ ಬೆಳಗಾವಿ ಉಪವಿಭಾಗದಲ್ಲಿ 24 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿವೆ. ಮಲಪ್ರಭಾ ನದಿ ಬತ್ತಿದ್ದರಿಂದ ಹಿರೇಬಾಗೇವಾಡಿ ಮತ್ತು ಬಡಸದಲ್ಲಿ ಯೋಜನೆ ಸ್ಥಗಿತಗೊಂಡು, ಆರು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ.

ಚಿಕ್ಕೋಡಿ ಉಪವಿಭಾಗದಲ್ಲಿ ಇರುವ 38 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಪೈಕಿ ಒಂಬತ್ತು ಯೋಜನೆ ಬಂದ್ ಆಗಿವೆ. ಅವುಗಳನ್ನೇ ನೆಚ್ಚಿಕೊಂಡಿದ್ದ 41 ಗ್ರಾಮಗಳಲ್ಲಿ ಜಲಕ್ಷಾಮ ತಲೆದೋರಿದೆ. ವೇದಗಂಗಾ, ಘಟಪ್ರಭಾ ಮತ್ತು ದೂದಗಂಗಾ ನದಿಗಳು ಬತ್ತಿದ್ದರಿಂದ ಈ ಸಮಸ್ಯೆಯಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾ, ಮಲಪ್ರಭಾ ಮತ್ತು ಘಟಪ್ರಭಾ ನದಿಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದೆ. ಜಿಲ್ಲೆಯಲ್ಲಿ 39 ಬಹುಗ್ರಾಮ ಕುಡಿಯುವ ಯೋಜನೆಗಳಿದ್ದು, ಅವುಗಳ ಪೈಕಿ ಐದು ಯೋಜನೆಗಳು ಸ್ಥಗಿತಗೊಂಡಿವೆ. ಇದರಿಂದ 30ಕ್ಕೂ ಹೆಚ್ಚು ಹಳ್ಳಿಗಳಿಗೆ ನದಿ ನೀರು ಪೂರೈಕೆ ಆಗುತ್ತಿಲ್ಲ.

ಜಮಖಂಡಿ ವಿಭಾಗ ವ್ಯಾಪ್ತಿಯ ಕನ್ನೊಳ್ಳಿ, ಜಕನೂರ, ತುಂಗಳ, ಹಲ್ಯಾಳ ಹಾಗೂ ತೊದಲಬಾಗಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಜಾಕ್‌ವೆಲ್‌ಗಿಂತ ನೀರು ಕೆಳಗಡೆ ಕುಸಿದಿದೆ.

ಕಳೆದ ವರ್ಷ ಭರ್ತಿಯಾಗಿದ್ದ ಹಿಪ್ಪರಗಿ ಬ್ಯಾರೇಜ್‌ಗೆ ಒಳಹರಿವು 1.08 ಲಕ್ಷ ಕ್ಯುಸೆಕ್ ಇತ್ತು. ಈಗ ಶೂನ್ಯವಾಗಿದೆ. ಶ್ರಮಬಿಂದು ಸಾಗರದಲ್ಲೂ ನೀರಿಲ್ಲ. ಕೃಷ್ಣಾ ನದಿಗೆ ಒಳಹರಿವು ಇಲ್ಲವಾಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದೆ.

ಜಿಲ್ಲೆಯ ಗುಳೇದಗುಡ್ಡ ತಾಲ್ಲೂಕಿನ ಚಿಮ್ಮಗಿ, ಹಂಗರಗಿ, ಹಿರೇಬೂದಿಹಾಳ, ಇಳಕಲ್ ತಾಲ್ಲೂಕಿನ ಚಿಕ್ಕಕೊಡಗಲಿ ಎಲ್‌ಟಿ-2 ಜಮಖಂಡಿ ತಾಲ್ಲೂಕಿನ ಶೂರ್ಪಾಲಿ, ತುಬಚಿ, ಶಿರಗುಪ್ಪ ಆರ್‌ಸಿ, ಜಂಬಗಿ, ಸಾವಳಗಿ, ರಬಕವಿ ಬನಹಟ್ಟಿ ತಾಲ್ಲೂಕಿನ ಗೊಲಭಾವಿ, ಅಸಂಗಿಗಳಲ್ಲೂ ನೀರಿನ ಸಮಸ್ಯೆ ಎದುರಾಗಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ರೊಳ್ಳಿ ಬಳಿ ಕೃಷ್ಣಾ ನದಿ ತೀರದಲ್ಲಿ ಭೂಮಿ ಬಾಯ್ತೆರೆದಿದೆ

> ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸ್ಥಗಿತಗೊಂಡ ಕಡೆ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆದು, ಕುಡಿಯುವ ನೀರು ಪೂರೈಸುತ್ತಿದ್ದೇವೆ. ಇದಕ್ಕಾಗಿ 189 ಕೊಳವೆಬಾವಿ ಗುರುತಿಸಿದ್ದೇವೆ
> **ಕಿರಣ ಘೋರ್ಪಡೆ**
> ಇಇ, ಬೆಳಗಾವಿ ಉಪವಿಭಾಗ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

> ಯೋಜನೆ ಸ್ಥಗಿತವಾದ ಹಳ್ಳಿಗಳಲ್ಲಿ ಟ್ಯಾಂಕರ್ ಮೂಲಕ ನಿತ್ಯ 35ಕ್ಕೂ ಅಧಿಕ ಟ್ರಿಪ್ ಕುಡಿಯುವ ನೀರು ಕೊಡುತ್ತಿದ್ದೇವೆ. ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ನಿಭಾಯಿಸಲು ಪ್ರಯತ್ನ ನಡೆಸಿದ್ದೇವೆ
> **ಪಾಂಡುರಂಗರಾವ್**
> ಇಇ, ಚಿಕ್ಕೋಡಿ ಉಪವಿಭಾಗ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

> ಬಾಗಲಕೋಟೆ ಜಿಲ್ಲೆಯ 129 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು. ಖಾಸಗಿಯ 350 ಕೊಳವೆಬಾವಿ ಗುರುತಿಸಲಾಗಿದೆ. ಸಮಸ್ಯೆ ಎದುರಾದರೆ, ನೀರು ಪೂರೈಸಲಾಗುವುದು
> **ಮಲ್ಲನಗೌಡ ಬಿರಾದಾರ**
> ಇಇ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ

ಸುದ್ದಿ 2 ನಿಮಿಷ

ಚಾಮುಂಡಿಬೆಟ್ಟ: 'ವಿಐಪಿ' ದರ್ಶನಕ್ಕೆ ಕಡಿವಾಣ

ಮೈಸೂರು: ಆಷಾಢದ ಶುಕ್ರವಾರ, ಶನಿವಾರ ಹಾಗೂ ಭಾನುವಾರ ಇಲ್ಲಿನ ಚಾಮುಂಡಿಬೆಟ್ಟಕ್ಕೆ 'ವಿಐಪಿ' ಹೆಸರಿನಲ್ಲಿ ಪ್ರವೇಶ ಬಯಸಿ ಶಿಫಾರಸು ಪತ್ರ ತರುವವರನ್ನು ನಿಯಂತ್ರಿಸಲು ಜಿಲ್ಲಾಡಳಿತ ಮುಂದಾಗಿದೆ.

ಶಿಫಾರಸು ಪತ್ರಗಳಿದ್ದರೂ ಅಂಥವರಿಗೆ ಖಾಸಗಿ ವಾಹನಗಳ ಮೂಲಕ ಬೆಟ್ಟಕ್ಕೆ ನೇರ ಪ್ರವೇಶ ನೀಡುವುದನ್ನು ರದ್ದುಪಡಿಸಲು ತೀರ್ಮಾನಿಸಲಾಗಿದೆ. ಬದಲಿಗೆ ಸಾರ್ವಜನಿಕರಿಗೆ ನಿಗದಿಪಡಿಸಲಾದ ಸ್ಥಳದಲ್ಲೇ ವಾಹನ ನಿಲ್ಲಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರತ್ಯೇಕವಾಗಿ ಬೆಟ್ಟಕ್ಕೆ ಬಂದು, ಅಲ್ಲಿಂದ ಪ್ರತ್ಯೇಕ ಸಾಲಿನಲ್ಲಿ ಸಾಗಿ, ಸಾಮಾನ್ಯರಂತೆಯೇ ದರ್ಶನ ಪಡೆಯಬೇಕಿದೆ.

ಜುಲೈ 17ರಿಂದ ಆ.7ರವರೆಗೆ ಪ್ರತಿ ಶುಕ್ರವಾರದಿಂದ ಭಾನುವಾರದವರೆಗೆ, ಶಿಷ್ಟಾಚಾರ ವ್ಯವಸ್ಥೆ ಹೊಂದಿರುವ ವಿಐಪಿಗಳಿಗೆ ಮಾತ್ರ ನೇರ ಪ್ರವೇಶ ಇರಲಿದೆ. ಅಂತಹವರು ಬೆಳಿಗ್ಗೆ 5.30ರಿಂದ 9.30ರ ಒಳಗೆ ಮಾತ್ರ ದರ್ಶನ ಪಡೆಯಲು ಅವಕಾಶವಿದೆ.

ಸಿದ್ಧತೆ ಕುರಿತು ಬುಧವಾರ ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಸಂಬಂಧ ಚರ್ಚಿಸಲಾಯಿತು. 'ಕಳೆದ ವರ್ಷ ವಿಐಪಿ ಕಡೆಯವರೆಂದು ಶಿಫಾರಸು ಪತ್ರ ಹಿಡಿದು ಬಂದವರಿಂದ ಸಾಮಾನ್ಯ ಭಕ್ತರಿಗೆ ಹೆಚ್ಚು ತೊಂದರೆ ಆಯಿತು. ಹೀಗಾಗಿ, ಈ ವರ್ಷ ಇಂತಹ ಯಾವುದೇ ಪತ್ರ ಇದ್ದವರಿಗೆ ನೇರ ಪ್ರವೇಶ ನೀಡದಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಯತೀಂದ್ರ ಪತ್ರಕರ್ತರಿಗೆ ತಿಳಿಸಿದರು.

ಈ ವರ್ಷ ಭಕ್ತರಿಗೆ ₹2 ಸಾವಿರದ ವಿಶೇಷ ದರ್ಶನ ಟಿಕೆಟ್ ಇದ್ದು, ₹300ರ ಟಿಕೆಟ್ ರದ್ದಾಗಿದೆ. ಭಕ್ತರಿಗೆ ಎಂದಿನಂತೆ ಸಾಮಾನ್ಯ ಸರದಿ ಸಾಲಿನಲ್ಲಿ ಉಚಿತ ಪ್ರವೇಶ ಇರಲಿದೆ. ಶುಕ್ರವಾರ, ಶನಿವಾರ ಹಾಗೂ ಭಾನುವಾರದಂದು ನಗರದ ಲಲಿತಮಹಲ್ ಬಳಿಯ ಮೈದಾನದಿಂದ ಕೆಎಸ್‌ಆರ್‌ಟಿಸಿ ಬಸ್ ಮೂಲಕ ಪ್ರಯಾಣದ ವ್ಯವಸ್ಥೆ ಇರಲಿದೆ.

ವಚನಾನಂದ ಶ್ರೀ ಜಾಮೀನು ಅರ್ಜಿ ವಿಚಾರಣೆ 3ಕ್ಕೆ

ದಾವಣಗೆರೆ: ಪೋಕ್ಸೊ ಪ್ರಕರಣದ ಸಂಬಂಧ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆಯನ್ನು ವಿಶೇಷ ಪೋಕ್ಸೊ ನ್ಯಾಯಾಲಯ ಜುಲೈ 3ಕ್ಕೆ ಮುಂದೂಡಿದೆ.

ನಿರೀಕ್ಷಣಾ ಜಾಮೀನು ರದ್ದಾದ ಬೆನ್ನಲ್ಲೇ ವಿಶೇಷ ಪೋಕ್ಸೊ ನ್ಯಾಯಾಲಯಕ್ಕೆ ಜೂನ್ 27ರಂದು ಹಾಜರಾಗಿದ್ದ ಸ್ವಾಮೀಜಿ, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಬುಧವಾರ ಸಂತ್ರಸ್ತ ಬಾಲಕನ ಪರವಾಗಿ ಸರ್ಕಾರಿ ಅಭಿಯೋಜಕರು ಹಾಗೂ ಆತನ ತಾಯಿ ಪರ ವಕೀಲರು ಪ್ರತ್ಯೇಕವಾಗಿ ತಕರಾರು ಸಲ್ಲಿಸಿದರು. ಹೀಗಾಗಿ ನ್ಯಾಯಾಲಯ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ವಿಚಾರಣೆ ನಿಗದಿಗೊಳಿಸಿತು.

16 ವರ್ಷದ ಬಾಲಕನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಸ್ವಾಮೀಜಿ ವಿರುದ್ಧ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ. ಇದಕ್ಕೂ ಮುನ್ನವೇ ಸ್ವಾಮೀಜಿ ನಿರೀಕ್ಷಣಾ ಜಾಮೀನು ಪಡೆದಿದ್ದರು. ಸಂತ್ರಸ್ತ ಬಾಲಕನ ತಾಯಿ ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಇದು ರದ್ದಾಗಿತ್ತು.

ಚಿಕ್ಕಮಗಳೂರು ಕ್ಷೇತ್ರದಲ್ಲಿ 6,000 ಮತದಾರರ ಹಕ್ಕಿಗೆ ಧಕ್ಕೆ: ಸಿ.ಟಿ.ರವಿ

'ತರಬೇತಿ ಇಲ್ಲದ್ದಕ್ಕೆ ಎಸ್‌ಐಆರ್‌ನಲ್ಲಿ ಲೋಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ನಿಯೋಜಿತರಾಗಿರುವ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಅಗತ್ಯ ತರಬೇತಿ ನೀಡಿಲ್ಲ. ಹೀಗಾಗಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಲೋಪವಾಗುತ್ತಿದೆ ಎಂದು ರಾಜ್ಯ ಬಿಜೆಪಿ ನಾಯಕರು ಆರೋಪಿಸಿದ್ದಾರೆ.

ಸಿ.ಟಿ.ರವಿ

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ಬುಧವಾರ ಸುದ್ದಿಗಾರರ ಜತೆ ಮಾತನಾಡಿ, 'ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಿಎಲ್‌ಒಗಳು ಮನೆ-ಮನೆಗೆ ಭೇಟಿ ನೀಡುತ್ತಿಲ್ಲ. ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ಅವರಿಗೆ ಸರಿಯಾಗಿ ತರಬೇತಿ ನೀಡಿಲ್ಲದ ಕಾರಣ, ಇಡೀ ಪ್ರಕ್ರಿಯೆ ತಪ್ಪಾಗಿ ನಡೆಯುತ್ತಿದೆ' ಎಂದು ಆರೋಪಿಸಿದ್ದಾರೆ.

'ಭಾರತೀಯ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದ್ದರೂ, ಅದಕ್ಕೆ ನಿಯೋಜನೆಗೊಂಡಿರುವ ಬಿಎಲ್‌ಒಗಳು ರಾಜ್ಯ ಸರ್ಕಾರದ ನೌಕರರು. ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್ ಮೂಲಕ ಬಿಎಲ್‌ಒಗಳ ಮೇಲೆ ರಾಜ್ಯದ ಕಾಂಗ್ರೆಸ್ ಸರ್ಕಾರವು ಒತ್ತಡ ಹೇರುತ್ತಿದೆ. ಅರ್ಹ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕುವಂತೆ ಮಾಡುತ್ತಿದ್ದಾರೆ. ಚಿಕ್ಕಮಗಳೂರು ಕ್ಷೇತ್ರದಲ್ಲಿ ಇದೇ ರೀತಿ ಎಸ್‌ಐಆರ್ ಪೂರ್ವತಯಾರಿ ಮ್ಯಾಪಿಂಗ್‌ನಲ್ಲಿ 6,000 ಮತದಾರರನ್ನು ಕೈಬಿಡಲಾಗಿದೆ' ಎಂದು ಆರೋಪಿಸಿದರು.

ಬಿಜೆಪಿ ಮುಖಂಡ ಭಾಸ್ಕರ್ ರಾವ್ ಅವರು ಸುದ್ದಿಗಾರರ ಜತೆ ಮಾತನಾಡಿ, 'ಎಸ್‌ಐಆರ್‌ಗಾಗಿ ರೂಪಿಸಿರುವ ಮೊಬೈಲ್ ಆ್ಯಪ್ ಬಳಕೆ ಬಗ್ಗೆ ಬಿಎಲ್‌ಒಗಳಿಗೆ ತರಬೇತಿ ನೀಡಿಲ್ಲ. ನಾವು ಎತ್ತುವ ಸಂದೇಹಗಳಿಗೆ ಉತ್ತರಿಸುವಷ್ಟೂ ಮಾಹಿತಿ ಬಿಎಲ್‌ಒಗಳಿಗೆ ಇಲ್ಲ. ನಮ್ಮ ಕ್ಷೇತ್ರದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದು, ಅವರಿಗೆ ಅನುಕೂಲವಾಗಲಿ ಎಂದು ಅದೇ ಸಮುದಾಯದ ಬಿಎಲ್‌ಒಗಳನ್ನು ನಿಯೋಜನೆ ಮಾಡಿದ್ದಾರೆ' ಎಂದು ದೂರಿದರು.

ದೂರು ದಾಖಲು

'ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಬಿಎಲ್‌ಒಗಳು ಗಣತಿ ನಮೂನೆಯ (ಎನ್ಯೂಮರೇಷನ್ ಅರ್ಜಿ) ಎರಡನೇ ಪ್ರತಿಯನ್ನು ಮತದಾರರಿಗೆ ನೀಡುತ್ತಿಲ್ಲ' ಎಂದು ಬಿಜೆಪಿಯ ಭಾಸ್ಕರ್ ರಾವ್ ಅವರು ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿ ಅವರಿಗೆ ದೂರು ಸಲ್ಲಿಸಿದ್ದಾರೆ.

'ಕೆಲಸ ಮಾಡುತ್ತಿರುವ ಕೆಲವೇ ಬಿಎಲ್‌ಒಗಳ ಜತೆಗೆ ಕಾಂಗ್ರೆಸ್‌ನ ಮತಗಟ್ಟೆ ಏಜೆಂಟರು (ಬಿಎಲ್‌ಎ) ತೆರಳುತ್ತಿದ್ದು, ಕ್ಷೇತ್ರದ ಶಾಸಕರ ಚಿತ್ರ ಇರುವ ಗುರುತಿನ ಚೀಟಿ ಬಳಸಿಕೊಳ್ಳುತ್ತಿದ್ದಾರೆ. ಬಿಎಲ್‌ಒಗಳು ಗಣತಿ ನಮೂನೆಯ ಒಂದು ಪ್ರತಿಯನ್ನಷ್ಟೇ ನೀಡಿ, ಭರ್ತಿ ಮಾಡಿಸಿಕೊಂಡು ಅದನ್ನು ವಾಪಸ್ ಪಡೆದುಕೊಳ್ಳುತ್ತಿದ್ದಾರೆ. ಮತದಾರರಿಗೆ ನೀಡಬೇಕಿರುವ ಎರಡನೇ ಪ್ರತಿಯನ್ನು ತಮ್ಮಲ್ಲೇ ಇರಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಗಮನ ಹರಿಸಿ, ಲೋಪವನ್ನು ಸರಿಪಡಿಸಿ' ಎಂದು ದೂರಿನಲ್ಲಿ ಕೋರಿದ್ದಾರೆ.

ತಾರ್ಕಿಕ ವ್ಯತ್ಯಾಸ ಕೈಬಿಡಲು ಒತ್ತಾಯ

'ಭಾರತೀಯ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ತಾರ್ಕಿಕ ವ್ಯತ್ಯಾಸವನ್ನು (logical discrepancy) ಅಳವಡಿಸುವ ಮೂಲಕ ಕೋಟ್ಯಂತರ ಮತದಾರರ ಹಕ್ಕನ್ನು ಕಿತ್ತುಕೊಳ್ಳುವ ಹುನ್ನಾರ ನಡೆಸಿದೆ' ಎಂದು ಎಸ್‌ಐಆರ್ ವಿರೋಧಿ ಒಕ್ಕೂಟವು ಆರೋಪಿಸಿದೆ.

ಒಕ್ಕೂಟದ ಪರವಾಗಿ ಜೆ.ಎಂ.ವೀರಸಂಗಯ್ಯ, ಕೆ.ಎಲ್.ಅಶೋಕ್, ಶ್ರೀಪಾದಭಟ್ ಅವರು ಪತ್ರಿಕಾ ಹೇಳಿಕೆ ನೀಡಿದ್ದು, 'ದೇಶದ ಬೇರೆ ಯಾವ ರಾಜ್ಯದಲ್ಲೂ ಇಲ್ಲದಿದ್ದ ತಾರ್ಕಿಕ ವ್ಯತ್ಯಾಸವನ್ನು ಪಶ್ಚಿಮ ಬಂಗಾಳದಲ್ಲಿ ನಡೆದ ಎಸ್‌ಐಆರ್ ವೇಳೆ ಅಳವಡಿಸಲಾಗಿತ್ತು. ಅಲ್ಲಿ ನಾಲ್ಕು ಸ್ವರೂಪದ ತಾರ್ಕಿಕ ವ್ಯತ್ಯಾಸಗಳನ್ನು ಮಾತ್ರ ಅನುಸರಿಸಲಾಗಿತ್ತು. ಆದರೆ, ಕರ್ನಾಟಕದಲ್ಲಿ 11 ಸ್ವರೂಪದ ತಾರ್ಕಿಕ ವ್ಯತ್ಯಾಸಗಳನ್ನು ಅನುಸರಿಸಲಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ಕರ್ನಾಟಕದ ಮತದಾರರು ದಾಖಲೆಗಳನ್ನು ನೀಡುತ್ತೇವೆಂದು ಹೇಳುತ್ತಿರುವುದರಿಂದ, ದಾಖಲೆಗಳ ಹೆಸರಿನಲ್ಲಿ ಹೆಚ್ಚಿನ ಜನರ ಮತದಾನದ ಹಕ್ಕನ್ನು ತೆಗೆದುಹಾಕಲು ಸಾಧ್ಯವಿಲ್ಲ. ಹೀಗಾಗಿ ತಾರ್ಕಿಕ ವ್ಯತ್ಯಾಸಗಳ ಹೆಸರಿನಲ್ಲಿ ನಿಯಮಗಳನ್ನು ಕಠಿಣಗೊಳಿಸಲಾಗುತ್ತಿದೆ. ಅರ್ಹ ಮತದಾರರನ್ನು ತೆಗೆದುಹಾಕಲು ಆಯೋಗಕ್ಕೆ ಒಂದು ನೆಪಬೇಕಾಗಿದೆ ಅಷ್ಟೆ' ಎಂದು ದೂರಿದ್ದಾರೆ.

'ತಾರ್ಕಿಕ ವ್ಯತ್ಯಾಸವನ್ನು ಕರ್ನಾಟಕದಲ್ಲಿ ಬಳಸಬಾರದು' ಎಂದು ಒತ್ತಾಯಿಸಿದ್ದಾರೆ.

'ಕರ್ತವ್ಯ': ಒಒಡಿ ನಮೂದಿಸಲು ಸೂಚನೆ

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಿರುವ ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಮತ್ತು ಸಿಬ್ಬಂದಿಯು ತಮ್ಮ ಕಚೇರಿಗೆ ತೆರಳಿ 'ಕರ್ತವ್ಯ' ಆ್ಯಪ್‌ನಲ್ಲಿ ಹಾಜರಾತಿ ದಾಖಲಿಸುವುದರಿಂದ ವಿನಾಯಿತಿ ನೀಡಲಾಗಿದೆ. ಎಸ್‌ಐಆರ್‌ನಲ್ಲಿ ಭಾಗಿಯಾಗುವ ಸಿಬ್ಬಂದಿಯು ಕರ್ತವ್ಯ ಆ್ಯಪ್‌ನಲ್ಲಿ 'On Other Duty (OOD)' ಎಂಬುದನ್ನು ಆಯ್ಕೆ ಮಾಡಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

'ಈ ಸಿಬ್ಬಂದಿಯು ಪ್ರತಿ ದಿನ ತಮ್ಮ ಕಚೇರಿಗೆ ತೆರಳಿ ಹಾಜರಾತಿ ದಾಖಲಿಸಿ ನಂತರ ಎಸ್‌ಐಆರ್ ಕ್ಷೇತ್ರಕಾರ್ಯಕ್ಕೆ ಬರಬೇಕಿರುವುದರ ಬಗ್ಗೆ ಹಲವು ಜಿಲ್ಲಾಧಿಕಾರಿಗಳು ಗಮನ ಸೆಳೆದಿದ್ದರು. ಈ ಬಗ್ಗೆ ರಾಜ್ಯ ಮುಖ್ಯ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಲಾಗಿತ್ತು. ರಾಜ್ಯ ಸರ್ಕಾರವು ನಮ್ಮ ಮನವಿಯನ್ನು ಅನುಮೋದಿಸಿದೆ. ಬಿಎಲ್‌ಒ, ಇತರ ಸಿಬ್ಬಂದಿಯು ತಮ್ಮ 'ಒಒಡಿ' ದಾಖಲಿಸಿದರೆ ಸಾಕು' ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ತಹಶೀಲ್ದಾರ್‌ಗೆ ₹50 ಸಾವಿರ ದಂಡ

ಮಳವಳ್ಳಿ (ಮಂಡ್ಯ ಜಿಲ್ಲೆ): ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲೆ ಕೋರಿ ಅರ್ಜಿ ಸಲ್ಲಿಸಿದವರಿಗೆ ಸಕಾಲದಲ್ಲಿ ಮಾಹಿತಿ ನೀಡದ ಮಳವಳ್ಳಿ ತಹಶೀಲ್ದಾರ್ ಎಸ್.ವಿ.ಲೋಕೇಶ್ ಅವರಿಗೆ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ತಲಾ ₹25ಸಾವಿರ ದಂಡ ವಿಧಿಸಿ ರಾಜ್ಯ ಮಾಹಿತಿ ಆಯೋಗ ಆದೇಶಿಸಿದೆ.

ತಾಲ್ಲೂಕಿನ ಯತ್ತಂಬಾಡಿ ಗ್ರಾಮದ ಪ್ರವೀಣ್ ಮತ್ತು ಕೆಂಪಸಿದ್ದೇಗೌಡ ಅವರು ಸಲ್ಲಿಸಿದ್ದ ಅರ್ಜಿಗಳ ಬಗ್ಗೆ ತಹಶೀಲ್ದಾರ್ ನಿಗದಿತ ಅವಧಿಯಲ್ಲಿ ಮಾಹಿತಿ ಒದಗಿಸಿರಲಿಲ್ಲ. ಹೀಗಾಗಿ ಅರ್ಜಿದಾರರು ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ರೈಲ್ವೆ ಬ್ಯಾರಿಕೇಡ್ ನಡುವೆ ಸಿಲುಕಿದ ಕಾಡಾನೆ

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ತಾಲ್ಲೂಕಿನ ಕಾವೇರಿ ವನ್ಯಜೀವಿಧಾಮದ ಮುಗ್ಗೂರು ವನ್ಯಜೀವಿ ವಲಯದ ಅರೆಕೊಪ್ಪ ಗ್ರಾಮದ ಬಳಿ ಬುಧವಾರ ರೈಲ್ವೆ ಬ್ಯಾರಿಕೇಡ್ ದಾಟಲು ಯತ್ನಿಸಿ, ಅದರ ಮಧ್ಯದಲ್ಲೇ ಸಿಲುಕಿಕೊಂಡಿದ್ದ ಕಾಡಾನೆಯನ್ನು ಬುಧವಾರ ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಿಸಿದ್ದಾರೆ.

ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ರೈಲ್ವೆ ಕಂಬಿಯ ಬ್ಯಾರಿಕೇಡ್ ಕತ್ತರಿಸಿ, ಆನೆಯನ್ನು ರಕ್ಷಿಸಿ ಸುರಕ್ಷಿತವಾಗಿ ಕಾಡಿಗೆ ಬಿಟ್ಟಿದ್ದಾರೆ.

ಬಸವನವಾಡೆ ಗಸ್ತಿನ ಬೋನಿ ಹಕ್ಕಲು ಅರಣ್ಯ ಪ್ರದೇಶದಿಂದ ಕಾಡಾನೆಯು ಆಹಾರ ಅರಸಿ ರೈತರ ಜಮೀನುಗಳಿಗೆ ಬಂದಿದೆ. ಜಮೀನಿನಲ್ಲಿ ಮೇವು ತಿಂದಿರುವ ಆನೆ ವಾಪಸ್ ಹೋಗುವಾಗ ಅರೆಕೊಪ್ಪ ಗ್ರಾಮದ ಬಳಿ ಅಳವಡಿಸಿದ್ದ ರೈಲ್ವೆ ಬ್ಯಾರಿಕೇಡ್ ದಾಟಲು ಮುಂದಾಗಿ ಮಧ್ಯದಲ್ಲಿ ಸಿಲುಕಿಕೊಂಡಿದೆ.

'ಕಾಡಂಚಿನ ಗ್ರಾಮಗಳ ದನಕರುಗಳು ಮೇಯಲು ಕಾಡಿಗೆ ಹೋಗಿ ಬರುವುದಕ್ಕೆ ಅನುಕೂಲವಾಗುವಂತೆ ಬ್ಯಾರಿಕೇಡ್ ಮಧ್ಯೆ ಸ್ವಲ್ಪ ಜಾಗ ಬಿಡಲಾಗಿದೆ. ಆ ಜಾಗದ ಮೂಲಕವೇ ಆನೆಯು ಅರಣ್ಯಕ್ಕೆ ಹೋಗಲು ಪ್ರಯತ್ನಿಸಿ ಸಿಲುಕಿಕೊಂಡಿದೆ' ಎಂದು ಕಾವೇರಿ ವನ್ಯಜೀವಿಧಾಮದ ಎಸಿಎಫ್ ನಾಗೇಂದ್ರ ಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಜಮೀನಿಗೆ ಬಂದಿದ್ದ ಸ್ಥಳೀಯರು ಆನೆ ಸಿಲುಕಿರುವುದನ್ನು ಗಮನಿಸಿ ಮಾಹಿತಿ ನೀಡಿದರು. ಕೂಡಲೇ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ತೆರಳಿ ರಕ್ಷಣೆ ಮಾಡಲಾಯಿತು. ಪಶುವೈದ್ಯರಾದ ಕಿರಣ್, ಗಿರೀಶ್ ಅವರು ಆನೆಗೆ ಅರಿವಳಿಕೆ ಚುಚ್ಚುಮದ್ದು ನೀಡಿದರು. ಚುಚ್ಚುಮದ್ದು ಕೊಟ್ಟ ಕೆಲವೇ ಕ್ಷಣಗಳಲ್ಲಿ ಅದು ಪ್ರಜ್ಞೆ ತಪ್ಪಿತು. ಬಳಿಕ ಗ್ಯಾಸ್ ಕಟ್ಟರ್‌ನಿಂದ ಆನೆ ಸಿಲುಕಿದ್ದ ಬ್ಯಾರಿಕೇಡ್‌ನ ಎರಡೂ ಭಾಗವನ್ನು ಕತ್ತರಿಸಲಾಯಿತು. ಬಳಲಿದ್ದ ಆನೆಗೆ ಅಗತ್ಯ ಚಿಕಿತ್ಸೆ ನೀಡಲಾಯಿತು. ಚೇತರಿಸಿಕೊಂಡ ಬಳಿಕ ಮರಳಿ ಕಾಡಿಗೆ ಬಿಡಲಾಯಿತು' ಎಂದು ಮಾಹಿತಿ ನೀಡಿದರು.

ಕನಕಪುರ ತಾಲ್ಲೂಕಿನ ಕಾವೇರಿ ವನ್ಯಜೀವಿಧಾಮದ ಅರೆಕೊಪ್ಪ ಗ್ರಾಮದ ಬಳಿ ರೈಲ್ವೆ ಬ್ಯಾರಿಕೇಡ್ ದಾಟಲು ಯತ್ನಿಸಿ ಮಧ್ಯದಲ್ಲೇ ಸಿಲುಕಿದ ಕಾಡಾನೆ

ಗೋಡೆ ಕುಸಿತ, ಇಬ್ಬರು ಮಕ್ಕಳ ಸಹಿತ ಮೂವರ ರಕ್ಷಣೆ

ಮಹಿಳೆ, ಇಬ್ಬರು ಮಕ್ಕಳ ಸಾವು

ಪ್ರಜಾವಾಣಿ ವಾರ್ತೆ

ಮಂಗಳೂರು: ಭಾರಿ ಮಳೆಗೆ ನಗರದ ನಾಗುರಿಯಲ್ಲಿ ಆವರಣ ಗೋಡೆಯು ಮನೆಯ ಮೇಲೆ ಕುಸಿದು ಇಬ್ಬರು ಮಕ್ಕಳು ಹಾಗೂ ಮಹಿಳೆ ಬುಧವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ.

ಉಡುಪಿ ಜಿಲ್ಲೆಯ ಪಣಿಯೂರಿನ ಶಾಂತಾ (46), ಬಿಹಾರ ಗೋಪಾಲ್‌ಗಂಜ್ ಜಿಲ್ಲೆಯ ಕಟಿಯಾ ತಾಲ್ಲೂಕಿನ ರುದ್ರಪುರ ಗ್ರಾಮದ ಅನಾಮಿಕ ಚೌರಾಸಿಯಾ (8) ಮತ್ತು ತನು ಚೌರಾಸಿಯಾ (4) ಮೃತರು. ಈ ಇಬ್ಬರು ಮಕ್ಕಳನ್ನು ರಕ್ಷಣೆ ಮಾಡಿದಾಗ ಮಿಸುಕಾಡುತ್ತಿದ್ದರು. ಆಸ್ಪತ್ರೆಗೆ ಕೊಂಡೊಯ್ಯುವಷ್ಟರಲ್ಲಿ ಅವರು ಅಸುನೀಗಿದರು ಎಂದು ರಕ್ಷಣಾ ಕಾರ್ಯದಲ್ಲಿ ನೆರವಾದ ಸ್ಥಳೀಯರೊಬ್ಬರು ತಿಳಿಸಿದರು.

ಕಲ್ಲು, ಮಣ್ಣಿನಡಿ ಸಿಲುಕಿದ್ದ ಬಾಲಕಿಯರಾದ ಅಲ್ಕಾ ಚೌರಾಸಿಯಾ (14), ಅನುಷ್ಕಾ ಚೌರಾಸಿಯಾ (11) ಹಾಗೂ ಶಾಂತಾ ಅವರ ಪತಿ ಬಾಲಕೃಷ್ಣ (48) ಅವರನ್ನು ರಾಜ್ಯ ವಿಪತ್ತು ನಿರ್ವಹಣೆ ತಂಡ, ಅಗ್ನಿಶಾಮಕದಳದ ಸಿಬ್ಬಂದಿ ಹಾಗೂ ಪೊಲೀಸರು ರಕ್ಷಣೆ ಮಾಡಿದ್ದಾರೆ. ದುರ್ಘಟನೆ ವೇಳೆ ಮನೆಯಲ್ಲೇ ಮಲಗಿದ್ದ ಮಕ್ಕಳ ತಂದೆ ಲಾಲ್ ಬಾಬು ಚೌರಾಸಿಯಾ (37), ತಾಯಿ ಇಂದುದೇವಿ (34) ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಪುತ್ರಿಯರಾದ ಅಲ್ಕಾ, ಅನುಷಾಗೂ ಗಾಯಗಳಾಗಿವೆ. ಬಾಲಕೃಷ್ಣ ಅವರ ಎದೆಗೆ ಕಲ್ಲು ಬಿದ್ದು ಶ್ವಾಸಕೋಶಕ್ಕೆ ಸ್ವಲ್ಪ ಏಟಾಗಿದೆ ಎಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ಕಂಕನಾಡಿಯ ಫಾದರ್ ಮುಲ್ಲರ್ ಆಸ್ಪತ್ರೆಯ ವೈದ್ಯರು 'ಪ್ರಜಾವಾಣಿ'ಗೆ ತಿಳಿಸಿದರು.

ದುರ್ಘಟನೆ ಸಂಭವಿಸಿದ ಕಟ್ಟಡದ ಹಿಂಭಾಗದಲ್ಲಿ ಸುಮಾರು 15 ಅಡಿ ಎತ್ತರದಲ್ಲಿ ಖಾಲಿ ನಿವೇಶನವಿದ್ದು, ಅದಕ್ಕೆ ಶಿಲೆಕಲ್ಲು ಹಾಗೂ ಕೆಂಪುಕಲ್ಲಿನಿಂದ ತಡೆಗೋಡೆ ನಿರ್ಮಿಸಲಾಗಿತ್ತು. ನಿವೇಶನದ ಬಳಿ ನೀರು ಹರಿದುಹೋಗಲು ಸೂಕ್ತ ವ್ಯವಸ್ಥೆ ಇರಲಿಲ್ಲ. ಭಾರಿ ಮಳೆಯಿಂದಾಗಿ ತಡೆಗೋಡೆ ಕುಸಿದು ಮನೆಯ ಹಿಂಭಾಗದ ಮಣ್ಣಿನ ಇಟ್ಟಿಗೆಯ ಗೋಡೆಯ ಮೇಲೆ ಬಿದ್ದಿದೆ. ಇದರಿಂದಾಗಿ ಮನೆಯ ಹಿಂಬದಿಯ ಗೋಡೆ ಉದ್ದಕ್ಕೂ ಕುಸಿದಿದೆ. ಚಾವಣಿಯ ಹಿಂಭಾಗದ ಹೆಂಚುಗಳೂ ಕುಸಿದುಬಿದ್ದಿವೆ.

ನಾಲ್ಕು ಬಾಡಿಗೆ ಮನೆಗಳಿರುವ ಹೆಂಚಿನ ಚಾವಣಿಯ ಕಟ್ಟಡದ ಒಂದು ಮನೆಯಲ್ಲಿ ಲಾಲ್ ಬಾಬು ಚೌರಾಸಿಯಾ, ಪತ್ನಿ ಇಂದುದೇವಿ, ಪುತ್ರಿಯರಾದ ಅಲ್ಕಾ, ಅನುಷ್ಕಾ, ಅನಾಮಿಕ ಹಾಗೂ ತನು ಅವರೊಂದಿಗೆ ಐದು ವರ್ಷಗಳಿಂದ ವಾಸವಾಗಿದ್ದರು. ಬಡಗಿಯಾಗಿರುವ ಲಾಲ್ ಬಾಬು ಕಟ್ಟಡ ಕೆಲಸಗಳಿಗೆ ಕಾರ್ಮಿಕರನ್ನು ಒದಗಿಸುವ ಗುತ್ತಿಗೆದಾರರಾಗಿದ್ದಾರೆ. ಇವರ ಮನೆ ಪಕ್ಕದಲ್ಲಿ ಬಾಲಕೃಷ್ಣ ಹಾಗೂ ಅವರ ಪತ್ನಿ ಶಾಂತಾ ಎರಡು ವರ್ಷಗಳಿಂದ ವಾಸವಿದ್ದರು. 10 ವರ್ಷಗಳ ಹಿಂದೆ ಮದುವೆಯಾಗಿದ್ದ ಈ ದಂಪತಿಗೆ ಮಕ್ಕಳು ಇಲ್ಲ.

ಮಂಗಳೂರಿನ ನಾಗುರಿ ಗರೋಡಿ ಬಳಿ ಭಾರಿ ಮಳೆಗೆ ಆವರಣ ಗೋಡೆ ಕುಸಿದು ಹಾನಿಯಾಗಿರುವ ಮನೆಯ ಬಳಿ ಮನೆಯ ನಿವಾಸಿ ರೋದಿಸಿದರು
ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

ಬರದ ಛಾಯೆ, ಮಳೆ ಮುನ್ಸೂಚನೆ

ಒಂದನೇ ಪುಟದಿಂದ...

ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ, ಬಹುತೇಕ ಜಿಲ್ಲೆಗಳು ಮಳೆಯ ತೀವ್ರ ಕೊರತೆ ಎದುರಿಸುತ್ತಿವೆ. ಜೂನ್ ತಿಂಗಳ ವಾಡಿಕೆ ಮಳೆ 19.9 ಸೆಂ.ಮೀ. ಆಗಿದ್ದು, 11.6 ಸೆಂ.ಮೀ ಮಾತ್ರ ಮಳೆಯಾಗಿದೆ.

151 ತಾಲ್ಲೂಕುಗಳಲ್ಲಿ ಕೊರತೆ: ಜೂನ್ ತಿಂಗಳಲ್ಲಿ 18 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದೆ. ಕೊಡಗು, ವಿಜಯನಗರ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ತೀವ್ರ ಮಳೆ ಕೊರತೆ ಎದುರಿಸುತ್ತಿವೆ. ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಮಾತ್ರ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ಉಳಿದ ಜಿಲ್ಲೆಗಳಲ್ಲಿ ವಾಡಿಕೆಯಷ್ಟು ಮಳೆ ಸುರಿದಿದೆ. 89 ತಾಲ್ಲೂಕುಗಳಲ್ಲಿ ವಾಡಿಕೆ ಹಾಗೂ ಅದಕ್ಕಿಂತ ಅಧಿಕ ಮಳೆಯಾದರೆ, 120 ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಇನ್ನುಳಿದ 31 ತಾಲ್ಲೂಕುಗಳು ತೀವ್ರ ಮಳೆ ಕೊರತೆ ಎದುರಿಸುತ್ತಿವೆ.

ಕಳೆದ ವರ್ಷ ಮುಂಗಾರು ಮಳೆ ಪ್ರಾರಂಭದಲ್ಲಿ ಅಬ್ಬರಿಸಿದ್ದರೂ ಜುಲೈ ತಿಂಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿತ್ತು. ಜೂನ್ ತಿಂಗಳಲ್ಲಿ ಒಳನಾಡಿನ ಹಲವು ಜಿಲ್ಲೆಗಳು ಸೇರಿ 14 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿತ್ತು. ಆದರೆ, ಒಟ್ಟಾರೆ ರಾಜ್ಯದಲ್ಲಿ ವಾಡಿಕೆಗಿಂತ ಅಧಿಕ ಮಳೆ (20.3 ಸೆಂ.ಮೀ.) ದಾಖಲಾಗಿತ್ತು. ಜುಲೈನಲ್ಲಿ ಕೊರತೆಯಾದರೂ ಆಗಸ್ಟ್ ತಿಂಗಳಲ್ಲಿ ಚುರುಕುಗೊಂಡಿತ್ತು. ಇದರಿಂದ ನೀರಿನ ಸಮಸ್ಯೆ ಉಂಟಾಗಿರಲಿಲ್ಲ. ಆದರೆ, ಈ ವರ್ಷ ಮಳೆಯ ತೀವ್ರ ಕೊರತೆ ಎದುರಾಗಿ, ಬರಗಾಲದ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜೂನ್‌ನಲ್ಲಿ ತೀವ್ರ ಮಳೆ ಕೊರತೆ ಎದುರಿಸಿದ ಜಿಲ್ಲೆಗಳು

ಜಿಲ್ಲೆ	ವಾಡಿಕೆ ಮಳೆ (ಸೆಂ.ಮೀ.)	ಸುರಿದ ಮಳೆ (ಸೆಂ.ಮೀ.)	ಕೊರತೆ (ಶೇ)
ಕೊಡಗು	53.4	19.8	63
ವಿಜಯನಗರ	8.1	3.2	61
ಚಿಕ್ಕಮಗಳೂರು	32.8	13.3	60
ಶಿವಮೊಗ್ಗ	47.2	19.4	59
ದಕ್ಷಿಣ ಕನ್ನಡ	92.8	39.5	57
ಮೈಸೂರು	9.5	4.2	56
ಹಾವೇರಿ	11.9	5.4	54
ದಾವಣಗೆರೆ	7.9	3.7	53
ಉಡುಪಿ	110.6	55.8	50
ಉತ್ತರ ಕನ್ನಡ	69.1	38.4	44

ಅಧಿಕ ಮಳೆಯಾದ ಜಿಲ್ಲೆಗಳು

ಜಿಲ್ಲೆ	ವಾಡಿಕೆ ಮಳೆ (ಸೆಂ.ಮೀ.)	ಸುರಿದ ಮಳೆ (ಸೆಂ.ಮೀ.)	ಅಧಿಕ (ಶೇ)
ತುಮಕೂರು	5.9	7.6	29
ಚಿಕ್ಕಬಳ್ಳಾಪುರ	6.4	8.2	27
ಬೆಂಗಳೂರು ಗ್ರಾಮಾಂತರ	6.8	8.4	24
ಬೆಂಗಳೂರು ನಗರ	7.1	8.5	19
ಬೆಂಗಳೂರು ದಕ್ಷಿಣ (ರಾಮನಗರ)	7	8.2	17

> ಎಲ್ ನಿನೊ ಪರಿಣಾಮದಿಂದ ಮಳೆ ಕೊರತೆ ಉಂಟಾಗಿದೆ. ಜುಲೈ ಮೊದಲ ವಾರ ಉತ್ತಮ ಮಳೆಯಾಗಿ, ಮುಂದಿನ ದಿನಗಳಲ್ಲಿ ಮತ್ತೆ ಕೊರತೆಯಾಗುವ ಸಾಧ್ಯತೆಯಿದೆ
> **ಸಿ.ಎಸ್.ಪಾಟೀಲ,** ಹವಾಮಾನ ಇಲಾಖೆ ತಜ್ಞ

ಕೊಡಗಿನಲ್ಲಿ ಸಾಧಾರಣ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಹಲವೆಡೆ ಬುಧವಾರ ಸಾಧಾರಣ ಮಳೆಯಾಗಿದೆ.

ಮಡಿಕೇರಿಯಲ್ಲಿ ಬೆಳಿಗ್ಗೆ ಬಿರುಸಾಗಿತ್ತು. ಸೋಮವಾರಪೇಟೆ ತಾಲ್ಲೂಕಿನ ಕೆಲವೆಡೆ ಮಳೆ ಉತ್ತಮ ಮಳೆಯಾಗಿದೆ. ಬುಧವಾರ ಬೆಳಿಗ್ಗೆ 8ರವರೆಗೆ ಶಾಂತಳ್ಳಿ ಹೋಬಳಿ ವ್ಯಾಪ್ತಿಯಲ್ಲಿ 10 ಸೆಂ.ಮೀ., ಭಾಗಮಂಡಲದಲ್ಲಿ 4.8 ಸೆಂ.ಮೀ. ಮಳೆ ಬಿದ್ದಿದೆ. ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 604 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಕಾವೇರಿ ಕೊಳ್ಳದ ಜಲಾಶಯಗಳ ನೀರಿನಮಟ್ಟ (ಅಡಿಗಳಲ್ಲಿ)

ಜಲಾಶಯ	ಗರಿಷ್ಠ ಮಟ್ಟ	ಈಗಿನ ಮಟ್ಟ	ಕಳೆದ ವರ್ಷ ಈ ವೇಳೆ	ಪ್ರಸ್ತುತ ಸಂಗ್ರಹ (ಟಿಎಂಸಿ ಅಡಿ)
ಕೆಆರ್‌ಎಸ್	124.80	80.82	124.80	6.75
ಹಾರಂಗಿ	2,859	2,827.97	2,851.77	2.81
ಕಬಿನಿ	2,284	2,253.80	2,277.20	1.34
ಹೇಮಾವತಿ	2,922	2,891.53	2,917.32	13.57

ಇಂದು ಕರಾವಳಿ ಭಾಗಕ್ಕೆ 'ರೆಡ್ ಅಲರ್ಟ್'

ಬೆಂಗಳೂರು: ರಾಜ್ಯದ ಕರಾವಳಿ ಭಾಗಕ್ಕೆ ಗುರುವಾರ 'ರೆಡ್ ಅಲರ್ಟ್' ಘೋಷಿಸಿರುವ ಹವಾಮಾನ ಇಲಾಖೆ, ಈ ಭಾಗದಲ್ಲಿ ಭಾರಿ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ನೀಡಿದೆ.

ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದೆ. ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ಈ ಜಿಲ್ಲೆಗಳ ಒಂದೆರಡು ಕಡೆ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಇದೇ 4ರವರೆಗೆ ಕರಾವಳಿ ಭಾಗದಲ್ಲಿ ಗಂಟೆಗೆ 40ರಿಂದ 60 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದ್ದು, ಮೀನುಗಾರರು ಸಮುದ್ರ ಪ್ರದೇಶಗಳಿಗೆ ಹೋಗದಂತೆ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಹಾಗೂ ಮಲೆನಾಡು ಭಾಗದ ಕೆಲವೆಡೆ ಇದೇ 5ರವರೆಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಇಳಿದ ಮಳೆ ಅಬ್ಬರ: ಅಲ್ಲಲ್ಲಿ ಭೂಕುಸಿತ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆಯ ಅಬ್ಬರ ಬುಧವಾರ ಸ್ವಲ್ಪ ಇಳಿಕೆಯಾದರೂ, ಅಲ್ಲಲ್ಲಿ ಭೂಕುಸಿತ ಸಂಭವಿಸಿದೆ.

ಜಿಲ್ಲೆಯ ಕರಾವಳಿ ಭಾಗದಲ್ಲಿ ಆಗಾಗ ಬಿರುಸಿನ ಮಳೆಯಾಗುತ್ತಿದೆ. ಕಳೆದ ಮೂರು-ನಾಲ್ಕು ದಿನಗಳಿಂದ ಮಳೆ ಸುರಿಯುತ್ತಿರುವ ಪರಿಣಾಮ ಬುಧವಾರ ನಸುಕಿನ ಜಾವ ಶಿರಸಿ-ಕುಮಟಾ ರಾಷ್ಟ್ರೀಯ ಹೆದ್ದಾರಿಯ ದೇವಿಮನೆ ಘಟ್ಟದಲ್ಲಿ ಸಣ್ಣ ಪ್ರಮಾಣದಲ್ಲಿ ಭೂಕುಸಿತ ಉಂಟಾಗಿದೆ. ಕುಸಿತದಿಂದ ಗಿಡಮರಗಳು ರಸ್ತೆಗೆ ಅಡ್ಡಲಾಗಿ ಬಿದ್ದಿದ್ದರಿಂದ ಕೆಲ ಹೊತ್ತು ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಕುಮಟಾ ತಾಲ್ಲೂಕಿನ ಮುರೂರು, ಹೊನ್ನಾವರ ತಾಲ್ಲೂಕಿನ ಹೊದ್ಕೆ ಶಿರೂರು ಗ್ರಾಮಗಳ ಜನವಸತಿ ಪ್ರದೇಶದ ಬಳಿ ಸಣ್ಣ ಪ್ರಮಾಣದಲ್ಲಿ ಭೂಕುಸಿತವಾಗಿದೆ. ಆದರೆ, ಮನೆಗಳಿಗೆ ಹಾನಿಯಾಗಿಲ್ಲ.

ಸರ್ಜಾಪುರ ಭೂ ಸ್ವಾಧೀನ ವಿರೋಧಿಸಿ ಹೋರಾಟ

ರೈತರ ಮೇಲೆ ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಸರ್ಜಾಪುರ ಹೋಬಳಿಯಲ್ಲಿ ಸ್ವಿಫ್ಟ್ ಸಿಟಿ ನಿರ್ಮಾಣಕ್ಕಾಗಿ ಭೂಸ್ವಾಧೀನ ವಿರೋಧಿಸಿ ಕೆಐಎಡಿಬಿ ಕಚೇರಿಗೆ ಮುತ್ತಿಗೆ ಹಾಕಲು ಬುಧವಾರ ಹೊರಟಿದ್ದ ಮಹಿಳಾ ಹೋರಾಟಗಾರರು ಸೇರಿದಂತೆ ರೈತರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದ್ದು, ಹತ್ತಕ್ಕೂ ಹೆಚ್ಚು ಮಂದಿ ಗಾಯಗೊಂಡು, 20 ಮಂದಿ ಅಸ್ವಸ್ಥರಾಗಿದ್ದಾರೆ.

ರೈತರು ಮತ್ತು ಪೊಲೀಸರ ನಡುವೆ ಭಾರಿ ವಾಗ್ವಾದ ನಡೆದು, ರೈತ ಮಹಿಳೆಯರು ಮತ್ತು ಹೋರಾಟಗಾರರನ್ನು ಪೊಲೀಸರು ಎಳೆದಾಡಿದ್ದಾರೆ.

ಭೂ ಸ್ವಾಧೀನ ವಿರೋಧಿಸಿ ಸರ್ಜಾಪುರ ಹೋಬಳಿಯ 11 ಗ್ರಾಮಗಳ ರೈತರು ಮತ್ತು ಹೋರಾಟ ಸಮಿತಿ ವತಿಯಿಂದ 400 ದಿನದಿಂದ ಹೋರಾಟ ಮಾಡಲಾಗುತ್ತಿದೆ. ಈವರೆಗೂ ಯಾವುದೇ ಸ್ಪಂದನೆ ಸಿಗದಿರುವುದಕ್ಕೆ ಆಕ್ರೋಶಗೊಂಡು ಕೆಐಎಡಿಬಿ ಕಚೇರಿಗೆ ಮುತ್ತಿಗೆ ಹಾಕಲು ತೆರಳುತ್ತಿದ್ದಾಗ ಮಡಿವಾಳ ಬಳಿ ಘಟನೆ ನಡೆದಿದೆ.

ಕೆಐಎಡಿಬಿ ಕಚೇರಿಗೆ ಮುತ್ತಿಗೆ ಹಾಕಲು ಹೊರಟಿದ್ದ ರೈತ ಮಹಿಳೆಯರನ್ನು ಪೊಲೀಸರು ಎಳೆದಾಡಿದರು

ಕೆಐಎಡಿಬಿ ಕಚೇರಿಗೆ ಮುತ್ತಿಗೆ ಹಾಕಿ ಅಧಿಕಾರಿಗಳಿಗೆ ಮನವಿ ಪತ್ರ ನೀಡಲು ಬುಧವಾರ ಸಮಯ ನಿಗದಿಪಡಿಸಲಾಗಿತ್ತು. ಅದರಂತೆ 600ಕ್ಕೂ ಹೆಚ್ಚು ರೈತರು 10 ಬಸ್‌ಗಳಲ್ಲಿ ಕೆಐಎಡಿಬಿ ಕಚೇರಿಯತ್ತ ಹೊರಟಿದ್ದರು. ಕಿತ್ತಗಾನಹಳ್ಳಿ ಬಳಿ ಪೊಲೀಸರು ರೈತರನ್ನು ಅಡ್ಡಗಟ್ಟಿ ಭದ್ರತೆ ನೀಡುವ ನೆಪದಲ್ಲಿ ಅವರ ಜತೆ ಪ್ರಯಾಣ ಬೆಳೆಸಿದರು. ಮಧ್ಯಾಹ್ನ 1.15ರ ವೇಳೆಗೆ ಮಡಿವಾಳ ಚೆಕ್ ಪೋಸ್ಟ್ ಬಳಿ ಎಲ್ಲ ಬಸ್‌ಗಳನ್ನು ಪೊಲೀಸರು ತಡೆದಿದ್ದಾರೆ.

ಇದರಿಂದ ಅಸಮಾಧಾನಗೊಂಡ ರೈತರು ಮಡಿವಾಳ ಚೆಕ್‌ಪೋಸ್ಟ್ ಬಳಿ ರಸ್ತೆಯಲ್ಲೇ ಧರಣಿ ನಡೆಸಿದರು. ರೈತರನ್ನು ಪೊಲೀಸರು ವಶಕ್ಕೆ ಪಡೆಯಲು ಮುಂದಾದಾಗ ಮಾತಿನ ಚಕಮಕಿ, ನೂಕಾಟ– ತಳ್ಳಾಟ ನಡೆದಿದೆ. ಆಗ ಪೊಲೀಸರು ಲಾಠಿ ಪ್ರಹಾರ ಮಾಡಿದ್ದಾರೆ. ಈ ವೇಳೆ ರೈತ ದೇವರಾಜು ಅವರಿಗೆ ಹೃದಯ ಸಮಸ್ಯೆ ಕಾಣಿಸಿಕೊಂಡಿದ್ದು, ಅವರು ಸ್ಥಳದಲ್ಲೇ ಪ್ರಜ್ಞೆತಪ್ಪಿ ಬಿದ್ದರು. ಆಂಬುಲೆನ್ಸ್ ದೊರೆಯದೇ ಅಲ್ಲಿದ್ದ ರೈತರು ಪರದಾಡಿದರು. ಬಳಿಕ ಖಾಸಗಿ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು.

ಗಣಿಗಾರಿಕೆ: ‘ನಿಯಮ ರೂಪಿಸಿ’

ವರ್ಷಗಟ್ಟಲೆ ಗಣಿಗಾರಿಕೆ ಆರಂಭಿಸದವರ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹರಾಜಿನ ಮೂಲಕ ಪಡೆದು ವರ್ಷಗಟ್ಟಲೆ ಗಣಿಗಾರಿಕೆ ಆರಂಭಿಸದವರ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಿ’ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಹರಾಜು ನಡೆದು ಕನಿಷ್ಠ ಎಷ್ಟು ಅವಧಿಯೊಳಗೆ ಗಣಿಗಾರಿಕೆ ಆರಂಭಿಸಬೇಕು ಎನ್ನುವ ಬಗ್ಗೆ ವೈಜ್ಞಾನಿಕ ನಿಯಮ ರೂಪಿಸಬೇಕು’ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಬುಧವಾರ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

ರಾಜ್ಯದಲ್ಲಿ ಗಣಿಗಾರಿಕೆ ಭೂಮಿ ಪಡೆದವರು ಎಷ್ಟು ಮಂದಿ ಇದ್ದಾರೆ, ಲೀಸ್ ಪಡೆದ ಪ್ರಕರಣಗಳ ಸ್ಥಿತಿಗತಿ ಏನಿದೆ, ಗಣಿಗಾರಿಕೆ ಆರಂಭಿಸದಿರುವವರ ಪಟ್ಟಿ, ಅದಕ್ಕೆ ಕಾರಣಗಳೇನು, ಅರಣ್ಯ ಅನುಮತಿ ಬಾಕಿ ಇರುವ ಪ್ರಕರಣಗಳೆಷ್ಟು, ಬಾಕಿ ಉಳಿಯಲು ಕಾರಣಗಳೇನು ಎನ್ನುವುದೂ ಸೇರಿ ಸಮಗ್ರ ವರದಿ ಸಲ್ಲಿಸುವಂತೆ ಗಣಿ ಇಲಾಖೆಯ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಅವರಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು.

ರಾಜ್ಯದ ಗಣಿ ನೀತಿ ಮತ್ತು ಇತರ ರಾಜ್ಯಗಳಲ್ಲಿ ಇರುವ ಗಣಿ ನೀತಿ, ನಿಯಮ ಮತ್ತು ಕಾನೂನುಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಿ, ಹರಾಜು ನಡೆದು ಎಷ್ಟು ಕನಿಷ್ಠ ಅವಧಿಯೊಳಗೆ ಗಣಿಗಾರಿಕೆ ಆರಂಭಿಸಬೇಕು ಎನ್ನುವ ಬಗ್ಗೆ ವೈಜ್ಞಾನಿಕ ನಿಯಮ ರೂಪಿಸಿ ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್ ಮತ್ತು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರಿಗೆ ಮುಖ್ಯಮಂತ್ರಿ ಜವಾಬ್ದಾರಿ ವಹಿಸಿದರು.

‘2025–26ನೇ ಸಾಲಿನಲ್ಲಿ ₹8,845.39 ಕೋಟಿ ಆದಾಯ ಸಂಗ್ರಹವಾಗಿದ್ದು, ನಿಗದಿತ ಗುರಿಯ ಶೇ 98 ಸಾಧಿಸಲಾಗಿದೆ. 2026–27ನೇ ಸಾಲಿನಲ್ಲಿ ಇದುವರೆಗೆ ₹1,164.11 ಕೋಟಿ ಆದಾಯ ಸಂಗ್ರಹಿಸಲಾಗಿದೆ. 2025–26ನೇ ಸಾಲಿನಲ್ಲಿ ಅಕ್ರಮ ಮತ್ತು ನಿಯಮಬಾಹಿರ ಗಣಿಗಾರಿಕೆ ನಡೆಸಿದ 6,301 ಪ್ರಕರಣಗಳನ್ನು ಪತ್ತೆಹಚ್ಚಿ ಪ್ರಕರಣ ದಾಖಲಿಸಲಾಗಿದೆ. ₹31.26 ಕೋಟಿ ದಂಡ ಸಂಗ್ರಹಿಸಿ, 268 ಎಫ್ಐಆರ್ ದಾಖಲಿಸಲಾಗಿದೆ. ಇದರಲ್ಲಿ 3,648 ಮರಳು ಗಣಿಗಾರಿಕೆ ಪ್ರಕರಣಗಳೂ ಸೇರಿವೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಹಿಂದಿನ ಅವಧಿಗೆ ಅಥವಾ ಪೂರ್ವಾನ್ವಯವಾಗುವ ತೆರಿಗೆಯಿಂದ ಸರ್ಕಾರಕ್ಕೆ ಬರಬೇಕಾದ ಆದಾಯಗಳ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಚರ್ಚೆ ನಡೆಸಿದ ಮುಖ್ಯಮಂತ್ರಿ, ಕೇಂದ್ರ ಸರ್ಕಾರದ ಗಣಿ ನಿಯಮಗಳು ಮತ್ತು ಸುಪ್ರೀಂಕೋರ್ಟ್‌ನ ನಿರ್ದೇಶನಗಳನ್ನು ಮೀರದಂತೆ ಕ್ರಮ ವಹಿಸಬೇಕು ಎಂದೂ ಸೂಚಿಸಿದರು.

ಮುಖ್ಯಾಂಶಗಳು

- ಅಧಿಕಾರಿಗಳ ಜತೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಮುಖ್ಯಮಂತ್ರಿ ಡಿ.ಕೆ.ಶಿ
- ಸಮಗ್ರ ವರದಿ ಸಲ್ಲಿಸಲು ಗಣಿ ಇಲಾಖೆ ಕಾರ್ಯದರ್ಶಿಗೆ ಸೂಚನೆ

‘ವೃತ್ತಿ ಆಧಾರಿತ ಅಭಿವೃದ್ಧಿ ಯೋಜನೆ ಅಗತ್ಯ’

‘ಗ್ರಾಮೀಣ ಭಾಗಗಳಲ್ಲಿ ವಾಸಿಸುವ ಹಿಂದುಳಿದ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣಕ್ಕೆ ಹೊಸ ಆಯಾಮ ನೀಡುವ ಉದ್ದೇಶದಿಂದ, ‘ಇನ್ನೂ ಸಾಂಪ್ರದಾಯಿಕ ವೃತ್ತಿಗಳನ್ನು ಅವಲಂಬಿಸಿರುವ ಸಮುದಾಯಗಳ ಸಮಗ್ರ ದತ್ತಾಂಶ ಸಂಗ್ರಹಿಸಿ, ಅವರ ಅಗತ್ಯಗಳಿಗೆ ಅನುಗುಣವಾದ ವೃತ್ತಿ ಆಧಾರಿತ ಹಾಗೂ ವೈಜ್ಞಾನಿಕ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು.

ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, ವಿವಿಧ ಯೋಜನೆಗಳ ಅನುಷ್ಠಾನ, ಫಲಾನುಭವಿಗಳ ವ್ಯಾಪ್ತಿ, ಯೋಜನೆಗಳು ಬೀರಿರುವ ಪರಿಣಾಮ ಹಾಗೂ ಮುಂದಿನ ಕಾರ್ಯತಂತ್ರದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

‘ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹೊಸ ಕೌಶಲ, ಆಧುನಿಕ ತಂತ್ರಜ್ಞಾನ, ಮಾರುಕಟ್ಟೆ ಸಂಪರ್ಕ ಮತ್ತು ಹಣಕಾಸಿನ ಬೆಂಬಲ ಕಲ್ಪಿಸುವ ದಿಸೆಯಲ್ಲಿ ವಿಶೇಷ ಯೋಜನೆಗಳನ್ನು ರೂಪಿಸಬೇಕು’ ಎಂದು ಅವರು ನಿರ್ದೇಶನ ನೀಡಿದರು.

ಕಾಮೆಡ್–ಕೆ ಸೀಟ್ ಮ್ಯಾಟ್ರಿಕ್ಸ್ ಪ್ರಕಟ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ಕಾಮೆಡ್–ಕೆ ಅಡಿ ಎಂಜಿನಿಯರಿಂಗ್, ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳಲ್ಲಿ ಲಭ್ಯ ಇರುವ ಸೀಟುಗಳ ಪಟ್ಟಿ ಪ್ರಕಟಗೊಂಡಿದೆ. 170 ಖಾಸಗಿ ಕಾಲೇಜುಗಳಲ್ಲಿ 24,626 ಸೀಟುಗಳಿದ್ದು, ಕಲ್ಯಾಣ ಕರ್ನಾಟಕ ವಿಭಾಗಕ್ಕೆ 3,812 ಸೀಟು ಮತ್ತು ರಾಜ್ಯದ ಉಳಿದ ಭಾಗದಲ್ಲಿ 20,814 ಸೀಟುಗಳು ಲಭ್ಯವಿವೆ.

‘ಈ ಬಾರಿ ಸೀಟುಗಳ ಸಂಖ್ಯೆ ಹೆಚ್ಚಿದ್ದು, ಎಂಜಿನಿಯರಿಂಗ್ ವಿಭಾಗದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ), ಮಷಿನ್ ಲರ್ನಿಂಗ್, ರೊಬೊಟಿಕ್ಸ್ ಸೇರಿದಂತೆ ಹೊಸ ಕೋರ್ಸ್‌ಗಳನ್ನು ಕೆಲವು ಕಾಲೇಜುಗಳು ಆರಂಭಿಸಿವೆ. ಹೀಗಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಸಿಗಲಿದೆ’ ಎಂದು ಕಾಮೆಡ್–ಕೆ ಅಧಿಕಾರಿಗಳು ತಿಳಿಸಿದ್ದಾರೆ.

‘ಕಾಮೆಡ್–ಕೆ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಆನ್‌ಲೈನ್ ನೋಂದಣಿ ಮಾಡಿಕೊಳ್ಳಬೇಕು. ದಾಖಲಾತಿ ಪರಿಶೀಲನೆ ನಂತರ ವಿದ್ಯಾರ್ಥಿಗಳು ತಮ್ಮ ಆದ್ಯತೆಯ ಕಾಲೇಜು ಮತ್ತು ಕೋರ್ಸ್ ಅನ್ನು ಆಯ್ಕೆ ಮಾಡಲು ಅವಕಾಶವಿದೆ. ಸೀಟು ಹಂಚಿಕೆಯು ಅಭ್ಯರ್ಥಿಗಳ ರ‍್ಯಾಂಕ್, ಆಯ್ಕೆ ಆದ್ಯತೆ ಹಾಗೂ ಸೀಟುಗಳ ಲಭ್ಯತೆ ಆಧರಿಸಿ ನಡೆಯಲಿದೆ’ ಎಂದಿದ್ದಾರೆ.

‘ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಶೀಘ್ರವೇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು’ ಎಂದು ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಆರ್‌ಎಸ್‌ಎಸ್ ವಾರ್ಷಿಕ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಇರುವ ಹಿರಿಯ ಆರ್.ಎಸ್.ಎಸ್. ಪ್ರಚಾರಕರು ಮುಂದಿನ ವಾರ ಬೆಳಗಾವಿ ನಗರದಲ್ಲಿ ನಡೆಯುವ ವಾರ್ಷಿಕ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಭೆಯಲ್ಲಿ ಜನಗಣತಿ ಪ್ರಕ್ರಿಯೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ.

ಜುಲೈ 10ರಂದು ಪ್ರಾರಂಭವಾಗಿ 12ರಂದು ಮುಕ್ತಾಯಗೊಳ್ಳುವ ಮೂರು ದಿನಗಳ ಸಭೆಯಲ್ಲಿ ಆರ್.ಎಸ್.ಎಸ್. ಶಾಖೆಗಳ ಕೆಲಸಗಳನ್ನು ಪರಿಶೀಲಿಸಲಾಗುವುದು. ಜೊತೆಗೆ, ಸಂಘಟನೆಯ ವ್ಯಾಪ್ತಿಯನ್ನು ವಿಸ್ತರಿಸಲು ಶಾಖೆಗಳ ಸಂಖ್ಯೆಯನ್ನು ಹೆಚ್ಚಿಸುವ ಯೋಜನೆಗಳ ಬಗ್ಗೆ ಚರ್ಚಿಸಲಾಗುವುದು.

ಸಭೆಯಲ್ಲಿ ದೇಶದಾದ್ಯಂತ ಇರುವ ಪ್ರಾಂತ ಪ್ರಚಾರಕರು, ಸಹ ಪ್ರಾಂತ ಪ್ರಚಾರಕರು, ಕ್ಷೇತ್ರ ಪ್ರಚಾರಕರು ಹಾಗೂ ಸಹ ಕ್ಷೇತ್ರ ಪ್ರಚಾರಕರು, 11 ಕ್ಷೇತ್ರಗಳ ಹಾಗೂ 46 ಪ್ರಾಂತಗಳ ಕಾರ್ಯಕರ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜೊತೆಗೆ, ಬಿಜೆಪಿ ಸೇರಿದಂತೆ ಆರ್.ಎಸ್.ಎಸ್. ಬೆಂಬಲಿತ ಸಂಘಟನೆಗಳ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳು ಭಾಗವಹಿಸಲಿದ್ದಾರೆ.

ವಿಬಿ–ಜಿ ರಾಮ್ ಜಿ: ದಿನಗೂಲಿ ಏರಿಕೆ

ಒಂದನೇ ಪುಟದಿಂದ...

ಸಿಕ್ಕಿಂನ ಮೂರು ಗ್ರಾಮ ಪಂಚಾಯಿತಿಗಳಾದ ಗ್ನಾಥಾಂಗ್, ಲಾಚುಂಗ್, ಲಾಚೆನ್‌ಗಳಲ್ಲಿ ದಿನಕ್ಕೆ ₹450ಕ್ಕೆ ಕೂಲಿ (ವಿಶೇಷ ದರ) ಹೆಚ್ಚಿಸಲಾಗಿದೆ.

ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಅಸ್ಸಾಂ, ಅರುಣಾಚಲ ಪ್ರದೇಶ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ದಿನಗೂಲಿ ಶೇ 15ರಿಂದ ಶೇ 25ರ ವರೆಗೆ ಏರಿಕೆಯಾಗಿದೆ ಎಂದು ಸಚಿವಾಲಯದ ತಿಳಿಸಿದೆ.

ಎರಡು ದಶಕಗಳಿಂದ ಜಾರಿಯಲ್ಲಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು (ನರೇಗಾ) ಕೇಂದ್ರ ಸರ್ಕಾರ ‘ವಿಬಿ–ಜಿ ರಾಮ್ ಜಿ’ ಎಂದು ಬದಲಿಸಿದ್ದು, ಅದು ಜುಲೈ 1ರಿಂದ ಜಾರಿಗೆ ಬಂದಿದೆ. ಹಿಂದಿನ ಯೋಜನೆಯಲ್ಲಿ 100 ದಿನಗಳಿದ್ದ ಉದ್ಯೋಗ ಖಾತ್ರಿ ದಿನಗಳನ್ನು, ಹೊಸ ಯೋಜನೆಯಲ್ಲಿ 125 ದಿನಗಳಿಗೆ ಏರಿಸಲಾಗಿದೆ.

ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (EDCS)

ಸುವರ್ಣ ಭವನ, 3ನೇ ಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ದೂರವಾಣಿ:080–22230281/0282, ಇ–ಮೇಲ್:dir-edcs@karnataka.gov.in

ಸಂಖ್ಯೆ:EDCS/14/ADM/2020-K1-EDCS (322126) ದಿನಾಂಕ:30.06.2026

ಟೆಂಡರ್ ಆಹ್ವಾನ

ಅರ್ಹ ಬಿಡ್‌ದಾರರಿಂದ, ಕೆಳಕಂಡ ಟೆಂಡರ್‌ಗಳಿಗೆ ಅರ್ಜಿ ಸಲ್ಲಿಸಲು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.
ವೆಬ್‌ಸೈಟ್: https://kppp.karnataka.gov.in

1) ಟೆಂಡರ್ ಸಂಖ್ಯೆ – **DPAREGOV/2025-26/SE0036/CALL-3 (Request for proposal (RFP) for selection of Banking partner for Bangalore one & Karnataka one Project of Directorate of Electronic Delivery of Citizen Services)** ಅರ್ಹ ಬಿಡ್‌ದಾರ ಸಂಸ್ಥೆಗಳು ಪಾಲ್ಗೊಳ್ಳಲು ಕೊನೆಯ ದಿ:16.07.2026, 5:30 PM.

ಸಹಿ/–
ನಿರ್ದೇಶಕರು
ಇಡಿಸಿಎಸ್ ನಿರ್ದೇಶನಾಲಯ

ಡಿಐಪಿಆರ್/ಸಿಪಿ/1424/ಸಿಸಿಎಲ್/2026–27

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ

ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ
ಆಡಳಿತ ಕಚೇರಿ: ಮೂಡುಶೆಡ್ಡೆ, ಮಂಗಳೂರು–575028,
ದೂರವಾಣಿ: 0824–2263565 ವೆಬ್‌ಸೈಟ್: https://pilikula.karnataka.gov.in

No.PDA(1) CR.13/EOI-Buggy/2026-27 Date: 30.06.2026

ಪ್ರಕಟಣೆ

(through https://kppp.karnataka.gov.in)

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಬ್ಯಾಟರಿ ಚಾಲಿತ ವಾಹನಗಳ ಪೂರೈಕೆ, ಕಾರ್ಯಾಚರಣೆ ಹಾಗೂ ನಿರ್ವಹಣೆ ಸೇವೆಯ “Expression of interests” ನ್ನು 10 ವರ್ಷ ಅವಧಿಗೆ ಆಸಕ್ತ ಅರ್ಹರಿಂದ ಆಹ್ವಾನಿಸಲಾಗಿದೆ. ಶುಲ್ಕ -As per e-portal, ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 09–07–2026 ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಮೇಲಿನ ದೂರವಾಣಿ ಮೂಲಕ ಪಡೆಯಬಹುದು.

ಸಹಿ/– ಆಯುಕ್ತರು

DIPR/DK/KSMCA/440/26-27 dt. 01.07.2026

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182–222943 Email ID: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ)

ಐಎಫ್‌ಟಿ ಸಂಖ್ಯೆ. 16/2026–27 ದಿನಾಂಕ : 29.06.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–3&4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ ತಾಲ್ಲೂಕಿನಲ್ಲಿನ ಲೆಕ್ಕ ಶೀರ್ಷಿಕೆ:–2059–80–053–4–00–200 ವಿವಿಧ ಇಲಾಖಾ ಕಟ್ಟಡಗಳ ದುರಸ್ಥಿ/ನಿರ್ವಹಣೆ ಒಟ್ಟು–01 ಕಾಮಗಾರಿಯ ಹೆಸರು ಶಿವಮೊಗ್ಗ ನಗರದ ಸರ್ಕ್ಯೂಟ್ ಹೌಸ್ ಆವರಣದಲ್ಲಿರುವ ಅತೀಗಣ್ಯರ, ಗಣ್ಯರ ಮತ್ತು ಸಾಮಾನ್ಯ ವಸತಿ ಗೃಹಗಳು ಹೆಲಿಪ್ಯಾಡ್ ಹಾಗೂ ಗಾರ್ಡನ್ ಮತ್ತು ರಸ್ತೆಗಳ 2026–27ನೇ ಸಾಲಿನ ವಾರ್ಷಿಕ ನಿರ್ವಹಣೆ ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.60.95 ಲಕ್ಷ ಹಾಗೂ ಇ.ಎಂ.ಡಿ.ಗರಿಷ್ಠ ಮೊತ್ತ ರೂ.1.22 ಲಕ್ಷ. ಕಾಲಾವಧಿ ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ಪೋರ್ಟಲ್ **http://KPPP.karnataka.gov.in** ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 29–06–2026 ರಿಂದ 07–07–2026ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ:07–07–2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ:08–07–2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ:09–07–2026 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/–
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ಸಂ.129/ಝೇಂಕಾರ್/2026–27

ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ

"ಕೆಂಗಲ್ ಹನುಮಂತಯ್ಯ ಅಭಿವೃದ್ಧಿ ಭವನ' ಬಿ.ಎಂ. ರಸ್ತೆ, ರಾಮನಗರ–562159
ಬೆಂಗಳೂರು ದಕ್ಷಿಣ ಜಿಲ್ಲೆ . ದೂರವಾಣಿ: 080-27276616 e-mail: ruda.me@gmail.com

ಸಂ.: ರಾನಪ್ರ/ಇ–ಪ್ರಕ್ಯೂರ್‌ಮೆಂಟ್/ಟೆಂಡರ್ ಪ್ರಕಟಣೆ/96/2026–27 ದಿನಾಂಕ: 30.06.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ. ಪೋರ್ಟ್‌ಲ್ ಮುಖಾಂತರ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ವಿವಿಧ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಯ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದು. ಈ ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ.ಯನ್ನು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 90 ದಿನಗಳವರೆಗೆ ಮಾನ್ಯತೆ ಇರತಕ್ಕದ್ದು.

ಪ್ಯಾಕೇಜ್ ಸಂಖ್ಯೆ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ.ಗಳಲ್ಲಿ)	ಕೆಲಸ ಪೂರ್ಣಗೊಳಿಸುವ ಅವಧಿ
1	RUDA/2026-27/OW/ WORK_INDENT3	298.00	2,28,750/-	As per KPP Portal	3 ತಿಂಗಳು

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **15.07.2026 ರಂದು ಸಂಜೆ: 4:00 ಗಂಟೆವರೆಗೆ. 2)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.07.2026 ರಂದು ಸಂಜೆ: 5:10 ಗಂಟೆಗೆ. 3)** ಆರ್ಥಿಕ ಬಿಡ್ ತೆರೆಯುವ ದಿನಾಂಕ: **18.07.2026 ರಂದು ಬೆಳಿಗ್ಗೆ 11:00 ಗಂಟೆಗೆ.**

ಸಹಿ/– **ಆಯುಕ್ತರು**
ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ, ರಾಮನಗರ.

DIPR/BSD/147/SA/2026-27

ಸಾರ್ವಜನಿಕ ಪ್ರಕಟಣೆ
ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯ, ರಜತಾದ್ರಿ, ಉಡುಪಿ

MAG No.09/2025

ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಯೋಜನೆ ವಿಭಾಗ, ಕವಿಪ್ರನಿನಿ, ಉಡುಪಿ **ಅರ್ಜಿದಾರರು**

ವಿರುದ್ಧ

ಬಿ. ನಿಶಾಲ್ ಹೆಗ್ಡೆ **ಎದುರುದಾರರು**

ರವರಿಗೆ

ನಿಶಾಲ್ ಹೆಗ್ಡೆ ಬಿನ್. ನವೀನ್ ಚಂದ್ರ ಹೆಗ್ಡೆ, ನೈದಿಲೆ, ಸಳ್ವಾಡಿ ಅಂಚೆ, ಕೋಟೇಶ್ವರ, ಕಾಳಾವರ ಗ್ರಾಮ, ಕುಂದಾಪುರ ತಾಲ್ಲೂಕು – 576214.

ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ನಿಮ್ಮ ವಿರುದ್ಧ ಹಾಕಿದ ಮೇಲಿನ ದಾವೆಯು ದಿನಾಂಕ **18.07.2026 ರಂದು ಅಪರಾಹ್ನ 3:00 ಗಂಟೆಗೆ** ಇರಿಸಲಾಗಿದೆ. ನೀವು ಆ ದಿನಾಂಕದಂದು ಸ್ವತಃ/ ವಕೀಲರ ಮೂಲಕ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ, ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಮಾನ್ಯ ಜಿಲ್ಲಾಧಿಕಾರಿಗಳ ಪರವಾಗಿ
ಉಡುಪಿ ಜಿಲ್ಲೆ
ಅರ್ಜಿದಾರರ ಪರ ನ್ಯಾಯವಾದಿಗಳು
(ಕೆ. ಶ್ರೀನಿವಾಸ ಹೆಗ್ಡೆ)

ಸ್ಥಳ : ಮಣಿಪಾಲ
ದಿನಾಂಕ : 23.06.2026

ಸಾರ್ವಜನಿಕ ಪ್ರಕಟಣೆ
ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯ, ರಜತಾದ್ರಿ, ಉಡುಪಿ

MAG No.06/2025

ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಯೋಜನೆ ವಿಭಾಗ, ಕವಿಪ್ರನಿನಿ, ಉಡುಪಿ **ಅರ್ಜಿದಾರರು**

ವಿರುದ್ಧ

1. ಪ್ರೇಮಾ ಎ.ಕೆ. ಬಾಯರಿ ಮತ್ತು ಇತರರು **ಎದುರುದಾರರು**

ರವರಿಗೆ

1. ಪ್ರೇಮಾ ಎ.ಕೆ. ಬಾಯರಿ ಬಿನ್. ದಿ. ರುಕ್ಮಿಣಿ ಭಟ್
2. ವೆಂಕಟರಮಣ ಭಟ್ ಬಿನ್. ದಿ. ರುಕ್ಮಿಣಿ ಭಟ್
3. ಸೀತಾರಾಮ ಭಟ್ ಬಿನ್. ದಿ. ರುಕ್ಮಿಣಿ ಭಟ್
4. ಹೇಮಲತಾ ಎಸ್. ಭಟ್ ಬಿನ್. ದಿ. ರುಕ್ಮಿಣಿ ಭಟ್
5. ಸುಜ್ಯೋತಿ ಭಾಗವತ್ ಬಿನ್. ದಿ. ರುಕ್ಮಿಣಿ ಭಟ್
6. ಶ್ರೀರಾಮ ಭಟ್ ಬಿನ್. ದಿ. ರುಕ್ಮಿಣಿ ಭಟ್

ಭಂಡಾರ ವಿನಾಯಕ ದೇವಸ್ಥಾನದ ಹತ್ತಿರ, ಹೆಗ್ಗುಂಜೆ ಗ್ರಾಮ, ಮಂದಾರ್ತಿ ಅಂಚೆ, ಬ್ರಹ್ಮಾವರ ತಾಲ್ಲೂಕು.

ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ನಿಮ್ಮ ವಿರುದ್ಧ ಹಾಕಿದ ಮೇಲಿನ ದಾವೆಯು ದಿನಾಂಕ **18.07.2026 ರಂದು ಅಪರಾಹ್ನ 3:00 ಗಂಟೆಗೆ** ಇರಿಸಲಾಗಿದೆ. ನೀವು ಆ ದಿನಾಂಕದಂದು ಸ್ವತಃ/ವಕೀಲರ ಮೂಲಕ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ತಪ್ಪಿದಲ್ಲಿ, ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಮಾನ್ಯ ಜಿಲ್ಲಾಧಿಕಾರಿಗಳ ಪರವಾಗಿ
ಉಡುಪಿ ಜಿಲ್ಲೆ
ಅರ್ಜಿದಾರರ ಪರ ನ್ಯಾಯವಾದಿಗಳು
(ಕೆ. ಶ್ರೀನಿವಾಸ ಹೆಗ್ಡೆ)

ಸ್ಥಳ : ಮಣಿಪಾಲ
ದಿನಾಂಕ : 23.06.2026

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ.
ಇ–ಮೇಲ್: eemimandya@gmail.com

ಸಂಖ್ಯೆ:ಕಾ.ಇಂ/ಸ.ನೀ/ಮಂ/ತಾಂಶಾ/ಸ.ಇಂ–1/ಟೆ.ಪ್ರ–3/2026–27/1503 ದಿನಾಂಕ:29.06.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: 03/2026–27 ದಿನಾಂಕ: 29.06.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ–571401 ಇವರು ಕೆಪಿಪಿ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು–1,2,3& 4 ರ ಪ್ರಕಾರ “ಕೆಪಿಪಿ” –ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಆಧಾರದ ಮೇಲೆ ಒಟ್ಟು 27 ಸಂಖ್ಯೆ ಕಾಮಗಾರಿಗಳು ಮತ್ತು “ಕೆಪಿಪಿ” ಮುಖಾಂತರ ನೇರ ಹರಾಜು ಪ್ರಕ್ರಿಯೆ ಮುಖಾಂತರ 2 ಕೆರೆಗಳ ಮೀನು ಪಾಶುವಾರು ಹಕ್ಕು ವಿಲೇವಾರಿ (27–ಕಾಮಗಾರಿಗಳು ಮತ್ತು 2–ಮೀನು ಪಾಶುವಾರು ಹಕ್ಕು ವಿಲೇವಾರಿ) ಟೆಂಡರ್ ಅನ್ನು ಟೆಂಡರಿಗಿಟ್ಟ ಅಂದಾಜು ಮೊತ್ತ ಕನಿಷ್ಠ ರೂ.66528.00 ಗಳಿಂದ ಗರಿಷ್ಟ ರೂ:490.00 ಲಕ್ಷಗಳವರೆಗೆ ಅಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

ಕ್ರ ಸಂ	ಲೆಕ್ಕ ಶೀರ್ಷಿಕೆ	ಕಾಮಗಾರಿಗಳ ಸಂಖ್ಯೆ	ಬಿಡ್ ಅಪ್‌ಲೋಡ್ ಮಾಡಲು ಕಡೆಯ ದಿನಾಂಕ & ಸಮಯ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ
1	4702– ಎಸ್.ಸಿ.ಪಿ/ ಟಿ.ಎಸ್.ಪಿ–ಕೊಳವೆಭಾವಿ	12	23.07.2026 17–29 ಗಂಟೆವರೆಗೆ	24.07.2026 17–30 ಗಂಟೆ	27.07.2026 17–30 ಗಂಟೆ
		2	18.07.2026 17–29 ಗಂಟೆವರೆಗೆ	20.07.2026 17–30 ಗಂಟೆ	21.07.2026 17–30 ಗಂಟೆ
2	4702– ಅಣೆಕಟ್ಟು ಮತ್ತು ಪಿಕಪ್ ಕಾಮಗಾರಿಗಳು	3	18.07.2026 17–29 ಗಂಟೆವರೆಗೆ	20.07.2026 17–30 ಗಂಟೆ	21.07.2026 17–30 ಗಂಟೆ
		1	23.07.2026 17–29 ಗಂಟೆವರೆಗೆ	24.07.2026 17–30 ಗಂಟೆ	27.07.2026 17–30 ಗಂಟೆ
		1	13.08.2026 17–29 ಗಂಟೆವರೆಗೆ	14.08.2026 17–30 ಗಂಟೆ	17.08.2026 17–30 ಗಂಟೆ
3	4702– ಡಿ.ಪಿ.ಆರ್.ಕಾಮಗಾರಿಗಳು	5	23.07.2026 17–29 ಗಂಟೆವರೆಗೆ	24.07.2026 17–30 ಗಂಟೆ	27.07.2026 17–30 ಗಂಟೆ

“ಕೆಪಿಪಿ” ಮುಖಾಂತರ ನೇರ ಹರಾಜು ಪ್ರಕ್ರಿಯೆ ಮುಖಾಂತರ ಕೆರೆಗಳ ಮೀನು ಪಾಶುವಾರು ಹಕ್ಕು ವಿಲೇವಾರಿ

ಕ್ರ ಸಂ : 01. ಹಕ್ಕು ವಿಲೇವಾರಿ ವಿವರ : ಮಂಡ್ಯ ಜಿಲ್ಲೆ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕು ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಇ–ಟೆಂಡರ್ ಮುಖೇನ ಮೀನುಪಾಶುವಾರು ಹಕ್ಕು ವಿತರಣೆ (1) ಮದ್ದೂರು ತಾಲ್ಲೂಕು ಕೂಳಗೆರೆ ಕೆರೆ (2) ಮಳವಳ್ಳಿ ತಾಲ್ಲೂಕು ನಿಟ್ಟೂರು ಕೆರೆ. ಒಟ್ಟು ಕೆರೆಗಳು : 02. ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಬಿಡ್ಡುದಾರರು ದೃಡೀಕರಿಸಲು ಕಡೆಯ ದಿನಾಂಕ & ಸಮಯ : ದಿನಾಂಕ : 20.07.2026, 17.29 ಗಂಟೆವರೆಗೆ. ಹರಾಜು ಪ್ರಕ್ರಿಯೆ ಮಾಡಲು ನಿಗಧಿಯಾದ ದಿನಾಂಕ & ಸಮಯ : **ಹರಾಜು ಪ್ರಕ್ರಿಯೆ ಪ್ರಾರಂಭ: 21.07.2026, 10.00 ಗಂಟೆಯಿಂದ, ಮುಕ್ತಾಯ : ದಿ:23.07.2026, 17.30 ಗಂಟೆಯವರೆಗೆ.** ಹರಾಜು ಬಿಡ್ ತೆರೆಯುವ ದಿನಾಂಕ & ಸಮಯ : ದಿ.24.07.2026, 17–30 ಗಂಟೆ.

ಗುತ್ತಿಗೆದಾರರು ಟೆಂಡರ್‌ನ ನಿಗದಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಅವಶ್ಯ ದಾಖಲೆಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಮೇಲ್ಕಂಡ ಕಾಲಂಗಳನ್ವಯ ಬಿಡ್ಡನ್ನು ಅಪ್ ಲೋಡ್ ಮಾಡಬಹುದಾಗಿದೆ. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ದಾಖಲೆ/ಮಾಹಿತಿಯನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ‘ವೇಳೆಯಲ್ಲಿ ಪಡೆಯ ಬಹುದು. ಮಂಡ್ಯ ಜಿಲ್ಲಾ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆ/ಜಲಸಂಪನ್ಮೂಲಗಳ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ‘ವೇಳೆಯಲ್ಲಿ ಪಡೆಯಬಹುದು.ಅಥವಾ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದು. (www.kppp.karnataka.gov.in) ಕೆರೆ/ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ–ಟೆಂಡರ್ ಮೂಲಕ ವಿಲೇವಾರಿ ಮಾಡಲು ಇ–ಟೆಂಡರ್ ದಸ್ತಾವೇಜು ಅನ್ನು ಈ ಕಚೇರಿಯಲ್ಲಿ ಅಥವಾ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದು. (www.kppp.karnataka.gov.in). ವಿ.ಸೂ: ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ರವರು ಕಾಯ್ದಿರಿಸಿರುತ್ತಾರೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು “ಕೆಪಿಪಿಪಿ” – ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ/ದಿನಾಂಕಗಳನ್ನು ಮುಂದೂಡುವ ಬಗ್ಗೆ ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳನ್ನು ಪ್ರತಿ ಇಂಡೆಂಟ್‌ಗೆ ಪ್ರತ್ಯೇಕವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಪ್ರತ್ಯೇಕ ಪತ್ರಿಕೆ ಪ್ರಕಟಣೆ ನೀಡಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜನಿಯರ್, ಸ.ನೀ. ಮತ್ತು ಅಂ.ಅ. ವಿಭಾಗ, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆವಿಎಂಸಿ&ಎ/239/2025–26

ಕರ್ನಾಟಕ ಸರ್ಕಾರ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
NRLM–ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
pddrdackm@gmail.com

ZP-CKM-17011(11)/35/2026-PD-(DRDA)-(E-55919) ದಿನಾಂಕ : 24/06/2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಕಛೇರಿಯ NRLM–ವಿಭಾಗದ ಜಿಲ್ಲಾ & ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಕ್ಕೆ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು–(DPM), ಜಿಲ್ಲಾ ವ್ಯವಸ್ಥಾಪಕರು–(S&E), ಜಿಲ್ಲಾ ವ್ಯವಸ್ಥಾಪಕರು–(ಜೀವನೋಪಾಯ–Livestock), ಜಿಲ್ಲಾ MIS ಸಂಯೋಜಕರು, ಕಛೇರಿ ಸಹಾಯಕರು, ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು, ತಾಲ್ಲೂಕು ವ್ಯವಸ್ಥಾಪಕರು–(ಕೃಷಿ ಜೀವನೋಪಾಯ), ತಾಲ್ಲೂಕು ವ್ಯವಸ್ಥಾಪಕರು–(ಕೃಷಿಯೇತರ ಜೀವನೋಪಾಯ), ವಲಯ ಮೇಲ್ವಿಚಾರಕರು–(IBCB), ವಲಯ ಮೇಲ್ವಿಚಾರಕರು–(Skill), ದತ್ತಾಂಶ ನಮೂದಕರ (DEO) ಸೇವೆಯನ್ನು ಹೊರಸಂಪನ್ಮೂಲದಿಂದ ಪಡೆಯುವ ಬಗ್ಗೆ.

ಅಂದಾಜು ವೇಳಾಪಟ್ಟಿ

1	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ZP-CKM-17011(11)/35/2026-PD(DRDA)-(E-55919) ದಿನಾಂಕ : 24/06/2026
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಅಂದಾಜು 1,96,00,000/– [ಅಂದಾಜು ಒಂದು ಕೋಟಿ ತ್ತೊಂಬತ್ತ ಆರು ಲಕ್ಷ ಮಾತ್ರ]
3	ಇ.ಎಂ.ಡಿ ನಿಗದಿಪಡಿಸಿರುವ ಮೊತ್ತ	ರೂ. 2,94,000/– [ಎರಡು ಲಕ್ಷದ ತ್ತೊಂಬತ್ತ ನಾಲ್ಕು ಸಾವಿರ]
4	E-Procurement ಪೋರ್ಟಲ್‌ನಲ್ಲಿ ದಸ್ತಾವೇಜುಗಳನ್ನು ಪರಿಶೀಲಿಸಬಹುದಾದ ದಿನಾಂಕ	ದಿನಾಂಕ : 29/06/2026 ರಿಂದ 28/07/2026
5	E-Procurement ಪೋರ್ಟಲ್‌ನಲ್ಲಿ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ	ದಿನಾಂಕ : 28/07/2026 ರಂದು ಸಂಜೆ 5.30 ಗಂಟೆಯೊಳಗೆ
6	E-Procurement ಪೋರ್ಟಲ್‌ನಲ್ಲಿ ಟೆಂಡರ್ ದಾಖಲಾತಿಗಳನ್ನು ಮತ್ತು ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ	ದಿನಾಂಕ : 06/08/2026 ರ ಬೆಳಿಗ್ಗೆ 11:30 ಗಂಟೆ (ಸ್ಥಳ ಮತ್ತು ದಿನಾಂಕ, ಸಮಯ ಬದಲಾವಣೆಗೆ ಒಳಪಟ್ಟಿರುತ್ತದೆ)
7	E-Procurement ಪೋರ್ಟಲ್‌ನ ಟೆಂಡರ್ ಆರ್ಥಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ	ದಿನಾಂಕ: 06/08/2026 ರ ಬೆಳಿಗ್ಗೆ 11.30 ಗಂಟೆಗೆ ಅಥವಾ ಸಾಧ್ಯವಾಗದಿದ್ದಲ್ಲಿ ತಾಂತ್ರಿಕ ದಾಖಲಾತಿಗಳ ಪರಿಶೀಲನೆ ನಂತರದಲ್ಲಿ ದಿನಾಂಕವನ್ನು ತಿಳಿಸಲಾಗುವುದು
8	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು. ದೂರವಾಣಿ ಸಂಖ್ಯೆ : 9480860002
		Web site: www.kppp.karnataka.gov.in

ಸಹಿ/– **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು**

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2026–27/415 ದಿನಾಂಕ: 30/06/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2025–26 ನೇ ಸಾಲಿನ KKRDB ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **04–07–2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: kppp.karnataka.gov.in ನಲ್ಲಿರುವಂತೆ ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ: **04/07/2026** ಸಮಯ 10:00 ಗಂಟೆಯಿಂದ **18/07/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **04/07/2026** ಸಮಯ 16:00 ಗಂಟೆಯಿಂದ **18/07/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **20/07/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **23/07/2026** ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಸಹಿ/–ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/203/ಕೆಎಸ್‌ಎಂಸಿಎ/2026–27

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಪ್ರಜಾಸತ್ತಾತ್ಮಕ ಸರ್ಕಾರವು ಬಂಡವಾಳಗಾರರ ಕೈಗೊಂಬೆಯಾದರೆ ಇತರರು ಗುಲಾಮಗಿರಿಯಲ್ಲೇ ಸಾಯಬೇಕಾದೀತು.

–ಬಿ.ಆರ್. ಅಂಬೇಡ್ಕರ್

ಸಂಪಾದಕೀಯ

ಮಾದಕ ವಸ್ತು ಮುಕ್ತ ಕರ್ನಾಟಕ ಸಂಕಲ್ಪ ಸಾಲದು, ಪ್ರಯತ್ನ ಬೇಕು

ಮಾದಕ ವಸ್ತುಗಳ ಜಾಲದಿಂದ ರಾಜ್ಯವನ್ನು ಮುಕ್ತಗೊಳಿಸಲು ಸರ್ಕಾರ ಹಮ್ಮಿಕೊಂಡಿರುವ 'ಆಪರೇಷನ್ ರೈಸ್' ಕಾರ್ಯಕ್ರಮ ಮತ್ತು 'ಬೇಡ ಬ್ರೋ' ಹೆಸರಿನ ಅಭಿಯಾನ, ಸಕಾಲಿಕವಾದ ಹಾಗೂ ಸದಾಶಯದಿಂದ ಕೂಡಿದ ನಡೆಗಳಾಗಿವೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಭಾರಿ ಬೆಳವಣಿಗೆಯೊಂದಿಗೆ ಕರ್ನಾಟಕ ಇತ್ತೀಚಿನ ವರ್ಷಗಳಲ್ಲಿ ವಿಶ್ವಕ್ಕೆ ವ್ಯಾಪಕವಾಗಿ ತೆರೆದುಕೊಂಡಿರುವುದು, ನಗರೀಕರಣದ ತೀವ್ರತೆ ಹಾಗೂ ವೇಗವಾಗಿ ಬದಲಾಗುತ್ತಿರುವ ಜೀವನಶೈಲಿಯು ಮಾದಕ ವಸ್ತುಗಳ ದಂಧೆಕೋರರಿಗೆ ಹೊಸ ಅವಕಾಶಗಳನ್ನು ಒದಗಿಸುತ್ತಿವೆ. ಕಳೆದ ಆರು ತಿಂಗಳ ಅವಧಿಯಲ್ಲಿ ₹130 ಕೋಟಿಗೂ ಹೆಚ್ಚು ಮೌಲ್ಯದ ಮಾದಕ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಬೆಂಗಳೂರು ಮಹಾನಗರದ 9 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಇತ್ತೀಚೆಗೆ ಪೊಲೀಸರು ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ₹25.23 ಕೋಟಿ ಮೌಲ್ಯದ ವಿವಿಧ ರೀತಿಯ ಮಾದಕ ವಸ್ತುಗಳು ಹಾಗೂ ಇ–ಸಿಗರೇಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಸಿಂಥೆಟಿಕ್ ಡ್ರಗ್ಸ್ ತಯಾರಿಕಾ ಘಟಕಗಳು ಪತ್ತೆಯಾಗಿರುವುದು, ಡ್ರಗ್ಸ್‌ಗಳ ಅಕ್ರಮ ಉತ್ಪಾದನಾ ಕೇಂದ್ರವಾಗಿಯೂ ರಾಜ್ಯ ರೂಪುಗೊಳ್ಳುತ್ತಿರುವ ಆತಂಕಕಾರಿ ಬೆಳವಣಿಗೆಯನ್ನು ಸೂಚಿಸುವಂತಿದೆ. ಮಾದಕ ವಸ್ತುಗಳ ಜಾಲ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಸಕ್ರಿಯವಾಗಿದ್ದು, ಆ ದಂಧೆಗೆ ಕಡಿವಾಣ ಹಾಕುವ ರೂಪದಲ್ಲಿ ಸರ್ಕಾರದ ಹೊಸ ಕಾರ್ಯಕ್ರಮ ಮತ್ತು ಅಭಿಯಾನಕ್ಕೆ ವಿಶೇಷ ಮಹತ್ವವಿದೆ.

ನಿರಾಕರಣೆ (ರೆಫ್ಯೂಸ್), ಮಾಹಿತಿ ನೀಡುವಿಕೆ (ಇನ್‌ಫಾರ್ಮ್), ಬೆಂಬಲ ನೀಡುವುದು (ಸಪೋರ್ಟ್) ಹಾಗೂ ಸಬಲೀಕರಣ (ಎಂಪವರ್) ಎನ್ನುವ ನಾಲ್ಕು ತತ್ತ್ವಗಳ ಮೇಲೆ ರೂಪುಗೊಂಡಿರುವ 'ಆಪರೇಷನ್ ರೈಸ್', ಮಾದಕ ವಸ್ತುಗಳ ಮಾರಾಟವನ್ನು ಸಂಘಟಿತ ಕಾರ್ಯತಂತ್ರದ ಮೂಲಕ ನಿಯಂತ್ರಿಸುವ ಉದ್ದೇಶ ಹೊಂದಿದೆ. ಶಿಕ್ಷಣ ಮತ್ತು ಸಮುದಾಯದ ಸಹಭಾಗಿತ್ವದ ಮೂಲಕ ಮಾದಕ ವ್ಯಸನವನ್ನು ತಡೆಗಟ್ಟುವ ಉದ್ದೇಶವನ್ನು 'ಬೇಡ ಬ್ರೋ' ಅಭಿಯಾನ ಹೊಂದಿದೆ. 2028ರ ವೇಳೆಗೆ 'ಡ್ರಗ್ಸ್ ಮುಕ್ತ ಕರ್ನಾಟಕ' ಸಾಕಾರಗೊಳ್ಳುವ ಆಶಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರದಾಗಿದೆ. ಮಾದಕ ವಸ್ತುಗಳ ಜಾಲವು ಪ್ರಸ್ತುತ ಕಾನೂನು ಸುವ್ಯವಸ್ಥೆಯ ಸಮಸ್ಯೆ ಮಾತ್ರವಾಗಿರದೆ, ಸಾಮಾಜಿಕ ಮತ್ತು ಆರ್ಥಿಕ ಬಿಕ್ಕಟ್ಟೂ ಆಗಿದೆ. ಮುಖ್ಯವಾಗಿ, ಯುವಜನರ ಆರೋಗ್ಯಕ್ಕೆ ಕಂಟಕವಾಗಿರುವ ಈ ದಂಧೆ, ಕೌಟುಂಬಿಕ ವ್ಯವಸ್ಥೆ ಹಾಗೂ ಸಾಮಾಜಿಕ ಸ್ವಾಸ್ಥ್ಯವನ್ನು ಹದಗೆಡಿಸುವ ಸಂಕೀರ್ಣ ಬಿಕ್ಕಟ್ಟಾಗಿದೆ. ಇಂತಹ ಸಮಸ್ಯೆಯ ವಿರುದ್ಧದ ಹೋರಾಟ ಸಂಘಟಿತ ನೆಲೆಯಲ್ಲಿ ನಡೆದಾಗಷ್ಟೇ ನಿರೀಕ್ಷಿತ ಪರಿಣಾಮವನ್ನು ಅಪೇಕ್ಷಿಸಬಹುದು. ಮಾದಕ ವಸ್ತುಗಳ ಜಾಲ ವಿಶ್ವವ್ಯಾಪಿಯಾದುದು. ಹಾಗಾಗಿ, ಈ ಹೋರಾಟದ ಯಶಸ್ಸು ವಿವಿಧ ರಾಜ್ಯಗಳ ಪೊಲೀಸರು, ಕೇಂದ್ರ ತನಿಖಾ ಸಂಸ್ಥೆಗಳೊಂದಿಗೆ ಕರ್ನಾಟಕ ಪೊಲೀಸ್ ಇಲಾಖೆಯು ಸಾಧಿಸಬೇಕಾದ ನಿರಂತರ ಸಮನ್ವಯವನ್ನು ಅವಲಂಬಿಸಿದೆ.

> ಮಾದಕ ವಸ್ತುಗಳ ಜಾಲದಿಂದ ರಾಜ್ಯವನ್ನು ಮುಕ್ತಗೊಳಿಸುವ ಸರ್ಕಾರದ ಸದಾಶಯ, ಅನುಷ್ಠಾನದ ಇಚ್ಛಾಶಕ್ತಿಯಲ್ಲೂ ವ್ಯಕ್ತವಾಗಬೇಕಿದೆ. ಈ ಹೋರಾಟದಲ್ಲಿ ಸಮಾಜದ ಸಹಭಾಗಿತ್ವವೂ ಅಗತ್ಯ.

ಸರ್ಕಾರದ ಬಹುತೇಕ ಕಾರ್ಯಕ್ರಮಗಳು ಘೋಷಣೆಗಳಲ್ಲಿ, ಜಾಹೀರಾತುಗಳಲ್ಲಿ ಪ್ರಖರವಾಗಿ ಕಾಣಿಸಿಕೊಂಡು, ಅನುಷ್ಠಾನದಲ್ಲಿ ಸೊರಗುತ್ತವೆ. ಮಾದಕ ವಸ್ತು ಜಾಲವನ್ನು ನಿಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಈ ಹಿಂದೆಯೂ ಕಾರ್ಯಕ್ರಮಗಳು ನಡೆದಿವೆ; ಪೊಲೀಸರ ದಿಢೀರ್ ದಾಳಿ, ಬಂಧನಗಳು, ಅಪಾರ ಪ್ರಮಾಣದ ಮಾದಕ ವಸ್ತುಗಳ ವಶಪಡಿಸಿಕೊಳ್ಳುವಿಕೆಯಂತಹ ವಿದ್ಯಮಾನಗಳು ಆಗಾಗ ನಡೆಯುತ್ತಲೇ ಇವೆ. ಆದರೆ, ಈ ಚಟುವಟಿಕೆಗಳಲ್ಲಿ ನಿರಂತರತೆ ಇಲ್ಲದ ಕಾರಣದಿಂದಾಗಿ, ಮಾದಕ ವಸ್ತುಗಳ ದಂಧೆಯ ಕಬಂಧ ಬಾಹುಗಳ ಚಾಚುವಿಕೆಯ ವ್ಯಾಪ್ತಿ ದೊಡ್ಡದಾಗುತ್ತಲೇ ಇದೆ. ಸ್ಥಳೀಯ ಪೊಲೀಸರ ನೆರವಿಲ್ಲದೆ ಇಂಥ ದಂಧೆ ನಡೆಯುವುದು ಸಾಧ್ಯವಿಲ್ಲ. ಹಾಗಾಗಿ, ಮಾದಕ ವಸ್ತು ವಿರೋಧಿ ಜಾಗೃತಿ ಆಂದೋಲನ ಪೊಲೀಸ್ ಇಲಾಖೆಯಿಂದಲೇ ಆರಂಭವಾಗಬೇಕಿದೆ. 'ಆಪರೇಷನ್ ರೈಸ್' ಹಾಗೂ 'ಬೇಡ ಬ್ರೋ' ಚಟುವಟಿಕೆಗಳು ಶಾಶ್ವತ ಆದ್ಯತೆಯಾಗುವಂತೆ ಸರ್ಕಾರ ಕ್ರಮ ವಹಿಸಬೇಕಾಗಿದೆ. ಶಾಲೆ ಮತ್ತು ಕಾಲೇಜುಗಳಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಿದರೆ ಸಾಲದು; ಈ ಕಾರ್ಯಕ್ರಮಗಳು ಶೈಕ್ಷಣಿಕ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ವ್ಯಸನದಿಂದ ಹೊರಬರಲಿಕ್ಕೆ ಚಿಕಿತ್ಸೆ ಮತ್ತು ಸಮಾಲೋಚನೆ ದೊರೆಯುವಂತಾಗಬೇಕು. ಗುಣಮಟ್ಟದ ಪುನರ್ವಸತಿ ಕೇಂದ್ರಗಳನ್ನು ಬಲಪಡಿಸುವುದು ಮತ್ತು ಸಂತ್ರಸ್ತರಿಗೆ ಹಾಗೂ ಅವರ ಕುಟುಂಬಗಳಿಗೆ ಸಮಾಲೋಚನಾ ಸೇವೆಗಳನ್ನು ಒದಗಿಸುವುದು ಅಭಿಯಾನದ ಭಾಗವಾಗಬೇಕು. ಈ ಹೋರಾಟ ಸರ್ಕಾರಕ್ಕೆ ಸೀಮಿತವಾಗದೆ, ಸಮಾಜವೂ ನಿರ್ಣಾಯಕ ಪಾತ್ರ ವಹಿಸಬೇಕಾಗಿದೆ.

ಪರಿಹಾರಕ್ಕೆ ಮಾನದಂಡ ಏನು?

ರಸ್ತೆ ಅಪಘಾತಕ್ಕೆ ತುತ್ತಾದ ವ್ಯಕ್ತಿಯ ಅಂಗವೈಕಲ್ಯದ ಪ್ರಮಾಣವನ್ನಷ್ಟೆ ಪರಿಗಣಿಸದೆ ಆತನ ವೃತ್ತಿ ಮತ್ತು ಅದರಿಂದ ಬರುತ್ತಿದ್ದ ಆದಾಯಕ್ಕೆ ಆದ ನಷ್ಟ ಪರಿಗಣಿಸಿ ಪರಿಹಾರವನ್ನು ಲೆಕ್ಕಾಚಾರ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಭೂಸ್ವಾಧೀನ ಪ್ರಕರಣಗಳಲ್ಲಿಯೂ ಇದೇ ಮಾನದಂಡ ಅನ್ವಯಿಸಿ ಪರಿಹಾರ ನಿಗದಿಪಡಿಸಬೇಕು.

ಕೆ.ಟಿ. ತಿಮ್ಮಾರೆಡ್ಡಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಪ್ರಾಣಪ್ರತಿಷ್ಠೆ ನಡೆದು ಎರಡೂವರೆ ವರ್ಷಗಳಲ್ಲಿ ಅಮಿತ್ ಶಾ ಅವರು ಒಮ್ಮೆಯಾದರೂ ರಾಮ ಮಂದಿರಕ್ಕೆ ಭೇಟಿ ನೀಡಿಲ್ಲ. ಇದೇ ಅವಧಿಯಲ್ಲಿ ತಮ್ಮ ಭಾಷಣಗಳು ಮತ್ತು ಸಂದರ್ಶನಗಳಲ್ಲಿ 42ಕ್ಕೂ ಹೆಚ್ಚು ಬಾರಿ ಶ್ರೀರಾಮ ಹಾಗೂ ಮಂದಿರದ ಪ್ರಸ್ತಾಪ ಮಾಡಿದ್ದಾರೆ. ರಾಮ ಮತ್ತು ಮಂದಿರದ ಹೆಸರಿನಲ್ಲಿ ಮತಗಳನ್ನು ಕೂಡ ಕೋರಿದ್ದಾರೆ.

ಅರವಿಂದ ಕೇಜ್ರಿವಾಲ್, ಮಾಜಿ ಮುಖ್ಯಮಂತ್ರಿ, ದೆಹಲಿ

25 ವರ್ಷಗಳ ಹಿಂದೆ

ಸೋಮವಾರ, 2-7-2001

• ವಜಾಕ್ಕೆ ಮುನ್ನವೇ ಫಾತಿಮಾ ಬೀವಿ ರಾಜೀನಾಮೆ

ನವದೆಹಲಿ, ಜುಲೈ 1– ತಮ್ಮನ್ನು ವಜಾ ಮಾಡಲು ಕೇಂದ್ರ ಸಚಿವ ಸಂಪುಟ ನಿರ್ಧರಿಸಿದ ಹಿನ್ನೆಲೆಯಲ್ಲಿ ತಮಿಳುನಾಡಿನ ರಾಜ್ಯಪಾಲರಾದ ಫಾತಿಮಾ ಬೀವಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಎಂ. ಕರುಣಾನಿಧಿ ಮತ್ತು ಇಬ್ಬರು ಕೇಂದ್ರ ಸಚಿವರ ಬಂಧನದ ಸಂದರ್ಭದಲ್ಲಿ ಸಾಂವಿಧಾನಿಕ ಹೊಣೆಗಾರಿಕೆ ನಿರ್ವಹಿಸಲು ಫಾತಿಮಾ ಬೀವಿ ವಿಫಲಗೊಂಡಿದ್ದಾರೆ ಎಂಬ ತೀರ್ಮಾನಕ್ಕೆ ಬಂದಿರುವ ಕೇಂದ್ರ ಸರ್ಕಾರ, ಅವರನ್ನು ವಜಾಗೊಳಿಸಲು ಈ ಮೊದಲು ನಿರ್ಧರಿಸಿತ್ತು. ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅಧ್ಯಕ್ಷತೆಯಲ್ಲಿ ತುರ್ತುಸಭೆ ಸೇರಿದ್ದ ಕೇಂದ್ರ ಸಂಪುಟವು, ಈ ನಿರ್ಣಯವನ್ನು ರಾಷ್ಟ್ರಪತಿ ಅವರಿಗೆ ಶಿಫಾರಸು ಮಾಡಿತು. ರಾಷ್ಟ್ರಪತಿ ಅವರ ಆದೇಶಕ್ಕೆ ಕಾಯದೆ ಫಾತಿಮಾ ಬೀವಿ ರಾಜೀನಾಮೆ ನೀಡಿದ್ದಾರೆ.

• ಸಕ್ಕರೆ ಆಮದಿಗೆ ಪಾಕ್ ನಿಷೇಧ: ಏಕಪಕ್ಷೀಯ ನಿರ್ಧಾರ

ಬೆಂಗಳೂರು, ಜುಲೈ 1– ಭಾರತದ ಸಕ್ಕರೆ ಆಮದಿನ ಮೇಲಿನ ನಿಷೇಧ ಮುಂದುವರಿಸುವುದಾಗಿ ಪಾಕಿಸ್ತಾನ ಹೇಳಿರುವುದು ಸರಿಯಲ್ಲ ಎಂದು ಕೇಂದ್ರ ಆಹಾರ ಮತ್ತು ಪೂರೈಕೆ ರಾಜ್ಯ ಸಚಿವ ವಿ. ಶ್ರೀನಿವಾಸ ಪ್ರಸಾದ್ ಅಭಿಪ್ರಾಯಪಟ್ಟರು.

75 ವರ್ಷಗಳ ಹಿಂದೆ

ಸೋಮವಾರ, 2-7-1951

• ಎಣ್ಣೆ ಕೇಂದ್ರ ಇಪ್ಪತ್ತು ದಿನಗಳಲ್ಲಿ ಬಂದ್

ಟೆಹರಾನ್ ಜುಲೈ 1– ಎಣ್ಣೆ ಕಂಪನಿಯ ಉತ್ಪನ್ನ ಇದೇ ರೀತಿ ಮುಂದುವರಿದರೆ ಇಪ್ಪತ್ತು ದಿನಗಳಲ್ಲಿ ಶುದ್ಧಿ ಕೇಂದ್ರವನ್ನು ಮುಚ್ಚಬೇಕಾದೀತು ಎಂದು ಸಂಸ್ಥೆಯ ವ್ಯಕ್ತಿಯೊಬ್ಬರು ಇಂದು ಸಾರಿದರು. ಎಣ್ಣೆ ದಾಸ್ತಾನಿಗೆ ಇಂದು ಇರುವ ವ್ಯವಸ್ಥೆಯಲ್ಲಿ ಎಲ್ಲ ಸಂಗ್ರಹಗಳೂ ತುಂಬಿ ಶುದ್ಧಿ ಕೇಂದ್ರವನ್ನು ಮುಚ್ಚಬೇಕಾಗುವುದು ಎಂಬುದು ಇವರ ಹೇಳಿಕೆ.

ಪಶ್ಚಿಮ ಏಷ್ಯಾ: ಶಾಂತಿ ಮರೀಚಿಕೆ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಮೆರಿಕ ಮತ್ತು ಇರಾನ್‌ನ ನಾಯಕರು ಎರಡು ವಾರಗಳ ಹಿಂದೆ ಯುದ್ಧವನ್ನು ಕೊನೆಗೊಳಿಸಲು ಮತ್ತು ದೀರ್ಘಕಾಲೀನ ಪರಮಾಣು ಮಾತುಕತೆಗಳಿಗೆ ಅಡಿಪಾಯ ಹಾಕಲು 60 ದಿನಗಳ ಕದನ ವಿರಾಮದ ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದರಷ್ಟೇ. 14 ಅಂಶಗಳನ್ನು ಒಳಗೊಂಡಿದ್ದ, 'ಇಸ್ಲಾಮಾಬಾದ್ ಮೆಮೊರಂಡಮ್' ಎಂದು ಕರೆಯಲಾದ ಆ ಒಪ್ಪಂದದಿಂದ ತೈಲ ಬಿಕ್ಕಟ್ಟು ಕೊನೆಗೊಳ್ಳಬಹುದು ಎಂದು ಜಗತ್ತು ನಿಟ್ಟುಸಿರುಬಿಟ್ಟಿತ್ತು. ಆದರೆ, ಇದೀಗ ಮತ್ತೆ ಉದ್ವಿಗ್ನ ಸ್ಥಿತಿ!

ಹೊರ್ಮುಜ್ ಜಲಸಂಧಿಯನ್ನು ದಾಟುತ್ತಿದ್ದ ಅಮೆರಿಕದ ಹಡಗುಗಳ ಮೇಲೆ ಇರಾನ್ ದಾಳಿ ನಡೆಸಿದೆ ಎಂದು ಆರೋಪಿಸಿ ಅಮೆರಿಕ ಪ್ರತಿದಾಳಿಯನ್ನು ನಡೆಸಿದೆ. ಗಲ್ಫ್ ಪ್ರದೇಶದಲ್ಲಿರುವ ಅಮೆರಿಕದ ಸೇನಾ ನೆಲೆಗಳು ಮುಂದಿನ ದಿನಗಳಲ್ಲಿ 'ನರಕ ಸದೃಶ ಪರಿಸ್ಥಿತಿಯನ್ನು ಎದುರಿಸಲಿವೆ' ಎಂದು ಇರಾನ್ ಎಚ್ಚರಿಸಿದೆ. 'ಅಮೆರಿಕವನ್ನು ಕೆಣಕಿದರೆ ಇರಾನ್ ಅಸ್ತಿತ್ವವನ್ನು ಇಲ್ಲವಾಗಿಸುತ್ತೇವೆ' ಎಂದು ಅಮೆರಿಕದ ಅಧ್ಯಕ್ಷ ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. 60 ದಿನಗಳಲ್ಲಿ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಕ್ಕೆ ಆರಂಭದಲ್ಲೇ ವಿಘ್ನ ಎದುರಾಗಿದೆ.

ಇರಾನ್ ಮತ್ತು ಅಮೆರಿಕ ನಡುವಿನ ತಿಳಿವಳಿಕೆ ಪತ್ರದಲ್ಲಿನ (ಎಂಒಯು) ಪ್ರಮುಖ ಅಂಶಗಳು ಹೀಗಿವೆ: ಇರಾನ್ ಹಾಗೂ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳು ಲೆಬನಾನ್ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ನಡೆಸುತ್ತಿರುವ ಸೇನಾ ಕಾರ್ಯಾಚರಣೆಗಳನ್ನು ತಕ್ಷಣವೇ ನಿಲ್ಲಿಸಬೇಕು. ಅಮೆರಿಕ ಮತ್ತು ಇರಾನ್ ಪರಸ್ಪರ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು ಮತ್ತು ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಬಾರದು. ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದ ಕೂಡಲೇ ಇರಾನ್ ಮೇಲಿನ ನೌಕಾ ದಿಗ್ಬಂಧನವನ್ನು ಅಮೆರಿಕ ತೆರವುಗೊಳಿಸಬೇಕು. ಅದಕ್ಕೆ ಪ್ರತಿಯಾಗಿ ಹೊರ್ಮುಜ್ ಜಲಸಂಧಿಯ ಮೂಲಕ ವಾಣಿಜ್ಯ ಹಡಗುಗಳ ಸುರಕ್ಷಿತ, ಶುಲ್ಕರಹಿತ ಸಾಗಣೆಗೆ ಇರಾನ್ ವ್ಯವಸ್ಥೆ ಮಾಡಬೇಕು. ಅಮೆರಿಕ ಮತ್ತು ಇರಾನ್ ಗರಿಷ್ಠ 60 ದಿನಗಳ ಅವಧಿಯಲ್ಲಿ ಮಾತುಕತೆ ನಡೆಸಿ ಅಂತಿಮ ಒಪ್ಪಂದಕ್ಕೆ ಬದ್ಧವಾಗಬೇಕು. ಅಂತಿಮ ಒಪ್ಪಂದದ ಬಳಿಕ ಇರಾನ್‌ನ ಪುನರ್ ನಿರ್ಮಾಣ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಕನಿಷ್ಠ 300 ಬಿಲಿಯನ್ ಡಾಲರ್ ಮೌಲ್ಯದ ನಿರ್ಣಾಯಕ, ಪರಸ್ಪರ ಒಪ್ಪಿಗೆಯ ಯೋಜನೆಗಳನ್ನು ಅಮೆರಿಕ ಮತ್ತು ಪ್ರಾದೇಶಿಕ ಪಾಲುದಾರರು ಅಭಿವೃದ್ಧಿಪಡಿಸಬೇಕು.

ಇದರ ಜೊತೆಗೆ ಇರಾನ್ ಮೇಲೆ ಅಮೆರಿಕ ಮತ್ತು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ವಿಧಿಸಿರುವ ಎಲ್ಲ ಬಗೆಯ ದಿಗ್ಬಂಧನ, ಆಸ್ತಿ ಮುಟ್ಟುಗೋಲುಗಳನ್ನು ತೆರವುಗೊಳಿಸಬೇಕು. ಉಭಯ ರಾಷ್ಟ್ರಗಳೂ ಪರಸ್ಪರ ಸಮ್ಮತಿಯೊಂದಿಗೆ ಇರಾನ್ ಹೊಂದಿರುವ ಪುಷ್ಟೀಕರಿಸಿದ ಯುರೇನಿಯಂ ನಿರ್ವಹಿಸಲು ಮಾರ್ಗಸೂಚಿಯನ್ನು ಸಿದ್ಧಪಡಿಸಬೇಕು ಎಂಬ ಅಂಶಗಳು ಸೇರಿವೆ.

ಫ್ರಾನ್ಸ್‌ನಲ್ಲಿ ಜಿ–7 ಶೃಂಗಸಭೆಯಲ್ಲಿ ಭಾಗವಹಿಸಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಮತ್ತು ಇತರ ನಾಯಕರ ಸಮ್ಮುಖದಲ್ಲಿಯೇ ಈ ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಶಾಂತಿ ಸ್ಥಾಪನೆಯ ನಿಟ್ಟಿನಲ್ಲಿ ಅಮೆರಿಕ ಯಾವುದೇ ಮಾತುಕತೆಗೆ ಸಿದ್ಧವಿದೆ ಎಂಬ ಸಂದೇಶವನ್ನು ಅಮೆರಿಕದ ಮಿತ್ರ ರಾಷ್ಟ್ರಗಳಿಗೆ ರವಾನಿಸುವುದು ಅವರ ಉದ್ದೇಶವಿದ್ದಿರಬಹುದು.

ಅಮೆರಿಕ ಮತ್ತು ಇರಾನ್ ನಡುವಿನ ಮಧ್ಯಂತರ ಒಪ್ಪಂದ ಹಲವು ಪ್ರಶ್ನೆಗಳಿಗೆ ಎಡೆ ಮಾಡಿಕೊಟ್ಟಿದೆ. ಈ ತಿಳಿವಳಿಕೆ ಪತ್ರಕ್ಕೆ ಸಹಿಹಾಕುವ ಮೂಲಕ ಅಮೆರಿಕ ತನ್ನ ಮಿತ್ರರಾಷ್ಟ್ರಗಳಾದ ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳನ್ನು ಸಂಕಷ್ಟಕ್ಕೆ ದೂಡಿದೆಯೇ ಎಂಬ ಪ್ರಶ್ನೆ ಅದರಲ್ಲಿ ಪ್ರಮುಖವಾದುದು. ಏಕೆಂದರೆ, ಇಸ್ರೇಲ್ ಮೇಲೆ ದಾಳಿ ನಡೆಸಲು ಲೆಬನಾನ್ ಮೂಲದ ಹೆಜ್ಬುಲ್ಲಾ ಬಂಡುಕೋರರನ್ನು ಇರಾನ್ ಬಳಸುತ್ತಿದೆ. ಹೆಜ್ಬುಲ್ಲಾವನ್ನು ಗುರಿಯಾಗಿಸಿಕೊಂಡು ಇದುವರೆಗೆ ಇಸ್ರೇಲ್ ಅನೇಕ ದಾಳಿಗಳನ್ನು ನಡೆಸಿದೆ. ಇಸ್ರೇಲ್ ಮತ್ತು ಲೆಬನಾನ್ ನಡುವಿನ ಸಂಘರ್ಷಕ್ಕೆ ಮೂಲ ಕಾರಣ ಇದು. ಜೊತೆಗೆ ಅಮೆರಿಕ ಮತ್ತು ಇಸ್ರೇಲ್ ಕಳೆದ ಫೆಬ್ರುವರಿಯಲ್ಲಿ ಇರಾನ್ ಮೇಲೆ ಆಕ್ರಮಣಕ್ಕೆ ಇಳಿದಾಗ, ಕೊಲ್ಲಿ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡು ಇರಾನ್ ದಾಳಿ ನಡೆಸಿತ್ತು. ಆ ದಾಳಿ ಕೊಲ್ಲಿ ರಾಷ್ಟ್ರಗಳಲ್ಲಿದ್ದ ಅಮೆರಿಕದ ಸೇನಾನೆಲೆಗಳಿಗೆ ಸೀಮಿತವಾಗಿರಲಿಲ್ಲ. ಕೊಲ್ಲಿ ರಾಷ್ಟ್ರಗಳಿಗೆ ಆರ್ಥಿಕ ಆಘಾತ ನೀಡುವ ಉದ್ದೇಶವನ್ನು ಇರಾನ್ ಹೊಂದಿತ್ತು. ಆದರೆ, ಈ ತಿಳಿವಳಿಕೆ ಪತ್ರದಲ್ಲಿ ಹೆಜ್ಬುಲ್ಲಾ ಮತ್ತು ಇತರ ಉಗ್ರ ಸಂಘಟನೆಗಳನ್ನು ಇರಾನ್ ನಿಗ್ರಹಿಸಬೇಕು ಎಂಬ ಅಂಶ ಇಲ್ಲ. ಕೊಲ್ಲಿ ರಾಷ್ಟ್ರಗಳು ಅಥವಾ ಇಸ್ರೇಲ್ ಮೇಲೆ ಇರಾನ್ ಬೆಂಬಲಿತ ಉಗ್ರ ಸಂಘಟನೆಗಳು ದಾಳಿ ನಡೆಸಿದರೆ ಅದಕ್ಕೆ ಇರಾನ್ ಉತ್ತರದಾಯಿ ಎಂಬ ಉಲ್ಲೇಖ ಇಲ್ಲ!

> ಅಮೆರಿಕ ಮತ್ತು ಇರಾನ್ ನಡುವೆ ನಡೆದ 'ಇಸ್ಲಾಮಾಬಾದ್ ಮೆಮೊರಂಡಮ್'ನಿಂದ ಯುದ್ಧ ಕೊನೆಗೊಂಡು, ಶಾಂತಿ ನೆಲೆಸಬಹುದೆಂದು ವಿಶ್ವ ನಿರೀಕ್ಷಿಸಿತ್ತು. ಆದರೆ, ಎರಡು ದೇಶಗಳ ನಡುವಣ ಅಪನಂಬಿಕೆಗೆ ಪರಿಹಾರ ಇದ್ದಂತಿಲ್ಲ. ನಂಬಿಕೆ ಇಲ್ಲದ ಯಾವುದೇ ಒಪ್ಪಂದ ಊರ್ಜಿತಗೊಳ್ಳುವುದು ಕಷ್ಟ.

ಈ ಹಿಂದೆ ಇರಾನ್ ನಾಗರಿಕರು ಖಮೇನಿ ಆಡಳಿತದ ವಿರುದ್ಧ ಪ್ರತಿಭಟಿಸಲು ಬೀದಿಗಿಳಿದಾಗ ಅದನ್ನು ಅಮೆರಿಕ ಬೆಂಬಲಿಸಿತ್ತು. ಟ್ರಂಪ್ ಬಹಿರಂಗವಾಗಿಯೇ ಪ್ರತಿಭಟನಾಕಾರರ ಪರ ಅಮೆರಿಕ ಇರಲಿದೆ ಎಂದು ಹೇಳಿದ್ದರು. ಹಾಗಾಗಿ, ಪರಸ್ಪರ ಸಾರ್ವಭೌಮತೆಯನ್ನು ಗೌರವಿಸಬೇಕು ಮತ್ತು ಆಂತರಿಕ ವಿಷಯಗಳಲ್ಲಿ ಮಧ್ಯಪ್ರವೇಶಿಸಬಾರದು ಎಂಬ ಅಂಶ ಇರಾನ್‌ನಲ್ಲಿ ಆಡಳಿತವನ್ನು ಬದಲಿಸುವ ಪ್ರಯತ್ನಕ್ಕೆ ಅಮೆರಿಕ ಕೈ ಹಾಕಬಾರದು ಎಂಬುದನ್ನು ಹೇಳುತ್ತದೆ. ಹೊರ್ಮುಜ್ ಜಲಸಂಧಿಯಲ್ಲಿ ಸುಂಕ ರಹಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂಬ ಅಂಶವನ್ನು ಅಮೆರಿಕ ಮುಂದು ಮಾಡಿದೆ. ಆದರೆ, ಸುಂಕರಹಿತ ಸಂಚಾರ ಮುಂದಿನ 60 ದಿನಗಳಿಗೆ ಮಾತ್ರ ಸೀಮಿತವಾದದ್ದೇ ಅಥವಾ ನಂತರವೂ ಮುಂದುವರಿಯುತ್ತದೆಯೇ ಎಂಬ ಗೊಂದಲ ಇದೆ.

ಇರಾನ್‌ನ ಪುನರ್ ನಿರ್ಮಾಣಕ್ಕೆ ಯೋಜನೆ ರೂಪಿಸುವ ಮತ್ತು ಹಣವನ್ನು ಒದಗಿಸುವ ಬಾಧ್ಯತೆ ಯಾರದ್ದು ಎಂಬ ಪ್ರಶ್ನೆಗೆ ಉತ್ತರಿಸಿರುವ ಅಮೆರಿಕ– ತಾನು ಒಂದು ಬಿಡಿಗಾಸನ್ನೂ ನೀಡುವ ಅಗತ್ಯವಿಲ್ಲ, ಬದಲಿಗೆ ಪ್ರಾದೇಶಿಕ ಶಕ್ತಿಗಳಾದ ಕೊಲ್ಲಿ ರಾಷ್ಟ್ರಗಳು ವಿದ್ಯುತ್ ಸ್ಥಾವರ ಮತ್ತು ಇತರ ಯೋಜನೆಗಳ ಮೂಲಕ ಇರಾನ್ ಪುನರ್ ನಿರ್ಮಾಣಕ್ಕೆ ಸಹಕರಿಸುತ್ತವೆ ಎಂದಿದೆ. ಆದರೆ, ಸೌದಿ ಸೇರಿದಂತೆ ಇತರ ರಾಷ್ಟ್ರಗಳು ಈ ಮಾತನ್ನು ಪೂರ್ಣವಾಗಿ ಅನುಮೋದಿಸಿಲ್ಲ. ಈ ಹಿಂದೆ ಒಬಾಮ ಅವರ ಅವಧಿಯಲ್ಲಿ ಪರಮಾಣು ಒಪ್ಪಂದದ ಮಾತುಕತೆಗೆ ಒಂದೂವರೆ ವರ್ಷಕ್ಕೂ ಹೆಚ್ಚು ಸಮಯ ಹಿಡಿದಿತ್ತು. ಹಾಗಾಗಿ, 60 ದಿನಗಳಲ್ಲಿ ಈ ಸಂಕೀರ್ಣ ಸಂಘರ್ಷಕ್ಕೆ ಉತ್ತರ ಹುಡುಕಲು ಸಾಧ್ಯವೇ ಎಂಬುದು ಮತ್ತೊಂದು ಪ್ರಶ್ನೆ. ಮೇಲಾಗಿ ಅಣ್ವಸ್ತ್ರ ಹೊಂದುವ ಪ್ರಯತ್ನವನ್ನು ಇರಾನ್ ಕೈಬಿಡಬೇಕು ಎಂಬ ಸ್ಪಷ್ಟ ನಿಬಂಧನೆ ವಿಧಿಸದೇ, ವಿದೇಶಗಳಲ್ಲಿ ಇರಾನ್ ಹೊಂದಿರುವ ಆಸ್ತಿಗಳ ಮೇಲಿನ ಮುಟ್ಟುಗೋಲು ಮತ್ತು ಆರ್ಥಿಕ ದಿಗ್ಬಂಧನವನ್ನು ತೆರವುಗೊಳಿಸುವ ಅಂಶವನ್ನು ಮಾತ್ರ ಈ ತಿಳಿವಳಿಕೆ ಪತ್ರ ಒಳಗೊಂಡಿದೆ. ಈ ಮಧ್ಯಂತರ ಒಪ್ಪಂದದ ಕುರಿತು ಈಗಾಗಲೇ ಅಮೆರಿಕ ಮತ್ತು ಇಸ್ರೇಲ್‌ನಲ್ಲಿ ತೀವ್ರವಾದ ಟೀಕೆಗಳು ಕೇಳಿಬರುತ್ತಿವೆ. ಈ ತಿಳಿವಳಿಕೆ ಪತ್ರವನ್ನು ಅಮೆರಿಕದ ಶರಣಾಗತಿಯ ಪತ್ರ ಎಂದು ಬಣ್ಣಿಸಲಾಗುತ್ತಿದೆ.

ಅಮೆರಿಕದಲ್ಲಿ ಇದು ಮಧ್ಯಂತರ ಚುನಾವಣೆಯ ಕಾಲ. ಇಂಧನ ಬೆಲೆಯ ಏರಿಕೆ ಮತ್ತು ಹಣದುಬ್ಬರ ಅಮೆರಿಕದಲ್ಲಿ ಟ್ರಂಪ್ ಅವರ ಜನಪ್ರಿಯತೆಯನ್ನು ಕುಗ್ಗಿಸಿದೆ. ಹಾಗಾಗಿ, ಇಂಧನ ಬೆಲೆಯನ್ನು ತಗ್ಗಿಸಲು, ಆ ಮೂಲಕ ಅಮೆರಿಕದಲ್ಲಿ ಮಧ್ಯಂತರ ಚುನಾವಣೆಗಳನ್ನು ಗೆಲ್ಲಲು ಟ್ರಂಪ್ ಈ ಒಪ್ಪಂದಕ್ಕೆ ಮುಂದಾಗಿದ್ದಾರೆಯೆ ಎನ್ನುವ ಪ್ರಶ್ನೆಯಿದೆ. ಅಮೆರಿಕದ ಮಿಶಿಗನ್, ಪೆನ್ಸಿಲ್ವೇನಿಯಾ ಮತ್ತು ಜಾರ್ಜಿಯಾ ಸಂಸ್ಥಾನಗಳ ಮೇಲೆ ರಿಪಬ್ಲಿಕನ್ನರು ಹಿಡಿತ ಉಳಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಮಧ್ಯಂತರ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿದರೆ, ಟ್ರಂಪ್ ವಿರುದ್ಧದ ಆಸ್ತಿ ಹೆಚ್ಚಳದ ಆರೋಪವನ್ನು ಬಳಸಿ, ಅವರನ್ನು ದೋಷಾರೋಪಣೆ ಪ್ರಕ್ರಿಯೆಗೆ ಗುರಿ ಮಾಡಬಹುದು. ಹಾಗಾಗಿ, ಈ ಒಪ್ಪಂದದ ಹಿಂದೆ ಚುನಾವಣಾ ಲೆಕ್ಕಾಚಾರವೂ ಇದೆ.

ಈ ಸಂಘರ್ಷ ಇರಾನ್ ಮತ್ತು ಅಮೆರಿಕಕ್ಕೆ ಸೀಮಿತವಾದುದಲ್ಲ. ಇಸ್ರೇಲ್ ಈ ಸಂಘರ್ಷದ ಪ್ರಮುಖ ಪಾತ್ರಧಾರಿ. ಲೆಬನಾನ್ ಸಹ ಭೂಮಿಕೆ. ಉದ್ವಿಗ್ನತೆಯ ನಡುವೆ ಒಂದು ಆಶಾದಾಯಕ ಬೆಳವಣಿಗೆ ಎಂದರೆ, ಲೆಬನಾನ್ ಮತ್ತು ಇಸ್ರೇಲ್ ನಡುವೆ ಹಗೆತನವನ್ನು ಕೊನೆಗೊಳಿಸಿಕೊಳ್ಳುವ ಒಪ್ಪಂದ ಅಮೆರಿಕದ ಮಧ್ಯಸ್ಥಿಕೆಯಲ್ಲಿ ಏರ್ಪಟ್ಟಿದೆ. ಇಸ್ರೇಲ್ ಸೇನೆಯನ್ನು ಲೆಬನಾನ್‌ನಿಂದ ಹಿಂದಕ್ಕೆ ಕರೆಸಿಕೊಳ್ಳಬೇಕಾದರೆ ಹೆಜ್ಬುಲ್ಲಾವನ್ನು ನಿಗ್ರಹಿಸಬೇಕು ಎಂಬ ಷರತ್ತನ್ನು ಇಸ್ರೇಲ್ ವಿಧಿಸಿದೆ. ಹೆಜ್ಬುಲ್ಲಾವನ್ನು ನಾಶ ಮಾಡಲು ಇಸ್ರೇಲ್ ಪ್ರಯತ್ನಿಸಿದರೆ ಹೊರ್ಮುಜ್ ಬಿಕ್ಕಟ್ಟು ಬಗೆಹರಿಯಲಾರದು ಎಂದು ಇರಾನ್ ಹೇಳಿದೆ. ಹೀಗೆ ಒಂದಕ್ಕೆ ಮತ್ತೊಂದು ತಳಕು ಹಾಕಿಕೊಂಡಿರುವುದು ಬಿಕ್ಕಟ್ಟನ್ನು ಸಂಕೀರ್ಣಗೊಳಿಸಿದೆ.

ಅಮೆರಿಕ ಹಾಗೂ ಇರಾನ್ ನಡುವಿನ ಈ ಮಧ್ಯಂತರ ಒಪ್ಪಂದದ ಯಶಸ್ಸು ಇಸ್ರೇಲ್, ಹೆಜ್ಬುಲ್ಲಾ ಮತ್ತು ಕೊಲ್ಲಿ ರಾಷ್ಟ್ರಗಳ ಮುಂದಿನ ಹೆಜ್ಜೆ ಏನು ಎಂಬುದನ್ನು ಅವಲಂಬಿಸಿದೆ. ಯಾವುದೇ ಒಪ್ಪಂದ ಯಶಸ್ವಿಯಾಗಬೇಕಾದರೆ ಉಭಯ ಕಕ್ಷಿಗಾರರ ನಡುವೆ ಅಪನಂಬಿಕೆಗೆ ಜಾಗ ಇರಬಾರದು. ಆದರೆ, ಇರಾನ್ ಮತ್ತು ಅಮೆರಿಕದ ನಡುವೆ ಗಾಢ ಅಪನಂಬಿಕೆ ಇದೆ. ಇಸ್ರೇಲ್ ಮತ್ತು ಇರಾನ್ ಎಂದಿಗೂ ಕೂಡದ ಬಿಂದುಗಳು. ಆತುರದ ಒಂದು ಸಣ್ಣ ಕ್ರಿಯೆ, ಸೇನಾ ಚಕಮಕಿ ಮೂರ್ನಾಲ್ಕು ತಿಂಗಳ ಸುದೀರ್ಘ ಶಾಂತಿ ಪ್ರಕ್ರಿಯೆಯನ್ನು ಸುಲಭವಾಗಿ ಹಳ್ಳ ಹಿಡಿಸಬಹುದು. ಹಾಗಾಗದಂತೆ ಎಚ್ಚರ ವಹಿಸಿದರೆ ಮಾತ್ರ ಶಾಂತಿ ಫಲಿಸಬಹುದು!



ವಾಚಕರ ವಾಣಿ

'ಆರೋಗ್ಯ ಸಂಜೀವಿನಿ'ಗೆ ಅನಾರೋಗ್ಯ

ಸರ್ಕಾರಿ ನೌಕರರು, ಅಧಿಕಾರಿಗಳು ಹಾಗೂ ಅವರ ಅವಲಂಬಿತರಿಗೆ ಜಾರಿಗೊಳಿಸಿರುವ 'ಆರೋಗ್ಯ ಸಂಜೀವಿನಿ' ಯೋಜನೆಯು ಹಳ್ಳ ಹಿಡಿದಿದೆ. ನೌಕರರ ಸಂಬಳದಿಂದ ವೈದ್ಯಕೀಯ ಭತ್ಯೆಯು ಕಡಿತಗೊಂಡಿದೆ. ಮತ್ತೊಂದೆಡೆ, ಪ್ರತಿ ತಿಂಗಳ ಸಂಬಳದಲ್ಲಿ ಯೋಜನೆಗೆ ನಿಗದಿಪಡಿಸಿರುವ ಮೊತ್ತವನ್ನು ಕಟಾವಣೆ ಮಾಡಲಾಗುತ್ತಿದೆ. ಇದ ರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ಲಾಭವಾಗುತ್ತಿದೆಯೇ ಹೊರತು ಫಲಾನುಭವಿಗಳಿಗೆ ಪ್ರಯೋಜನ ಲಭಿಸುತ್ತಿಲ್ಲ. ಸರ್ಕಾರವೇ ಗೊತ್ತುಪಡಿ ಸಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಮುಂದಾದರೆ ಅಲ್ಲಿನ ಸಿಬ್ಬಂದಿಯು ಈ ಯೋಜನೆ ನಮ್ಮಲ್ಲಿ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ ಎನ್ನುತ್ತಾರೆ. ಚಿಕಿತ್ಸೆಯ ಬಳಿಕ ವೈದ್ಯಕೀಯ ವೆಚ್ಚ ಕೋರಿ ಮರುಭರ್ತಿಗೆ ಅರ್ಜಿ ಸಲ್ಲಿಸಿದರೆ ಪ್ರಸಕ್ತ ಸಾಲಿಗೆ ಅನುದಾನ ಲಭ್ಯವಿಲ್ಲವೆಂಬ ಉತ್ತರ ಬರುತ್ತದೆ. ವೈದ್ಯಕೀಯ ವೆಚ್ಚದ ಬಿಲ್ ಸ್ವೀಕರಿಸಬಾರದೆಂದು ಖಜಾನೆಗಳಿಗೆ ಸರ್ಕಾರವೇ ನಿರ್ದೇಶನ ನೀಡಿದೆ. ಸರ್ಕಾರಕ್ಕೆ ಒತ್ತಡ ಹೇರಿ ಯೋಜನೆಯನ್ನು ಜಾರಿಗೊಳಿಸಿದ್ದೇವೆ ಎಂದು ಬೆನ್ನುತಟ್ಟಿಕೊಳ್ಳುವ ಸರ್ಕಾರಿ ನೌಕರರ ಸಂಘಟನೆಯು ಈ ಬಗ್ಗೆ ಜಾಣಕುರುಡಾಗಿರುವುದು ದುರದೃಷ್ಟಕರ.

ಸುಜ್ಜಲೂರು ವಿಜಯ್ ಸಣ್ಣಮಾದಯ್ಯ, ತಿ. ನರಸೀಪುರ

ಕಾಸಿನ ವ್ಯಾಪಾರ ಮತ್ತು ಕಾಣಿಕೆ ಕಳವು

ವಿದೇಶಿ ದಾಳಿಕೋರರು ಭಾರತದ ದೇಗುಲಗಳನ್ನು ಲೂಟಿ ಮಾಡಿದ ಕರಾಳ ಕಥೆಗಳ ಬಗ್ಗೆ ಪ್ರೌಢಶಾಲಾ ಹಂತದ ಇತಿಹಾಸದ ಪಠ್ಯದಲ್ಲಿ ಓದಿದ್ದೇವೆ. ಪ್ರಸ್ತುತ ಅಯೋಧ್ಯೆಯ ರಾಮಮಂದಿರದಲ್ಲಿನ ಕಾಣಿಕೆ ಹಣವನ್ನು ಅಲ್ಲಿನವರೇ ಲೂಟಿ ಮಾಡಿರುವುದು ಹೇಯಕೃತ್ಯ. ಪರಕೀಯ ಆಕ್ರಮಣಕಾರರಿಗೂ ಸ್ವದೇಶಿ ಲೂಟಿಕೋರರಿಗೂ ವ್ಯತ್ಯಾಸ ಏನಿದೆ? ಕಾಣಿಕೆ ಹಣದ ಲೂಟಿಯು ಹಿಂದೂ ಧರ್ಮ ಮತ್ತು ಭಕ್ತರ ಮುಗ್ಧ ನಂಬಿಕೆಗೆ ಎಸಗಿದ ದ್ರೋಹವಾಗಿದೆ. ಧರ್ಮರಕ್ಷಕರೇ ಭ್ರಷ್ಟರಾಗಿರುವುದು ವ್ಯವಸ್ಥೆಯ ವ್ಯಂಗ್ಯವೇ ಸರಿ. ಭ್ರಷ್ಟಾಚಾರಕ್ಕೆ ಧರ್ಮದ ಹಂಗಿಲ್ಲ; ಅದೊಂದು ಮಾನಸಿಕ ವಿಕಾರ. ಬರೀ ಇತಿಹಾಸದ ತಪ್ಪುಗಳನ್ನು ದೂಷಿಸುತ್ತಾ ಕೂರಬಾರದು. ಕಾಸಿನ ವ್ಯಾಪಾರದ ಭಕ್ತಿಯ ಒಳಸುಳಿಗಳನ್ನು ಜನರು ಅರ್ಥೈಸಿಕೊಳ್ಳಬೇಕಿದೆ. ಕಾಣಿಕೆ ಲೂಟಿ ಮಾಡಿದವರಿಗೆ ಪಾಠ ಕಲಿಸಬೇಕಿದೆ.

ಸುಜಾತಾ ನಾಯಕ್, ಶಕ್ತಿನಗರ

ಸರ್ಕಾರಿ ವ್ಯವಸ್ಥೆಯ 'ದುಬಾರಿ ಮಾರ್ಗ'

ಸರ್ಕಾರವು ಗೃಹಲಕ್ಷ್ಮಿ, ಗೃಹಜ್ಯೋತಿ ಹಾಗೂ ಇತರೆ ಪಿಂಚಣಿ ಯೋಜನೆಗಳ ಪರಾಮರ್ಶೆಗೆ ಮುಂದಾಗಿದೆ. ಈಗಾಗಲೇ, ಲಕ್ಷಾಂತರ ಜನರು ಈ ಯೋಜನೆಗಳ ಅನುಚಿತ ಪ್ರಯೋಜನ ಪಡೆದಿರುವುದನ್ನು ಗುರ್ತಿಸಿ ಕೆಲವರ ಪಿಂಚಣಿ ತಡೆಹಿಡಿದಿದೆ. ಅನರ್ಹರು ಯೋಜನೆಗಳ ಲಾಭ ಪಡೆದಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ನಷ್ಟವಾಗಿದೆ. ಸಾಮಾಜಿಕ ಭದ್ರತಾ ಯೋಜನೆಯಡಿ ಕಾಲ ಕಾಲಕ್ಕೆ ಸೂಕ್ತ ಪರಿಶೀಲನೆ ಇಲ್ಲದೆ ಹಣ ಪಾವತಿ ಆಗಿರುವುದು ಸ್ಪಷ್ಟ. ಕಾಲಕಾಲಕ್ಕೆ ಪರಿಶೀಲನೆ ಕೈಗೊಂಡಿದ್ದರೆ ಹಣದ ದುರುಪಯೋಗ ತಪ್ಪುತ್ತಿತ್ತು. ಯೋಜನೆಯ ಸೌಲಭ್ಯ ಅರ್ಹ ಫಲಾನು ಭವಿಗಳಿಗೆ ದೊರೆಯುತ್ತಿತ್ತು. ಗ್ಯಾರಂಟಿ ಯೋಜನೆಗಳ ಪ್ರಚಾರದ ಮೇಲಾಟ ದಲ್ಲಿ ಅಪಾತ್ರರು ಯೋಜನೆಯ ಸೌಲಭ್ಯ ಪಡೆಯುತ್ತಿರುವುದನ್ನು ಸರ್ಕಾರ ಉಪೇಕ್ಷಿಸಿರುವುದು ಸ್ಪಷ್ಟವಾಗಿದೆ. ಸರ್ಕಾರಿ ವ್ಯವಸ್ಥೆಯು ದುಬಾರಿ ಮಾರ್ಗದಲ್ಲಿ ಪಾಠ ಕಲಿಯುತ್ತಿರುತ್ತದೆ. ಇದರಿಂದ ಸಾರ್ವಜನಿಕ ಹಣದ ದುರುಪಯೋಗ ಆಗುತ್ತಲೇ ಇರುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

ಬೋಧಕರಿಲ್ಲದೆ ಸೊರಗಿದ ಶಿಕ್ಷಣ ಇಲಾಖೆ

ರಾಜ್ಯ ಸರ್ಕಾರವು ಕೆಲವು ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಮುಂದಾಗಿರುವುದು ಸಂತೋಷ ತಂದಿದೆ. ಆದರೆ, ನೇಮಕಾತಿ ಪ್ರಕ್ರಿಯೆಯಿಂದ ಕಾಲೇಜು ಶಿಕ್ಷಣ ಇಲಾಖೆಯನ್ನು ಹೊರಗಿಡಲಾಗಿದೆ. ಅನುದಾನಿತ ಶಾಲಾಕಾಲೇಜುಗಳಲ್ಲಿದ್ದ ಶೇ 90ಕ್ಕೂ ಹೆಚ್ಚು ಬೋಧಕರು ನಿವೃತ್ತಿ ಹೊಂದಿದ್ದಾರೆ. ಅನುದಾನಿತ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳಲ್ಲಿ ಸುಮಾರು 20 ವರ್ಷಗಳಿಂದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಶಿಕ್ಷಣ ಸಂಸ್ಥೆಗಳು ಅತಿಥಿ ಉಪನ್ಯಾಸಕರು ಮತ್ತು ಶಿಕ್ಷಕರಿಗೆ ಕಡಿಮೆ ಸಂಬಳ ನೀಡಿ ದುಡಿಸಿಕೊಳ್ಳುತ್ತಿವೆ. ಇದರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯದಂತಾ ಗಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಹುದ್ದೆ ಭರ್ತಿಗೆ ಸರ್ಕಾರ ಮುಂದಾಗಲಿ.

ಪ್ರೊ. ಟಿ. ನಾರಾಯಣಪ್ಪ, ಬೆಂಗಳೂರು

ಕಲ್ಯಾಣ: ಶಿಕ್ಷಕರ ಕೊರತೆಯು ನೀಗುವುದೆ?

ರಾಜ್ಯ ಸರ್ಕಾರವು ಹಿಂದುಳಿದ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿನ ಶಿಕ್ಷಕರ ಕೊರತೆ ನೀಗಿಸಲು ಮುತುವರ್ಜಿ ವಹಿಸಿರುವುದು ಅಭಿನಂದನೀಯ. ಆದರೆ, ನೇಮಕಾತಿ ಪ್ರಕ್ರಿಯೆಯಲ್ಲಿನ ಕೆಲವು ದೋಷಗಳಿಂದಾಗಿ ಇಲ್ಲಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಕಾಡುತ್ತಿದೆ. ಈ ಭಾಗದಲ್ಲಿ ಅರ್ಹ ಅಭ್ಯರ್ಥಿಗಳಿದ್ದರೂ ಆಯ್ಕೆ ಪ್ರಕ್ರಿಯೆಯಿಂದ ಅವರು ಹಿಂದುಳಿಯಲು ಜಿಲ್ಲಾ ಹಂತದ ನೇಮಕಾತಿ ಪ್ರಕ್ರಿಯೆಯೇ ಕಾರಣ. ಈ ಹಿಂದೆ ನಡೆದ ನೇಮಕಾತಿಗಳಲ್ಲಿ ಕಲ್ಯಾಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗಿಂತ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಇನ್ನೂ ಕೆಲವೆಡೆ ಕೊರತೆಯಾಗುವಷ್ಟು ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಹೊಸ ನೇಮಕಾತಿಯನ್ನು ಹಿಂದಿನಂತೆ ಜಿಲ್ಲಾ ಹಂತದಲ್ಲಿ ನಡೆಸಬಾರದು. ಇಡೀ ಕಲ್ಯಾಣ ಕರ್ನಾಟಕವನ್ನು ಒಂದು ಘಟಕವನ್ನಾಗಿ ಮಾಡಬೇಕು. ಅಭ್ಯರ್ಥಿಗಳು ಇಡೀ ಕಲ್ಯಾಣ ಕರ್ನಾಟಕದ ಅಷ್ಟೂ ಜಿಲ್ಲೆಗಳಿಗೆ ಅರ್ಹರಾಗಿದ್ದು, ಅವರು ಪರೀಕ್ಷೆಯಲ್ಲಿ ಪಡೆದ ಅಂಕಗಳು ಹಾಗೂ ಇತರ ಅರ್ಹತಾ ಮಾನದಂಡಗಳ ಆಧಾರದ ಮೇಲೆ ಕೌನ್ಸೆಲಿಂಗ್ ನಡೆಸಿ ಸ್ಥಳ ನಿಯುಕ್ತಿಗೊಳಿಸಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ ಈ ಮಾನದಂಡ ಅನುಸರಿಸಿದರೆ ಶಿಕ್ಷಕರ ಕೊರತೆ ನೀಗಲಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

ಚುರುಮುರಿ

ಕೆಲಸವಲ್ಲದ ಕೆಲಸ!

• ಗುರು ಪಿ.ಎಸ್.

'ರೀ... ಈ ಯಶಸ್ವಿ ನಾಯಕ ಆಗೋದು ಹೇಗೆ?' ಥಟ್ ಅಂತ ಕೇಳಿದಳು ಹೆಂಡತಿ.

'ನಾನೇನಾದರೂ ಯಶಸ್ವಿ ಲೀಡರ್ ಆಗಬೇಕಂದ್ರೆ ಪಾಲಿಟಿಕ್ಸ್ ಸೇರ್ತಿದ್ದೆ ಮತ್ತು ಜನರನ್ನ ಯಾವಾಗಲೂ ಬ್ಯುಸಿ ಇಟ್ಟಿರುತ್ತಿದ್ದೆ'.

'ಅಂದ್ರೆ, ಎಲ್ಲರಿಗೂ ಕೆಲಸ ಕೊಡ್ತಿದ್ರಾ?'

'ಕೆಲಸವಲ್ಲದ ಕೆಲಸ ಕೊಡ್ತಿದ್ದೆ'.

'ಅಂದ್ರೆ?'

'ಅಂದ್ರೆ, ಈಗ ಎಸ್‌ಐಆರ್ ಮಾಡ್ತಿದಾರಲ್ವ, ಹಾಗೇ, ನಾನೂ ಅದನ್ನೇ ಮಾಡ್ತಿದ್ದೆ. ಜನ ನೋಡು, ಈಗ ಎಷ್ಟು ಬ್ಯುಸಿ ಇದ್ದಾರೆ. ಆಳುವವರನ್ನು ಯಾವುದೇ ಪ್ರಶ್ನೆ ಕೇಳೋಕೆ ಟೈಮ್ ಇರಲ್ಲ. ಜೊತೆಗೆ, ಎಂಟರ್ಟೈನ್ಮೆಂಟ್ ಕೂಡ ಸಿಗೋದ್ರಿಂದ ಖುಷಿಯಾಗೂ ಇರ್ತಾರೆ'.

'ಎಂಟರ್ಟೈನ್ಮೆಂಟಾ? ಎಸ್‌ಐಆರ್‌ನಲ್ಲಿ ಅದೇನ್ ಮನರಂಜನೆ ಸಿಗುತ್ತೆ ರೀ?'

'ಬಿಜೆಪಿ ಬೆಂಬಲಿಗರಿಗೆ ಗಣತಿ ನಮೂನೆ ಸಿಗದ ಹಾಗೆ, ಕಾಂಗ್ರೆಸ್ ಸರ್ಕಾರ ಮಾಡಬಹುದು ಅಂತ ಬಿಜೆಪಿ ಹಿರಿಯ ಲೀಡರ್ ಹೇಳಿದ್ದಾರೆ. ಹಾಗಾದರೆ, ಬೇರೆ ರಾಜ್ಯದಲ್ಲಿ ಇವರೂ ಹಾಗೆ ಮಾಡಿರಬಹುದಲ್ವ ಅಂತ ಪ್ರಶ್ನೆ ಮೂಡುತ್ತೆ. ಪ್ರಶ್ನೆಗೆ ಸಿಗೋ ಉತ್ತರ ನೆನಪಿಸಿಕೊ ಸಾಕು, ಮನರಂಜನೆ ಸಿಕ್ಕೇ ಸಿಗುತ್ತೆ' ಎಂದು ನಕ್ಕೆ.

'ಎಸ್‌ಐಆರ್ ಮುಗಿದ ಮೇಲೆ ಜನರೆಲ್ಲ ಫ್ರೀ ಆಗಿಬಿಡ್ತಾರಲ್ಲ' ಎಂದಳು ಹೆಂಡತಿ ಆತಂಕದಿಂದ.

'ಇಲ್ಲ, ಇಲ್ಲ. ಆಗ, ಗೃಹಜ್ಯೋತಿ, ಗೃಹಲಕ್ಷ್ಮಿಗೆ ಅರ್ಜಿ ಹಾಕಿಸೋಕೆ ಶುರು ಮಾಡಿಸ್ತಾರೆ'.

'ಇದೆಲ್ಲ ಬಿಟ್ಟು ಮೊದಲು, ಜಾಸ್ತಿ ದುಡ್ಡು ಬರೋ ಕೆಲಸ ಯಾವುದಾದರೂ ನೋಡಿಕೊಳ್ಳಿ' ಎಂದಳು ಹೆಂಡತಿ.

'ಆಯ್ತು, ಸಸಿ ನೆಡೋಕೆ ಹೋಗ್ತೀನಿ ಬಿಡು' ಎಂದೆ.

'ಅದರಲ್ಲೇನ್ ದುಡ್ಡು ಬರುತ್ತೆ ರೀ ನಿಮಗೆ'.

'ಇದೇನಮ್ಮ ಹಿಂಗಂತೀಯ, ಸಸಿ ನೆಟ್ಟು, ಮೆಂಟೇನ್ ಮಾಡಿದೀವಿ ಅಂತ ಹೇಳಬೇಕಷ್ಟೇ... ಒಂದು ಸಸಿಗೆ ಮೂರು ಸಾವಿರ ರೂಪಾಯಿ ಕೊಡ್ತಾರಂತೆ ಕಾರ್ಪೊರೇಷನ್‌ನವರು...'

'ಹಾಗಾದರೆ ನಡೀರಿ, ನಾನೂ ಬರ್ತೀನಿ' ಎಂದು ಸಲಿಕೆ, ಗುದ್ದಲಿ ಹಿಡಿದು ಹೊರಡಲು ರೆಡಿಯಾದಳು ಹೆಂಡತಿ.

ಸಂಗತ

'ಅದಕ್ಷತೆ' ಎನ್ನುವುದೀಗ ಎಲ್ಲರಿಗೂ ಇಷ್ಟ!

'ಕೊಳ್ಳುಬಾಕ ಸಂಸ್ಕೃತಿ' ಆಧುನಿಕ ಯುಗದ ಜೀವನಶೈಲಿ ಎನ್ನುವಂತಾಗಿದೆ. ಈ ಕೊಳ್ಳುಬಾಕತನದ ಹಿಂದೆ ಸರ್ಕಾರಿ ಹಾಗೂ ಸಾರ್ವಜನಿಕ ಸೇವೆಗಳ ವೈಫಲ್ಯವಿದೆ.

• ಸಂತೋಷ ಕೌಲಗಿ

ಒಂದು ವ್ಯವಸ್ಥೆಯ ಅದಕ್ಷತೆಯು ದೇಶದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ದೊಡ್ಡ ಕೊಡುಗೆಯನ್ನು ನೀಡುತ್ತದೆ. ಹಲವಾರು ಅನವಶ್ಯಕ ವಸ್ತುಗಳನ್ನು ಅವಶ್ಯಗೊಳಿಸಿ, ಅವುಗಳನ್ನು ನಾಗರಿಕರು ಕೊಳ್ಳುವಂತೆ ಮಾಡುವುದೇ ಅದಕ್ಷತೆಯ ಅರ್ಥವ್ಯವಸ್ಥೆ.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಹಣ ಕೊಟ್ಟು ಬಾಟಲಿ ನೀರು ಕುಡಿಯುತ್ತೇವೆ ಎಂದು ಜನಸಾಮಾನ್ಯರು ಭಾವಿಸಿರಲಿಲ್ಲ. ಹಣವಂತರ ಅನುಕೂಲಕ್ಕೆ ನೀರಿನ ಬಾಟಲಿಗಳು ಬಂದಿವೆ ಎಂದು ನಾವು ಭಾವಿಸಿದ್ದೆವು. ಆದರೆ, ಇಂದು ಬಾಟಲಿ ನೀರು ಅನಿವಾರ್ಯವಾಗಿದೆ. ನಮ್ಮ ಸುತ್ತಲಿನ ಎಲ್ಲ ನೀರಿನ ಮೂಲಗಳೂ ಕಲುಷಿತಗೊಂಡಿವೆ. ಬಾಯಾರಿಕೆ ಆಗಿದೆ ಎಂದು ಹರಿಯುತ್ತಿರುವ ನದಿ, ಝರಿ, ಕೆರೆ–ಕಟ್ಟೆಯ ನೀರನ್ನು ಕುಡಿಯಲು ಸಾಧ್ಯವಿಲ್ಲ. ಏಕೆಂದರೆ, ಅವು ಕುಡಿಯಲಾರದಷ್ಟು ಮಲಿನಗೊಂಡಿವೆ. ಈ ಕಾರಣದಿಂದಾಗಿ ಬಾಟಲಿಗೆ ನೀರು ತುಂಬಿ ಮಾರುವ ಉದ್ಯಮ ಬೃಹತ್ತಾಗಿ ಬೆಳೆದಿದೆ. ಕೋಟ್ಯಂತರ ರೂಪಾಯಿಯ ವ್ಯವಹಾರ ಇದಾಗಿದೆ. ಈ ಉದ್ಯಮ ಬೆಳೆದದ್ದು ನಮ್ಮ ವ್ಯವಸ್ಥೆಯ ಅದಕ್ಷತೆಯಿಂದಾಗಿ. ಈ ಅದಕ್ಷತೆ ನೀರು ಮಾರುವ ಉದ್ಯಮ ಬೆಳೆಯಲು ನೆರವಾಗಿದೆ. ಅದು ಜಿಎಸ್‌ಟಿ ರೂಪದಲ್ಲಿ ಸರ್ಕಾರಕ್ಕೆ ತೆರಿಗೆ ತರುತ್ತಿದೆ, ಜಿಡಿಪಿಯನ್ನು ಹೆಚ್ಚಿಸುತ್ತಿದೆ.

ನಮಗೆ ಅವಶ್ಯವಿಲ್ಲದ ಎಷ್ಟೊಂದು ವಸ್ತುಗಳನ್ನು ಅವಶ್ಯ ಎಂದುಕೊಂಡಿದ್ದೇವೆ ಯೋಚಿಸಿ. ಮನೆಯ ಉದಾಹರಣೆಯನ್ನೇ ನೋಡಿ: ಸಾರ್ವಜನಿಕವಾಗಿ ಸರಬರಾಜು ಆಗುವ ನೀರಿನ ಗುಣಮಟ್ಟ ಸರಿಯಿಲ್ಲವೆಂದು ನೀರಿನ ಫಿಲ್ಟರ್ ಕೊಳ್ಳುತ್ತೇವೆ. ವಿದ್ಯುತ್ ಸರಬರಾಜಿನ ವ್ಯತ್ಯಯದ ಕಾರಣ ಯುಪಿಎಸ್ ಮೊರೆ ಹೋಗುತ್ತೇವೆ. ಗಾಳಿಯ ಗುಣಮಟ್ಟದ ಬಗ್ಗೆ ಅಪನಂಬಿಕೆ ಇರುವುದರಿಂದ ಏರ್ ಪ್ಯೂರಿಫೈಯರ್ ಬೇಕನಿಸುತ್ತದೆ... ಹೀಗೆ 'ಬೇಕು'ಗಳ ಪಟ್ಟಿ ದೊಡ್ಡದಾಗುತ್ತದೆ. ಈ ಎಲ್ಲ ಸಾಧನಗಳನ್ನು ಕೊಳ್ಳುತ್ತೇವೆ, ಜಿಎಸ್‌ಟಿ ಕಟ್ಟುತ್ತೇವೆ. ಆ ಮೂಲಕ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆ. ಜೊತೆಗೆ, ಜಿಡಿಪಿಯೂ ಬೆಳೆಯುತ್ತದೆ.

ಮಕ್ಕಳು ದೊಡ್ಡವರಾಗುತ್ತಾರೆ. ಅವರನ್ನು ಶಾಲೆಗೆ ಸೇರಿಸಬೇಕು. ಲಕ್ಷಾಂತರ ರೂಪಾಯಿ ಶುಲ್ಕ ನೀಡಿ ಮಕ್ಕಳನ್ನು ಖಾಸಗಿ ಶಾಲೆಗೆ ಇಲ್ಲವೇ ಖಾಸಗಿ ಅಕಾಡೆಮಿಗಳಿಗೆ ಸೇರಿಸುತ್ತೇವೆ. ಕಾರಣ, ಸರ್ಕಾರಿ ಶಾಲೆಯ ಗುಣಮಟ್ಟ ಸರಿಯಿಲ್ಲದಿರುವುದೇ ಆಗಿದೆ. ಇದರಿಂದ ಖಾಸಗಿ ಶಾಲೆಗಳವರಿಗೆ ಹಣ ಬಂತು, ಜಿಡಿಪಿ ಬೆಳೆಯಿತು.

ಆರೋಗ್ಯ ಕೆಟ್ಟ ಕೂಡಲೇ ಖಾಸಗಿ ಆಸ್ಪತ್ರೆಗಳ ಕಡೆಗೆ ಓಡುವುದು ಸಾಮಾನ್ಯವಾಗಿ ಹೋಗಿದೆ. ಕಾರಣ, ಸರ್ಕಾರಿ ಆಸ್ಪತ್ರೆಯ ಸೇವೆಯು ಜನರ ನಂಬಿಕೆ ಉಳಿಸಿಕೊಂಡಿಲ್ಲ. ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗಿ, ಅಪಾರ ಹಣ ನೀಡಬೇಕಾಗುತ್ತದೆ. ಅದರಿಂದಲೂ ಜಿಡಿಪಿ ಬೆಳೆಯುತ್ತದೆ.

ಹಾಗೆಯೇ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ವಿಶ್ವಾಸಾರ್ಹ ಅಲ್ಲವಾದ ಕಾರಣದಿಂದಾಗಿ ಒಂದು ಸ್ಕೂಟರ್ ಇಲ್ಲವೇ ಕಾರು ಕೊಂಡಾಗಲೂ ಜಿಎಸ್‌ಟಿ ಕಟ್ಟುತ್ತೇವೆ, ಜಿಡಿಪಿ ಬೆಳೆಯುತ್ತದೆ.

ಅಡುಗೆಮನೆಗೆ ಒಂದು ಒಳ್ಳೆಯ ಒಲೆ, ಬಟ್ಟೆ ಒಗೆಯಲು ವಾಷಿಂಗ್ ಮೆಷಿನ್ ಹೊಂದುವುದು ನಮ್ಮ ಜೀವನಮಟ್ಟವನ್ನು ಸುಧಾರಣೆ ಮಾಡಿ ಕೊಳ್ಳುವ ಉದ್ದೇಶದಿಂದ ಖರೀದಿ ಸುವ ವಸ್ತುಗಳಾಗಿವೆ. ಆದರೆ, ನೀರಿನ ಬಾಟಲಿಯಾಗಲೀ, ಯುಪಿಎಸ್ ಆಗಲೀ ಹಾಗಲ್ಲ. ಯಾವ ಯಾವುದೋ ರೂಪದ ಒತ್ತಡ ಸೃಷ್ಟಿಸಿ, ಅವುಗಳನ್ನು ಕೊಳ್ಳುವಂತೆ ಮಾಡಲಾಗಿದೆ. ಸರ್ಕಾರಿ, ಸಾರ್ವಜನಿಕ ವ್ಯವಸ್ಥೆಯ ಅದಕ್ಷತೆ ಮತ್ತು ವೈಫಲ್ಯದಿಂದಾಗಿ ಬಹಳಷ್ಟು ಸಂದರ್ಭಗಳಲ್ಲಿ ಅಗತ್ಯ ಇಲ್ಲದಿರುವುದನ್ನು ನಾವು ಅನಿವಾರ್ಯವಾಗಿ ಕೊಳ್ಳುವಂತಾಗುತ್ತದೆ.

ಇದು ಟೋಲ್ ರಸ್ತೆಗಳ ಕಾಲ. ಸುಂಕ ಕಟ್ಟಬೇಕಾದ ಖಾಸಗಿ ರಸ್ತೆಗಳು ನಿರ್ಮಾಣವಾಗುತ್ತಿವೆ. ಸಾರ್ವಜನಿಕ ರಸ್ತೆಗಳು ನಮ್ಮ ಅದಕ್ಷತೆಯ ಕಾರಣದಿಂದಾಗಿ ಸರಿಯಿಲ್ಲದೆ ಇರುವುದೇ ಟೋಲ್ ರಸ್ತೆಗಳ ಉಗಮಕ್ಕೆ ಕಾರಣ. ಹಣ ಕಟ್ಟಿ ಆ ರಸ್ತೆಗೆ ಬಂದರೆ ಅದುವೇ ಬೇರೆ ಪ್ರಪಂಚ. ಆ ಪ್ರಪಂಚ ಯಾರಿಗೆ? ಹಣ ಉಳ್ಳವರಿಗೆ. ಹೀಗೆ ಅನಗತ್ಯವಾದುದಕ್ಕೆ ಒಗ್ಗಿಕೊಳ್ಳುತ್ತ, ಅವಶ್ಯಕತೆ ಯಾವುದು, ಅನಿವಾರ್ಯವಾಗಿ ಕೊಳ್ಳಬೇಕಾಗಿ ಬಂದದ್ದು ಯಾವುದು ಎಂಬುದನ್ನು ಜನ ಮರೆತುಬಿಡುತ್ತಾರೆ. ಯಾವುದು ಅನಗತ್ಯವಾಗಿದ್ದು ನಮ್ಮ ಅದಕ್ಷತೆಯಿಂದ ಅನಿವಾರ್ಯವಾಗಿದೆಯೋ, ಅದರ ಕಡೆಗೇ ಗಮನ ಹರಿಸಲು ಪ್ರಾರಂಭಿಸುತ್ತೇವೆ.

ಉಸಿರಾಡುವ ಗಾಳಿ ಅಶುದ್ಧವಾಗಿದೆ ಎಂದಾದರೆ, 'ಮಾಸ್ಕ್ ಧರಿಸಿ ಸಂಚರಿಸಿ' ಎಂದು ಸರ್ಕಾರ ಸಲಹೆ ನೀಡುತ್ತದೆ. ಖಾಸಗಿ ಕಂಪನಿಯವರು ಮಾಸ್ಕ್ ಮಾರಲು ಪ್ರಾರಂಭಿಸುತ್ತಾರೆ. ಗಾಳಿ ಅಶುದ್ಧವಾಗಿದೆ ಎಂದರೆ 'ಮಕ್ಕಳು ಶಾಲೆಗೆ ಹೋಗುವುದು ಬೇಡ' ಎಂದು ಸರ್ಕಾರ ಆದೇಶಿಸುತ್ತದೆ. ಆನ್‌ಲೈನ್ ಪಾಠ ಮಾಡಲು ಖಾಸಗಿ ಶಾಲೆಗಳು ಸಿದ್ಧವಾಗುತ್ತವೆ. ಕಂಪನಿಗಳು ಇಂಟರ್ನೆಟ್, ಲ್ಯಾಪ್‌ಟಾಪ್, ಮೊಬೈಲ್ ಮಾರಲು ಮುನ್ನುಗ್ಗುತ್ತವೆ. ಇದೆಲ್ಲದರ ಪರಿಣಾಮ, ಹಣ ಇಲ್ಲದವರ ಬದುಕು ಮೂರಾಬಟ್ಟೆಯಾಗುತ್ತದೆ. ಮಧ್ಯಮವರ್ಗ ತನ್ನ ಸಂಪಾದನೆಯಲ್ಲಿ ಹೆಚ್ಚಿನ ಪಾಲನ್ನು ಅನಿವಾರ್ಯವಾದ ಅವಶ್ಯಕತೆಗಳಿಗೆ ವ್ಯಯಿಸಿ ಹೈರಾಣಾಗುತ್ತದೆ. ಪೌರಕಾರ್ಮಿಕರು ರಸ್ತೆಬದಿಯ ಪ್ಲಾಸ್ಟಿಕ್ ಬಾಚಿ ಬಾಚಿ ಸುಸ್ತಾಗುತ್ತಾರೆ.

ಆಧುನಿಕ ಅರ್ಥ ವ್ಯವಸ್ಥೆಗೆ ಸರ್ಕಾರ ಮತ್ತು ಸಮಾಜದ ಕೊಡುಗೆ ಅಪಾರ. ಈ ಅದಕ್ಷತೆಯಿಂದಾಗಿ ಆಗುತ್ತಿರುವ ಪರಿಸರ ನಾಶ ಊಹೆಗೂ ನಿಲುಕದು. 'ಬರ ಎಂದರೆ ಎಲ್ಲರಿಗೂ ಇಷ್ಟ' ಎಂಬ ಮಾತಿದೆ. 'ಅದಕ್ಷತೆ ಎಂಬುದೂ ಎಲ್ಲರಿಗೂ ಇಷ್ಟ'.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಏನು ಮಾಡಲಿದೆ ಎಲ್ ನಿನೊ?

ಕರ್ನಾಟಕವೂ ಸೇರಿದಂತೆ ದೇಶದಲ್ಲಿ ಈ ಬಾರಿ ಮುಂಗಾರು ಕೈಕೊಟ್ಟಿದೆ. ಹವಾಮಾನ ಇಲಾಖೆಯ ಪ್ರಕಾರ ಜೂನ್ ತಿಂಗಳಲ್ಲಿ ಶೇ 40ರಷ್ಟು ಮಳೆ ಕೊರತೆ ಆಗಿದೆ. ಜುಲೈನಲ್ಲೂ ಇದೇ ಪರಿಸ್ಥಿತಿ ಇರಲಿದೆ ಎಂದೂ ಅದು ಮುನ್ಸೂಚನೆ ನೀಡಿದೆ. ಇದಕ್ಕೆ ಕಾರಣವಾಗಿರುವುದು ಎಲ್ ನಿನೊ. ಸಾವಿರಾರು ಕಿ.ಮೀ. ದೂರದಲ್ಲಿ ಪೆಸಿಫಿಕ್ ಮಹಾಸಾಗರದ ನೀರಿನ ಮೇಲ್ಮೈ ತಾಪಮಾನದಲ್ಲಿನ ವ್ಯತ್ಯಾಸವು ದೇಶದ ಮಳೆ ಮಾರುತಗಳ ಮೇಲೆ ಪರಿಣಾಮ ಬೀರುತ್ತಿದೆ. ಜನವರಿವರೆಗೂ ಈ ಪರಿಸ್ಥಿತಿ ಇರಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಎಲ್ ನಿನೊ ವಿದ್ಯಮಾನ, ಅದರ ಪರಿಣಾಮಗಳು, ಭಾರತದ ಮೇಲೆ ಅದು ಬೀರುವ ಪ್ರಭಾವದ ಮಾಹಿತಿ ಇಲ್ಲಿದೆ



ಪ್ರ.ವಾ. ಗ್ರಾಫಿಕ್ಸ್: ಈಶ್ವರ ಬಡಿಗೇರ

3 ಬಾರಿ 2 ಡಿಗ್ರಿಗಿಂತ ಹೆಚ್ಚಳ

1950ರಿಂದೀಚೆಗೆ ಪೆಸಿಫಿಕ್ ಮಹಾಸಾಗರದ ಮೇಲ್ಮೈ ತಾಪಮಾನವು 1972–73, 1982–83, 2015–16ರಲ್ಲಿ ಸಾಮಾನ್ಯ ಸರಾಸರಿ ಮಟ್ಟಕ್ಕಿಂತ 2 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ದಾಖಲಾಗಿತ್ತು. ದೇಶವು 1972, 1982, 2009 ಮತ್ತು 2015ರಲ್ಲಿ ತೀವ್ರ ಬರ ಪರಿಸ್ಥಿತಿಯನ್ನು ಎದುರಿಸಿತ್ತು.

ಸಜ್ಜಾಗಬೇಕಿದೆ ದೇಶ

ಭಾರತವು ಪ್ರಸ್ತುತ ತಾಪಮಾನ ಏರಿಕೆ ಮತ್ತು ಪ್ರವಾಹ– ಎರಡೂ ರೀತಿಯ ಪರಿಸ್ಥಿತಿಗಳಿಗೆ ಸಜ್ಜಾಗಬೇಕಿದೆ. ದುರ್ಬಲ ಮುಂಗಾರಿನಿಂದ ಬರಗಾಲ, ಬೆಳೆ ನಷ್ಟ, ನೀರಿನ ಕೊರತೆ, ಬಿಸಿಗಾಳಿ ಉಂಟಾಗುವ ಸಾಧ್ಯತೆ ಇದೆ. ಇದೇ ವೇಳೆ, ಮಳೆ ಮಾರುತಗಳು ಚುರುಕುಗೊಂಡರೆ ಭಾರಿ ಮಳೆ, ಪ್ರವಾಹ, ಭೂಕುಸಿತ ಮತ್ತು ನಗರಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗುವ ಸಂಭವ ಇದೆ.

ಎಲ್ ನಿನೊದಿಂದ ಬೆಂಗಳೂರು, ಹೈದರಾಬಾದ್, ಪುಣೆಯಂಥ ನಗರಗಳಲ್ಲಿ ಸಮಸ್ಯೆಗಳು ಹೆಚ್ಚಾಗಲಿವೆ. ಕುಡಿಯುವ ನೀರಿಗಾಗಿ ಅಂತರ್ಜಲ, ಜಲಾಶಯಗಳ ಮೇಲೆ ಒತ್ತಡ ಹೆಚ್ಚಲಿದೆ. ಅಲ್ಲಿಯೂ ನೀರಿನ ಲಭ್ಯತೆ ಕಡಿಮೆಯಿರುವುದರಿಂದ ಪರಿಸ್ಥಿತಿ ಹದಗೆಡಲಿದೆ. ಒಂದು ವೇಳೆ ಮಳೆ ಹೆಚ್ಚಾದರೂ ಸಂಕಷ್ಟ ತಲೆದೋರಲಿದೆ. ಪ್ರವಾಹ ಸ್ಥಿತಿ ಉಂಟಾಗಲಿದ್ದು, ದುರ್ಬಲ ಮೂಲಸೌಕರ್ಯಗಳು ಮತ್ತಷ್ಟು ಹದಗೆಟ್ಟು, ಜನ ಕಷ್ಟ–ನಷ್ಟ ಎದುರಿಸಬೇಕಾಗುತ್ತದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

• ಸೂರ್ಯನಾರಾಯಣ ವಿ.

125 ವರ್ಷಗಳಲ್ಲೇ ಈ ಬಾರಿ ಭಾರತದಲ್ಲಿ ನೈರುತ್ಯ ಮುಂಗಾರಿನ ಮೊದಲ ತಿಂಗಳು ಕನಿಷ್ಠ ಪ್ರಮಾಣದ ಮಳೆಯಾಗಿದೆ. ಜೂನ್‌ನಲ್ಲಿ ಶೇ 40ರಷ್ಟು ಮಳೆ ಕೊರತೆ ಉಂಟಾಗಿದೆ. ಜುಲೈ ತಿಂಗಳಲ್ಲೂ ಮಳೆ ಕೊರತೆ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ. ಕರ್ನಾಟಕದಲ್ಲೂ ಮುಂಗಾರು ಮಳೆ ನಿಧಾನವಾಗಿದೆ. ತಿಂಗಳ ಬಳಿಕ ಈಗ ಸ್ವಲ್ಪ ಮಳೆಯಾಗುತ್ತಿದೆ. ಜೂನ್ 30ರ ಅಂಕಿ ಅಂಶಗಳ ಪ್ರಕಾರ, ರಾಜ್ಯದಲ್ಲಿ ಸರಾಸರಿ ಶೇ 42ರಷ್ಟು ಮಳೆ ಕೊರತೆಯಾಗಿದ್ದು, ಕೃಷಿ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ನಿರೀಕ್ಷಿತ ಪ್ರಮಾಣದಲ್ಲಿ ನೈರುತ್ಯ ಮುಂಗಾರು ಮಾರುತಗಳು ಮಳೆ ತರದೇ ಇರುವುದರ ಹಿಂದಿರುವುದು 'ಎಲ್ ನಿನೊ' ಎಂಬ ವಿದ್ಯಮಾನ.

ಆಸ್ಟ್ರೇಲಿಯಾ ಮತ್ತು ದಕ್ಷಿಣ ಅಮೆರಿಕ ಖಂಡಗಳ ನಡುವಿನ ಪೆಸಿಫಿಕ್ ಮಹಾಸಾಗರದಲ್ಲಿ ಹಾದುಹೋಗುವ ಭೂಮಧ್ಯರೇಖೆಯ ಆಸುಪಾಸಿನಲ್ಲಿ ನಡೆಯುವ ಗಾಳಿ ಮತ್ತು ಬಿಸಿನೀರಿನ ಚಲನೆಯಿಂದಾಗಿ ನಿರ್ಮಾಣವಾಗುವ ಎಲ್ ನಿನೊ ಮತ್ತು ಲಾ ನಿನಾ ಪರಿಸ್ಥಿತಿಗಳು ಹಿಂದೂ ಮಹಾಸಾಗರದಲ್ಲಿ ಸೃಷ್ಟಿಯಾಗುವ ನೈರುತ್ಯ ಮುಂಗಾರು ಮಾರುತಗಳ ಮೇಲೆ ಪರಿಣಾಮ ಬೀರುತ್ತವೆ. ಭಾರತದಲ್ಲಿ ಮಳೆಗೆ ಕಾರಣವಾಗುವುದು ಈ ಮಾರುತಗಳೇ. ಎಲ್ ನಿನೊ ವಿದ್ಯಮಾನವು ಮಳೆ ಮಾರುತ ಸೃಷ್ಟಿಯಾಗುವುದನ್ನು ತಡೆಯುತ್ತದೆ. ಹಾಗಾಗಿ, ಮಳೆ ಕಡಿಮೆಯಾಗುತ್ತದೆ. ಲಾ ನಿನಾ ವಿದ್ಯಮಾನವು ಮಳೆ ಮಾರುತದ ಸೃಷ್ಟಿ, ಚಲನೆಗೆ ಅನುಕೂಲಕರ ವಾತಾವರಣ ಸೃಷ್ಟಿಸುವುದರಿಂದ ಹೆಚ್ಚು ಮಳೆಯಾಗುತ್ತದೆ.

ಈ ಬಾರಿ ಪೆಸಿಫಿಕ್ ಮಹಾಸಾಗರದಲ್ಲಿ ಎಲ್ ನಿನೊ ಪರಿಸ್ಥಿತಿ ಉಂಟಾಗಿದೆ. ಪೆಸಿಫಿಕ್ ಮಹಾಸಾಗರದ ಭೂಮಧ್ಯೆ ರೇಖೆಯ ಬಳಿ ಸಾಗರದ ಮೇಲ್ಮೈ ಉಷ್ಣತೆಯು ಸತತ ಹಲವು ತಿಂಗಳು ಸರಾಸರಿ ತಾಪಮಾನಕ್ಕಿಂತ 0.5 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾದರೆ, ಅಲ್ಲಿ ಎಲ್ ನಿನೊ ಸನ್ನಿವೇಶ ಸೃಷ್ಟಿಯಾಗಿದೆ ಎಂದು ಘೋಷಿಸಲಾಗುತ್ತಿದೆ. ಪ್ರಸ್ತುತ ಇಲ್ಲಿ ಸಾಗರದ ನೀರಿನ ಮೇಲ್ಮೈ ಉಷ್ಣತೆ ಸರಾಸರಿ ಉಷ್ಣತೆಗಿಂತ 0.7 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ ಎಂದು ಅಮೆರಿಕದ ಸಾಗರ ಮತ್ತು ವಾತಾವರಣದ ಆಡಳಿತ ಇಲಾಖೆ (ಎನ್‌ಒಎಎ) ಹೇಳಿದೆ. ಎಲ್ ನಿನೊ ಸೃಷ್ಟಿಯಾಗಿರುವುದನ್ನು ಅದು ಜೂನ್ 11ರಂದೇ ಘೋಷಿಸಿದೆ. ನೀರಿನ ಮೇಲ್ಮೈ ಉಷ್ಣತೆ ಈ ಬಾರಿ 2 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚು ಏರಿಕೆಯಾಗುವ ಸಾಧ್ಯತೆ ಶೇ 63ರಷ್ಟಿದೆ ಎಂದು ಎನ್‌ಒಎಎಯ ಹವಾಮಾನ ತಜ್ಞರು ಮುನ್ಸೂಚನೆ ನೀಡಿದ್ದಾರೆ. ನವೆಂಬರ್‌ವರೆಗೆ ಈ ಪರಿಸ್ಥಿತಿ ಖಚಿತವಾಗಿದ್ದರೂ, ಮುಂದಿನ ಜನವರಿಯವರೆಗೂ ಈ ಪರಿಸ್ಥಿತಿ ಇರಬಹುದು. ಒಂದು ವೇಳೆ ಮುನ್ಸೂಚನೆಯಂತೆ ನಡೆದರೆ, ಈ ಬಾರಿಯ ಎಲ್ ನಿನೊ ಪರಿಣಾಮ ತೀವ್ರವಾಗಿರಲಿದೆ ಎಂದು ಅವರು ಎಚ್ಚರಿಸಿದ್ದಾರೆ.

ವಿಶ್ವ ಹವಾಮಾನ ಸಂಸ್ಥೆ ಕೂಡ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದೆ. ಎಲ್ ನಿನೊಗೆ ಸಿದ್ಧರಾಗಿ ಎಂದು ಜಗತ್ತಿಗೆ ಅದು ಎಚ್ಚರಿಕೆ ನೀಡಿದೆ. ಸರಾಸರಿಗಿಂತ ಹೆಚ್ಚು ತಾಪಮಾನ ಗರಿಷ್ಠ ಮಟ್ಟ ಮುಟ್ಟುವುದು ಯಾವಾಗ ಎಂಬ ಬಗ್ಗೆ ಖಚಿತತೆ ಇಲ್ಲದಿದ್ದರೂ, ಅದು ಪ್ರಬಲವಾಗಿರುವುದು ಖಚಿತ ಎಂದು ಅದು ಹೇಳಿದೆ. ಕೆಲವು ಹವಾಮಾನ ತಜ್ಞರು ಇದನ್ನು 'ಸೂಪರ್' ಎಲ್ ನಿನೊ ಎಂದೂ ಕರೆದಿದ್ದಾರೆ.

ಭಾರತದ ಮೇಲೆ ಹೇಗೆ ಪರಿಣಾಮ?: ಎಲ್ ನಿನೊ ವಿದ್ಯಮಾನದಲ್ಲಿ ಸಾಗರದ ಮೇಲ್ಮೈನ ಬಿಸಿನೀರು ಆಸ್ಟ್ರೇಲಿಯಾ ಖಂಡದ ಕರಾವಳಿಯಿಂದ ದಕ್ಷಿಣ ಅಮೆರಿಕದ ಪಶ್ಚಿಮ ಕರಾವಳಿಯತ್ತ ಸಂಚರಿಸುತ್ತದೆ (ಲಾ ನಿನಾ ವಿದ್ಯಮಾನದಲ್ಲಿ ಬಿಸಿನೀರು ಆಸ್ಟ್ರೇಲಿಯಾದತ್ತ ಚಲಿಸುತ್ತದೆ).

ಸಾಮಾನ್ಯವಾಗಿ ಎಲ್ ನಿನೊ ಉಂಟಾದಾಗ ಪೆಸಿಫಿಕ್ ಸಾಗರದ ಭೂಮಧ್ಯೆ ರೇಖೆಯ ಬಳಿ ಭೂಮಿಗೆ ಸುತ್ತುಹಾಕುವ ಗಾಳಿಯು ದುರ್ಬಲಗೊಳ್ಳುತ್ತದೆ. ಇದು ಬಿಸಿಗಾಳಿಯನ್ನು ಪಶ್ಚಿಮದತ್ತ ತರುತ್ತದೆ. ಈ ಗಾಳಿಯು, ಭಾರತದ ಮೇಲೆ ಸಾಗುವ ತೇವಾಂಶಭರಿತ ಮಳೆ ಮಾರುತಗಳೊಂದಿಗೆ ಸಂಪರ್ಕ ಸಾಧಿಸುತ್ತದೆ. ಇದು ಮಳೆ ಮಾರುತಗಳಲ್ಲಿನ ತೇವಾಂಶವನ್ನು ಹೀರಿಕೊಳ್ಳುವುದರಿಂದ ದೇಶದಲ್ಲಿ ಮುಂಗಾರು ಮಳೆ ಪ್ರಮಾಣ ಕಡಿಮೆಯಾಗುತ್ತದೆ.

1950ರ ನಂತರ ಎಲ್ ನಿನೊದಿಂದಾಗಿ ದೇಶದಲ್ಲಿ 25 ಬಾರಿ ಮುಂಗಾರು ಅವಧಿಯಲ್ಲಿ ಮಳೆ ಕೊರತೆ ಉಂಟಾಗಿದೆ; 10 ವರ್ಷ ಕೊರತೆ ತೀವ್ರವಾಗಿತ್ತು.

ಆಧಾರ: ಪಿಟಿಐ, ಎನ್‌ಒಎಎ.ಜಿಒವಿ, ವಿಶ್ವ ಹವಾಮಾನ ಸಂಸ್ಥೆ, ಡೌನ್ ಟು ಅರ್ಥ್, ಮಾಧ್ಯಮ ವರದಿಗಳು

> ಜಗತ್ತು ಇದನ್ನೊಂದು ಹವಾಮಾನ ತುರ್ತನ್ನಾಗಿ ಪರಿಗಣಿಸಬೇಕು. ಬಿಕ್ಕಟ್ಟಿಗೆ ಸಮನಾದ ಹವಾಮಾನ ಕ್ರಿಯಾಯೋಜನೆ ರೂಪಿಸಬೇಕು. ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಿ ನವೀಕರಿಸಬಹುದಾದ ಇಂಧನಗಳನ್ನು ಹೆಚ್ಚು ಬಳಸಬೇಕು. ದುರ್ಬಲ, ಅಪಾಯದ ಸಾಧ್ಯತೆ ಇರುವ ಜನಸಮುದಾಯಗಳನ್ನು ರಕ್ಷಿಸಬೇಕು. ಮುನ್ಸೂಚನೆಯ ವ್ಯವಸ್ಥೆಗಳನ್ನು ಸಜ್ಜುಗೊಳಿಸುವಂಥ ಕ್ರಮಗಳನ್ನು ಕೈಗೊಳ್ಳಬೇಕು
>
> **ಆ್ಯಂಟೋನಿಯೊ ಗುಟೆರೆಸ್,** ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ





ಏನೇನು ಪರಿಣಾಮ?

ಜಗತ್ತಿನ ಹಲವು ಭಾಗಗಳಲ್ಲಿ ತಾಪಮಾನ ಈಗಾಗಲೇ ಏರಿಕೆಯಾಗಿದೆ. ಹವಾಮಾನ ಸಂಸ್ಥೆಗಳು ನೀಡುತ್ತಿರುವ ಮುನ್ಸೂಚನೆ ನಿಜವಾದರೆ, ತಾಪಮಾನ ಏರಿಕೆಗೆ ಎಲ್ ನಿನೊ ಮತ್ತಷ್ಟು ತುಪ್ಪ ಸುರಿಯಲಿದೆ. ಇದರಿಂದ ಜಾಗತಿಕ ತಾಪಮಾನವು ದಾಖಲೆಯ ಮಟ್ಟಕ್ಕೆ ಏರುವ ಸಾಧ್ಯತೆ ಇದೆ. ಅದರ ಪರಿಣಾಮಗಳು ಇನ್ನೂ ಭಯಂಕರವಾಗಿರುವ, ದೇಶವಿದೇಶಗಳ ಗಡಿ ದಾಟಿ ವೇಗವಾಗಿ ಹರಡುವ ಸಂಭವ ಇದೆ.

ಜಗತ್ತಿನ ಅನೇಕ ದೇಶಗಳಿಗಿಂತ ಹೆಚ್ಚಾಗಿ ಭಾರತದ ಮೇಲೆ ಎಲ್ ನಿನೊ ಪರಿಣಾಮಗಳು ತೀವ್ರವಾಗಿರುವ ಸಾಧ್ಯತೆ ಇದೆ. ಹಿಂದೂ ಮಹಾಸಾಗರದಲ್ಲಿನ ತಾಪಮಾನವು ಜಾಗತಿಕ ಸರಾಸರಿಗಿಂತ ಅತಿವೇಗವಾಗಿ ಹೆಚ್ಚಾಗುತ್ತದೆ. ಇದರಿಂದ ಭಾರತವೂ ಸೇರಿದಂತೆ ದಕ್ಷಿಣ ಏಷ್ಯಾದಲ್ಲಿ ಮಳೆಮಾರುತಗಳು, ಸಾಗರದ ಮೇಲ್ಮೈ ಉಷ್ಣತೆ, ಚಂಡಮಾರುತಗಳು ಉಂಟಾಗುವ ಸಂಭವ ಇದೆ.

ಹಾಗೆಂದು, ಭಾರತದಲ್ಲಿ ಎಲ್ ನಿನೊದಿಂದ ಮುಂಗಾರು ದುರ್ಬಲವಾಗಿರಲಿದೆ, ಮಳೆ ಕಡಿಮೆಯಾಗಲಿದೆ ಎನ್ನುವುದು ಶತಸ್ಸಿದ್ಧ ಎಂದು ಹೇಳಲಾಗುವುದಿಲ್ಲ. ಹವಾಮಾನದ ಮೇಲೆ ಪ್ರಭಾವ ಬೀರುವ ಇತರ ಅಂಶಗಳೂ ನೈರುತ್ಯ ಮುಂಗಾರಿನ ಮೇಲೆ ಪರಿಣಾಮ ಉಂಟುಮಾಡಲಿವೆ. ಮುಖ್ಯವಾಗಿ, ಹಿಂದೂ ಮಹಾಸಾಗರದಲ್ಲಿನ ಮೇಲ್ಮೈಯಲ್ಲಿನ ಉಷ್ಣಾಂಶದ ಏರಿಳಿತವು (ಇಂಡಿಯನ್ ಓಶನ್ ಡೈಪೋಲ್–ಐಒಡಿ) ಎಲ್ ನಿನೊ ಅನ್ನು ಬಲಪಡಿಸಬಹುದು ಇಲ್ಲವೇ ಅದರ ಪ್ರಭಾವವನ್ನು ಕಡಿಮೆ ಮಾಡಿ ಹೆಚ್ಚು ಮಳೆ ಬೀಳಲು ಕಾರಣವಾಗಬಹುದು. 1997–98ರಲ್ಲಿ ಈ ರೀತಿ ನಡೆದಿತ್ತು; ಎಲ್ ನಿನೊ ಇದ್ದರೂ ಮಾಮೂಲಿಗಿಂತ ಶೇ 2ರಷ್ಟು ಹೆಚ್ಚು ಮಳೆ ಸುರಿದಿತ್ತು.

ಐಎಂಡಿ ಪ್ರಕಾರ, ಮುಂದಿನ ತಿಂಗಳುಗಳಲ್ಲಿ ಹಿಂದೂಮಹಾಸಾಗರದಲ್ಲಿನ ಪರಿಸ್ಥಿತಿ ಬದಲಾಗಿ, ಮಳೆ ಹೆಚ್ಚಾದರೂ ಆಗಬಹದು. ಹಾಗೇನಾದರೂ ಘಟಿಸಿದರೆ, ಎಲ್ ನಿನೊದ ಪರಿಣಾಮಗಳು ಕೊಂಚಮಟ್ಟಿಗೆ ಕಡಿಮೆಯಾಗಲಿವೆ. ಆದರೆ, ಈ ಬಾರಿ ಐಒಡಿ ದುರ್ಬಲವಾಗಿದ್ದು, ಅದು ಮಳೆ ತರುವ ಸಾಧ್ಯತೆ ಕಡಿಮೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಜನಸಂಖ್ಯಾ ಸ್ವರೂಪ ಅಧ್ಯಯನ ಶೀಘ್ರವೇ ರಾಜ್ಯಗಳಿಗೆ ಸಮಿತಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆಗಳ ಕುರಿತ ಪರಿಶೀಲನೆಗೆ ರಚಿಸಿರುವ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವ್ರೋಲೆಕರ್ ಅವರ ನೇತೃತ್ವದ ಉನ್ನತ ಮಟ್ಟದ ಸಮಿತಿಯು ಶೀಘ್ರದಲ್ಲಿಯೇ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಭೇಟಿ ನೀಡಿ ಪ್ರಥಮ ಹಂತದ ಮಾಹಿತಿ ಪಡೆಯಲಿದೆ.

ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದ ಸಮಿತಿ ಸದಸ್ಯರು, ಸಮಿತಿ ರಚನೆಯಾದಾಗಿನಿಂದ (ಮೇ 26) ಆಗಿರುವ ಕೆಲಸದ ಪ್ರಗತಿ ಕುರಿತು ವಿವರಿಸಿದರು ಎಂದು ಪ್ರಕಟಣೆ ತಿಳಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ದುರ್ಗಾ ಶಂಕರ್ ಮಿಶ್ರಾ, ಮಾಜಿ ಐಪಿಎಸ್ ಅಧಿಕಾರಿ ಬಾಲಾಜಿ ಶ್ರೀವಾಸ್ತವ, ಅರ್ಥಶಾಸ್ತ್ರಜ್ಞರಾದ ಶಮಿಕಾ ರವಿ, ಜನಗಣತಿ ಆಯುಕ್ತರು ಮತ್ತು ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ (ವಿದೇಶಿಯರು–1) ಸಮಿತಿಯಲ್ಲಿರುವ ಇತರ ಸದಸ್ಯರಾಗಿದ್ದಾರೆ.

'ಸಮಿತಿಯು ಶೀಘ್ರದಲ್ಲಿಯೇ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಭೇಟಿ ನೀಡಲಿದ್ದು, ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆಗಳ ಕುರಿತು ಅಲ್ಲಿನ ಸರ್ಕಾರಗಳಿಂದ ಮೊದಲ ಹಂತದ ಮಾಹಿತಿ ಮತ್ತು ಪ್ರತಿಕ್ರಿಯೆಗಳನ್ನು ಪಡೆಯಲಿದೆ' ಎಂದು ಅದು ಹೇಳಿದೆ.

ಇದಕ್ಕೆ ಪೂರಕವಾದ ಮಾಹಿತಿ ಪಡೆಯಲು ವಿವರವಾದ ಪ್ರಶ್ನಾವಳಿ ಸಿದ್ಧಪಡಿಸಲಾಗಿದೆ ಎಂದೂ ಅದು ತಿಳಿಸಿದೆ.

ಅಕ್ರಮ ವಲಸೆ ಮತ್ತು ಇತರ ಅಸಹಜ ಕಾರಣಗಳಿಂದ ಉಂಟಾಗುವ ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆಗಳನ್ನು ವೈಜ್ಞಾನಿಕವಾಗಿ ನಿರ್ಣಯಿಸಿ, ಅವುಗಳ ಕಾರಣಗಳನ್ನು ವಿಶ್ಲೇಷಿಸುವುದು, ಸೂಕ್ತ ನೀತಿ, ಶಾಸಕಾಂಗ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಶಿಫಾರಸು ಮಾಡುವ ಕಾರ್ಯವನ್ನು ಈ ಸಮಿತಿಗೆ ವಹಿಸಲಾಗಿದೆ.

ಸಮಿತಿಯ ದೈನಂದಿನ ಕೆಲಸಗಳಲ್ಲಿ ಮತ್ತು ಸದಸ್ಯರ ಭೇಟಿಗಳ ವೇಳೆಯಲ್ಲಿ ಅಗತ್ಯವಿರುವ ಎಲ್ಲ ನೆರವು ಒದಗಿಸುವಂತೆ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅವರಿಗೆ ಸಚಿವ ಅಮಿತ್ ಶಾ ನಿರ್ದೇಶಿಸಿದ್ದಾರೆ.

2025ರ ಸ್ವಾತಂತ್ರ್ಯ ದಿನಾಚರಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಈ ಸಮಿತಿ ರಚಿಸುವ ಬಗ್ಗೆ ಘೋಷಣೆ ಮಾಡಿದ್ದರು. ನಂತರ ಸೆಪ್ಟೆಂಬರ್‌ನಲ್ಲಿ ಸಚಿವ ಸಂಪುಟವು ಇದಕ್ಕೆ ಒಪ್ಪಿಗೆ ನೀಡಿತ್ತು. ಈ ಸಮಿತಿಗೆ ಶಿಫಾರಸುಗಳನ್ನು ಒಳಗೊಂಡ ವರದಿ ನೀಡಲು ಒಂದು ವರ್ಷ ಕಾಲಾವಕಾಶ ನಿಗದಿಪಡಿಸಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತೀಯ ಸೇನೆಯ ಸಿಬ್ಬಂದಿ ಎಂದು ತನ್ನನ್ನು ಪರಿಚಯಿಸಿಕೊಳ್ಳುವ ವ್ಯಕ್ತಿಯೊಬ್ಬ, ಸೇನೆಯ ಹಿರಿಯ ಅಧಿಕಾರಿಗಳ ಬಗ್ಗೆ ಗಂಭೀರ ಆರೋಪ ಮಾಡುವ ವಿಡಿಯೊವನ್ನು @TheFidato ಎನ್ನುವ ಎಕ್ಸ್ ಬಳಕೆದಾರ ಹಂಚಿಕೊಂಡಿದ್ದಾರೆ. ತನ್ನ ಹೆಸರು ರಾಜೀವ್ ಎಂದು ಹೇಳಿಕೊಳ್ಳುವ ವಿಡಿಯೊದಲ್ಲಿನ ವ್ಯಕ್ತಿ, ಹಿರಿಯ ಅಧಿಕಾರಿ ತನ್ನ ಮೇಲೆ ಎರಡು ಬಾರಿ ಲೈಂಗಿಕ ದೌರ್ಜನ್ಯ ಎಸಗಿರುವುದಾಗಿ ಆರೋಪಿಸಿದ್ದಾರೆ. ಆದರೆ, ಇದು ನಿಜವಲ್ಲ.

ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಅವುಗಳನ್ನು ಗೂಗಲ್ ಲೆನ್ಸ್ ಮೂಲಕ ಸರ್ಚ್‌ಗೆ ಒಳಪಡಿಸಿದಾಗ, ಅದು ದೀಪಕ್ ಯಾದವ್ ಎನ್ನುವ ಇನ್‌ಸ್ಟಾಗ್ರಾಂ ಬಳಕೆದಾರ 2026 ಜೂನ್ 23ರಂದು ಹಂಚಿಕೊಂಡಿದ್ದ ವಿಡಿಯೊಕ್ಕೆ ಸಂಪರ್ಕ ಕಲ್ಪಿಸಿತು. ಎರಡೂ ವಿಡಿಯೊಗಳಲ್ಲಿ ಬಹುತೇಕ ಸಾಮ್ಯತೆಯಿತ್ತು. ಆದರೆ, ಆಡಿಯೊ ಮಾತ್ರ ಬದಲಾಗಿತ್ತು. ದೀಪಕ್ ಯಾದವ್ ಹಂಚಿಕೊಂಡಿರುವ ವಿಡಿಯೊದಲ್ಲಿ ಅವರೇ ಮಾತನಾಡಿದ್ದಾರೆ. ಆದರೆ, ವಿಡಿಯೊದಲ್ಲೆಲ್ಲೂ ಅವರು ಸೇನಾಧಿಕಾರಿಗಳ ಬಗ್ಗೆ ಯಾವುದೇ ಆರೋಪ ಮಾಡಿಲ್ಲ; ಸಿಆರ್‌ಪಿಎಫ್ ಸೇರಿದ ನಂತರದ ತಮ್ಮ ಅನುಭವದ ಬಗ್ಗೆ ಮಾತನಾಡಿದ್ದಾರೆ. ಆಡಿಯೊವನ್ನು ರಿಸೆಂಬಲ್ ಎಐ ಮೂಲಕ ಪರೀಕ್ಷಿಸಿದಾಗ, ಅದನ್ನು ಡಿಜಿಟಲ್ ಆಗಿ ಮಾರ್ಪಡಿಸಿರುವುದು ಖಚಿತವಾಯಿತು. ಇತ್ತೀಚೆಗೆ ಭಾರತೀಯ ಸೇನೆಯು ಎಕ್ಸ್ ವೇದಿಕೆಯಲ್ಲಿ ಫ್ಯಾಕ್ಟ್ ಚೆಕ್ ಖಾತೆಯೊಂದನ್ನು ತೆರೆದಿದ್ದು (@MythbusterXX), ಅದರಲ್ಲಿ ಈ ವಿಡಿಯೊದಲ್ಲಿರುವುದು ಸತ್ಯವಲ್ಲ; ಪಾಕಿಸ್ತಾನದ ಹ್ಯಾಂಡ್ಲರ್‌ಗಳು ಸುಳ್ಳು ಸುದ್ದಿ ಹರಡುತ್ತಿದ್ದಾರೆ ಎಂದು ಸ್ಪಷ್ಟೀಕರಣ ನೀಡಿದೆ. ತನ್ನ ವಿಡಿಯೊ ಬಳಸಿಕೊಂಡು ಸುಳ್ಳು ಸುದ್ದಿ ಹರಡುತ್ತಿದ್ದಾರೆ ಎಂದು ದೀಪಕ್ ಯಾದವ್ ಕೂಡ ಸ್ಪಷ್ಟೀಕರಣ ನೀಡಿದ್ದಾರೆ. ಈ ಬಗ್ಗೆ ಪಿಟಿಐ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಪದಬಂಧ 02

ಅ.ನಾ.ಪ್ರಹ್ಲಾದರಾವ್

ಎಡದಿಂದ ಬಲಕ್ಕೆ

1 ಪ್ರಚಾರ ಮಾಡುವ ಸಲುವಾಗಿ ಮಾಡಿದ ಪಯಣ (3)
3 ಅಪರೂಪಕ್ಕೆ ಪರರಿಗೆ ದೊರೆತದ್ದು ಹೆಚ್ಚುವರಿ (3)
5 ಪಾಡ್ಯದಿಂದ ಆರಂಭವಾದ ನಾಲ್ಕನೆಯ ದಿನ (2)
6 ಮಧ್ಯ ಅಮೆರಿಕದ ದಕ್ಷಿಣ ತುದಿ ರಾಷ್ಟ್ರ (3)
7 ತಹಶೀಲ್ದಾರರ ಸಂಧಾನ ತವಕ ಮೂಡಿಸುವಂತಿದೆ (2)
11 ಸಂವಿಧಾನದ ಹಲವು ವಿಧದ ನಿಯಮ (2)
13 ಮುಗ್ಗಿದ ಹಿಟ್ಟು ಮಾರಿದವನಿಗೆ ಬಂದ ಸಂಕಷ್ಟ (3)
14 ಸೀತಾರ ವಾದನ ಕೇಳಿ ಜ್ವಲಿಸಿದ ನಕ್ಷತ್ರ (2)
15 ರವೆಯಲ್ಲಿ ಹುದುಗಿಸಿಟ್ಟ ವಜ್ರ (3)
16 ದುಡುಮ್ಮನೆಂದು ಬಿದ್ದಾತ ಪರೀಕ್ಷೆಯಲ್ಲಿ ನಪಾಸು (3)

ಮೇಲಿನಿಂದ ಕೆಳಕ್ಕೆ

1 ವಾಸಂತಿಯ ಸಂಗ ಬಯಸಿ ಬಂದ ಸ್ನೇಹಿತೆ (3)
2 ಅನರ್ಘ್ಯ ಮಣಿಗಳಿಂದ ಪೋಣಿಸಿದ ಆಭರಣ (4)
3 ಅನುಮಾನ ಪಡದೆ ಶ್ರೀಮತಿಗೆ ನೀಡಿದ ಒಪ್ಪಿಗೆ (4)
4 ನಿಜ ನಿರತನಾದವನಿಗೆ ಸಿಕ್ಕ ಬೆಳ್ಳಿಲೋಹ (3)
5 ದೇವಸ್ಥಾನಗಳ ಬಳಿಯ ನಾಲ್ಕು ಮೂಲೆಗಳ ಕೂಪ (5)
8 ಜಿಂಕೆಯ ಗುರುತನ್ನು ಧರಿಸಿದವನಾದ ಚಂದ್ರ (5)
9 ಸಮುದ್ರದ ಆದಾಯ ಎಣಿಸಿದ ಜನರಾಶಿಯ ಕೂಟ (4)
10 ಕಟ್ಟು ಹಾಕಿದ ಪಾಡು ನೋಡಿ ತಂದ ನಿಯಮ (4)
12 ಜೈಕಾರಕ್ಕೆ ವಿರುದ್ಧವಾಗಿ ಕೇಳಿಬಂದ ಕೂಗು (3)
14 ರಾಮನಿಂದ ಹತಳಾದ ರಕ್ಕಸಿಯಂತಹ ಜಗಳಗಂಟಿ (3)



01ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿನಾಯಕ 4.ಚೌಕಿದಾರ 6.ದಮ್ಮಡಿ 7.ತಾಳಿ 8.ಕೆನೆ 10.ಬತ್ತಾಸು 11.ಲಲನೆ 13.ಗೆಣಸು 15.ಆಖೈರು 16.ರವ 18.ಜಾಡು 20.ಸಂಚಿತ 22.ಅಗಣಿತ 23.ಕವಾಡಿಗ.

ಮೇಲಿಂದ ಕೆಳಕ್ಕೆ: 2.ನಾವೆ 3.ಕದಳಿ 4.ಚೌಡಿಕೆ 5.ದಾದಿ 7.ತಾಸು 9.ನೆಲ 10.ಬಡಿಗೆ 12.ನೆತ್ತರು 14.ಸುರ 15.ಆಡು 17.ವಸಂತ 18.ಜಾತಕ 19.ಮಂಗ 21.ಗುಡಿ.

ಸುಡೊಕು 02

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4	8		2	5	3	7		9
2								
		9	4		6	2		8
3		8	1	6		5		7
1					7		2	
		7	5		2			
6		4	3			8	7	
						3		1
5			6	8	1			

01 ಸುಡೊಕು

3	7	5	1	4	2	6	9	8
1	4	9	8	6	7	5	2	3
6	2	8	3	9	5	1	4	7
2	1	7	9	5	3	4	8	6
9	5	4	7	8	6	3	1	2
8	3	6	4	2	1	9	7	5
5	9	3	2	1	8	7	6	4
7	8	1	6	3	4	2	5	9
4	6	2	5	7	9	8	3	1

ಜಾದೂ

ನುಡಿ ಬೆಳಗು

ಪಿ.ಚಂದ್ರಿಕಾ

ಅಮೆರಿಕದಲ್ಲಿ ಟಾರ್‌ಬೆಲ್ ಎನ್ನುವ ಜಾದೂಗಾರನಿದ್ದ. ಅವನ ಜಾದೂ ಬಗ್ಗೆ ಎಲ್ಲರೂ ಸದಾ ಅಚ್ಚರಿ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಅವನಿಗೂ ಅದಕ್ಕಾಗಿ ತುಂಬಾ ಹೆಮ್ಮೆಯಿತ್ತು. ಯಾರಾದರೂ ಅವನ ಬಗ್ಗೆ, 'ಈತನಷ್ಟು ಒಳ್ಳೆಯ ಜಾದೂಗಾರನನ್ನು ನಾವು ನೋಡೇ ಇಲ್ಲ' ಅಂದರೆ ಅವನಿಗೆ ತುಂಬಾ ಸಂತಸವಾಗುತ್ತಿತ್ತು. ಕ್ರಮೇಣ ಅವನಲ್ಲಿ ಅದು ಅಹಂಗೆ ತಿರುಗಿತ್ತು.

ಒಂದು ಪ್ರದರ್ಶನದಲ್ಲಿ ಟಾರ್‌ಬೆಲ್ ತನ್ನ ಜಾದೂವಿನಿಂದ ವ್ಯಕ್ತಿಯೊಬ್ಬನನ್ನು ಕತ್ತರಿಸಿ ಮತ್ತೆ ಅಂಟಿಸಿ ದೊಡ್ಡ ಚಪ್ಪಾಳೆ ಗಿಟ್ಟಿಸಿಕೊಂಡ. ಜನ ಅವನನ್ನು ಮುತ್ತಿಕೊಂಡರು. ಎಲ್ಲರ ಪ್ರಶ್ನೆ: 'ಇದು ಹೇಗೆ ಸಾಧ್ಯ?'. ಅವನು ತನ್ನ ಜಾದೂ ಕೋಲನ್ನು ಎತ್ತಿ ತೋರಿಸಿ 'ಇದರಿಂದ' ಎಂದ ಹೆಮ್ಮೆಯಿಂದ. ಅದ್ಭುತ ಪ್ರಶಂಸೆಯ ನಡುವೆ ಆ ಜನಸಂದಣಿಯ ಮಧ್ಯೆಯೇ ಪುಟ್ಟ ಹುಡುಗಿಯೊಬ್ಬಳು ಅವನನ್ನು ಮಾತನಾಡಿಸಲು ಕಾಯುತ್ತಲೇ ಇದ್ದಳು. ಆ ಗದ್ದಲದ ನಡುವೆ ಆಗಲೇ ಇಲ್ಲ.

ಬೆಳಗ್ಗೆಯೇ ಟಾರ್‌ಬೆಲ್ ಉಳಿದುಕೊಂಡಿದ್ದ ಹೋಟೆಲಿನ ಬಾಗಿಲನ್ನು ಯಾರೋ ತಟ್ಟಿದರು. ಅವನು ಬಂದು ಬಾಗಿಲನ್ನು ತೆರೆದ. ಎದುರು ಅದೇ ಹುಡುಗಿ ತನ್ನ ತಾಯಿ ಜೊತೆ ನಿಂತಿದ್ದಳು. ಮುದ್ದಾದ ಮಗುವನ್ನು ನೋಡಿ ಅವನಿಗೆ ಸಂತೋಷವಾಯಿತು. ತಾಯಿಯು, 'ನಿನ್ನೆಯ ಪ್ರದರ್ಶನದ ಬಳಿಕ ನಿಮ್ಮನ್ನು ಮಾತಾಡಿಸಬೇಕು ಎಂದು ಹಟ ಹಿಡಿದಿದ್ದಾಳೆ. ನಿನ್ನೆಯೂ ಪ್ರಯತ್ನಿಸಿದೆ. ಆದರೆ ಆಗಲಿಲ್ಲ. ನನ್ನ ಯಾವ ಮಾತನ್ನೂ ಅವಳು ಕೇಳುತ್ತಿಲ್ಲ' ಎಂದಳು. 'ಹೌದಾ' ಎನ್ನುತ್ತಾ ಮಗುವನ್ನು ಹತ್ತಿರ ಕರೆದುಕೊಂಡು, 'ಯಾಕಮ್ಮಾ, ನನ್ನಿಂದ ಏನಾಗಬೇಕು?' ಎಂದ. ಹುಡುಗಿ ಮುರಿದುಹೋದ ಗೊಂಬೆಯನ್ನು ತೋರಿಸಿ, 'ಈ ಗೊಂಬೆಯ ತಲೆ ಮುರಿದುಹೋಗಿದೆ. ಅಮ್ಮನಿಗೆ ಹೇಳಿದರೆ ಇದನ್ನು ಸರಿಮಾಡಲು ಸಾಧ್ಯವಿಲ್ಲ ಅಂದಳು. ನಿನ್ನೆ ನೀವು ಮನುಷ್ಯರನ್ನೇ ಕತ್ತರಿಸಿ ಅಂಟಿಸಿದಿರಿ. ನನ್ನ ಗೊಂಬೆಯನ್ನೂ ಅಂಟಿಸಿಕೊಡಲು ಖಂಡಿತಾ ನಿಮಗೆ ಸಾಧ್ಯವಿದೆ' ಎಂದಳು. ತಾನೊಬ್ಬ ದೊಡ್ಡ ಜಾದೂಗಾರ ಎನ್ನುವ ಆತನ ಹಮ್ಮು ಪಟ್ಟೆಂದು ಇಳಿದುಹೋಯಿತು.

ಎದುರು ಇರುವ ಪುಟ್ಟ ಹುಡುಗಿ ಈತ ತನ್ನ ಗೊಂಬೆಯನ್ನು ಅಂಟಿಸಿಕೊಡುತ್ತಾನೆಂಬ ಭರವಸೆಯಲ್ಲಿ ನಿಂತಿದ್ದಾಳೆ. ಅವಳಿಗೆ ಹೇಗೆ ಅರ್ಥ ಮಾಡಿಸಿಯೇನು, ನಾನು ಮಾಡಿದ್ದು ಜಾದೂ, ಬರಿಯ ಕಣ್ಕಟ್ಟು, ಸುಳ್ಳು ಎಂದು? ಹಾಗೆ ಹೇಳಿದರೆ ಆ ಪುಟ್ಟ ಹೃದಯಕ್ಕೆ ಮತ್ತಷ್ಟು ನೋವಾಗುತ್ತದೆ ಎನ್ನುವ ಜಿಜ್ಞಾಸೆಗೆ ಬಿದ್ದ ಟಾರ್‌ಬೆಲ್ ಒಂದು ನಿರ್ಧಾರಕ್ಕೆ ಬಂದ. ಅವಳಿಂದ ಆ ಗೊಂಬೆಯನ್ನು ತೆಗೆದುಕೊಂಡು, 'ನಾಳೆ ಬಾ. ಇದನ್ನು ಹೊಸದಾಗಿಸಿರುತ್ತೇನೆ' ಎಂದ. 'ಈಗ ಸಾಧ್ಯವಿಲ್ಲವೇ?' ಎಂದಳು ಹುಡುಗಿ. ತಕ್ಷಣಕ್ಕೆ ಹೊಳೆದ, 'ನನ್ನ ಜಾದೂ ಉಡುಪನ್ನು ಒಗೆಯಲು ಕಳಿಸಿದ್ದೇನೆ. ಬಂದ ತಕ್ಷಣ ಮಾಡಿ ಇಟ್ಟಿರುತ್ತೇನೆ' ಎನ್ನುವ ಇನ್ನೊಂದು ಸುಳ್ಳನ್ನು ಹೇಳಿದ. ನಾಳೆ ತನ್ನ ಗೊಂಬೆ ಸರಿಯಾಗುತ್ತೆ ಎನ್ನುವ ಭರವಸೆಯಿಂದ ಹುಡುಗಿ ಹೊರಟಳು.

ಟಾರ್‌ಬೆಲ್ ತಾನುಳಿದಿದ್ದ ನಗರದ ಮೂಲೆ ಮೂಲೆಯನ್ನೂ ಹುಡುಕಿಸಿ ಅಂಥಾದ್ದೇ ಇನ್ನೊಂದು ಗೊಂಬೆಯನ್ನು ತರಿಸಿದ. ಮಾರನೆಯ ದಿನ ಬಂದ ಹುಡುಗಿ ಅದನ್ನು ನೋಡಿ ಸಂತಸದಿಂದ ಅವನ ಕೆನ್ನೆಗೆ ಮುತ್ತನ್ನಿತ್ತು, 'ನಿಜಕ್ಕೂ ನೀವು ದೊಡ್ಡ ಜಾದೂಗಾರ' ಎಂದಳು. ಅವನ ಕಣ್ಣುಗಳು ತುಂಬಿಬಂದವು. 'ಹೃದಯಗಳ ದುಃಖವನ್ನು ತೆಗೆದುಹಾಕುವ ಜಾದೂ ನನಗೆ ಗೊತ್ತಿರಬೇಕಿತ್ತು. ಅದೇ ಎಲ್ಲಕ್ಕಿಂತ ದೊಡ್ಡದು, ಜೀವನಕ್ಕೆ ಉಪಯೋಗವಾಗುವ ವಿದ್ಯೆ ಎಲ್ಲಕ್ಕಿಂತ ದೊಡ್ಡದು' ಎಂದು ಅಂದುಕೊಂಡ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

02 ಜುಲೈ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಕೃಷ್ಣ ದ್ವಿತೀಯ ಗಂ. 9-38 ನಕ್ಷತ್ರ: ಉತ್ತರಾಷಾಢ ಗಂ. 9-28 ಯೋಗ: ವೈಧೃತಿ ಗಂ. 16-40 ಕರಣ: ಗರ ಗಂ. 9-38, ಮಿಥುನ ಮಾಸದ 17 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 3 ನೇ ಪಾದ. ರಾಹುಕಾಲ : ಮಧಾಹ್ನ 01-30 - 03-00, ಸೂರ್ಯೋದಯ : 06-12 ಸೂರ್ಯಾಸ್ತ : 06-58, ಮುಸ್ಲಿಂ ದಿನಾಂಕ : 16 ಮೊಹರಂ, ಅದೃಷ್ಟ ಸಂಖ್ಯೆ : 4, 1.

ಮೇಷ: ವಾಹನಗಳ ಬಿಡಿ ಭಾಗ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ದಿನ. ಮುಂಬಡ್ತಿಯ ವಿಚಾರವಾಗಿ ಹೋರಾಟ ನಡೆಸುವುದು ವ್ಯರ್ಥ. ಕಾಗದ ಕಾರ್ಖಾನೆ ಮಾಲೀಕರಿಗೆ ಲಾಭವಾಗಲಿದೆ.

ವೃಷಭ: ನಿರೀಕ್ಷೆಗೆ ಅಥವಾ ಪ್ರಯತ್ನಕ್ಕೆ ನಿಲುಕದ ವ್ಯಕ್ತಿಗಾಗಲಿ ಅಥವಾ ವಸ್ತುವಿಗಾಗಲೀ ಕಾಲಹರಣ ಮಾಡದಿರಿ. ಬರಬೇಕಾದದು ನಿಮ್ಮನ್ನು ಅರಸಿ ಬಂದೇ ಬರಲಿದೆ. ಗುರುವಿನ ಅನುಗ್ರಹ ಉಂಟಾಗಲಿದೆ.

ಮಿಥುನ: ಸಾಂಪ್ರದಾಯಕ ವಿಚಾರದ ಚಿಂತನೆ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಘನತೆ ಹೆಚ್ಚಲಿದೆ. ಅನಿವಾರ್ಯತೆಗೆ ಬಂಧು ಮಿತ್ರರಿಂದ ಸಹಕಾರ ಲಭ್ಯ.

ಕರ್ಕಾಟಕ: ನೂತನ ವ್ಯವಹಾರದ ಪ್ರಾರಂಭ ಯೋಚನೆಯಲ್ಲಿರುವವರು ಅದರ ಸಾಧಕ–ಬಾಧಕದ ಬಗ್ಗೆ ಸಂಪೂರ್ಣವಾಗಿ ಗಮನಹರಿಸಿ. ಮದುವೆಗೆ ಸಂಬಂಧಿಸಿದಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಸಿಂಹ: ಹರಿತ ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆಯಲ್ಲಿ ಅಪಾಯ ಸಂಭವಿಸಬಹುದು. ಗಮನದಿಂದ ಕೆಲಸವನ್ನು ಮಾಡಿ. ಆತ್ಮಸ್ಥೈರ್ಯ ಹೆಚ್ಚಾಗಿ ಕೆಲಸ ಹುರುಪಿನಿಂದ ಸಾಗಲಿದೆ.

ಕನ್ಯಾ: ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಕಾಲ ಬಂದಿದೆ. ಪ್ರಯತ್ನಗಳು ವ್ಯರ್ಥವಾಗದೆ ಸರಿಯಾಗಿ ಫಲಿತಾಂಶವನ್ನು ಪಡೆಯಲು ಮನೆ ದೇವರ ಹಾಗೂ ಗುರುಹಿರಿಯರ ಆಶೀರ್ವಾದ ಪಡೆಯಿರಿ.

ತುಲಾ: ಬೇರೆಯವರ ಬಗ್ಗೆ ಅನುಕಂಪ ತೋರುವ ನೀವು ನಿಮ್ಮ ಬಗ್ಗೆಯೂ ಗಮನ ಹರಿಸಿ. ಲೆಕ್ಕಾಚಾರದ ಕಾಗದ-ಪತ್ರಗಳ ನಿರ್ವಹಣೆಯಲ್ಲಿ ಎಚ್ಚರಿಕೆ ಇರಲಿ. ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು.

ವೃಶ್ಚಿಕ: ಕಾರ್ಯಕ್ಷೇತ್ರದಲ್ಲಿ ಆಗಾಗ ಪ್ರಯತ್ನಬಲಕ್ಕೆ ಅಡ್ಡಿ ಆತಂಕ ಗಳಿದ್ದರೂ ಕಾರ್ಯ ಸಾಧನೆಯಲ್ಲಿ ಜಯ ಕಾಣುವಿರಿ. ರೈತರಿಗೆ ಕಾಡು ಪ್ರಾಣಿಗಳ ಕಾಟದಿಂದಾಗಿ ನಷ್ಟ ಸಂಭವಿಸಬಹುದು.

ಧನು: ನಷ್ಟವಾಗುವ ಸೂಚನೆಗಳು ಇರುವುದರಿಂದ ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಈ ದಿನ ಒಪ್ಪಿಕೊಳ್ಳಬೇಡಿ. ಸರಳ ಸ್ವಭಾವದಿಂದ ಮೆಚ್ಚುಗೆ ಪಡೆಯಬಹುದು.

ಮಕರ: ಸಾಧ್ಯವಾದಷ್ಟು ತಾಳ್ಮೆಯಿಂದ ಮುಂದುವರಿದಲ್ಲಿ ನೆಮ್ಮದಿ ಕಾಣುವಿರಿ. ಶರೀರದಲ್ಲಿ ಉಲ್ಲಾಸ ಇರಲಿದೆ. ಕೆಲಸದ ನಿಮಿತ್ತ ಮಗಳನ್ನು ವಿದೇಶಕ್ಕೆ ಕಳುಹಿಸುವಿರಿ.

ಕುಂಭ: ವೈಯಕ್ತಿಕ ಹಾಗೂ ಔದ್ಯೋಗಿಕ ಸಂಬಂಧಗಳನ್ನು ಸರಿ ಗೊಳಿಸುವುದರಲ್ಲಿ ಯಶಸ್ವಿಯಾಗುವಿರಿ. ದುಃಖಗಳ ತೀವ್ರತೆ ದಿನದಿಂದ ದಿನಕ್ಕೆ ಕಡಿಮೆಯಾಗಲಿದೆ.

ಮೀನ: ಜನರೊಂದಿಗಿನ ಹೆಚ್ಚಿನ ಸಂಪರ್ಕದಿಂದ ಅನಿವಾರ್ಯದ ಸಮಯವನ್ನು ಸುಲಭವಾಗಿ ಎದುರಿಸಬಹುದು. ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳವಾದುದು ಎಂದು ತಿಳಿದುಕೊಳ್ಳುವಿರಿ.



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	23,865
ಇಂದಿನ ಅಂತ್ಯ	24,005
ದಿನದ ಗರಿಷ್ಠ	24,049
	140

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು: 100 ಕ್ಕೆ	₹710
12 ಕ್ಕೆ	₹94
ಮೈಸೂರು: 100 ಕ್ಕೆ	₹725

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹262.50
ಆರ್‌ಎಸ್‌ಎಸ್-5	₹257.50
ಗುಡ್ ಲಾಟ್	₹224

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಸಿ.ಬಿ)	₹402-715
ದ್ವಿತಳಿ (ಬಿ.ವಿ)	₹555-879

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)	
ಶೇಂಗಾ (ರಿಫೈನ್ಡ್)	₹1560 (1580)
ಸೋಯಾ (ರಿಫೈನ್ಡ್)	₹1450 (1455)
ಸೂರ್ಯಕಾಂತಿ (ರಿಫೈನ್ಡ್)	₹1655 (1655)
ಪಾಮೋಲಿನ್	₹1450 (1450)

ವಾಟ್ಸ್‌ಆ್ಯಪ್‌ಗೆ ಕೇಂದ್ರ ನೋಟಿಸ್?

ವಾಟ್ಸ್‌ಆ್ಯಪ್ ಘೋಷಿಸಿರುವ 'ಯೂಸರ್‌ನೇಮ್' ಸೌಲಭ್ಯದ ಬಗ್ಗೆ ಕೇಂದ್ರ ಸರ್ಕಾರದ ತಕರಾರು

ನವದೆಹಲಿ (ಪಿಟಿಐ): ಮೊಬೈಲ್ ದೂರವಾಣಿ ಸಂಖ್ಯೆಯನ್ನು ಬಹಿರಂಗ ಪಡಿಸದೆ, ಬಳಕೆದಾರರ ಹೆಸರು ಮಾತ್ರ ಬಳಸಿ ಸಂದೇಶ ರವಾನಿಸುವ ಅವಕಾಶ ನೀಡುವುದಾಗಿ ಹೇಳಿರುವ ವಾಟ್ಸ್‌ಆ್ಯಪ್‌ಗೆ ಕೇಂದ್ರ ಸರ್ಕಾರ ನೋಟಿಸ್ ನೀಡಿದೆ ಎಂದು ಮೂಲಗಳು ಹೇಳಿವೆ.

ಈ ವಿಚಾರವಾಗಿ ಸಮಾಲೋಚನೆ ಪೂರ್ಣಗೊಳ್ಳುವವರೆಗೆ ಸೌಲಭ್ಯವನ್ನು ಬಳಕೆದಾರರಿಗೆ ಮುಕ್ತಗೊಳಿಸಬಾರದು ಎಂಬುದಾಗಿ ಅದು ಕಂಪನಿಗೆ ತಾಕೀತು ಮಾಡಿದೆ ಎಂದೂ ಗೊತ್ತಾಗಿದೆ.

ಹೊಸ ಸೌಲಭ್ಯದ ಬಗ್ಗೆ ಮೂರು ದಿನಗಳಲ್ಲಿ ವಿವರ ನೀಡುವಂತೆ ಸರ್ಕಾರವು ವಾಟ್ಸ್‌ಆ್ಯಪ್‌ಗೆ ಸೂಚಿಸಿದೆ ಎಂದು ಮೂಲವು ತಿಳಿಸಿದೆ.

ಕಾನೂನು ಜಾರಿ ಸಂಸ್ಥೆಗಳು ಕೂಡ ವಾಟ್ಸ್‌ಆ್ಯಪ್‌ನ ಹೊಸ ನಡೆಯ ಬಗ್ಗೆ ಪರಿಶೀಲನೆ ನಡೆಸುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್‌ನ ಹೊಸ ನಡೆಯು ಗಂಭೀರ ಕಳವಳಗಳಿಗೆ ಕಾರಣವಾಗಿದೆ. ವಾಟ್ಸ್‌ಆ್ಯಪ್ ನೀಡುವ ಉತ್ತರವು ತೃಪ್ತಿಕರ ಆಗದೆ ಇದ್ದರೆ ಸರ್ಕಾರವು ಈ ಸೌಲಭ್ಯ ಜಾರಿಗೆ ಬರುವುದನ್ನು ತಡೆಯಬಹುದು ಎಂದು ಕೂಡ ಅಧಿಕಾರಿಯೊಬ್ಬರು ನೋಟಿಸ್ ಜಾರಿಗೂ ಮೊದಲು ಹೇಳಿದ್ದರು. ಈ ವಿಚಾರವಾಗಿ ವಾಟ್ಸ್‌ಆ್ಯಪ್ ಕಡೆಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ವಾಟ್ಸ್‌ಆ್ಯಪ್ ಜಾರಿಗೆ ತರಲು ಉದ್ದೇಶಿಸಿರುವ ಹೊಸ ಸೌಲಭ್ಯವು ಬಳಕೆದಾರರಿಗೆ ವಿವಿಧ ಸಂಸ್ಥೆ, ಸಂಘಟನೆ ಅಥವಾ ಬೇರೆ ವ್ಯಕ್ತಿಗಳ ಹೆಸರನ್ನು ಹೋಲುವಂತಹ ಹೆಸರನ್ನು ತಮ್ಮದೆಂದು ಬಳಸಿಕೊಳ್ಳಲು ಅವಕಾಶ ಕೊಡುತ್ತದೆ. ಈ ಮೂಲಕ ಅದು ವಂಚನೆಯ ಸಾಧ್ಯತೆಯನ್ನು ಸೃಷ್ಟಿಸುತ್ತದೆ. ಇದು ಸಮಾಜದ ಸುರಕ್ಷತೆಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು ಎಂದು ಕೇಂದ್ರ ಸರ್ಕಾರದ ಮೂಲವೊಂದು ಹೇಳಿದೆ.

> ಖಾಸಗಿತನಕ್ಕೆ ಬೆಲೆ ಇದೆ ಎಂಬುದು ನಿಜ. ಹಾಗೆಯೇ ಉತ್ತರದಾಯಿತ್ವಕ್ಕೂ ಬೆಲೆ ಇದೆ
> — ಜ್ಯೋತಿರ್ ಸಿಂಗ್, ಸಿಇಒ, ಸಾಫ್ಟ್‌ಡೆಲ್ಟಾನ್

ವಾಟ್ಸ್‌ಆ್ಯಪ್ ಬಳಕೆದಾರರು ತಮ್ಮ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಬಹಿರಂಗಪಡಿಸದೆ, ಇತರರ ಜೊತೆ ಸಂವಹನ ನಡೆಸಲು ಸಾಧ್ಯವಾಗಿಸುವ 'ಯೂಸರ್‌ನೇಮ್' ಸೌಲಭ್ಯವನ್ನು ಈ ವರ್ಷದಲ್ಲಿ ಮುಂದೆ ಜಾರಿಗೆ ತರಲಾಗುತ್ತದೆ ಎಂದು ಕಂಪನಿ ಹೇಳಿದೆ. ಬಳಕೆದಾರರು ಯೂಸರ್‌ನೇಮ್‌ಗಳನ್ನು ಈಗಲೇ ಕಾಯ್ದಿರಿಸಬಹುದು ಎಂದೂ ತಿಳಿಸಿದೆ.

ಖ್ಯಾತ ವ್ಯಕ್ತಿಗಳ ಹೆಸರು ದುರ್ಬಳಕೆಯನ್ನು ವಾಟ್ಸ್‌ಆ್ಯಪ್ ಹೇಗೆ ತಡೆಯುತ್ತದೆ ಎಂಬ ಪ್ರಶ್ನೆಯನ್ನು ಹಲವರು ಸಾಮಾಜಿಕ ಜಾಲತಾಣಗಳ ಮೂಲಕ ಎತ್ತಿದ್ದಾರೆ. ಖ್ಯಾತ ಬ್ರ್ಯಾಂಡ್ ಅಥವಾ ಸಂಸ್ಥೆಗಳ ಹೆಸರು ಹೋಲುವ ಇನ್ನೊಂದು ಹೆಸರನ್ನು ಪಡೆದು, ಇದು ವಂಚಕರಿಗೆ ಸುಲಭದ ದಾರಿಯನ್ನು ಸೃಷ್ಟಿಸಬಹುದು ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಉದ್ದಿಮೆಗಳ, ಸರ್ಕಾರಿ ಸಂಸ್ಥೆಗಳ ಅಥವಾ ಸಾರ್ವಜನಿಕ ವ್ಯಕ್ತಿಗಳ ಹೆಸರನ್ನು ದುರ್ಬಳಕೆ ಮಾಡಿಕೊಂಡು ಹಣಕಾಸಿನ ವಂಚನೆಗಳು ನಡೆಯಬಹುದು ಎಂದು ಕೂಡ ಹಲವರು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಮುಖಾಂಶಗಳು

- ವಾಟ್ಸ್‌ಆ್ಯಪ್ ಭಾರತದಲ್ಲಿ ಅಂದಾಜು 50 ಕೋಟಿಗೂ ಹೆಚ್ಚು ಬಳಕೆದಾರರನ್ನು ಹೊಂದಿದೆ. ಭಾರತವು ವಾಟ್ಸ್‌ಆ್ಯಪ್ ಪಾಲಿಗೆ ಬಹಳ ದೊಡ್ಡ ಮಾರುಕಟ್ಟೆ
- ಹೊಸ ಸೌಲಭ್ಯವು ಬಳಕೆದಾರರ ಖಾಸಗೀತನವನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ ಎಂದು ಕಂಪನಿಯು ಹೇಳಿಕೆ
- ಸೌಲಭ್ಯ ಜಾರಿಗೆ ಬಂದ ಬಳಿಕ ವಾಟ್ಸ್‌ಆ್ಯಪ್ ಮೂಲಕ ಹೊಸಬರೊಂದಿಗೆ ಸಂವಹನ ನಡೆಸುವಾಗ ಮೊಬೈಲ್ ಸಂಖ್ಯೆ ಹಂಚಿಕೊಳ್ಳಬೇಕಾದ ಅಗತ್ಯ ಇರುವುದಿಲ್ಲ

ತಗ್ಗಿದ ತಯಾರಿಕಾ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆ ಜೂನ್ ತಿಂಗಳಿನಲ್ಲಿ ಇಳಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ಬುಧವಾರ ತಿಳಿಸಿದೆ.

ವಲಯದ ಸರಕುಗಳಿಗೆ ಹೊಸ ಕಾರ್ಯಾದೇಶ ಕಡಿಮೆ ಆಗಿರುವುದು ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟವು ತಗ್ಗಿರುವುದು ಸೂಚ್ಯಂಕ ಇಳಿಕೆಗೆ ಕಾರಣ ಎಂದು ತಿಳಿಸಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ 'ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ'ವು (ಪಿಎಂಐ) ಮೇ ತಿಂಗಳಿನಲ್ಲಿ 55ರಷ್ಟಿತ್ತು. ಜೂನ್‌ನಲ್ಲಿ ಅದು 54.2ಕ್ಕೆ ಇಳಿಕೆ ಆಗಿದೆ ಎಂದು ಹೇಳಿದೆ.

'ಪಶ್ಚಿಮ ಏಷ್ಯಾ ಸಂಘರ್ಷದ ಬಳಿಕ ವಲಯದ ಸರಕುಗಳಿಗೆ ಬೇಡಿಕೆ ಸ್ವಲ್ಪ ಇಳಿಕೆ ಆಗಿದೆ. ತಯಾರಿಕೆ, ಹೊಸ ಕಾರ್ಯಾದೇಶ, ರಫ್ತು ಮತ್ತು ಉದ್ಯೋಗ ಸೃಷ್ಟಿ ಕಡಿಮೆಯಾಗಿದೆ' ಎಂದು ತಿಳಿಸಿದೆ.

ಗೃಹಜ್ಯೋತಿ ಫಲಾನುಭವಿಗಳ ಮರುಪರಿಶೀಲನೆ ಸಂದರ್ಭದಲ್ಲಿ ಜಾತಿ ಪ್ರಮಾಣಪತ್ರ ತೋರಿಸಲು ಸರ್ಕಾರ ಕೋರಿರುವುದು ಸರಿಯೇ?

ಸರಿ — ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಜಿಎಸ್‌ಟಿ ಸಂಗ್ರಹ ಶೇ 14ರಷ್ಟು ಏರಿಕೆ

ನವದೆಹಲಿ (ಪಿಟಿಐ): ಜೂನ್ ತಿಂಗಳಲ್ಲಿ ಜಿಎಸ್‌ಟಿ ವರಮಾನ ಸಂಗ್ರಹವು ಶೇ 14ರಷ್ಟು ಜಾಸ್ತಿ ಆಗಿದ್ದು ₹1.95 ಲಕ್ಷ ಕೋಟಿಗೆ ತಲುಪಿದೆ.

ಜಿಎಸ್‌ಟಿ ಸಂಗ್ರಹವು 2025ರ ಜೂನ್‌ನಲ್ಲಿ ₹1.71 ಲಕ್ಷ ಕೋಟಿ ಆಗಿತ್ತು. ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ದತ್ತಾಂಶಗಳ ಪ್ರಕಾರ ದೇಶಿ ವಹಿವಾಟಿನಿಂದ ಸಿಗುವ ಜಿಎಸ್‌ಟಿ ವರಮಾನವು ಶೇ 6.5ರಷ್ಟು ಜಾಸ್ತಿ ಆಗಿದೆ.

ಆಮದು ವಹಿವಾಟುಗಳಿಂದ ಸಿಗುವ ಜಿಎಸ್‌ಟಿ ವರಮಾನವು ಶೇ 34.6ರಷ್ಟು ಹೆಚ್ಚಾಗಿದೆ. ಜೂನ್‌ನಲ್ಲಿ ಜಿಎಸ್‌ಟಿ ಮರುಪಾವತಿ ಮೊತ್ತವು ₹32,436 ಕೋಟಿ ಆಗಿದೆ. ಮರುಪಾವತಿಯನ್ನು ಪರಿಗಣಿಸಿದರೆ ನಿವ್ವಳ ಜಿಎಸ್‌ಟಿ ವರಮಾನವು ₹1.62 ಲಕ್ಷ ಕೋಟಿ ಆಗುತ್ತದೆ.

ಮೇ ತಿಂಗಳ ಜಿಎಸ್‌ಟಿ ಸಂಗ್ರಹಕ್ಕೆ ಹೋಲಿಸಿದರೆ ಜೂನ್ ತಿಂಗಳ ಸಂಗ್ರಹ ಕೂಡ ಸ್ಥಿರವಾಗಿದೆ. ಅಂದರೆ ಜಿಎಸ್‌ಟಿ ವರಮಾನವು ಆಗೊಮ್ಮೆ ಈಗೊಮ್ಮೆ ಹೆಚ್ಚಳ ಕಾಣುವ ಬದಲು, ಸ್ಥಿರತೆ ಪ್ರದರ್ಶಿಸುತ್ತಿದೆ ಎಂದು ಎಕೆಎಂ ಗ್ಲೋಬಲ್ ಸಂಸ್ಥೆಯ ಹಿರಿಯ ಅಧಿಕಾರಿ ಇ. ನಾಗಪಾಲ್ ಅಭಿಪ್ರಾಯಪಟ್ಟಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಎಮ್.ಎಸ್. ಪ್ರಸಾದ್, ಮಂಗಳೂರು

ಪ್ರಶ್ನೆ: ನಾನು ಹೂಡಿಕೆಗಾಗಿ ಮ್ಯೂಚುವಲ್ ಫಂಡ್ ಆಯ್ಕೆ ಮಾಡಿಕೊಂಡಿದ್ದೇನೆ. ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಎಂಬ ವರ್ಗೀಕರಣಗಳು ಇಲ್ಲಿ ಬಹಳ ಸಾಮಾನ್ಯವಾಗಿ ಕೇಳಿಬರುತ್ತವೆ. ಈ ವರ್ಗೀಕರಣವನ್ನು ಯಾವ ಮಾನದಂಡದ ಆಧಾರದಲ್ಲಿ ನಿರ್ಧರಿಸಲಾಗುತ್ತದೆ? ನಮ್ಮಂಥ ಸಾಮಾನ್ಯ ಹೂಡಿಕೆದಾರರಿಗೆ ಈ ವರ್ಗೀಕರಣಗಳ ಮಹತ್ವವೇನು? ಹೂಡಿಕೆ ನಿರ್ಧಾರ ಕೈಗೊಳ್ಳುವಾಗ ಇವುಗಳನ್ನು ಹೇಗೆ ಅರ್ಥೈಸಿಕೊಳ್ಳಬೇಕು ಮತ್ತು ಈ ಮಾಹಿತಿ ಎಲ್ಲಿ ನೀಡಲಾಗುತ್ತದೆ. ಇವನ್ನು ಷೇರು ವಿನಿಮಯ ಕೇಂದ್ರಗಳು ವರ್ಗೀಕರಿಸುತ್ತವೆಯೇ?

ಉತ್ತರ: ಮ್ಯೂಚುವಲ್ ಫಂಡ್‌ಗಳಲ್ಲಿನ ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಎಂಬ ವರ್ಗೀಕರಣಗಳು ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ಮತ್ತು ಅವುಗಳ ಶ್ರೇಯಾಂಕದ ಆಧಾರದಲ್ಲಿ ನಿರ್ಧರಿಸಲ್ಪಡುತ್ತವೆ. ಭಾರತದಲ್ಲಿ ಈ ವರ್ಗೀಕರಣ ವಿಧಾನವನ್ನು ಸೆಬಿ, 2017ರ 'ಮ್ಯೂಚುವಲ್ ಫಂಡ್ ಯೋಜನೆಗಳ ವರ್ಗೀಕರಣ ಮತ್ತು ತಾರ್ಕಿಕ ಮರುಸಂರಚನೆ' ಸುತ್ತೋಲೆಯಲ್ಲಿ ಉಲ್ಲೇಖಿಸಿದೆ.

ಸೆಬಿ ಮಾನದಂಡದ ಪ್ರಕಾರ, ಪೂರ್ಣ ಮಾರುಕಟ್ಟೆ ಬಂಡವಾಳ ಮೌಲ್ಯದ ಆಧಾರದ ಮೇಲೆ 1ರಿಂದ 100ನೇ ಸ್ಥಾನದವರೆಗಿನ ಕಂಪನಿಗಳನ್ನು ಲಾರ್ಜ್ ಕ್ಯಾಪ್, 101ರಿಂದ 250ನೇ ಸ್ಥಾನದವರೆಗಿರುವ ಕಂಪನಿಗಳನ್ನು ಮಿಡ್ ಕ್ಯಾಪ್, 251ನೇ ಸ್ಥಾನದಿಂದ ಮುಂದಿನ ಎಲ್ಲಾ ಕಂಪನಿಗಳನ್ನು ಸ್ಮಾಲ್ ಕ್ಯಾಪ್ ಕಂಪನಿಗಳೆಂದು ವರ್ಗೀಕರಿಸಲಾಗುತ್ತದೆ.

ಮ್ಯೂಚುವಲ್ ಫಂಡ್‌ಗಳಿಗೆ ಸಂಬಂಧಿಸಿದಂತೆ ಈ ಪಟ್ಟಿಯನ್ನು ಎನ್‌ಎಸ್‌ಇ ಅಥವಾ ಬಿಎಸ್‌ಇ ನೇರವಾಗಿ ಪ್ರಕಟಿಸುವುದಿಲ್ಲ. ಈ ವರ್ಗೀಕರಣದ ಪಟ್ಟಿಯನ್ನು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು (ಎಎಂಎಫ್‌ಐ) ಸೆಬಿ ನಿಯಮಗಳಿಗೆ ಅನುಸಾರವಾಗಿ ಸಿದ್ಧಪಡಿಸುತ್ತದೆ. ಒಂದು ಕಂಪನಿಯ ಷೇರುಗಳು ಒಂದಕ್ಕಿಂತ ಹೆಚ್ಚು ಷೇರು ವಿನಿಮಯ ಕೇಂದ್ರಗಳಲ್ಲಿ ವ್ಯವಹರಿಸಲ್ಪಡುತ್ತಿದ್ದರೆ, ಎಲ್ಲ ವಿನಿಮಯ ಕೇಂದ್ರಗಳ ಮಾರುಕಟ್ಟೆ ಬಂಡವಾಳ ಮೌಲ್ಯದ ಸರಾಸರಿಯನ್ನು ಪರಿಗಣಿಸಬೇಕಾಗುತ್ತದೆ.

ಎಎಂಎಫ್‌ಐ ಈ ಪಟ್ಟಿಯನ್ನು ಪ್ರತಿ ಆರು ತಿಂಗಳಿಗೊಮ್ಮೆ ಜೂನ್ ಮತ್ತು ಡಿಸೆಂಬರ್ ಅಂತ್ಯದ ಅಂಕಿ ಅಂಶಗಳ ಆಧಾರದ ಮೇಲೆ ನವೀಕರಿಸಿ ತನ್ನ ಜಾಲತಾಣದಲ್ಲಿ ಪ್ರಕಟಿಸುತ್ತದೆ. ಹೊಸ ಪಟ್ಟಿ ಪ್ರಕಟವಾದ ನಂತರ, ಅಗತ್ಯವಿದ್ದಲ್ಲಿ ಮ್ಯೂಚುವಲ್ ಫಂಡ್ ಕಂಪನಿಗಳು ತಮ್ಮ ಹೂಡಿಕೆಗಳನ್ನು ಒಂದು ತಿಂಗಳೊಳಗೆ ಮರು ಸಮತೋಲನ ಮಾಡಬೇಕಾಗುತ್ತದೆ. ಹೀಗಾಗಿ ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಹಾಗೂ ಸ್ಮಾಲ್ ಕ್ಯಾಪ್ ಎಂಬುದು ಸಾಮಾನ್ಯ ವರ್ಗೀಕರಣವಲ್ಲ; ಅದು ಸೆಬಿ ನಿಗದಿಪಡಿಸಿರುವ ಅಧಿಕೃತ ಮಾನದಂಡವಾಗಿದ್ದು, ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ಪಾರದರ್ಶಕತೆ, ಏಕರೂಪತೆ ಹಾಗೂ ಹೂಡಿಕೆದಾರರಿಗೆ ಸ್ಪಷ್ಟ ಮಾಹಿತಿ ಒದಗಿಸುವ ಉದ್ದೇಶವನ್ನೂ ಹೊಂದಿದೆ.

ಹೂಡಿಕೆದಾರರ ದೃಷ್ಟಿಯಿಂದ ಈ ವರ್ಗೀಕರಣದ ಮಹತ್ವ ಹೆಚ್ಚು. ಸಾಮಾನ್ಯವಾಗಿ ಲಾರ್ಜ್ ಕ್ಯಾಪ್ ಕಂಪನಿಗಳು ಸ್ಥಿರ ವ್ಯವಹಾರ, ಹೆಚ್ಚಿನ ದ್ರವ್ಯತೆ ಹಾಗೂ ಕಡಿಮೆ ಅಸ್ಥಿರತೆಯನ್ನು ಹೊಂದಿರುವುದರಿಂದ ಅಪಾಯ ಕಡಿಮೆ ಇರುತ್ತದೆ. ಮಿಡ್ ಕ್ಯಾಪ್ ಕಂಪನಿಗಳು ಬೆಳವಣಿಗೆಯ ಹಂತದಲ್ಲಿರುವುದರಿಂದ ಮಧ್ಯಮ ಮಟ್ಟದ ಅಪಾಯ ಮತ್ತು ಆ ಕ್ಷೇತ್ರದಲ್ಲಿ ಪರಿಸ್ಥಿತಿಗೆ ತಕ್ಕಂತೆ ಬೆಳೆಯುವ ಸಾಧ್ಯತೆಯನ್ನು ಹೊಂದಿರುತ್ತವೆ. ಸ್ಮಾಲ್ ಕ್ಯಾಪ್ ಕಂಪನಿಗಳು ಇನ್ನೂ ಹೆಚ್ಚಿನ ಬೆಳವಣಿಗೆಯ ಅವಕಾಶವನ್ನು ನೀಡಬಹುದಾದರೂ, ಅವುಗಳಲ್ಲಿ ಬೆಲೆ ಏರಿಳಿತ ಮತ್ತು ವ್ಯವಹಾರಿಕ ಅಪಾಯ ಹೆಚ್ಚಾಗಿರುತ್ತದೆ.

ಉದಾಹರಣೆಗೆ, ಲಾರ್ಜ್ ಕ್ಯಾಪ್ ಕಂಪನಿಗಳ ಕಾರ್ಯಕ್ಷಮತೆಯನ್ನು ಪ್ರತಿನಿಧಿಸುವ ಪ್ರಮುಖ ಸೂಚ್ಯಂಕಗಳಲ್ಲಿ ನಿಫ್ಟಿ 50, ನಿಫ್ಟಿ 100, ಬಿಎಸ್‌ಇ ಸೆನ್ಸೆಕ್ಸ್ ಹಾಗೂ ಬಿಎಸ್‌ಇ 100 ಸೇರಿವೆ. ಅದೇ ರೀತಿ, ಮಿಡ್ ಕ್ಯಾಪ್ ವಿಭಾಗದ ಕಂಪನಿಗಳ ಚಲನೆಯನ್ನು ಅಳೆಯಲು ನಿಫ್ಟಿ ಮಿಡ್‌ಕ್ಯಾಪ್ 150, ನಿಫ್ಟಿ ಮಿಡ್‌ಕ್ಯಾಪ್ ಸೆಲೆಕ್ಟ್ ಹಾಗೂ ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕಗಳನ್ನು ಬಳಸಲಾಗುತ್ತದೆ. ಸ್ಮಾಲ್ ಕ್ಯಾಪ್ ವಿಭಾಗದಲ್ಲಿ ನಿಫ್ಟಿ ಸ್ಮಾಲ್‌ಕ್ಯಾಪ್ 250, ನಿಫ್ಟಿ ಸ್ಮಾಲ್‌ಕ್ಯಾಪ್ 100 ಹಾಗೂ ಬಿಎಸ್‌ಇ ಸ್ಮಾಲ್‌ಕ್ಯಾಪ್ ಪ್ರಮುಖ ಸೂಚ್ಯಂಕಗಳಾಗಿವೆ. ಲಾರ್ಜ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಕಂಪನಿಗಳ ಸಂಯೋಜಿತ ಚಿತ್ರಣವನ್ನು ನೀಡುವ ಸೂಚ್ಯಂಕಗಳಾಗಿ ನಿಫ್ಟಿ ಲಾರ್ಜ್-ಮಿಡ್‌ಕ್ಯಾಪ್ 250 ಹಾಗೂ ಬಿಎಸ್‌ಇ ಲಾರ್ಜ್-ಮಿಡ್‌ಕ್ಯಾಪ್ ಇವೆ. ಇನ್ನು ಸಂಪೂರ್ಣ ಮಾರುಕಟ್ಟೆಯ ಒಟ್ಟಾರೆ ಕಾರ್ಯಕ್ಷಮತೆಯನ್ನು ಪ್ರತಿಬಿಂಬಿಸುವ ಸೂಚ್ಯಂಕಗಳಾಗಿ ನಿಫ್ಟಿ 500 ಹಾಗೂ ಬಿಎಸ್‌ಇ 500 ಇವೆ. ಆಯಾ ವರ್ಗದ ಮ್ಯೂಚುವಲ್ ಫಂಡ್‌ಗಳ ಕಾರ್ಯಕ್ಷಮತೆಯ ಅಳತೆಗೋಲಾಗಿ ಮಾತ್ರ ಈ ಸೂಚ್ಯಂಕದೊಡನೆ ತುಲನೆ ಮಾಡಲಾಗುತ್ತದೆ.

ಆದ್ದರಿಂದ, ಈ ವರ್ಗೀಕರಣವು ಕೇವಲ ತಾಂತ್ರಿಕ ವಿವರವಲ್ಲ; ಹೂಡಿಕೆಯ ಅಪಾಯ, ನಿರೀಕ್ಷಿತ ಪ್ರತಿಫಲ ಮತ್ತು ಹೂಡಿಕೆ ಅವಧಿ ಅಂದಾಜು ಮಾಡಲು ಪ್ರಮುಖ ಸೂಚಕವಾಗಿದೆ. ಹೂಡಿಕೆದಾರರು ತಮ್ಮ ವಯಸ್ಸು, ಆದಾಯ, ಹಣಕಾಸಿನ ಗುರಿ ಹಾಗೂ ಅಪಾಯ ನಿಭಾಯಿಸುವ ಮನಃಸ್ಥಿತಿಗೆ ಅನುಗುಣವಾಗಿ ಲಾರ್ಜ್, ಮಿಡ್ ಮತ್ತು ಸ್ಮಾಲ್ ಕ್ಯಾಪ್ ಯೋಜನೆಗಳ ಸಮತೋಲನ ಆಯ್ಕೆ ಮಾಡುವುದು ಸೂಕ್ತ.

ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯದಲ್ಲಿ ಆಗುವ ಬದಲಾವಣೆಗಳ ಆಧಾರದ ಮೇಲೆ ಅವುಗಳ ಶ್ರೇಯಾಂಕವೂ ಬದಲಾಗುತ್ತದೆ. ಇದರ ಪರಿಣಾಮವಾಗಿ ಕೆಲವು ಕಂಪನಿಗಳು ಲಾರ್ಜ್ ಕ್ಯಾಪ್‌ನಿಂದ ಮಿಡ್ ಕ್ಯಾಪ್‌ಗೆ ಅಥವಾ ಮಿಡ್ ಕ್ಯಾಪ್‌ನಿಂದ ಸ್ಮಾಲ್ ಕ್ಯಾಪ್‌ಗೆ ವರ್ಗಾಯಿಸಲ್ಪಡಬಹುದು. ಹೀಗಾಗಿ ಈ ಸೂಚ್ಯಂಕಗಳು ಹೂಡಿಕೆದಾರರಿಗೆ ಅಪಾಯ ಮತ್ತು ಪ್ರತಿಫಲದ ಸಮತೋಲನವನ್ನು ಅರ್ಥಮಾಡಿ ಕೊಂಡು ಸೂಕ್ತ ಹೂಡಿಕೆ ನಿರ್ಧಾರ ಕೈಗೊಳ್ಳಲು ನೆರವಾಗುತ್ತವೆ. ❖

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

PUBLIC NOTICE
IN THE COURT OF THE HONORABLE XXXI ADDL CITY CIVIL JUDGE AT BENGALURU (CCH-14)
O.S.No. 205/2026
BETWEEN:
Sri. R. Nagesh, S/o Late Ramaiah, Aged about 57 years, R/ at No. 246, II Main, II Cross, Krishnayanapalaya, Old Madras Road, Bengaluru-560038 ....Plaintiff
AND:
Smt. Nagaveni and others. ...Defendants
SUMMONS TO DEFENDANT NO.5 U/o 5 RULE 20 OF CPC
Address of D-5 Mr. Shivakumar, S/o G Krishnappa, Aged about 42 years Residing at No. 181, II Main, 5th Cross, Near Krishna Temple, Krishnaiahnapalya, Indiranagar Post, Bengaluru-560038
WHEREAS, the Plaintiff above-named has filed the above case for declaration against Defendants in respect o suit schedule property.
You are hereby summoned to appear before City Civil Court, Bengaluru (CCH-14) in person or by counsel on the 4th August 2026 at 11.00 A.M.
Take notice that in default of your appearance on the day and time above-mentioned, you will be placed ex-parte and the case will be heard and determined in your absence.
SCHEDULE
All that piece and parcel of the property bearing New katha No. 40 situated at Gramatana Katha No. 40, PID No. 84-118-40 Krishnaiahnapalaya village, Benniganahalli Dakhale, Krishnarajapuram Hobli, Bengaluru East Taluk coming under ward No. 50 within BBMP limits measuring East to West 7 1/2 feet and North to South 52 feet, in all measuring 390 feet and bounded on: East by: Remaining part of property belonging to R. Ramesh West by: 3 feet width pathway and house of Late Mr. Madappa North by : 3 feet pathway and house of Mr. Krishnappa South by : Government Road
Given under my hand and the seal of the Court on this the 25th day of June 2026.
P.M Mathew
Advocate
No. 09. 1st Floor, Devanga Hostel Road, Next to Vokaligara Bhavana, Bengaluru-560027
BY ORDER OF THE COURT SENIOR SHERISTEDAR CITY CIVIL COURT BENGALURU

ಉದ್ಯೋಗಾವಕಾಶ

General

Job Opportunities with Hinduja Housing Finance
We have opportunities for Sales Officer & Branch Sales Manager positions at multiple locations.
Position : Sales Officer & Branch Sales Manager
• 2-3 years of experience required
• Graduate in any discipline
• SO Salary: ₹2 LPA - ₹2.75 LPA
• BSM Salary: ₹3 LPA - ₹5 LPA
Salary will be determined based on experience and performance.
Locations : Bangalore
Interested candidates can send their CV to mohan.h@hindujahousingfinance.com, swati.reddy@hindujahousingfinance.com
You can directly submit your application via email.
9513375225, 8217872910

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

Part-Time Jobs

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

ವೈಯಕ್ತಿಕ

Change of Name

CORRECTION OF NAME I, ALOK KUMAR GUPTA, residing at Bengaluru, do hereby declare that my name has been erroneously captured as ALOK GUPTA instead of ALOK KUMAR GUPTA in the ICSE (Class X, 2026) records of my daughter VEDANSHI GUPTA, student of The Valley School, Bengaluru. Both names refer to one and the same person. The correct name is ALOK KUMAR GUPTA, which shall be treated as correct for all future purposes.

ಪ್ರವಾಸ

Travel

★ಶ್ರೇಯಸ್ ಟೂರ್ಸ್★
03.07.2026,22.07.2026 10ದಿನಗಳು 35000 ಅಖಂಡ ಆಂಧ್ರತೆಲಂಗಾಣ ರಾಜ್ಯಪ್ರವಾಸ.
15.07.2026,01.08.2026 15ದಿನಗಳು 45000 ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ (ಅಮರಕಂಟಕ,ಮಯ್ಯಾರ್).
22.07.2026,22.08.2026 10ದಿನಗಳು 35000 ಅಖಂಡ ಕೇರಳರಾಜ್ಯ ಪ್ರವಾಸ.
22.07.2026,28.09.2026 5ದಿನಗಳು 18000 ಕಾಶಿ, ಗಯಾ,ಪ್ರಯಾಗ್,ಅಯೋಧ್ಯೆ.
22.07.2026,22.08.2026 9ದಿನಗಳು 30000 ಅಖಂಡ ಗುಜರಾತ್‌ರಾಜ್ಯ ಪ್ರವಾಸ.
22.07.2026,22.08.2026 10ದಿನಗಳು 35000 ಅಖಂಡ ರಾಜಸ್ಥಾನರಾಜ್ಯ ಪ್ರವಾಸ.
8073824856
9606032154

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅದಾನಿ ಬಂದರು ಕಂಪನಿ ಷೇರು ವರ್ಗಾವಣೆ ಪರಿಶೀಲನೆ: ಕೇರಳಂ ಸಿ.ಎಂ

ವಿ.ಡಿ.ಸತೀಶನ್

ತಿರುವನಂತಪುರ (ಪಿಟಿಐ): 'ವಿಳಿಂಜಮ್ ಬಂದರಿನಲ್ಲಿರುವ ಅದಾನಿ ವಿಳಿಂಜಮ್ ಪೋರ್ಟ್ ಪ್ರೈವೆಟ್ ಲಿಮಿಟೆಡ್‌ನ (ಎವಿಪಿಪಿಎಲ್) ಶೇ 49ರಷ್ಟು ಷೇರುಗಳನ್ನು ಸ್ವಿಟ್ಜರ್‌ಲೆಂಡ್ ಮೂಲದ ಎಂಎಸ್‌ಸಿಗೆ ವರ್ಗಾಯಿಸುವ ಪ್ರಸ್ತಾವವನ್ನು ಸರ್ಕಾರ ಸೂಕ್ಷ್ಮವಾಗಿ ಪರಿಶೀಲಿಸಲಿದೆ' ಎಂದು ಕೇರಳಂ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಬುಧವಾರ ತಿಳಿಸಿದ್ದಾರೆ.

'ಶೇ 25ಕ್ಕಿಂತ ಹೆಚ್ಚು ಷೇರು ವರ್ಗಾವಣೆಯಾದರೆ ಮಾಲೀಕತ್ವ ಬದಲಾವಣೆಯಾಗುತ್ತದೆ ಎಂದು ಕಂಪನಿ ಕಾಯ್ದೆಯು ಹೇಳುತ್ತದೆ. ರಾಜ್ಯ ಸರ್ಕಾರದ ಪೂರ್ವ ಅನುಮೋದನೆ ಪಡೆಯದೇ ಮಾಲೀಕತ್ವ ಬದಲಾವಣೆ ಮಾಡಿಕೊಳ್ಳಲು ಸಾಧ್ಯವಿಲ್ಲ' ಎಂದು ವಿಧಾನಸಭೆಗೆ ಹೇಳಿದ್ದಾರೆ.

ವಿಪಕ್ಷ ನಾಯಕ ಪಿಣರಾಯಿ ವಿಜಯನ್ ಅವರು ಮಂಡಿಸಿದ್ದ ವಿಶೇಷ ಪ್ರಸ್ತಾಪಕ್ಕೆ ಉತ್ತರ ನೀಡಿದ ಸತೀಶನ್, 'ಮಾಧ್ಯಮ ವರದಿಗಳ ಮೂಲಕ ಈ ವಿಚಾರ ಗಮನಕ್ಕೆ ಬಂದಿದೆ. ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್‌ನಿಂದ (ಎಪಿಎಸ್‌ಇಝೆಡ್) ಅಧಿಕೃತ ಮಾಹಿತಿ ನಮಗೆ ಬಂದಿಲ್ಲ' ಎಂದು ಹೇಳಿದರು.

'ಮೆಡಿಟರೇನಿಯನ್ ಶಿಪ್ಪಿಂಗ್ ಕಂಪನಿಯು (ಎಂಎಸ್‌ಸಿ) ಎವಿಪಿಪಿಎಲ್‌ನ ಶೇ 49ರಷ್ಟು ಪಾಲು (₹13,312 ಕೋಟಿ) ಪಡೆಯಲಿದೆ' ಎಂದು ಮಂಗಳವಾರ ಅದಾನಿ ಬಂದರು ಸಂಸ್ಥೆಯು ತಿಳಿಸಿತ್ತು.

ವಿಧಾನಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಬುಧವಾರ ಈ ವಿಚಾರ ಪ್ರಸ್ತಾಪವಾಯಿತು. 'ಸರ್ಕಾರಕ್ಕೆ ಕಂಪನಿಯು ಯಾವುದೇ ಪತ್ರ ಅಥವಾ ಮಾಹಿತಿ ನೀಡಿಲ್ಲ. ಸುರಕ್ಷತೆ, ಏಕಸ್ವಾಮ್ಯ, ಅಭಿವೃದ್ಧಿ, ಸಾರ್ವಜನಿಕ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಇದನ್ನು ಪರಿಶೀಲಿಸುತ್ತೇವೆ' ಎಂದು ಮುಖ್ಯಮಂತ್ರಿ ತಿಳಿಸಿದರು.

ಮುಂಬೈ ಧಾರಣೆ (ಶೇಂಗಾ) 01-07-2026	
ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1570 (1580)
ಒಂದು ವಾರದ ಡೆಲಿವರಿ	1565 (1585)
ಪಾಮ್ ವಾರದ ಡೆಲಿವರಿ	1448 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1580)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,41,600 (1,40,200)
ಬೆಳ್ಳಿ ಕೆ.ಜಿಗೆ	2,26,000 (2,25,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಕನಿಷ್ಠ ವೇತನ: ಹಿಂಪಡೆದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಕನಿಷ್ಠ ವೇತನ ಪರಿಷ್ಕರಣೆಯ ಅಂತಿಮ ಅಧಿಸೂಚನೆ ಹೊರಡಿಸಿರುವುದನ್ನು ಮತ್ತೆ ಪರಿಶೀಲಿಸಲು, ಹಿಂಪಡೆಯಲು ರಾಜ್ಯ ಸರ್ಕಾರ ಮುಂದಾದರೆ ರಾಜ್ಯದಾದ್ಯಂತ ಹೋರಾಟ ನಡೆಸುವುದಾಗಿ ಜಂಟಿ ಕಾರ್ಮಿಕ ಸಂಘಟನೆಗಳ ಸಮಿತಿ ಎಚ್ಚರಿಕೆ ನೀಡಿದೆ.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮೀ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, '2017-18 ರಿಂದ ಕನಿಷ್ಠ ವೇತನ ಪರಿಷ್ಕರಣೆ ಬಾಕಿ ಉಳಿದಿತ್ತು. ಕಾರ್ಮಿಕರ ದೀರ್ಘ ಹೋರಾಟದ ಫಲವಾಗಿ 2026ರ ಮೇ 22ರಂದು ಅಂತಿಮಗೊಂಡಿತು. ಈ ಪರಿಷ್ಕರಣೆಯಿಂದ ರಾಜ್ಯದ ಒಂದು ಕೋಟಿಗೂ ಹೆಚ್ಚು ಕಾರ್ಮಿಕ ಕುಟುಂಬಗಳಿಗೆ ನೇರ ಲಾಭವಾಗಲಿದ್ದು, ಅವರ ಖರೀದಿ ಸಾಮರ್ಥ್ಯ ಹೆಚ್ಚುವುದರ ಜೊತೆಗೆ ರಾಜ್ಯದ ಆರ್ಥಿಕ ಚಟುವಟಿಕೆಗೂ ಉತ್ತೇಜನ ಸಿಗಲಿದೆ' ಎಂದು ಮಾಹಿತಿ ನೀಡಿದರು.

'ಕನಿಷ್ಠ ವೇತನದ ಅಂತಿಮ ಅಧಿಸೂಚನೆಯನ್ನು ಹಿಂಪಡೆದರೆ ಕಾರ್ಮಿಕ ಕುಟುಂಬಗಳಿಗೆ ಅನ್ಯಾಯವಾಗಲಿದೆ. ಸರ್ಕಾರ ಯಾವುದೇ ಕಾರಣಕ್ಕೂ ಈ ನಿರ್ಧಾರದಿಂದ ಹಿಂದೆ ಸರಿಯಬಾರದು' ಎಂದು ಆಗ್ರಹಿಸಿದರು.

ಎಐಟಿಯುಸಿ ರಾಜ್ಯ ಘಟಕದ ಅಧ್ಯಕ್ಷ ಬಾಬು ಮ್ಯಾಥ್ಯೂ ಮಾತನಾಡಿ, '39 ನಿಗದಿತ ಉದ್ಯೋಗಗಳ ಕನಿಷ್ಠ ವೇತನವನ್ನು ಎಂಟು ವರ್ಷಗಳ ಬಳಿಕ ಪರಿಷ್ಕರಿಸಲಾಗಿದೆ. ಈ ವಿಳಂಬವೇ ಕನಿಷ್ಠ ವೇತನ ಕಾಯ್ದೆ ಹಾಗೂ ಸುಪ್ರೀಂ ಕೋರ್ಟ್ ನಿರ್ದೇಶನಗಳ ಉಲ್ಲಂಘನೆಯಾಗಿದೆ. ವೇತನ ಹೆಚ್ಚಳವು ಸುಮಾರು ಶೇ 40ರಷ್ಟಿದ್ದು, ಉದ್ಯೋಗದಾತರು ಹೇಳುತ್ತಿರುವಂತೆ ಶೇ 60ರಷ್ಟು ಅಲ್ಲ' ಎಂದು ಹೇಳಿದರು.

ಎಐಯುಟಿಯುಸಿ ಮುಖಂಡ ಸೋಮಶೇಖರ್ ಯಾದಗಿರಿ ಮಾತನಾಡಿ, 'ವೇತನ ಸಂಹಿತೆ-2019ರ ಸೆಕ್ಷನ್ 69ರ ಅಡಿಯಲ್ಲಿ ಈ ಅಧಿಸೂಚನೆ ಕಾನೂನು ಬದ್ಧವಾಗಿ ಜಾರಿಯಾಗಿದೆ. ಇದನ್ನು ಪ್ರಶ್ನಿಸಿ ಕೆಲ ಉದ್ಯೋಗದಾತರು ಹೈಕೋರ್ಟ್ ಮೆಟ್ಟಿಲೇರಿದ್ದು, ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿದೆ. ನ್ಯಾಯಾಲಯದ ತೀರ್ಪು ಬರುವ ಮುನ್ನ ಅಂತಿಮ ಅಧಿಸೂಚನೆಯನ್ನು ಹಿಂಪಡೆಯುವುದು ಕಾನೂನುಬಾಹಿರವಾಗಲಿದೆ. ಈ ಕುರಿತು ಹೈಕೋರ್ಟ್ ವಿಭಾಗೀಯ ಪೀಠ ತನ್ನ ಹಿಂದಿನ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ' ಎಂದರು.

ಸುದ್ದಿಗೋಷ್ಠಿಯಲ್ಲಿ ಎಐಸಿಸಿಟಿಯು ಮುಖಂಡ ಅಪ್ಪಣ್ಣ, ಎಚ್‌ಎಂಕೆಪಿ ಮುಖಂಡ ಕಾಳಪ್ಪ ಉಪಸ್ಥಿತರಿದ್ದರು.

ಕಚ್ಚಾ ತೈಲ ಆಮದು ಭಾರಿ ಹೆಚ್ಚಳ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷದ ನಡುವೆಯೂ ವಿವಿಧ ದೇಶಗಳಿಂದ ಭಾರತವು ಜೂನ್ ತಿಂಗಳಿನಲ್ಲಿ ಪ್ರತಿ ನಿತ್ಯ 49.3 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದೆ. ಇದು ತಿಂಗಳೊಂದರಲ್ಲಿ ಆಗಿರುವ ಅತಿಹೆಚ್ಚಿನ ಆಮದಾಗಿದೆ.

ಈ ಪೈಕಿ ರಷ್ಯಾದಿಂದ 26 ಲಕ್ಷ ಬ್ಯಾರಲ್‌ನಷ್ಟು ಕಚ್ಚಾ ತೈಲ ಆಮದಾಗಿದ್ದು, ಆ ದೇಶವು ಭಾರತದ ಅತಿದೊಡ್ಡ ಕಚ್ಚಾ ತೈಲ ಪೂರೈಕೆದಾರ ಆಗಿದೆ. ಮೇ ತಿಂಗಳಿನಲ್ಲಿ 21.3 ಲಕ್ಷ ಬ್ಯಾರಲ್ ಆಮದಾಗಿತ್ತು. ದೇಶದ ಒಟ್ಟು ಆಮದಿನಲ್ಲಿ ರಷ್ಯಾದ ಪಾಲು ಅರ್ಧಕ್ಕಿಂತಲೂ ಹೆಚ್ಚಿದೆ ಎಂದು ಜಾಗತಿಕ ವ್ಯಾಪಾರ ವಿಶ್ಲೇಷಕ ಸಂಸ್ಥೆ ಕೆಪ್ಲೆರ್ ಅಂಕಿ-ಅಂಶಗಳು ತಿಳಿಸಿವೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಕಚ್ಚಾ ತೈಲ ಪೂರೈಕೆಯಲ್ಲಿ ಅಡಚಣೆ ಉಂಟಾಗಿತ್ತು. ಇದರಿಂದ ಭಾರತವು ವಿವಿಧ ದೇಶಗಳಿಂದ ಕಚ್ಚಾ ತೈಲ ಖರೀದಿಸಲು ಮುಂದಾಗಿದ್ದರಿಂದ ಆಮದು ಹೆಚ್ಚಳವಾಗಿದೆ ಎಂದು ಕೆಪ್ಲೆರ್‌ನ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	30019-33999
ಕೋಕ	17019-32509
ಫ್ಯಾಕ್ಟರಿ	10169-25129
ಹಳೆಚಾಲಿ	46019-47698
ಹೊಸಚಾಲಿ	38189-45799

ಪುತ್ತೂರು	
ಕೋಕ	20000-33000
ಹೊಸತು	30000-47000

ಶಿವಮೊಗ್ಗ	
ಸರಕು	51699-95300
ಬೆಟ್ಟೆ	47009-61699
ರಾಶಿ	45199-52699
ಗೊರಬಲು	20011-41300

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹24100
ಎಸಿ	₹14000
ಆರ್‌ಪಿ	₹18500
ಆರ್‌ಸಿ	₹10200

ಭತ್ತ ನಾಟಿ

ಪಿಟಿಐ ಚಿತ್ರ

ಪಂಜಾಬ್‌ನ ಪಟಿಯಾಲದ ಬಳಿ ಕಾರ್ಮಿಕರು ಬುಧವಾರ ಭತ್ತ ನಾಟಿ ಮಾಡಿದರು

ಪರ್ವೀನ್ ಸುಲ್ತಾನಾಗೆ 'ಸಾಧನಾಚಾರ್ಯ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವರ ಸೌರಭ ಸಂಸ್ಥೆಯು ಪಿಟೀಲು ವಾದಕ ಆರ್.ಆರ್. ಕೇಶವಮೂರ್ತಿ ಅವರ ಸ್ಮರಣಾರ್ಥ ನೀಡುವ 'ಸಾಧನಾಚಾರ್ಯ ಪ್ರಶಸ್ತಿ'ಗೆ ಹಿಂದೂಸ್ತಾನಿ ಗಾಯಕಿ ಬೇಗಂ ಪರ್ವೀನ್ ಸುಲ್ತಾನಾ ಆಯ್ಕೆಯಾಗಿದ್ದಾರೆ.

ಬೇಗಂ ಪರ್ವೀನ್ ಸುಲ್ತಾನಾ

ಭಾರತೀಯ ಶಾಸ್ತ್ರೀಯ ಸಂಗೀತ ಕ್ಷೇತ್ರದ ಸಾಧಕರೊಬ್ಬರನ್ನು ಪ್ರತಿ ವರ್ಷ ಗುರುತಿಸಿ ಗೌರವಿಸಲಾಗುತ್ತಿದೆ. ಆರ್.ಆರ್.ಕೇಶವಮೂರ್ತಿ ಅವರು ಏಳು ತಂತಿಗಳ ಪಿಟೀಲು ವಾದನದಲ್ಲಿ ಪರಿಣಿತರಾಗಿ ಜನಪ್ರಿಯರಾಗಿದ್ದರು.

ಸಂಸ್ಥೆಯು ಆಗಸ್ಟ್ 1 ಮತ್ತು 2 ರಂದು ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ 'ಗುರುಸ್ಮೃತಿ ಸಂಗೀತ ಉತ್ಸವ ಹಮ್ಮಿಕೊಂಡಿದೆ. 1 ರಂದು ಸಂಜೆ 6 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಬೇಗಂ ಪರ್ವೀನ್ ಸುಲ್ತಾನಾ ಅವರಿಂದ ಸಂಗೀತ ಕಛೇರಿ ನಡೆಯಲಿದೆ.

2ರಂದು ಬೆಳಿಗ್ಗೆ 10 ಗಂಟೆಗೆ ವಿಶಾಖ ಹರಿ ಅವರಿಂದ ಭಕ್ತಿಗೀತೆಗಳ ಗಾಯನ, ಸಂಜೆ 6ರಿಂದ ವಿದ್ಯಾಭೂಷಣ ಅವರಿಂದ ಗಾಯನ ಹಾಗೂ ಸತ್ಯನಾರಾಯಣ ರಾಜು ಅವರಿಂದ ನೃತ್ಯ ಪ್ರದರ್ಶನ ಆಯೋಜಿಸಲಾಗಿದೆ.

'ಸಾಧನಾಚಾರ್ಯ ಪ್ರಶಸ್ತಿ'ಗೆ ಈವರೆಗೆ ಎನ್. ರಾಜಂ, ಎಲ್. ಸುಬ್ರಮಣ್ಯಂ, ಎಂ. ಬಾಲಮುರಳಿಕೃಷ್ಣ, ಟಿ.ಎನ್. ಕೃಷ್ಣನ್, ಆರ್.ಕೆ. ಶ್ರೀಕಂಠನ್, ಮೈಸೂರು ನಾಗರಾಜ್ ಮೊದಲಾದ ಸಂಗೀತ ದಿಗ್ಗಜರು ಭಾಜನರಾಗಿದ್ದಾರೆ ಎಂದು ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಎನ್. ವೆಂಕಟೇಶ್ ತಿಳಿಸಿದ್ದಾರೆ.

ಚಲನಚಿತ್ರ ಮಂಡಳಿಯಿಂದ ಮುಖ್ಯಮಂತ್ರಿಗೆ ಮನವಿ

'ಕನ್ನಡ ಚಿತ್ರರಂಗ ಉಳಿವಿಗೆ ನೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಿತ್ರರಂಗ ಉಳಿವಿಗಾಗಿ ಸಮಗ್ರ ಹೊಸ ಚಲನಚಿತ್ರ ನೀತಿ ರೂಪಿಸಬೇಕು, ಸಿನಿಮಾಟೋಗ್ರಫಿ ಕಾಯ್ದೆಗೆ ತಿದ್ದುಪಡಿ ತರಬೇಕು ಎಂಬುದೂ ಸೇರಿ ಹಲವು ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲ ಅವರ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬುಧವಾರ ಸಲ್ಲಿಸಿತು.

ನಿಯೋಗದ ಮನವಿಗಳಿಗೆ ಸ್ಪಂದಿಸಿದ ಮುಖ್ಯಮಂತ್ರಿ, ಯಾವ ರೀತಿಯಲ್ಲಿ ನೆರವು ನೀಡಬಹುದು ಎಂದು ಚಿಂತನೆ ನಡೆಸಲಾಗುವುದು ಎಂದರು.

ಹೊಸ ಚಲನಚಿತ್ರ ನೀತಿ ತರಲು ಚರ್ಚೆ, ಸಹಾಯಧನ ಹೆಚ್ಚಳ, ಈ ವರ್ಷದ ಚಲನಚಿತ್ರ ಪ್ರಶಸ್ತಿ ಪ್ರಕ್ರಿಯೆ ಆರಂಭಿಸಲು ಕ್ರಮ, ಚಿತ್ರನಗರಿ ನಿರ್ಮಾಣಕ್ಕೆ ಘೋಷಣೆ ಮಾಡಿರುವ ಅನುದಾನದ ಬಿಡುಗಡೆ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಅವರು ಸೂಚಿಸಿದರು.

ಬೇಡಿಕೆಗಳು ಏನೇನು?

- ಹೊಸ ಚಲನಚಿತ್ರ ನೀತಿಯಲ್ಲಿ ಓಟಿಟಿ ಮತ್ತು ಡಿಜಿಟಲ್ ವಿತರಣಾ ವ್ಯವಸ್ಥೆ, ಎಐ ಮತ್ತು ಹೊಸ ತಂತ್ರಜ್ಞಾನ ಬಳಕೆ, ಕನ್ನಡ ಚಿತ್ರರಂಗ ರಕ್ಷಣೆ, ಸಣ್ಣ ಚಿತ್ರಗಳಿಗೆ ಪ್ರೋತ್ಸಾಹ, ಚಿತ್ರಮಂದಿರಗಳ ಉಳಿವು, ಕಲಾವಿದರು ಮತ್ತು ಕಾರ್ಮಿಕರ ಕಲ್ಯಾಣ, ಚಲನಚಿತ್ರ ಶಿಕ್ಷಣ ಮತ್ತು ಆರ್ಕೈವ್, ಜಾಗತಿಕ ಮಾರುಕಟ್ಟೆ ವಿಸ್ತರಣೆ ಬಗ್ಗೆ ಬದಲಾವಣೆ ತರಬೇಕು
- ಸಿನಿಮಾಟೋಗ್ರಫಿ ಕಾಯ್ದೆ ತಿದ್ದುಪಡಿ ಮೂಲಕ ಚಿತ್ರಮಂದಿರಗಳ ಪರವಾನಗಿ ನವೀಕರಣಕ್ಕೆ ಏಕಗವಾಕ್ಷಿ ಯೋಜನೆ ತರಬೇಕು
- ಹಳೆಯ ಏಕ ಪರದೆ ಚಿತ್ರಮಂದಿರಗಳ ನವೀಕರಣ, ಆಧುನೀಕರಣಕ್ಕೆ ನೆರವಿನ ಜೊತೆಗೆ ಶೇ 4ರಷ್ಟು ಬಡ್ಡಿ ದರದಲ್ಲಿ ಸಾಲ ವ್ಯವಸ್ಥೆ ಮಾಡಬೇಕು
- ಅನೇಕ ಅಪರೂಪದ ಚಿತ್ರಗಳು ಹಾಳಾಗುತ್ತಿದ್ದು, ಈ ಬಗ್ಗೆ ವಿಶೇಷ ಗಮನಹರಿಸಬೇಕು
- 2022ರಿಂದ ಬಾಕಿ ಉಳಿದಿರುವ ರಾಜ್ಯ ಪ್ರಶಸ್ತಿ ಪ್ರಕ್ರಿಯೆಯನ್ನು ತುರ್ತಾಗಿ ಪೂರ್ಣಗೊಳಿಸಬೇಕು. 2026ರಿಂದ ಪ್ರತಿ ವರ್ಷ ನಿಯಮಿತವಾಗಿ ಪ್ರಶಸ್ತಿಗಳನ್ನು ನೀಡಬೇಕು. ರಾಜಕುಮಾರ್ ಜನ್ಮದಿನದಂದು (ಏಪ್ರಿಲ್ 24) ಪ್ರಶಸ್ತಿ ವಿತರಣೆ ಮಾಡಬೇಕು
- ಮೈಸೂರಿನಲ್ಲಿ ಚಿತ್ರ ನಗರಿಗೆ ಶಂಕುಸ್ಥಾಪನೆ ನೆರವೇರಿಸಬೇಕು. ಜೊತೆಗೆ ಘೋಷಣೆ ಮಾಡಿರುವ ₹ 500 ಕೋಟಿ ಬಿಡುಗಡೆ ಮಾಡಬೇಕು. ಚಲನಚಿತ್ರಗಳಿಗೆ ನೀಡುವ ₹ 10 ಲಕ್ಷ ಸಹಾಯಧನ ಹೆಚ್ಚಿಸಬೇಕು
- ಹೊಂಬಾಳೆ ಫಿಲ್ಮ್ಸ್ ಸಂಸ್ಥೆಯವರು ಕಡಿಮೆ ದರದಲ್ಲಿ ನಿರ್ಮಾಪಕರು, ವಿತರಕರು, ಪ್ರದರ್ಶಕ ಸದಸ್ಯರುಗಳಿಗೆ ವಸತಿ ಫ್ಲ್ಯಾಟ್‌ಗಳನ್ನು ನಿರ್ಮಿಸಿಕೊಡುತ್ತಿದ್ದು, ಅದಕ್ಕಾಗಿ ಬಿಡಿಎ ವತಿಯಿಂದ ಐದು ಎಕರೆ ಭೂಮಿ ಮಂಜೂರು ಮಾಡಬೇಕು

ಪಾಕಿಸ್ತಾನದ ಜತೆ ಸಭೆ 'ಅಧಿಕಾರ ಕೊಟ್ಟವರು ಯಾರು?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಬಿಎ ಚುನಾವಣೆಗೆ ಬಿಜೆಪಿ ಉಸ್ತುವಾರಿಯಾಗಿ ನೇಮಕವಾಗಿರುವ ರಾಮ್ ಮಾಧವ್ ಅವರು ನನ್ನ ಪ್ರಶ್ನೆಗಳಿಗೆ ಉತ್ತರಿಸಬೇಕು. ಪಾಕಿಸ್ತಾನದವರ ಜತೆ ರಹಸ್ಯ ಸಭೆ ನಡೆಸಲು ಅವರಿಗೆ ಅಧಿಕಾರ ಕೊಟ್ಟವರು ಯಾರು' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಪ್ರಶ್ನಿಸಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಭವನದಲ್ಲಿ ನಡೆದ ಪ್ರಚಾರ ಸಮಿತಿ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ರಾಮ್ ಮಾಧವ್ ಶಾಸಕರೂ ಅಲ್ಲ, ಸಂಸದರೂ ಅಲ್ಲ, ವಿದೇಶಾಂಗ ಸಚಿವರೂ ಅಲ್ಲ. ಆರ್‌ಎಸ್‌ಎಸ್ ಪ್ರಚಾರಕರಾಗಿ ವಿದೇಶದಲ್ಲಿ ಸಭೆ ಮಾಡಲು ಅವರಿಗೆ ಅಧಿಕಾರ ಕೊಟ್ಟಿದ್ದು ಯಾರು? ಯಾವ ಅಧಿಕಾರ ಇಟ್ಟುಕೊಂಡು ಆರ್‌ಎಸ್‌ಎಸ್‌ನವರು ವಿದೇಶಾಂಗ ನೀತಿ ಕುರಿತು ತೀರ್ಮಾನಿಸುತ್ತಿದ್ದಾರೆ' ಎಂದು ಕಿಡಿಕಾರಿದರು.

'ರಾಮ್ ಮಾಧವ್ ಅವರು ಕೊಲಂಬೊ, ಲಂಡನ್‌ನಲ್ಲಿ ನಾಲ್ಕು ಸಭೆಗಳನ್ನು ಮಾಡಿದ್ದು, ಪಾಕಿಸ್ತಾನದ ಐಎಸ್‌ಐ ಮಾಜಿ ಮೇಜರ್ ಜನರಲ್ ಜೊತೆಗೆ ಗೌಪ್ಯ ಸಭೆ ಮಾಡಿದ್ದಾರೆ. ಇತ್ತೀಚೆಗೆ ಅವರ ಗುರುಗಳಾದ ಮೋಹನ್ ಭಾಗವತ್ ಅವರು ಪಾಕಿಸ್ತಾನದೊಂದಿಗೆ ಮಾತುಕತೆ ಮಾಡುವುದರಲ್ಲಿ ತಪ್ಪೇನಿಲ್ಲ ಎಂದಿದ್ದಾರೆ. ಪಾಕಿಸ್ತಾನದವರೊಂದಿಗಿನ ಸಭೆ ಬಗ್ಗೆ ದೇಶದ ಜನರಿಗೆ ಯಾಕೆ ಮಾಹಿತಿ ನೀಡಿಲ್ಲ' ಎಂದೂ ಪ್ರಶ್ನಿಸಿದರು.

ಮುಚ್ಚಿಟ್ಟಿದ್ದು ಯಾಕೆ?: 'ಆಪರೇಷನ್ ಸಿಂಧೂರದಲ್ಲಿ ಹುತಾತ್ಮರಾದ ಭಾರತೀಯ ಸೈನಿಕರ ಹೆಸರುಗಳನ್ನು ಇಷ್ಟು ದಿನ ಮುಚ್ಚಿಟ್ಟಿದ್ದು ಯಾಕೆ? ಇಂತಹ ಪ್ರಶ್ನೆಗಳನ್ನು ನಾವು ಕೇಳಬೇಕು' ಎಂದು ಹರಿಪ್ರಸಾದ್ ಹೇಳಿದರು.

'ಆಪರೇಷನ್ ಸಿಂಧೂರ್‌ನಲ್ಲಿ ನಮ್ಮ ಯೋಧರು ಸತ್ತಿಲ್ಲ ಎಂದು ಹೇಳಿದ್ದರು. ಆದರೆ, ರಾಜನಾಥ್ ಸಿಂಗ್ ಅವರು ಆರು ಸೈನಿಕರು ಸತ್ತಿದ್ದಾರೆ ಎಂದು ಶ್ರದ್ಧಾಂಜಲಿ ಅರ್ಪಿಸಿದ್ದಾರೆ. ಅವರು ಎಷ್ಟು ಸುಳ್ಳು ಹೇಳುತ್ತಾರೆ ಎಂಬುದು ಇದರಲ್ಲೇ ಅರ್ಥವಾಗುತ್ತದೆ. ದೇಶಕ್ಕೆ ಪ್ರಾಣಕೊಟ್ಟವರ ಹೆಸರು ಹೇಳಲು ಇವರಿಗೆ ಸಾಧ್ಯವಾಗುವುದಿಲ್ಲ' ಎಂದು ತಿಳಿಸಿದರು.

ಗಣೇಶ್

ಈ ವರ್ಷ ಎರಡು ಸಿನಿಮಾಗಳು ಬರಲಿವೆ: ಗಣೇಶ್

ಇಂದು ಜನ್ಮದಿನದ ಸಂಭ್ರಮದಲ್ಲಿರುವ ನಟ ಗಣೇಶ್ ಇತ್ತೀಚೆಗೆ ಮಾಧ್ಯಮದವರೊಂದಿಗೆ ಮಾತುಕತೆ ನಡೆಸಿದರು. ಕೈಯಲ್ಲಿ ಸಾಲುಸಾಲು ಸಿನಿಮಾಗಳಿದ್ದರೂ ಕಳೆದ ಎರಡು ವರ್ಷಗಳಿಂದ ತಮ್ಮ ಯಾವುದೇ ಸಿನಿಮಾ ತೆರೆಗೆ ಬರದಿರುವ ಬಗ್ಗೆ ಅವರು ಮನಬಿಚ್ಚಿ ಮಾತನಾಡಿದರು.

‘ಕೃಷ್ಣಂ ಪ್ರಣಯ ಸಖಿ’ ಸಿನಿಮಾ ಗಣೇಶ್‌ಗೆ ಮತ್ತೆ ಮಾರುಕಟ್ಟೆ ತಂದುಕೊಟ್ಟ ಚಿತ್ರ. ಬಿಡುಗಡೆಯಾಗಿ ಎರಡು ವರ್ಷಗಳು ಕಳೆದಿದ್ದರೂ, ಆ ಬಳಿಕ ಅವರು ಒಪ್ಪಿಕೊಂಡ ಐದು ಸಿನಿಮಾಗಳಲ್ಲಿ ಒಂದೂ ಇನ್ನೂ ಬಿಡುಗಡೆಯಾಗಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಎರಡು ಸಿನಿಮಾಗಳು ಈಗಾಗಲೇ ಬಿಡುಗಡೆಯಾಗಲು ಸಿದ್ಧವಾಗಿವೆ. ‘ಬೃಂದವಿಹಾರಿ’ ಈ ಹೊತ್ತಿಗೆ ತೆರೆಗೆ ಬರಬೇಕಿತ್ತು. ಸಿನಿಮಾ ಬಿಡುಗಡೆಗಾಗಿ ನಾನು ಚಿತ್ರತಂಡವನ್ನು ನಿರಂತರವಾಗಿ ಒತ್ತಾಯಿಸುತ್ತಿದ್ದೇನೆ. ಆದರೆ ನಿರ್ಮಾಣ ಸಂಸ್ಥೆಗೆ ವ್ಯವಹಾರದ ದೃಷ್ಟಿಯಿಂದ ತನ್ನದೇ ಆದ ಲೆಕ್ಕಾಚಾರಗಳಿರುತ್ತವೆ. ಅದರಿಂದ ಬಿಡುಗಡೆಯಲ್ಲಿ ವಿಳಂಬವಾಗಿದೆ.

‘ಪಿನಾಕ’ ಕೂಡ ಸಂಪೂರ್ಣ ಸಿದ್ಧವಾಗಿದೆ. ಇದು ದೊಡ್ಡ ಬಜೆಟ್‌ನ ಸಿನಿಮಾ. ಇದರ ವ್ಯಾಪ್ತಿಯೂ ದೊಡ್ಡದಾಗಿದೆ. ಆದರೂ ಈ ಎರಡೂ ಸಿನಿಮಾಗಳು ಈ ವರ್ಷವೇ ಬಿಡುಗಡೆಯಾಗುವುದು ಖಚಿತ. ಮುಂದಿನ ಎರಡು ತಿಂಗಳೊಳಗೆ ನನ್ನ ಒಂದು ಸಿನಿಮಾ ಖಂಡಿತ ತೆರೆಗೆ ಬರುತ್ತದೆ ಎಂಬ ಭರವಸೆ ಇದೆ’ ಎಂದು ಹೇಳಿದರು.

‘ಯುವರ್ ಸಿನ್ಸಿಯರ್ಲಿ ರಾಮ್’ ಹಾಗೂ ‘ತಮ್ಮ ಸುಖಾಗಮನ ಬಯಸುವ’ ಸಿನಿಮಾಗಳು ಸದ್ಯ ಚಿತ್ರೀಕರಣದ ಹಂತದಲ್ಲಿವೆ. ‘ಡಿಜಾಂಗೋ ಕೃಷ್ಣಮೂರ್ತಿ’ ಒಂದು ಹಂತದ ಚಿತ್ರೀಕರಣದ ಬಳಿಕ ಸ್ಥಗಿತಗೊಂಡಿತ್ತು. ಈಗ ನಿರ್ಮಾಪಕರು ಮತ್ತೆ ಸಿನಿಮಾ ಮುಂದುವರಿಸಲು ಮುಂದಾಗಿದ್ದಾರೆ.

ಈ ಎಲ್ಲ ಸಿನಿಮಾಗಳು ಪೂರ್ಣಗೊಳ್ಳುವವರೆಗೆ ಹೊಸ ಕಥೆಗಳನ್ನು ಒಪ್ಪಿಕೊಳ್ಳದಿರಲು ನಿರ್ಧರಿಸಿದ್ದೇನೆ’ ಎಂದರು.

ಸ್ಟಾರ್ ನಟರ ಸಿನಿಮಾಗಳ ಸಂಖ್ಯೆ ಕಡಿಮೆಯಾಗುತ್ತಿರುವ ಬಗ್ಗೆ ಮಾತನಾಡಿದ ಅವರು, ‘ನನಗೂ ವರ್ಷಕ್ಕೆ ಕನಿಷ್ಠ ಎರಡು ಸಿನಿಮಾಗಳು ಬಿಡುಗಡೆಯಾಗಬೇಕು ಎಂಬ ಆಸೆಯಿದೆ. ಆದರೆ ವಾಸ್ತವ ಪರಿಸ್ಥಿತಿ ಬೇರೆ. ನಟರಾಗಿ ನಾವು ನಿರ್ಮಾಪಕರ ಮೇಲೆ ಒತ್ತಡ ಹೇರುವಂತಿಲ್ಲ. ಬೇರೆ ಸ್ಟಾರ್ ನಟರಿಗೂ ಸಿನಿಮಾ ಮಾಡಿ ಎಂದು ನಾನು ಹೇಳುತ್ತಲೇ ಇರುತ್ತೇನೆ. ಸ್ಟಾರ್‌ಗಳ ಸಿನಿಮಾಗಳು ಬಂದಾಗ ಪ್ರೇಕ್ಷಕರು ಚಿತ್ರಮಂದಿರಗಳತ್ತ ಬರುತ್ತಾರೆ. ಅದರ ಲಾಭ ಹೊಸಬರ ಸಿನಿಮಾಗಳಿಗೂ ಸಿಗುತ್ತದೆ. ಹೀಗೆ ಚಿತ್ರೋದ್ಯಮ ಮತ್ತೆ ಚೈತನ್ಯ ಪಡೆಯುತ್ತದೆ.

ಪ್ರೇಕ್ಷಕರು ಒಳ್ಳೆಯ ಸಿನಿಮಾಕ್ಕಾಗಿ ಕಾಯುತ್ತಿದ್ದಾರೆ. ಈ ವರ್ಷ ನನ್ನ ಸಿನಿಮಾ ಆಗದಿದ್ದರೂ ಪರವಾಗಿಲ್ಲ, ಯಾರದ್ದಾದರೂ ಒಂದು ಕನ್ನಡ ಸಿನಿಮಾ ದೊಡ್ಡ ಮಟ್ಟದಲ್ಲಿ ಗೆಲ್ಲಬೇಕು. ಅದು ಇಡೀ ಚಿತ್ರರಂಗಕ್ಕೆ ಒಳ್ಳೆಯದು’ ಎಂದು ಆಶಯ ವ್ಯಕ್ತಪಡಿಸಿದರು.

ದೊಡ್ಡ ಬಜೆಟ್ ಸಿನಿಮಾಗಳ ಕುರಿತು ಮಾತನಾಡಿದ ಗಣೇಶ್, ‘ಒಮ್ಮೆ ದೊಡ್ಡ ಬಜೆಟ್ ಸಿನಿಮಾ ಮಾಡಿದ್ದೇನೆ ಎಂದರೆ ಮುಂದಿನ ಸಿನಿಮಾವೂ ಅದೇ ಮಟ್ಟದಲ್ಲಿರಬೇಕು ಎಂಬ ಮನೋಭಾವ ನನ್ನದಲ್ಲ. ಕಥೆಗೆ ಎಷ್ಟು ಬಜೆಟ್ ಅಗತ್ಯವೋ ಅಷ್ಟೇ ಸಾಕು ಎಂದು ನಾನು ಹೇಳುತ್ತೇನೆ. ಎಲ್ಲ ಸಿನಿಮಾಗಳನ್ನೂ ದೊಡ್ಡ ಬಜೆಟ್‌ನಲ್ಲೇ ಮಾಡಬೇಕು ಎಂದುಕೊಂಡರೆ ಹೆಚ್ಚು ಸಿನಿಮಾಗಳು ಸಾಧ್ಯವಾಗುವುದಿಲ್ಲ. ವಿಭಿನ್ನ ರೀತಿಯ ಕಥೆಗಳನ್ನು ಮಾಡಬೇಕು. ನಾನು ಈಗ ಒಪ್ಪಿಕೊಂಡಿರುವ ಎಲ್ಲ ಸಿನಿಮಾಗಳೂ ಒಂದಕ್ಕಿಂತ ಒಂದು ಭಿನ್ನ ಜಾನರ್‌ನವು’ ಎಂದರು.

ಈ ವರ್ಷವೂ ಅಭಿಮಾನಿಗಳೊಂದಿಗೆ ಜನ್ಮದಿನ ಆಚರಿಸಿಕೊಳ್ಳುವುದಿಲ್ಲ ಎಂದು ತಿಳಿಸಿದ ಅವರು, ‘ಕುಟುಂಬದವರೊಂದಿಗೆ ತಿರುಪತಿಯಲ್ಲಿ ಜನ್ಮದಿನ ಕಳೆಯಲಿದ್ದೇನೆ’ ಎಂದು ಹೇಳಿದರು. ❖

ಪ್ರೇಮಂ ಜೋಡಿಯ ಹೊಸ ಸಿನಿಮಾ ‘ವಿಜಯಂ’

ಮಲಯಾಳದ ‘ಪ್ರೇಮಂ’ ನಿವಿನ್ ಪೌಲಿ ಅವರ ಸಿನಿ ಪಯಣಕ್ಕೆ ಹೊಸ ತಿರುವು ನೀಡಿದ್ದ ಸಿನಿಮಾ. ಆ ಸಿನಿಮಾದ ನಿರ್ದೇಶಕ ಆಲ್ಫೋನ್ಸ್ ಪುತ್ರೇನ್ ಜೊತೆ ಮತ್ತೊಂದು ಸಿನಿಮಾಗೆ ನಿವಿನ್ ಸಜ್ಜಾಗಿದ್ದಾರೆ.

ನಿವಿನ್ 50ನೇ ಸಿನಿಮಾವನ್ನು ಆಲ್ಫೋನ್ಸ್ ನಿರ್ದೇಶಿಸುತ್ತಿದ್ದು, ಚಿತ್ರಕ್ಕೆ ‘ವಿಜಯಂ’ ಎನ್ನುವ ಶೀರ್ಷಿಕೆ ಇಡಲಾಗಿದೆ. 12 ವರ್ಷಗಳ ನಂತರ ನಿವಿನ್–ಆಲ್ಫೋನ್ಸ್ ಕಾಂಬಿನೇಷನ್‌ನಲ್ಲಿ ಈ ಸಿನಿಮಾ ಬರುತ್ತಿದೆ. ‘ಪ್ರೇಮಂ’ಗೂ ಮುನ್ನ ‘ನೇರಂ’ ಎನ್ನುವ ಸಿನಿಮಾವನ್ನು ಆಲ್ಫೋನ್ಸ್ ನಿರ್ದೇಶಿಸಿದ್ದರು. ಇದರಲ್ಲೂ ನಿವಿನ್ ಮುಖ್ಯಭೂಮಿಕೆಯಲ್ಲಿದ್ದರು. ರೇಸಿಂಗ್ ಪ್ರಪಂಚದ ಹಿನ್ನೆಲೆಯಲ್ಲಿ ಸಾಗುವ ಈ ಚಿತ್ರಕ್ಕೆ ಆಲ್ಫೋನ್ಸ್ ಪುತ್ರೇನ್ ಕಥೆ ಬರೆದಿದ್ದಾರೆ. ನಿರ್ದೇಶನದ ಜೊತೆಗೆ ಸಂಕಲನದ ಜವಾಬ್ದಾರಿಯೂ ಅವರದ್ದೇ. ಚಿತ್ರವನ್ನು ಪೌಲಿ ಜೂನಿಯರ್ ಪಿಕ್ಚರ್ಸ್ ಜೊತೆಗೆ ಸಿನಿಹೋಲಿಕ್ಸ್ ಬ್ಯಾನರ್ ಅಡಿಯಲ್ಲಿ ಟನ್ಸನ್ ಟೋನಿ ಮತ್ತು ಸುನಿಲ್ ರಾಮದಿ ನಿರ್ಮಾಣ ಮಾಡುತ್ತಿದ್ದಾರೆ.

ಸ್ಟೀವ್ ಕೊಟ್ಟೂರ್ ಹಿನ್ನೆಲೆ ಸಂಗೀತ ಸಂಯೋಜಿಸಿದ್ದಾರೆ. ತಾರಾಬಳಗ ಹಾಗೂ ತಾಂತ್ರಿಕ ವರ್ಗದ ಬಗ್ಗೆ ಶೀಘ್ರದಲ್ಲಿ ಮಾಹಿತಿ ನೀಡಲಾಗುವುದು ಎಂದಿದೆ ಚಿತ್ರತಂಡ. ❖

ನಿವಿನ್ ಪೌಲಿ

ಪ್ರಿಯಾ ಸುದೀಪ್

ಕಥೆಗಳನ್ನು ಆಹ್ವಾನಿಸಿದ ‘ಸುಪ್ರಿಯಾನ್ವಿ’

ನಟ ಸುದೀಪ್ ಅವರ ಪತ್ನಿ ಪ್ರಿಯಾ ಇತ್ತೀಚೆಗಷ್ಟೇ ‘ಸುಪ್ರಿಯಾನ್ವಿ ಪಿಕ್ಚರ್ ಸ್ಟುಡಿಯೊ’ ಅನಾವರಣಗೊಳಿಸಿದ್ದರು. ಇದೀಗ ಕಥೆಗಾರರಿಂದ ಕಥೆಗಳನ್ನು ಆಹ್ವಾನಿಸಲಾಗಿದೆ.

ಈ ಮೂಲಕ ಯುವ ಪ್ರತಿಭೆಗಳಿಗೆ ವೇದಿಕೆ ಒದಗಿಸಲು ಪ್ರಿಯಾ ಸುದೀಪ್ ಮುಂದಾಗಿದ್ದಾರೆ. ‘ಮೌಲಿಕವಾದ ಕಥೆ, ಚಿತ್ರಕಥೆ ಅಥವಾ ವಿಶಿಷ್ಟವಾದ ಕಥಾ ಪರಿಕಲ್ಪನೆ ಇದ್ದರೆ ಅದನ್ನು ಹಂಚಿಕೊಳ್ಳಿ’ ಎಂಬ ಆಹ್ವಾನ ನೀಡಿದ್ದಾರೆ.

‘ಮಾರ್ಕ್’ ಸಿನಿಮಾ ಮೂಲಕ ವಿತರಣೆ ಕ್ಷೇತ್ರಕ್ಕೆ ಕಾಲಿಟ್ಟಿರುವ ಪ್ರಿಯಾ ಅವರು ಇತ್ತೀಚೆಗೆ ‘ಮ್ಯಾಂಗೋ ಪಚ್ಚ’ ಸಿನಿಮಾವನ್ನು ಕೆಆರ್‌ಜಿ ಸಂಸ್ಥೆ ಜೊತೆಗೂಡಿ ನಿರ್ಮಾಣ ಮಾಡಿದ್ದರು. ಇದರ ಬೆನ್ನಲ್ಲೇ ಹೊಸ ಕಥೆಗಳ ಹುಡುಕಾಟ ಆರಂಭಿಸಿದ್ದಾರೆ. ಹೆಚ್ಚಿನ ವಿವರಗಳಿಗಾಗಿ 6363307434ಗೆ ವಾಟ್ಸ್‌ಆ್ಯಪ್ ಮಾಡಲು ನಿರ್ಮಾಣ ಸಂಸ್ಥೆ ತಿಳಿಸಿದೆ. ❖

‘ಟಾಕ್ಸಿಕ್’ನಲ್ಲಿ ಮಹಿಳಾ ಪಾತ್ರಗಳ ಝಲಕ್

ಯಶ್ ಎಕ್ಸ್ ಖಾತೆಯ ಚಿತ್ರ

ಯಶ್ ನಟನೆಯ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಚಿತ್ರ ‘ಟಾಕ್ಸಿಕ್’ ಬಿಡುಗಡೆಯತ್ತ ಸಾಗುತ್ತಿದ್ದಂತೆ ಚಿತ್ರದ ಹೊಸ ಪ್ರಚಾರ ವಿಡಿಯೊ ಕುತೂಹಲ ಹೆಚ್ಚಿಸಿದೆ. ‘ರಾಯ’ ಮತ್ತು ‘ಟಿಕೆಟ್’ ಎಂಬ ಎರಡು ಅವತಾರಗಳಲ್ಲಿ ಯಶ್ ಕಾಣಿಸಿಕೊಳ್ಳಲಿರುವ ಈ ಚಿತ್ರದ ಮಹಿಳಾ ಪಾತ್ರಗಳ ಪರಿಚಯವಿರುವ ‘ಲೇಡೀಸ್.. ಲೇಡೀಸ್..’ ಟ್ಯಾಗ್‌ಲೈನ್‌ನ ವಿಡಿಯೊವನ್ನು ಚಿತ್ರತಂಡ ‘ಎಕ್ಸ್’ ಜಾಲತಾಣದಲ್ಲಿ ಹಂಚಿಕೊಂಡಿದೆ.

ವಿಡಿಯೊದಲ್ಲಿ ನಟಿಯರಾದ ನಯನತಾರಾ, ಕಿಯಾರಾ ಅಡ್ವಾಣಿ, ತಾರಾ ಸುತಾರಿಯಾ, ರುಕ್ಮಿಣಿ ವಸಂತ್ ಹಾಗೂ ಹುಮಾ ಖುರೇಷಿ ಅವರ ಪಾತ್ರಗಳ ಝಲಕ್ ನೀಡಲಾಗಿದೆ. ಮೋಹಕ ಭಾವ, ಬಂಡಾಯ ಮತ್ತು ಪ್ರತಿರೋಧದ ಛಾಯೆಗಳನ್ನು ಒಳಗೊಂಡ ವಿಭಿನ್ನ ಫ್ರೇಮ್‌ಗಳು ಗಮನ ಸೆಳೆಯುತ್ತವೆ. ಐವರೂ ಸಾಹಸ ಪ್ರಧಾನ ದೃಶ್ಯಗಳಲ್ಲಿ ಕಾಣಿಸಿಕೊಂಡಿದ್ದು, ಚಿತ್ರದ ಆ್ಯಕ್ಷನ್ ಸ್ವರೂಪದ ಸುಳಿವನ್ನೂ ನೀಡುತ್ತವೆ.

‘ಲೇಡೀಸ್.. ಲೇಡೀಸ್.. ಒಬ್ಬೊಬ್ಬರಾಗಿ ಬರುತ್ತೀರಾ... ಅಥವಾ ಒಟ್ಟಿಗೆ ಬರುತ್ತೀರಾ?’ ಎಂದು ಯಶ್ ಭಿನ್ನ ಮ್ಯಾನರಿಸಂನಲ್ಲಿ ಕೇಳುವ ದೃಶ್ಯ ಹಾಗೂ ‘ಧೈರ್ಯಶಾಲಿ, ಕಠೋರ ಮತ್ತು ಎಂದಿಗೂ ಕ್ಷಮಿಸದ...’ ಎಂಬ ಅಡಿಸಾಲು ವಿಡಿಯೊದ ಪ್ರಮುಖ ಆಕರ್ಷಣೆಯಾಗಿದೆ. ಆರಂಭದಿಂದ ಅಂತ್ಯದವರೆಗೆ ಮಹಿಳಾ ಪಾತ್ರಗಳ ಬಲಿಷ್ಠ ವ್ಯಕ್ತಿತ್ವವನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಲಾಗಿದೆ.

ಪ್ರಚಾರ ತಂತ್ರದ ಭಾಗವಾಗಿ, ‘ಮಕ್ಕಳೇ.. ಆದಷ್ಟೂ ದೂರ ಇರಿ..’, ‘ಪೋಷಕರೇ.. ಮಕ್ಕಳು ಆದಷ್ಟು ದೂರ ಇರುವಂತೆ ನೋಡಿಕೊಳ್ಳಿ..’, ‘ತಾತ–ಅಜ್ಜಿಯರೇ.. ನಿಮ್ಮ ಮಕ್ಕಳ ಮಕ್ಕಳು ಆದಷ್ಟು ದೂರ ಉಳಿಯುವುದನ್ನು ಖಾತರಿಪಡಿಸಿಕೊಳ್ಳಿ..’ ಎಂಬ ಎಚ್ಚರಿಕೆಯ ಸಂದೇಶಗಳನ್ನೂ ಚಿತ್ರತಂಡ ವಿಡಿಯೊದಲ್ಲಿ ಬಳಸಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಗಮನ ಸೆಳೆದಿದೆ.

ಗೀತೂ ಮೋಹನ್‌ದಾಸ್ ನಿರ್ದೇಶನದ ‘ಟಾಕ್ಸಿಕ್’ ಆಗಸ್ಟ್ 26ರಂದು ವಿಶ್ವದಾದ್ಯಂತ ಬಿಡುಗಡೆಯಾಗಲಿದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಏಕಕಾಲಕ್ಕೆ ಚಿತ್ರೀಕರಣಗೊಂಡಿರುವ ಚಿತ್ರವು ಹಿಂದಿ, ತೆಲುಗು, ತಮಿಳು ಹಾಗೂ ಮಲಯಾಳ ಭಾಷೆಗಳಲ್ಲೂ ಡಬ್ ಆಗಿ ಬಿಡುಗಡೆಯಾಗಲಿದೆ. ಕೆವಿಎನ್ ಪ್ರೊಡಕ್ಷನ್ಸ್ ಮತ್ತು ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಸಂಸ್ಥೆಗಳು ಜಂಟಿಯಾಗಿ ಚಿತ್ರವನ್ನು ನಿರ್ಮಿಸಿವೆ. ❖

ರಾಮಮಂದಿರಕ್ಕೆ ರಾಯ್ ಭೇಟಿ

ದೇಣಿಗೆ ಕಳವು: ನಿಷ್ಪಕ್ಷಪಾತ ತನಿಖೆ ನಡೆಯುತ್ತಿಲ್ಲ– ಅಜಯ್ ರಾಯ್

ಅಯೋಧ್ಯೆ (ಪಿಟಿಐ): ಉತ್ತರ ಪ್ರದೇಶದ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ರಾಯ್ ಅವರನ್ನು ‘ಗೃಹ ಬಂಧನ’ದಿಂದ ಬಿಡುಗಡೆ ಮಾಡಿದ ಬಳಿಕ ಅವರು ಅಯೋಧ್ಯೆಯ ರಾಮಮಂದಿರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

ಹನುಮಾನಗಢಿ ಮತ್ತು ದೇಗುಲಕ್ಕೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, ‘ದೇಗುಲದ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ನಿಷ್ಪಕ್ಷಪಾತ ತನಿಖೆ ಆಗುತ್ತಿಲ್ಲ. ರಾಮಮಂದಿರದ ಕಾರ್ಯಕರ್ತರನ್ನು ವಿಚಾರಣೆಗೆ ಒಳಪಡಿಸಬೇಕು’ ಎಂದು ಹೇಳಿದರು.

ರಾಮಮಂದಿರ ಟ್ರಸ್ಟ್ ಅನ್ನು ವಿಸರ್ಜಿಸಬೇಕು. ಸಂತರು, ಶಂಕರಾಚಾರ್ಯರು ಮತ್ತು ಅಯೋಧ್ಯೆಯ ನಿವಾಸಿಗಳು ಟ್ರಸ್ಟ್‌ನ ಸದಸ್ಯರಾಗಬೇಕು ಎಂದು ಅವರು ಒತ್ತಾಯಿಸಿದರು.

ಇದಕ್ಕೂ ಮೊದಲು ರಾಮ ಮಂದಿರಕ್ಕೆ ಭೇಟಿ ನೀಡಲು ಹೊರಟಿದ್ದ ಕಾಂಗ್ರೆಸ್ ನಿಯೋಗವನ್ನು ಆಡಳಿತವು ತಡೆದಿತ್ತು ಎಂದು ರಾಯ್ ಆರೋಪಿಸಿದ್ದಾರೆ.

‘ಗೃಹ ಬಂಧನ’ವನ್ನು ಖಂಡಿಸಿ ಆಚಾರ್ಯ ನರೇಂದ್ರ ದೇವ್ ವಿಶ್ವವಿದ್ಯಾಲಯದ ಆವರಣದ ಹೊರಗೆ ಹಲವು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಪಕ್ಷದ ನಾಯಕರಿಗೆ ದೇಗುಲ ಭೇಟಿಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದ್ದರು.

ಶೋಧ: ಪ್ರಕರಣಕ್ಕೆ ಸಂಬಂಧಿಸಿದಂತೆ ಅಯೋಧ್ಯೆ ಪೊಲೀಸರು ಹಲವೆಡೆ ಶೋಧ ನಡೆಸಿ, ಕ್ಯುಆರ್ ಕೋಡ್ ಅಂಟಿಸಿದ್ದ ದೇಣಿಗೆ ಡಬ್ಬಗಳು, ನಗದು, ಚಿನ್ನ, ಬೆಳ್ಳಿಯನ್ನು ವಶಕ್ಕೆ ಪಡೆದರು ಎಂದು ಮೂಲಗಳು ತಿಳಿಸಿವೆ.

‘ಎಎಪಿ ನಿಜವಾದ ಸನಾತನ ಪಕ್ಷ’

ನವದೆಹಲಿ: ‘ಬಿಜೆಪಿಯು ರಾಮನ ಹೆಸರಿನಲ್ಲಿ ರಾಜಕೀಯ ಲಾಭ ಮಾಡಿಕೊಳ್ಳುತ್ತಿದೆ. ಆದರೆ ಆಮ್ ಆದ್ಮಿ ಪಕ್ಷವು ನಿಜವಾದ ಸನಾತನ ಪಕ್ಷ. ಅದು ಭಕ್ತಿಯಿಂದ ಕೆಲಸ ಮಾಡುತ್ತದೆ’ ಎಂದು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಬುಧವಾರ ಹೇಳಿದರು.

‘ಬಿಜೆಪಿ ನಾಯಕರು ತಮ್ಮ ಭಾಷಣಗಳು ಮತ್ತು ಚುನಾವಣಾ ಪ್ರಚಾರದಲ್ಲಿ ಪದೇ ಪದೇ ರಾಮ ಮತ್ತು ರಾಮಮಂದಿರದ ಹೆಸರನ್ನು ಹೇಳುತ್ತಾರೆ. ಆದರೆ ರಾಮಮಂದಿರಕ್ಕೆ ಭೇಟಿ ನೀಡಲು ಮತ್ತು ಪ್ರಾರ್ಥನೆ ಸಲ್ಲಿಸಲು ಹಿಂದೇಟು ಹಾಕುತ್ತಾರೆ’ ಎಂದು ಆರೋಪಿಸಿದರು.

ಉತ್ತರ ಪ್ರದೇಶದ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ರಾಯ್ ಅವರು ಅಯೋಧ್ಯೆಯ ಹನುಮಾನ್ ದೇಗುಲದಲ್ಲಿ ಪ್ರಾರ್ಥನೆ ಸಲ್ಲಿಸಿದರು –ಪಿಟಿಐ ಚಿತ್ರ

ಎಸ್‌ಐಟಿಗೆ ಮತ್ತೆ 15 ದಿನ ಕಾಲಾವಕಾಶ

ಲಖನೌ: ರಾಮಮಂದಿರದ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನೀಡಿದ್ದ ಗಡುವನ್ನು ಉತ್ತರ ಪ್ರದೇಶ ಸರ್ಕಾರವು ಮತ್ತೆ 15 ದಿನ ವಿಸ್ತರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ತನಿಖೆಗಾಗಿ ಜೂನ್ 13ರಂದು ಮೂವರು ಸದಸ್ಯರನ್ನು ಒಳಗೊಂಡ ಎಸ್‌ಐಟಿಯನ್ನು ರಚಿಸಲಾಗಿತ್ತು. ಆರಂಭದಲ್ಲಿ ತನಿಖೆಗಾಗಿ 15 ದಿನ ನೀಡಲಾಗಿತ್ತು. ಇದರ ಬೆನ್ನಲ್ಲೇ ಎಸ್‌ಐಟಿ ಜೂನ್ 23ರಂದು ಪ್ರಾಥಮಿಕ ವರದಿ ಸಲ್ಲಿಸಿತ್ತು. ಜೂನ್ 25ರಂದು ಎಂಟು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು.

ಜಿಮ್‌ಗೆ ಬೀಗಮುದ್ರೆ

ಬಲಿಯಾ: ದೇಣಿಗೆ ಕಳವು ವಿವಾದಕ್ಕೆ ಸಂಬಂಧಿಸಿ ಆಕ್ಷೇಪಾರ್ಹ ಹೇಳಿಕೆಯನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ವ್ಯಕ್ತಿ ಅನಧಿಕೃತವಾಗಿ ನಡೆಸುತ್ತಿದ್ದ ಜಿಮ್‌ಗೆ ಜಿಲ್ಲಾಡಳಿತವು ಬುಧವಾರ ಬೀಗಮುದ್ರೆ ಹಾಕಿದೆ.

ಜಿಮ್, ಕಟ್ಟಡದ ನೆಲಮಹಡಿಯಲ್ಲಿದೆ ಮತ್ತು ಅಗ್ನಿ ಸುರಕ್ಷತಾ ಮಾನದಂಡಗಳನ್ನು ಪಾಲಿಸಿಲ್ಲ ಎಂಬ ಕಾರಣಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಜಿಮ್ ಮಾಲೀಕ ಇರ್ಶಾದ್ ಅಲಿ (28) ವಿರುದ್ಧ ಪ್ರಕರಣ ದಾಖಲಾಗಿತ್ತು. ಸೋಮವಾರ ಅಲಿಯನ್ನು ಬಂಧಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಮಹಾರಾಷ್ಟ್ರ ಉಪಸಭಾಪತಿ: ಅಹಿರ್ ಅವಿರೋಧ ಆಯ್ಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನ ಪರಿಷತ್‌ನ ಉಪ ಸಭಾಪತಿ ಸ್ಥಾನಕ್ಕೆ ಆಡಳಿತಾರೂಢ ಮಹಾಯುತಿ (ಎನ್‌ಡಿಎ ಮೈತ್ರಿಕೂಟ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶಿವಸೇನಾ (ಯುಬಿಟಿ) ಸದಸ್ಯ ಸಚಿನ್ ಅಹಿರ್ ಅವರು ಬುಧವಾರ ಅವಿರೋಧ ಆಯ್ಕೆಯಾಗಿದ್ದಾರೆ.

ವಿಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ್ ಅಘಾಡಿಯು (ಎಂವಿಎ) ಉದ್ಧವ್ ಪಕ್ಷದ ಜಗನ್ನಾಥ ಅಭ್ಯಂಕರ್ ಅವರನ್ನು ಮಂಗಳವಾರ ಅಭ್ಯರ್ಥಿಯಾಗಿ ಕಣಕ್ಕಿಳಿಸಿತ್ತು. ಆನಂತರ ಅವರು ನಾಮಪತ್ರ ವಾಪಸ್ ಪಡೆದರು.

ಸಿಜೆಪಿ ಪ್ರತಿಭಟನೆ 12ನೇ ದಿನಕ್ಕೆ

ನವದೆಹಲಿ (ಪಿಟಿಐ): ಜಂತರ್ ಮಂತರ್‌ನಲ್ಲಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನಡೆಸುತ್ತಿರುವ ಪ್ರತಿಭಟನೆ 12ನೇ ದಿನಕ್ಕೆ ಕಾಲಿಟ್ಟಿದೆ.

ಪ್ರತಿಭಟನೆ ಬೆಂಬಲಿಸಿ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರು ಕೈಗೊಂಡಿರುವ ಉಪವಾಸ ಸತ್ಯಾಗ್ರಹ ನಾಲ್ಕನೇ ದಿನಕ್ಕೆ ಕಾಲಿಟ್ಟಿದೆ. ‘ನಾನು ಚೆನ್ನಾಗಿದ್ದೇನೆ, ಆದರೆ ಸ್ವಲ್ಪ ದಣಿದಿದ್ದೇನೆ’ ಎಂದು ಅವರು ಹೇಳಿದ್ದಾರೆ.

ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ತಮ್ಮ ಸಂಘಟನೆಯ ವಿದ್ಯಾರ್ಥಿಗಳ ಆರೋಗ್ಯ ಹದಗೆಟ್ಟಿರುವ ಬಗ್ಗೆ ಅಖಿಲ ಭಾರತ ವಿದ್ಯಾರ್ಥಿ ಅಸೋಸಿಯೇಷನ್ (ಎಐಎಸ್‌ಎ) ತೀವ್ರ ಕಳವಳ ವ್ಯಕ್ತಪಡಿಸಿದೆ.

ರೇವಂತ ರೆಡ್ಡಿ ಪತನಕ್ಕೆ ದಿನಗಣನೆ: ಬಿಜೆಪಿ ಟೀಕೆ

ನವದೆಹಲಿ (ಪಿಟಿಐ): ‘ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಅವರ ದುರಹಂಕಾರದಿಂದಾಗಿ ರಾಜ್ಯದಲ್ಲಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲಾಗಲಿದೆ. ಆ ಮೂಲಕ ಅವರ ಪತನವೂ ಆಗಲಿದೆ. ಅದಕ್ಕೆ ದಿನಗಣನೆ ಆರಂಭವಾಗಿದೆ’ ಎಂದು ಬಿಜೆಪಿ ಟೀಕಿಸಿದೆ.

ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಟೀಕಿಸಿದ್ದ ರೇವಂತ ರೆಡ್ಡಿ ವಿರುದ್ಧ ಬಿಜೆಪಿ ಬುಧವಾರ ವಾಗ್ದಾಳಿ ನಡೆಸಿದೆ.

ತೆಲಂಗಾಣದಲ್ಲಿ ಮಂಗಳವಾರ ಮಾತನಾಡಿದ್ದ ನಿತಿನ್, 2028ರಲ್ಲಿ ಪಕ್ಷದ ಗೆಲುವಿಗಾಗಿ ಶ್ರಮಿಸುವಂತೆ ಬಿಜೆಪಿ ಕಾರ್ಯಕರ್ತರಿಗೆ ಕರೆ ನೀಡಿದ್ದರು. ಇದನ್ನು ರೇವಂತ ಟೀಕಿಸಿದ್ದರು.

ಪಶ್ಚಿಮ ಬಂಗಾಳ 26 ಲಕ್ಷ ಅರ್ಜಿಗಳು ತಿರಸ್ಕೃತ

ಕೋಲ್ಕತ್ತ (ಪಿಟಿಐ): ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಪಶ್ಚಿಮ ಬಂಗಾಳದ ಮಹತ್ವಾಕಾಂಕ್ಷೆಯ ‘ಅನ್ನಪೂರ್ಣ ಯೋಜನೆ’ಗೆ ಅರ್ಜಿ ಸಲ್ಲಿಸಿದ್ದವರ ಪೈಕಿ 26 ಲಕ್ಷ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಪೌರತ್ವ ಮತ್ತು ವಾಸ ದೃಢೀಕರಣ ಪ್ರಮಾಣಪತ್ರಗಳಲ್ಲಿನ ಸಂದೇಹಗಳ ಆಧಾರದ ಮೇಲೆ ಈ ಅರ್ಜಿಗಳು ತಿರಸ್ಕೃತವಾಗಿವೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹೇಳಿದ್ದಾರೆ.

ಮೊದಲ ಕಂತು ಬಿಡುಗಡೆ: ಈ ಯೋಜನೆಯಡಿ ಮೊದಲ ಕಂತಿನಲ್ಲಿ 1.1 ಕೋಟಿ ಫಲಾನುಭವಿಗಳಿಗೆ ಮೊದಲ ಕಂತಿನ ಹಣವನ್ನು ಮುಖ್ಯಮಂತ್ರಿ ಬುಧವಾರ ವರ್ಗಾಯಿಸಿದರು. ‘ತೆರಿಗೆದಾರರ ಹಣವನ್ನು ಭಾರತೀಯರಲ್ಲದವರಿಗೆ ವರ್ಗಾಯಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

ಸಿಯಾ ಬಳಿಯಿದ್ದ ಭಾವಿ ಪತಿಯ ಫೋನ್

ಪುಣೆ (ಪಿಟಿಐ): ಕೊಲೆಯಾದ ಪುಣೆಯ ರಿಯಲ್ ಎಸ್ಟೇಟ್ ಉದ್ಯಮಿ ಕೇತನ್ ಅಗರವಾಲ್ (26) ಅವರ ಮೊಬೈಲ್ ಫೋನ್, ಅವರ ಕುಟುಂಬಕ್ಕೆ ಹಸ್ತಾಂತರವಾಗುವುದಕ್ಕೂ ಮುನ್ನ ಕೆಲಕಾಲ ಪ್ರಮುಖ ಆರೋಪಿ ಸಿಯಾ ಗೋಯಲ್ (20) ಬಳಿ ಇತ್ತು ಎಂದು ತನಿಖೆ ನಡೆಸುತ್ತಿರುವ ಪೊಲೀಸರು ತಿಳಿಸಿದ್ದಾರೆ.

ಶಾಸಕರೊಬ್ಬರಿಗೆ ₹35 ಕೋಟಿ ಆಮಿಷವೊಡ್ಡಿದ ಬಾಲಾಜಿ: ಪೊಲೀಸರ ಆರೋಪ

‘ಟಿವಿಕೆ ಸರ್ಕಾರ ಪತನಕ್ಕೆ ಶಾಸಕರ ಖರೀದಿ’

ಚೆನ್ನೈ: ಡಿಎಂಕೆಯ ಮಾಜಿ ಸಚಿವ ಸೆಂಥಿಲ್ ಬಾಲಾಜಿ ಅವರು, ಆಡಳಿತಾರೂಢ ಟಿವಿಕೆ ಶಾಸಕರೊಬ್ಬರಿಗೆ ತಮ್ಮ ಸಹಚರರ ಮೂಲಕ ₹35 ಕೋಟಿ ಆಮಿಷ ಒಡ್ಡಿದ್ದು, ವಿರೋಧ ಪಕ್ಷವು ವಿಧಾನಸಭೆ ಸ್ಪೀಕರ್ ವಿರುದ್ಧ ಮಂಡಿಸಲು ಯೋಜಿಸುತ್ತಿರುವ ಅವಿಶ್ವಾಸ ನಿರ್ಣಯ ಬೆಂಬಲಿಸಿ ಮತ ಚಲಾಯಿಸುವಂತೆ ಒತ್ತಡ ಹೇರಿದ್ದಾರೆ ಎಂದು ತಮಿಳುನಾಡು ಪೊಲೀಸರು ಹೇಳಿದ್ದಾರೆ.

ಉತ್ತಂಗರೈ ಶಾಸಕ ಎನ್. ಇಳಯ ರಾಜ ಅವರ ದೂರಿನ ಆಧಾರದ ಮೇಲೆ ಪೊಲೀಸರು ರಾಜಕೀಯ ಕಾರ್ಯತಂತ್ರ ನಿಪುಣರಾದ ತಿರುಚ್ಚಿಯ ತಿರುನಾವುಕ್ಕರಸು, ನರೇಶ್ ಮತ್ತು ಚೆನ್ನೈನ ಮೇದವಕ್ಕಂನ ತ್ಯಾಗರಾಜನ್ ಎಂಬವರನ್ನು ಬಂಧಿಸಿದ್ದಾರೆ. ತಿರುನಾವುಕ್ಕರಸು ಅವರು ಇಳಯರಾಜ ಅವರನ್ನು ಸಂಪರ್ಕಿಸಿ, ಸೆಂಥಿಲ್ ಬಾಲಾಜಿ ಮತ್ತು ಅವರ ಸಹೋದರ ವಿ. ಅಶೋಕ್ ಕುಮಾರ್ ಅವರ ಸಲಹೆಯ ಮೇರೆಗೆ ಹಣ ನೀಡಿದ್ದಾರೆ ಎಂದು ಪೊಲೀಸರು ಆರೋಪಿಸಿದ್ದಾರೆ. ಬಂಧಿತ ಮೂವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸರ್ಕಾರ ಉರುಳಿಸುವ ಪ್ರಯತ್ನಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಾಲಾಜಿ ಹೆಸರು ಕೇಳಿಬಂದಿದೆ. ಸ್ಪೀಕರ್ ಅವರನ್ನು ಪದಚ್ಯುತಗೊಳಿಸಲು ಮತ್ತು ಟಿವಿಕೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಶಾಸಕರೊಬ್ಬರಿಗೆ ಲಂಚ ನೀಡಲು ಪ್ರಯತ್ನಿಸಿದ ಗಂಭೀರ ಆರೋಪವನ್ನು ಅವರ ಮೇಲೆ ಹೊರಿಸಲಾಗಿದೆ. ಹಿಂದಿನ ಎಐಎಡಿಎಂಕೆ ಸರ್ಕಾರದ ಅವಧಿಯಲ್ಲಿ ನಡೆದ ‘ಉದ್ಯೋಗಕ್ಕಾಗಿ ಹಣ’ ಹಗರಣದಲ್ಲೂ ಸೆಂಥಿಲ್ ಬಾಲಾಜಿ ಒಂದು ವರ್ಷಕ್ಕೂ ಹೆಚ್ಚು ಕಾಲ ಜೈಲಿನಲ್ಲಿದ್ದರು.

ಎಐಎಡಿಎಂಕೆ– ಭಿನ್ನಮತ ಉಲ್ಬಣ: ಎಐಎಡಿಎಂಕೆಯೊಳಗಿನ ಭಿನ್ನಮತ ಬುಧವಾರ ತೀವ್ರಗೊಂಡಿದ್ದು, ಕೊಯಮತ್ತೂರಿನ ಪ್ರಭಾವಿ ಮುಖಂಡ ಎಸ್.ಪಿ ವೇಲುಮಣಿ ಸೇರಿ, ಒಂಬತ್ತು ಬಂಡಾಯ ನಾಯಕರು ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಮುಂದಿಟ್ಟ ಹೊಸ ಹುದ್ದೆಗಳನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ. ಬುಧವಾರ ಪಳನಿಸ್ವಾಮಿ ಕರೆದಿದ್ದ ಸಭೆಯಿಂದ ದೂರ ಉಳಿದ ಈ ಮುಖಂಡರು, ‘ಟಿವಿಕೆಗೆ ಎಐಎಡಿಎಂಕೆ ಕಾರ್ಯಕರ್ತರು ಮತ್ತು ಮುಖಂಡರ ಸಾಮೂಹಿಕ ವಲಸೆಗೆ ಪಳನಿಸ್ವಾಮಿ ಅವರೇ ಕಾರಣ’ ಎಂದು ಆರೋಪಿಸಿದ್ದಾರೆ.

ಮಾಜಿ ಸಚಿವರಾದ ಸಿ. ವಿಜಯಭಾಸ್ಕರ್ ಮತ್ತು ಎಂ.ಆರ್. ವಿಜಯಭಾಸ್ಕರ್ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಆಡಳಿತಾರೂಢ ಟಿವಿಕೆ ಸೇರಲು ಸಿದ್ಧರಾಗಿರುವ ಸಂದರ್ಭದಲ್ಲೇ ಈ ಬೆಳವಣಿಗೆ ನಡೆದಿದೆ. ಎಐಎಡಿಎಂಕೆಯ ಮಾಜಿ ಸಚಿವರು, ಶಾಸಕರು ಟಿವಿಕೆ ಸೇರಲು ಮಾತುಕತೆ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ವೇಲುಮಣಿ ಸೇರಿದಂತೆ ಕೆಲವು ನಾಯಕರು ‘ಗೌರವಯುತ ಸ್ಥಾನ’ ಲಭಿಸಿದರೆ ಟಿವಿಕೆ ಸೇರುವ ಬಗ್ಗೆ ಯೋಚಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಸಿ.ಎಂ. ವಿರುದ್ಧ ಡಿಎಂಕೆ ದೂರು

ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಡಿಎಂಕೆಯ ಇಬ್ಬರು ಶಾಸಕರನ್ನು ಖರೀದಿಸಲು ಮುಂದಾಗಿದ್ದಾರೆ ಎಂದು ಎಂಡಿಎಂಕೆ ಮುಖ್ಯಸ್ಥ ವೈಕೊ ಸಾರ್ವಜನಿಕವಾಗಿ ಒಪ್ಪಿಕೊಂಡಿದ್ದು, ಮುಖ್ಯಮಂತ್ರಿ ವಿರುದ್ಧ ಎಫ್‌ಐಆರ್ ದಾಖಲಿಸಲು ಗುಪ್ತಚರ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯಕ್ಕೆ (ಡಿವಿಎಸಿ) ನಿರ್ದೇಶನ ನೀಡಬೇಕು ಎಂದು ಡಿಎಂಕೆ ರಾಜ್ಯಪಾಲರಿಗೆ ಬುಧವಾರ ದೂರು ನೀಡಿದೆ.

‘ಶಾಸಕರ ಖರೀದಿಗೆ ಸಂಬಂಧಿಸಿ ಮುಖ್ಯಮಂತ್ರಿ ವಿರುದ್ಧ ಎಫ್‌ಐಆರ್ ದಾಖಲಿಸಲು ರಾಜ್ಯಪಾಲ ಆರ್.ವಿ ಅರ್ಲೇಕರ್ ಅವರು ನಿರ್ದೇಶನ ನೀಡಬೇಕು. ವೈಕೊ ಮತ್ತು ಮುಖ್ಯಮಂತ್ರಿ ವಿಜಯ್ ನಡುವೆ ನಡೆದಿರುವ ಅಪರಾಧ ಸಂಚಿನ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ನ್ಯಾಯವನ್ನು ಖಚಿತಪಡಿಸಬೇಕು’ ಎಂದು ಡಿಎಂಕೆ ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ ಆಗ್ರಹಿಸಿದ್ದಾರೆ.

ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಒಕ್ಕೂಟದಿಂದ (ಎಸ್‌ಪಿಎ) ಎಂಡಿಎಂಕೆ ಹೊರಬಂದು, ಆಡಳಿತಾರೂಢ ಟಿವಿಕೆಯನ್ನು ಬೆಂಬಲಿಸಲು ನಿರ್ಧರಿಸಿದ ಬೆನ್ನಲ್ಲೇ, ಈ ಬೆಳವಣಿಗೆ ನಡೆದಿದೆ.

ಡಿಎಂಕೆ ಆರೋಪವನ್ನು ಅಲ್ಲಗಳೆದಿರುವ ಟಿವಿಕೆ, ‘ಮುಖ್ಯಮಂತ್ರಿ ಇಂತಹ ಯಾವುದೇ ಹೇಳಿಕೆಯನ್ನು ನೀಡಿಲ್ಲ’ ಎಂದು ಹೇಳಿದೆ.

ಮೆಸ್ಸಿ ದಾಖಲೆಯ ಸನಿಹ ಎಂಬಾಪೆ

16ರ ಸುತ್ತಿಗೆ ಫ್ರಾನ್ಸ್ • ವಿಶ್ವಕಪ್‌ನಲ್ಲಿ 18ನೇ ಗೋಲು ಗಳಿಸಿದ ಫ್ರೆಂಚ್ ತಾರೆ

ಫ್ರಾನ್ಸ್	ಸ್ವೀಡನ್
3	0

ಈಸ್ಟ್ ರುದರ್‌ಫೋರ್ಡ್ (ಎಪಿ): ಫ್ರಾನ್ಸ್ ತಂಡದ ಕೈಲಿಯನ್ ಎಂಬಾಪೆ ಇದೀಗ ಅರ್ಜೆಂಟೀನಾದ ತಾರೆ ಲಯೊನೆಲ್ ಮೆಸ್ಸಿ ಅವರ ಮೇಲೆ ಒತ್ತಡವನ್ನು ಹೆಚ್ಚಿಸಿದ್ದಾರೆ. ಫಿಫಾ ವಿಶ್ವಕಪ್ ಟೂರ್ನಿಗಳಲ್ಲಿ ಒಟ್ಟು 18 ಗೋಲು ಹೊಡೆದಿರುವ ಅವರು ಮೆಸ್ಸಿಯ ದಾಖಲೆಯಿಂದ ಕೇವಲ ಒಂದು ಹೆಜ್ಜೆಯಷ್ಟೇ ಹಿಂದಿದ್ದಾರೆ. ಆದ್ದರಿಂದ ಈ ಇಬ್ಬರು ಸೂಪರ್ ಸ್ಟಾರ್ ಆಟಗಾರರ ಪೈಪೋಟಿಯು ಕುತೂಹಲ ಕೆರಳಿಸಿದೆ.

ಮಂಗಳವಾರ ರಾತ್ರಿ ನಡೆದ 32ರ ಘಟ್ಟದ ಪಂದ್ಯದಲ್ಲಿ ಎಂಬಾಪೆ ಅವರ ಅಮೋಘ ಆಟದ ಬಲದಿಂದ ಫ್ರಾನ್ಸ್ ತಂಡವು 3–0 ಗೋಲುಗಳಿಂದ ಸ್ವೀಡನ್ ಎದುರು ಜಯಿಸಿತು. ಎಂಬಾಪೆ ಅವರು 45 ನೇ ಮತ್ತು 74ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಮೆಸ್ಸಿ (19 ಗೋಲು) ಅವರ ದಾಖಲೆಯ ಸನಿಹಕ್ಕೆ ಬಂದರು. ಪ್ರಸಕ್ತ ಟೂರ್ನಿಯಲ್ಲಿ ಇಬ್ಬರೂ ತಲಾ ಆರು ಗೋಲು ಗಳಿಸಿದ್ದಾರೆ. ಫ್ರಾನ್ಸ್ ತಂಡದ ಬ್ರಾಡ್ಲಿ ಬಾರ್ಕೋಲಾ ಅವರು 53ನೇ ನಿಮಿಷದಲ್ಲಿ ಗೋಲು ಹೊಡೆದರು. ಫ್ರಾನ್ಸ್ ತಂಡವು ಶನಿವಾರ ನಡೆಯಲಿರುವ 16 ಘಟ್ಟದ ಪಂದ್ಯದಲ್ಲಿ ಪರಗ್ವೆಯನ್ನು ಎದುರಿಸಲಿದೆ.

ಸಂಜೆ 5 ಗಂಟೆ (ಸ್ಥಳೀಯ ಕಾಲಮಾನ) ಪಂದ್ಯ ಆರಂಭವಾದಾಗ 32 ಡಿಗ್ರಿ ಸೆಲ್ಸಿಯಸ್ ತಾಪಮಾನವಿತ್ತು. ಮೊದಲಾರ್ಧದ ಪಾನೀಯ ವಿರಾಮ ನೀಡಿದ ಸಂದರ್ಭದಲ್ಲಿ ಫ್ರಾನ್ಸ್ ಆಟಗಾರ ಲುಕಾಸ್ ಡಿಗ್ನೆ ಅವರು ಮೈದಾನದ ಸ್ಪ್ರಿಂಕ್ಲರ್‌ಗಳಿಂದ ಚಿಮ್ಮಿದ ನೀರಿಗೆ ಮೈಯೊಡ್ಡಿದರು.

ಪ್ರಥಮಾರ್ಧದ ಮುನ್ನ ಎಂಬಾಪೆ ಒಂದು ಗೋಲು ಹೊಡೆದು ತಂಡಕ್ಕೆ ಮುನ್ನಡೆ ಒದಗಿಸಿದ್ದರು. ಒಸ್ಮಾನ್ ಡೆಂಬೆಲೆ ಅವರ ನೆರವಿನಿಂದ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿದ ಎಂಬಾಪೆ, ಸ್ವೀಡನ್‌ನ ವಿಕ್ಟರ್ ಗೈಕೆರೆಸ ಮತ್ತು ಗೋಲ್‌ಕೀಪರ್ ಜೇಕಬ್ ವೈಡೆಲ್ ಝುಟರ್‌ಸ್ಟ್ರಾಮ್ ಅವರನ್ನು ವಂಚಿಸಿ ಗೋಲು ಗಳಿಸಿದರು. ತಕ್ಷಣವೇ ಎಂಬಾಪೆ ಅವರು ಡಿಡೀರ್ ದೆಸ್‌ಚಾಂಪ್ಸ್ ಅವರ ಬಳಿ ಹೋಗಿ ಆಲಂಗಿಸಿಕೊಂಡರು. 'ವೇಗ ಮತ್ತು ದಿಕ್ಕು ನಿರ್ದೇಶನದ ನಿಖರತೆಯ ಸೊಗಸಾದ ಗೋಲು ಇದು' ಎಂದು ಫ್ರಾನ್ಸ್ ಕೋಚ್ ಗ್ರಹಾಂ ಪಾಟರ್ ಹೇಳಿದರು.

ವಿಶ್ವಕಪ್ ನಾಕೌಟ್ ಹಂತಗಳಲ್ಲಿ ಒಟ್ಟು ಹತ್ತು ಗೋಲು ಹೊಡೆದ ಸಾಧನೆಯೂ ಎಂಬಾಪೆಯದ್ದಾಯಿತು. ಅವರು ಬ್ರೆಜಿಲ್‌ನ ದಿಗ್ಗಜರಾದ ಲಿಯೊನಿಡಾಸ್ ಮತ್ತು ರೊನಾಲ್ಡೊ ಅವರ (ತಲಾ 9) ದಾಖಲೆ ಮೀರಿದರು.

ಎಂಬಾಪೆ ಅವರು ವಿಶ್ವಕಪ್‌ನಲ್ಲಿ ಇದುವರೆಗೆ 18 ಪಂದ್ಯಗಳನ್ನು ಆಡಿ 18 ಗೋಲು ಗಳಿಸಿದ್ದಾರೆ.

ಫ್ರಾನ್ಸ್ ತಂಡದ ಕೈಲಿಯನ್ ಎಂಬಾಪೆ ಅವರು ಗೋಲಿನತ್ತ ಚೆಂಡನ್ನು ಕಿಕ್ ಮಾಡಿದರು. ಸ್ವೀಡನ್ ಗೋಲ್‌ಕೀಪರ್ ವೈಡೆಲ್ ಝುಟರ್‌ಸ್ಟ್ರಾಮ್ ಚೆಂಡು ತಡೆಯುವ ಪ್ರಯತ್ನ ಮಾಡಿದರು ಎಎಫ್‌ಪಿ ಚಿತ್ರ

ಕೇನ್ ಸಾಹಸ; ಕಾಂಗೊ ಮಣಿಸಿ ಪ್ರಿಕ್ವಾರ್ಟರ್‌ಗೆ ಇಂಗ್ಲೆಂಡ್

ಇಂಗ್ಲೆಂಡ್	ಕಾಂಗೊ
2	1

ಅಟ್ಲಾಂಟಾ (ಎಎಫ್‌ಪಿ): ಇಂಗ್ಲೆಂಡ್ ತಂಡದ ತಾರಾ ಆಟಗಾರ ಹ್ಯಾರಿ ಕೇನ್ ಅವರು ಫುಟ್‌ಬಾಲ್ ವಿಶ್ವಕಪ್‌ನಲ್ಲಿ 13ನೇ ಗೋಲು ಹೊಡೆದರು. ಬುಧವಾರ ಅವರು ಗಳಿಸಿದ ಅವಳಿ ಗೋಲುಗಳ ಸಾಹಸದಿಂದ ಇಂಗ್ಲೆಂಡ್ ತಂಡವು 32ರ ಘಟ್ಟದಲ್ಲಿ 2–1ರಿಂದ ಕಾಂಗೊ ರಿಪಬ್ಲಿಕ್ ತಂಡವನ್ನು ಸೋಲಿಸಿತು.

ಅದರೊಂದಿಗೆ, ಥಾಮಸ್ ತುಚೆಲ್ ಮಾರ್ಗದರ್ಶನದ ಇಂಗ್ಲೆಂಡ್ ತಂಡವು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಜಂಟಿ ಆತಿಥೇಯ ಮೆಕ್ಸಿಕೊ ತಂಡವನ್ನು ಎದುರಿಸಲಿದೆ. ಈ ಪಂದ್ಯವು ಭಾನುವಾರ ಮೆಕ್ಸಿಕೊ ಸಿಟಿಯ 'ಅಝುಟೆಕಾ' ಕ್ರೀಡಾಂಗಣದಲ್ಲಿ ನಡೆಯಲಿದೆ.

ವಿಂಗರ್ ಬ್ರಯಾನ್ ಸೀಪೆಂಗಾ ಅವರು ಪಂದ್ಯದ 7ನೇ ನಿಮಿಷದಲ್ಲಿ ಕಾಲ್ಚಳಕ ಮೆರೆದು ಇಂಗ್ಲೆಂಡ್ ಆಟಗಾರರನ್ನು ಬೆರಗುಗೊಳಿಸಿದರು. ಕಾಂಗೊ ತಂಡದ ರಕ್ಷಣಾ ವಿಭಾಗದ ಆಟಗಾರರೂ ಸಂಘಟಿತವಾಗಿ ಆಡಿದರು. ಪಂದ್ಯದ 75ನೇ ನಿಮಿಷದವರೆಗೂ ಎದುರಾಳಿ ತಂಡಕ್ಕೆ ಗೋಲು ಗಳಿಸಲು ಅವಕಾಶ ನೀಡಲಿಲ್ಲ.

ಆಗ, 'ತ್ರೀ ಲಯನ್ಸ್' ತಂಡದ ಫಾರ್ವರ್ಡ್ ಆಟಗಾರ ಕೇನ್ 'ಹೆಡ್ಡರ್' ಮೂಲಕ ಗೋಲು ಗಳಿಸಿ ಸಮಬಲ ಸಾಧಿಸಿದರು. ಪಂದ್ಯ ಮುಗಿಯಲು 5 ನಿಮಿಷ ಗಳಿದ್ದಾಗ ಮತ್ತೊಮ್ಮೆ ಗೋಲ್‌ಕೀಪರ್‌ನನ್ನು ವಂಚಿಸಿ, ತಮ್ಮ ತಂಡಕ್ಕೆ ರೋಚಕ ಜಯ ತಂದುಕೊಟ್ಟರು.

40 ವರ್ಷಗಳ ನಂತರ ನಾಕೌಟ್‌ನಲ್ಲಿ ಗೆಲುವು

16ರ ಘಟ್ಟಕ್ಕೆ ಆತಿಥೇಯ ಮೆಕ್ಸಿಕೊ

ಮೆಕ್ಸಿಕೊ ಸಿಟಿ (ಎಪಿ): ಮೆಕ್ಸಿಕೊ ತಂಡವು ಫಿಫಾ ವಿಶ್ವಕಪ್ ನಾಕೌಟ್ ಹಂತದಲ್ಲಿ 40 ವರ್ಷಗಳ ನಂತರ ಗೆಲುವಿನ ಸವಿಯುಂಡಿತು. ಆದರೆ ಈಕ್ವೆಡಾರ್ ತಂಡದ ಅಭಿಮಾನಿಗಳು ನಿರಾಸೆಗೊಳಗಾದರು.

ಮಂಗಳವಾರ ತಡರಾತ್ರಿ ನಡೆದ 32ರ ಘಟ್ಟದ ಪಂದ್ಯದಲ್ಲಿ ಮೆಕ್ಸಿಕೊ ತಂಡವು 2–0ಯಿಂದ ಈಕ್ವೆಡಾರ್ ಎದುರು ಜಯಿಸಿತು. ಜೂಲಿಯನ್ ಕ್ಯೂನೊನೆಸ್ (22ನೇ ನಿ) ಮತ್ತು ರಾಲ್ ಜಿಮೆಂಜ್ (31ನೇ ನಿ) ಅವರು ಹೊಡೆದ ಗೋಲುಗಳ ನೆರವಿನಿಂದ ಮೆಕ್ಸಿಕೊ 16 ಘಟ್ಟಕ್ಕೆ ಅರ್ಹತೆ ಗಳಿಸಿತು. ಸ್ಟಾಪೇಜ್ ಸಮಯದಲ್ಲಿ ಈಕ್ವೆಡಾರ್ ತಂಡದ ಪಿಯೆರೊ ಹಿಂಕಾಪಿ (90 + 5ನಿ) ಅವರು ಒರಟು ಆಟದ ಕಾರಣಕ್ಕೆ ರೆಡ್ ಕಾರ್ಡ್ ದರ್ಶನ ಮಾಡಬೇಕಾಯಿತು.

ಕಳೆದ ಏಳು ವಿಶ್ವಕಪ್ ಟೂರ್ನಿಗಳ ನಾಕೌಟ್ ಹಂತಗಳಲ್ಲಿ ಮೆಕ್ಸಿಕೊ ಸೋಲನುಭವಿಸಿತ್ತು. 1986ರ ವಿಶ್ವಕಪ್ ಟೂರ್ನಿಯ ನಾಕೌಟ್ ಹಂತದಲ್ಲಿ ಮೆಕ್ಸಿಕೊ ತವರಿನಲ್ಲಿ ಬಲ್ಗೇರಿಯಾ ಎದುರು ಜಯಿಸಿತ್ತು. ಆಗಿನ ತಂಡದಲ್ಲಿ ಆಡಿದ್ದ ಜೇವಿಯರ್ ಅಗೇರೆ ಅವರು ಈಗ ಮೆಕ್ಸಿಕೊ ಕೋಚ್ ಆಗಿದ್ದಾರೆ. 1994ರಿಂದ 2018ರವರೆಗಿನ ಟೂರ್ನಿಗಳಲ್ಲಿ ನಾಕೌಟ್ ಹಂತದಲ್ಲಿ ಮೆಕ್ಸಿಕೊ ಸೋತಿತ್ತು. 2022ರಲ್ಲಿ ಗುಂಪು ಹಂತದಲ್ಲಿಯೇ ನಿರ್ಗಮಿಸಿತ್ತು.

'ಈ ಜಯವು ನನಗೆ ಬಹಳ ಮಹತ್ವದ್ದು. ಮೆಕ್ಸಿಕೊ ತಂಡವು ನಾಕೌಟ್ ಹಂತದಲ್ಲಿ ಅನುಭವಿಸಿದ ಸರಣಿ ಸೋಲುಗಳನ್ನು ಕಂಡಿದ್ದೇನೆ. ಅದರ ಭಾಗವೂ ಆಗಿದ್ದೆ. ಇದೀಗ ನಾನು ಉತ್ತಮ ಲಯದಲ್ಲಿದ್ದೇವೆ. ಇನ್ನೂ ಮುಂದೆ ಸಾಗುವ ಆತ್ಮವಿಶ್ವಾಸವಿದೆ' ಎಂದು ಜೇವಿಯರ್ ಹೇಳಿದರು. 'ಈ ಫಲಿತಾಂಶದಿಂದ ನನಗೆ ಅತೀವ ಸಂತಸವಾಗಿದೆ' ಎಂದು ಜೂಲಿಯಸ್ ಹೇಳಿದರು.

ಮೆಕ್ಸಿಕೊ ತಂಡದ ಫಾರ್ವರ್ಡ್ ಆಟಗಾರರಾದ ಜೂಲಿಯನ್ ಕ್ಯುನೊಸಿಸ್ (ಎಡ) ಮತ್ತು ರಾಲ್ ಜಿಮೆಂಜ್ ಸಂಭ್ರಮ ಎಎಫ್‌ಪಿ ಚಿತ್ರ

ಸಂಭ್ರಮಾಚರಣೆ ವೇಳೆ ಮೂವರ ಸಾವು

ಮೆಕ್ಸಿಕೊ ಸಿಟಿ (ಎಪಿ): ಈಕ್ವೆಡಾರ್ ವಿರುದ್ಧ ಜಯಗಳಿಸಿ 16ರ ಸುತ್ತಿಗೆ ಮೆಕ್ಸಿಕೊ ತಲುಪಿದ ಬೆನ್ನಲ್ಲೇ ಇಲ್ಲಿಯ ಹೆಗ್ಗುರುತಾದ ಸ್ವಾತಂತ್ರ್ಯದೇವತೆಯ ಪ್ರತಿಮೆ ಬಳಿ ಬುಧವಾರ ನಸುಕಿನಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ಸಾವಿರಾರು ಅಭಿಮಾನಿಗಳು ಜಮಾಯಿಸಿದ್ದರಿಂದ ಉಸಿರುಗಟ್ಟಿ ಮೂವರು ಮೃತಪಟ್ಟಿದ್ದಾರೆ.

ಮೆಕ್ಸಿಕೊ	ಈಕ್ವೆಡಾರ್
2	0

ಪಂದ್ಯಗಳು

ಸ್ಪೇನ್	V/s	ಆಸ್ಟ್ರಿಯಾ
ಗುರುವಾರ ತಡರಾತ್ರಿ 12.30		
ಪೋರ್ಚುಗಲ್	V/s	ಕ್ರೊಯೇಷ್ಯಾ
ಶುಕ್ರವಾರ ಬೆಳಗಿನ ಜಾವ 4.30		

ಲೈವ್ ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5 ಆ್ಯಪ್

ಚಿಟಿಕೆ ಸುದ್ದಿ

ಶ್ರೀಶಾಂತ್ ಮೇಲಿನ ನಿಷೇಧ ತೆರವು

ತಿರುವನಂತಪುರ (ಪಿಟಿಐ): ಮಾಜಿ ಅಂತರರಾಷ್ಟ್ರೀಯ ಕ್ರಿಕೆಟಿಗ ಎಸ್.ಶ್ರೀಶಾಂತ್ ಅವರ ಮೇಲಿನ ಮೂರು ವರ್ಷಗಳ ನಿಷೇಧವನ್ನು ಕೇರಳ ಕ್ರಿಕೆಟ್ ಸಂಸ್ಥೆ (ಕೆಸಿಎ) ಬುಧವಾರ ಹಿಂಪಡೆದಿದೆ. ಸಂಸ್ಥೆಯ ವಿರುದ್ಧ ಮಾನಹಾನಿಕರ ಹೇಳಿಕೆ ನೀಡಿದ್ದಕ್ಕೆ 2025ರ ಏಪ್ರಿಲ್‌ನಲ್ಲಿ ಈ ವೇಗದ ಬೌಲರ್ ಮೇಲೆ ನಿಷೇಧ ವಿಧಿಸಲಾಗಿತ್ತು.

ಬುಧವಾರ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಈ ಸಂಬಂಧ ನಿರ್ಧಾರ ಕೈಗೊಳ್ಳಲಾಯಿತು. 'ನಿಷೇಧ ವಾಪಸು ಪಡೆಯುವ ನಿರ್ಧಾರವನ್ನು ಸಭೆಯಲ್ಲಿ ಸರ್ವಾನುಮತದಿಂದ ಕೈಗೊಳ್ಳಲಾಯಿತು. ಭವಿಷ್ಯದಲ್ಲಿ ಈ ರೀತಿಯ ವರ್ತನೆ ಪುನರಾವರ್ತಿಸಿದಲ್ಲಿ ಕಠಿಣ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಸಂಸ್ಥೆಯು ಎಚ್ಚರಿಕೆ ನೀಡಿದೆ' ಎಂದು ಕೆಸಿಎ ಹೇಳಿಕೆ ತಿಳಿಸಿದೆ.

ಡ್ಯುರಾಂಡ್ ಕಪ್ ಟೂರ್ನಿ 25 ರಿಂದ

ಕೋಲ್ಕತ್ತ (ಪಿಟಿಐ): ಏಷ್ಯಾದ ಅತಿ ಹಳೆಯ ಫುಟ್‌ಬಾಲ್ ಟೂರ್ನಿಯಾದ ಡ್ಯುರಾಂಡ್ ಕಪ್, ಜುಲೈ 25 ರಿಂದ ಆಗಸ್ಟ್ 23ರವರೆಗೆ ನಡೆಯಲಿದ್ದು 24 ತಂಡಗಳು ಭಾಗವಹಿಸಲಿವೆ. ಇವುಗಳಲ್ಲಿ ಏಳು ತಂಡಗಳು ಇದೇ ಮೊದಲ ಬಾರಿ ಟೂರ್ನಿಯಲ್ಲಿ ಕಣಕ್ಕಿಳಿಯಲಿವೆ.

ಮೊದಲ ಪಂದ್ಯ ಜುಲೈ 25ರಂದು ಕೋಲ್ಕತ್ತದಲ್ಲಿ ನಡೆಯಲಿದೆ. ನಂತರ ರಾಂಚಿ, ಇಂಫಾಲ್, ಶಿಲ್ಲಾಂಗ್ ಮತ್ತು ಗುವಾಹಟಿಯಲ್ಲಿ ಕೆಲವು ಪಂದ್ಯಗಳೂ ನಡೆಯಲಿವೆ. ಫೈನಲ್ ಪಂದ್ಯ ಕೋಲ್ಕತ್ತದ ವಿವೇದಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಐಎಸ್‌ಎಲ್, ಐ–ಲೀಗ್ ಜೊತೆ ಕೆಲವು ವಿದೇಶಿ ತಂಡಗಳೂ ಭಾಗವಹಿಸಲಿವೆ.

ವಿಂಬಲ್ಡನ್ ಟೆನಿಸ್: ಮೂರನೇ ಸುತ್ತಿಗೆ ಸಿನ್ನರ್ • ಕೊಬೊಲಿ ಶುಭಾರಂಭ

ಸಬಲೆಂಕಾ ಮುನ್ನಡೆ; ಸೆರೆನಾಗೆ ನಿರಾಸೆ



ಅರಿನಾ ಸಬಲೆಂಕಾ

ಲಂಡನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಬುಧವಾರ ಮೂರನೇ ಸುತ್ತಿಗೆ ಮುನ್ನಡೆದರು. ಪುರುಷರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಆಟಗಾರ ಯಾನಿಕ್ ಸಿನ್ನರ್ ಅವರೂ 32ರ ಸುತ್ತು ಪ್ರವೇಶಿಸಿದರು.

ಬೆಲರೂಸ್‌ನ ಆಟಗಾರ್ತಿ ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ನಡೆದ ಎರಡನೇ ಸುತ್ತಿನ ಹಣಾಹಣಿಯಲ್ಲಿ 6–1, 7–6 (11–9) ರಿಂದ ಅಮೆರಿಕದ ಮೆಕ್‌ಕಾರ್ಟ್ನಿ ಕೆಸ್ಲರ್ ಅವರನ್ನು ಸೋಲಿಸಿದರು.

ಮೊದಲ ಸೆಟ್‌ಅನ್ನು ನಿರಾಯಾಸವಾಗಿ ಗೆದ್ದ ಸಬಲೆಂಕಾಗೆ ಎರಡನೇ ಸೆಟ್‌ನಲ್ಲಿ ಕೆಸ್ಲರ್ ಅವರಿಂದ ಪ್ರತಿರೋಧ ತೋರಿದರು. 3–5ರಿಂದ ಹಿನ್ನಡೆಯಲ್ಲಿದ್ದ ಸಬಲೆಂಕಾ, ಚೇತರಿಸಿಕೊಂಡು ಸೆಟ್ ತಮ್ಮದಾಗಿಸಿಕೊಂಡರು. ಅದರೊಂದಿಗೆ 32ರ ಘಟ್ಟದಲ್ಲಿ ಫ್ರೆಂಚ್ ಓಪನ್ ಮಾಜಿ ಚಾಂಪಿಯನ್ ಯೆಲೆನಾ ಒಸ್ತಪೆಂಕೊ (ಲಾಟ್ವಿಯಾ) ವಿರುದ್ಧ ಸೆಣಸಾಡಲು ವೇದಿಕೆ ಸಿದ್ಧಪಡಿಸಿಕೊಂಡರು. ಜೆಲೆನಾ ಎರಡನೇ ಸುತ್ತಿನಲ್ಲಿ 6–2, 6–0ಯಿಂದ ಕ್ರೊವೇಷ್ಯಾದ ಆ್ಯಂಟನಿಯಾ ರುಝಿಕ್ ಅವರನ್ನು ಸುಲಭವಾಗಿ ಸೋಲಿಸಿದರು.

ನಾಲ್ಕು ಗ್ರ್ಯಾನ್‌ಸ್ಲಾಮ್ ಕಿರೀಟಗಳ ಒಡತಿ ಸಬಲೆಂಕಾ ಇಲ್ಲಿ ಮೊದಲ ಬಾರಿಗೆ ಚಾಂಪಿಯನ್ ಆಗುವ ಪ್ರಯತ್ನದಲ್ಲಿದ್ದಾರೆ.

ಇಟಲಿಯ 24 ವರ್ಷ ವಯಸ್ಸಿನ ಆಟಗಾರ ಸಿನ್ನರ್ ಎರಡನೇ ಸುತ್ತಿನಲ್ಲಿ ಗೆಲ್ಲಲು ಪ್ರಯಾಸಪಡಬೇಕಾಯಿತು. ಎರಡು ಟೈಬ್ರೇಕರ್‌ಗಳನ್ನು ಕಂಡ ಪಂದ್ಯದಲ್ಲಿ ಅವರು 7–6 (7–4), 7–6 (7–2), 6–4ರಿಂದ ಪೋರ್ಚುಗಲ್‌ನ ನ್ಯುನೊ ಬೋರ್ಜಸ್ ಅವರನ್ನು ಮಣಿಸಿದರು.

ಫ್ರೆಂಚ್ ಓಪನ್‌ನಲ್ಲಿ ಎರಡನೇ ಸುತ್ತಿನಲ್ಲಿ ಮುಗ್ಗರಿಸಿದ್ದ ಸಿನ್ನರ್ ಈ ಪಂದ್ಯದಲ್ಲೂ ಎರಡು ಬಾರಿ 'ಡಬಲ್‌ಫಾಲ್ಟ್' ಎಸಗಿದರು.

ಒಸಾಕಾ, ಮುಚೋವಾ ಮುನ್ನಡೆ: ಜಪಾನ್‌ನ ನವೊಮಿ ಒಸಾಕಾ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ಸುಲಭ ಗೆಲುವಿನೊಡನೆ ಮೂರನೇ ಸುತ್ತಿಗೆ ಪ್ರವೇಶಿಸಿದರು. ಅವರು 6–3, 6–2ರಿಂದ ನೇರ ಸೆಟ್‌ಗಳಲ್ಲಿ ರಷ್ಯಾದ ಅನಸ್ತೇಸಿಯಾ ಗನಸೋವಾ ಅವರನ್ನು ಹಿಮ್ಮೆಟ್ಟಿಸಿದರು. ಜೆಕ್ ಗಣರಾಜ್ಯದ ಕರೋಲಿನಾ ಮುಚೋವಾ ಅವರೂ ಇದೇ ಅಂತರದಲ್ಲಿ ಚೀನಾದ ಝಾಂಗ್ ಷುವಾಯಿ ಅವರನ್ನು ಸೋಲಿಸಿದರು.

2022ರ ಚಾಂಪಿಯನ್, ಎರಡನೇ ಶ್ರೇಯಾಂಕದ ಎಲಿನಾ ರಿಬಾಕಿನಾ ಅವರು ಫ್ರಾನ್ಸ್‌ನ ಲೂಯಿಸ್ ಬೊಯ್ಸನ್ ವಿರುದ್ಧ ಮೂರು ಸೆಟ್‌ಗಳ ಗೆಲುವಿನೊಡನೆ ಎರಡನೇ ಸುತ್ತು ತಲುಪಿದರು.

ಲರ್ನರ್‌ಗೆ ಆಘಾತ: ಹಂಗರಿಯ ಶ್ರೇಯಾಂಕ ರಹಿತ ಆಟಗಾರ ಮಾರ್ಟನ್ ಫುಕ್ಸೊವಿಕ್ಸ್ ಅವರು ಪುರುಷರ ಎರಡನೇ ಸುತ್ತಿನಲ್ಲಿ 6–7 (6–8), 6–4, 7–6 (7–4), 6–3ರಿಂದ 16ನೇ ಶ್ರೇಯಾಂಕದ ಆಟಗಾರ ಲರ್ನರ್ ಟಿಯನ್ (ಅಮೆರಿಕ) ಅವರಿಗೆ ಆಘಾತ ನೀಡಿದರು. 21ನೇ ಶ್ರೇಯಾಂಕ ಪಡೆದಿರುವ ಅಮೆರಿಕದ ಟಾಮಿ ಪೌಲ್ ಅವರು 6–3, 7–6 (7–4), 6–2ರಿಂದ ನೇರ ಸೆಟ್‌ಗಳಲ್ಲಿ ಕೊರಿಯಾದ ಕ್ವಾನ್ ಸೂನ್‌ವೂ ವಿರುದ್ಧ ಗೆದ್ದರು.

ಐದನೇ ಶ್ರೇಯಾಂಕದ ಬೆನ್ ಶೆಲ್ಟನ್ ಅವರು ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು. ಫಿನ್ಲೆಂಡ್‌ನ ಒಟ್ಟೊ ವಿರ್ಟನೆನ್ 6-4, 3-6, 6-7 (8/10), 6-2, 7-6 (11/9) ರಿಂದ ಅಮೆರಿಕದ ಆಟಗಾರನನ್ನು ಹಿಮ್ಮೆಟ್ಟಿಸಿದರು.

ಒಂಬತ್ತನೇ ಶ್ರೇಯಾಂಕದ ಆಟಗಾರ ಫ್ಲಾವಿಯೊ ಕೊಬೊಲಿ ಅವರು 1-6, 7-6 (7-5), 6-3, 7-6 (10-8)ರಿಂದ ಅರ್ಜೆಂಟೀನಾದ ಮರಿಯಾನೊ ನವೋನ್ ವಿರುದ್ಧ ಪ್ರಯಾಸದ ಗೆಲುವಿನೊಡನೆ ಶುಭಾರಂಭ ಮಾಡಿದರು.

ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಪರಾಭವಗೊಂಡ ನಂತರ ಸೆರೆನಾ ವಿಲಿಯಮ್ಸ್ ಅವರು ಅಭಿಮಾನಿಗಳತ್ತ ಕೈಬೀಸಿದರು ಎಎಫ್‌ಪಿ ಚಿತ್ರ

ಮೊದಲ ಸುತ್ತಿನಲ್ಲೇ ಸೋತ ಸೆರೆನಾ

ಲಂಡನ್ (ಎಎಫ್‌ಪಿ): ನಾಲ್ಕು ವರ್ಷಗಳ ನಂತರ ಪುನರಾಗಮನ ಮಾಡಿದ ಅಮೆರಿಕದ ದಿಗ್ಗಜ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಇಲ್ಲಿ ಏಳು ಬಾರಿ ಚಾಂಪಿಯನ್ ಆಗಿರುವ ಅವರು 3–6, 7–6 (8–6) 3–6ರಲ್ಲಿ ಆಸ್ಟ್ರೇಲಿಯಾದ ಯುವ ಆಟಗಾರ್ತಿ ಮಾಯಾ ಜಾಂಯ್ಟ್ ಎದುರು ಪರಾಭವಗೊಂಡರು.

ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದ 44 ವರ್ಷ ವಯಸ್ಸಿನ ಸೆರೆನಾ ಅವರು 'ಓಪನ್ ಯುಗ'ದಲ್ಲಿ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಸಿಂಗಲ್ಸ್ ಆಡಿದ ಎರಡನೇ ಅತಿ ಹಿರಿಯ ಆಟಗಾರ್ತಿ ಎನಿಸಿದರು. ಜೆಕ್ ಸಂಜಾತ ಅಮೆರಿಕದ ಆಟಗಾರ್ತಿ ಮಾರ್ಟಿನಾ ನವ್ರಟಿಲೋವಾ 2004ರಲ್ಲಿ ಎರಡನೇ ಸುತ್ತು ಪ್ರವೇಶಿಸಿದ್ದರು. ಆಗ ಅವರಿಗೆ 47 ವರ್ಷ ವಯಸ್ಸಾಗಿತ್ತು.

2 ಗಂಟೆ 22 ನಿಮಿಷ ನಡೆದ ಈ ಹಣಾಹಣಿಯಲ್ಲಿ ಸೆರೆನಾ ಅವರು ಮೊಣಕಾಲಿನ ಗಾಯಕ್ಕೂ ತುತ್ತಾದರು. ಹೀಗಾಗಿ, ಅವರು ಡಬಲ್ಸ್‌ನಲ್ಲಿ ಕಣಕ್ಕಿಳಿಯುವ ಬಗ್ಗೆ ಅನುಮಾನಗಳು ಮೂಡಿವೆ.

ಸೆರೆನಾ ಪತಿ ಅಲೆಕ್ಸಿಸ್ ಒಹಾನಿಯನ್, ಪುತ್ರಿಯರಾದ ಒಲಿಂಪಿಯಾ–ಅದಿರಾ ಹಾಗೂ ಸಹೋದರಿ ವೀನಸ್ ಅವರು ಪಂದ್ಯವನ್ನು ವೀಕ್ಷಿಸಿದರು.

ಸಮಬಲದ ಹೋರಾಟ ನಿರೀಕ್ಷೆ

ಇಂಗ್ಲೆಂಡ್ ಬ್ಯಾಟರ್‌ಗಳಿಗೆ ದಕ್ಷಿಣ ಆಫ್ರಿಕಾ ಬೌಲಿಂಗ್ ಪರೀಕ್ಷೆ

ಲಂಡನ್: ಲೀಗ್‌ನಲ್ಲಿ ಅಜೇಯ ಸಾಧನೆಯಿಂದ ಹುರುಪಿನಲ್ಲಿರುವ ಇಂಗ್ಲೆಂಡ್ ತಂಡವು, ಗುರುವಾರ ಕೆನ್ನಿಂಗ್ಟನ್ ಓವಲ್‌ನಲ್ಲಿ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಎರಡನೆ ಸೆಮಿಫೈನಲ್ ಪಂದ್ಯದಲ್ಲಿ ಆತ್ಮವಿಶ್ವಾಸದಲ್ಲಿರುವ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಮೀನಖಂಡದ ನೋವಿಗೆ ಒಳಗಾಗಿದ್ದ ನಾಯಕಿ ನಾಟ್ ಷಿವರ್ ಬ್ರಂಟ್ ಅವರು ಚೇತರಿಸಿಕೊಂಡಿದ್ದು, ಈ ಮಹತ್ವದ ಪಂದ್ಯಕ್ಕೆ ಮರಳಿರುವುದು ಇಂಗ್ಲೆಂಡ್ ತಂಡದ ಬಲ ಹೆಚ್ಚಿಸಿದೆ. ಐರ್ಲೆಂಡ್ ವಿರುದ್ಧ ಗುಂಪು ಹಂತದ ಎರಡನೇ ಪಂದ್ಯದ ವೇಳೆ ಗಾಯಾಳಾಗಿದ್ದ ಅವರು ಮೂರು ಪಂದ್ಯಗಳಲ್ಲಿ ಆಡಿರಲಿಲ್ಲ.

ಈ ಪಂದ್ಯದ ವಿಜೇತರು ಭಾನುವಾರ ಲಾರ್ಡ್ಸ್‌ನಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದ್ದಾರೆ. ಮಂಗಳವಾರ ನಡೆದ ಮೊದಲ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವು, ವೆಸ್ಟ್ ಇಂಡೀಸ್ ತಂಡವನ್ನು ಸುಲಭವಾಗಿ ಸೋಲಿಸಿತ್ತು.

ಗುಂಪು ಹಂತದ ಎಲ್ಲ ಪಂದ್ಯಗಳಲ್ಲಿ ಗೆಲುವಿನ ಜೊತೆಗೆ ಷಿವರ್ ಬ್ರಂಟ್ ಮರಳಿರುವುದು ಇಂಗ್ಲೆಂಡ್ ಉತ್ಸಾಹ ಹೆಚ್ಚಿಸಿದೆ. ಲೀಗ್ ಪಂದ್ಯಗಳಲ್ಲಿ ಮೂರು ಬಾರಿ 160ಕ್ಕೂ ಹೆಚ್ಚು ರನ್ ಪೇರಿಸಿದ್ದು, ಇಂಗ್ಲೆಂಡ್ ಬ್ಯಾಟಿಂಗ್ ಆಳಕ್ಕೆ ನಿದರ್ಶನವಾಗಿದೆ. ಅನುಭವಿ ಆರಂಭ ಆಟಗಾರ್ತಿ ಡ್ಯಾನ್ನಿ ವಾಟ್ ಹಾಜ್ ಅವರು 94ರ ಸರಾಸರಿಯಲ್ಲಿ ಐದು ಇನಿಂಗ್ಸ್‌ಗಳಲ್ಲಿ 282 ರನ್ ಕಲೆಹಾಕಿದ್ದು ಬ್ಯಾಟಿಂಗ್ ಆಧಾರ ಸ್ತಂಭವಾಗಿದ್ದಾರೆ. ಮೂರು ಬಾರಿ ಪಂದ್ಯದ ಆಟಗಾರ್ತಿಯೂ ಆಗಿದ್ದಾರೆ.

ಮಧ್ಯಮ ಕ್ರಮಾಂಕದಲ್ಲಿ ಅಲೆಕ್ಸ್ ಕ್ಯಾಪ್ಸಿ ಬಿರುಸಿನ ಆಟವಾಡಿದ್ದಾರೆ. ಬೌಲಿಂಗ್‌ನಲ್ಲಿ ವಿಶ್ವದ ಅಗ್ರ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಯಶಸ್ಸು ಗಳಿಸುತ್ತಿದ್ದಾರೆ.

ದಕ್ಷಿಣ ಆಫ್ರಿಕಾ ತಂಡವು, ಒಂದನೇ ಗುಂಪಿನಲ್ಲಿ ಆಸ್ಟ್ರೇಲಿಯಾ ವಿರುದ್ಧ ಸೋತಿದ್ದು ಬಿಟ್ಟರೆ, ಉಳಿದ ನಾಲ್ಕು ಪಂದ್ಯಗಳಲ್ಲಿ ಉತ್ತಮವಾಗಿಯೇ ಆಡಿದೆ. ಭಾರತ ವಿರುದ್ಧ ಲೀಗ್‌ನ ಕೊನೆಯ ಪಂದ್ಯದಲ್ಲಿ ಮರೈಝನ್ ಕಾಪ್ ಅಮೋಘ ಆಲ್‌ರೌಂಡ್ ಆಟವಾಡಿ (ಅಜೇಯ 81, 27ಕ್ಕೆ2) ತಂಡಕ್ಕೆ ಸ್ಮರಣೀಯ ಗೆಲುವು ತಂದುಕೊಟ್ಟಿದ್ದರು.

ಮರೈಝನ್ ಕಾಪ್, ಶಬ್ನಿಮ್ ಇಸ್ಮಾಯಿಲ್, ಅಯಬೊಂಗ ಖಾಕಾ, ನೊನ್‌ಕುಲುಲೆಕೊ ಮ್ಲಾಬಾ ಅವರನ್ನು ಹೊಂದಿರುವ ಬೌಲಿಂಗ್ ವಿಭಾಗ ಶಿಸ್ತುಬದ್ಧ ಪ್ರದರ್ಶನ ನೀಡಿದ್ದು, ಇಂಗ್ಲೆಂಡ್ ಬ್ಯಾಟಿಂಗ್‌ಗೆ ಕಡಿವಾಣ ಹಾಕುವುದೇ ಎಂಬುದು ಕುತೂಹಲಕ್ಕೆ ಎಡೆಮಾಡಿದೆ.

ಲಾರಾ ವೋಲ್ವಾರ್ಟ್

ನಾಟ್ ಷಿವರ್ ಬ್ರಂಟ್

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಇಂದಿನ ಪಂದ್ಯ

ಇಂಗ್ಲೆಂಡ್	V/s	ದಕ್ಷಿಣ ಆಫ್ರಿಕಾ

ತಾಣ: ದಿ ಓವಲ್
ಪಂದ್ಯ ಆರಂಭ: ರಾತ್ರಿ 11
ಲೈವ್ ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ನಾಯಕಿಯಾಗಿ ಕೌರ್ ಮುಂದುವರಿಕೆ

ನವದೆಹಲಿ (ಪಿಟಿಐ): ಅನುಭವಿ ಆಟಗಾರ್ತಿ ಹರ್ಮನ್‌ಪ್ರೀತ್ ಕೌರ್ ಅವರು ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿಯಾಗಿ ಮುಂದುವರಿದಿದ್ದಾರೆ. ಅವರು ಜಪಾನ್‌ನ ಐಚಿ ನಗೊಯಾದಲ್ಲಿ ಸೆಪ್ಟೆಂಬರ್ 10ರಿಂದ ಅಕ್ಟೋಬರ್ 4ರವರೆಗೆ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಕಳೆದ ವರ್ಷ ತಮ್ಮ ನಾಯಕತ್ವದಲ್ಲಿ ಐಸಿಸಿ ಮಹಿಳೆಯರ ಏಕದಿನ ವಿಶ್ವಕಪ್ ಗೆದ್ದುಕೊಟ್ಟಿದ್ದ ಕೌರ್ ಅವರು ಈ ವರ್ಷದ ಟಿ20 ವಿಶ್ವಕಪ್‌ನಲ್ಲಿ ತಂಡವನ್ನು ಸೆಮಿಫೈನಲ್ ತಲುಪಿಸಲೂ ವಿಫಲರಾಗಿದ್ದರು. 37 ವರ್ಷ ವಯಸ್ಸಿನ ಅವರು ಬ್ಯಾಟಿಂಗ್‌ನಲ್ಲಿಯೂ ಸ್ಥಿರ ಪ್ರದರ್ಶನ ನೀಡಿರಲಿಲ್ಲ. ಹೀಗಾಗಿ, ಅವರು ನಾಯಕಿಯಾಗಿ ಮುಂದುವರಿಯುವ ಬಗ್ಗೆ ಅನುಮಾನಗಳು ವ್ಯಕ್ತವಾಗಿದ್ದವು.

ಟಿ20 ಮಾದರಿಯಲ್ಲಿ ನಡೆಯುವ ಸ್ಪರ್ಧೆಗೆ 15 ಆಟಗಾರ್ತಿಯರ ತಂಡವನ್ನು ಬಿಸಿಸಿಐ ಮಂಗಳವಾರ ಪ್ರಕಟಿಸಿದೆ. ತಾರಾ ಬ್ಯಾಟರ್ ಸ್ಮೃತಿ ಮಂದಾನ ಅವರನ್ನು ಉಪನಾಯಕಿಯಾಗಿ ಮುಂದುವರಿಸಲಾಗಿದೆ. ಶ್ರೇಯಾಂಕಾ ಪಾಟೀಲ ಅವರೂ ಸ್ಥಾನ ಪಡೆದಿದ್ದಾರೆ. ವಿಕೆಟ್‌ಕೀಪರ್– ಬ್ಯಾಟರ್ ಯಸ್ತಿಕಾ ಭಾಟಿಯಾ ಅವರನ್ನು ಹೊರತುಪಡಿಸಿ ಟಿ20 ವಿಶ್ವಕಪ್‌ನಲ್ಲಿ ಆಡಿದ ತಂಡವನ್ನೇ ಉಳಿಸಿಕೊಳ್ಳಲಾಗಿದೆ. ಯಸ್ತಿಕಾ ಬದಲಿಗೆ ಜಿ.ಕಮಲಿನಿ ಅವರಿಗೆ ಮಣೆ ಹಾಕಲಾಗಿದೆ.

ಬೆಂಗಳೂರು ಬ್ಲಾಸ್ಟರ್ಸ್‌ಗೆ 2 ರನ್ ಜಯ

ಮಹಾರಾಜ ಟ್ರೋಫಿ: ನಿಶ್ಚಿತ್ ರಾವ್‌ಗೆ ಮೂರು ವಿಕೆಟ್

• ಸತೀಶ ಬಿ.

ಹುಬ್ಬಳ್ಳಿ: ಎಡಗೈ ಬ್ಯಾಟರ್ ಮನ್ವಂತ್‌ಕುಮಾರ್ (60 ರನ್, 22ಎಸೆತ, 4X4, 6X6) ಅವರ ವಿರೋಚಿತ ಆಟದ ಹೊರತಾಗಿಯೂ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ ಬೆಂಗಳೂರು ಬ್ಲಾಸ್ಟರ್ಸ್ ಎದುರು ಸೋಲನುಭವಿಸಿತು.

ಬೆಂಗಳೂರು ಒಡ್ಡಿದ 204 ರನ್‌ಗಳ ಗುರಿ ಬೆನ್ನತ್ತಿದ ಹುಬ್ಬಳ್ಳಿ ತಂಡ ಹೋರಾಟ ತೋರಿದರೂ 7 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿ ಎರಡು ರನ್‌ಗಳ ಅಂತರದಲ್ಲಿ ನಿರಾಸೆ ಅನುಭವಿಸಿತು.

ಹುಬ್ಬಳ್ಳಿ 36 ರನ್‌ಗಳಿಗೆ ಮೂರು ಪ್ರಮುಖ ವಿಕೆಟ್ ಕಳೆದುಕೊಂಡಿತು. ಮನ್ವಂತ್ ಕುಮಾರ್ ಮತ್ತು ಅಭಿನವ್ ಮನೋಹರ್ ಜೋಡಿ ಆರನೇ ವಿಕೆಟ್ ಜತೆಯಾಟದಲ್ಲಿ ಬಿರುಸಿನ ಆಟವಾಡಿ 79 ರನ್ (32 ಎ) ಸೇರಿಸಿತು. ಇದರಿಂದ ಗೆಲುವಿನ ಆಸೆ ಚಿಗುರಿತು.

ಕೊನೆಯ ಓವರ್‌ನಲ್ಲಿ ಒತ್ತಡ ನಿಭಾಯಿಸಿದ ಮಧ್ಯಮ ವೇಗಿ ನಿಶ್ಚಿತ್ ರಾವ್ (27ಕ್ಕೆ3), ತಂಡಕ್ಕೆ ಗೆಲುವು ತಂದು ಕೊಟ್ಟರು. ಮಂಡ್ಯದ ಹುಡುಗ ಮನ್ವಂತ್ ಕುಮಾರ್ 17 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಈ ಋತುವಿನಲ್ಲಿ ಇದು ವೇಗದ ಅರ್ಧಶತಕವಾಯಿತು.

ಇದಕ್ಕೂ ಮುನ್ನ ಬೆಂಗಳೂರು ತಂಡವು ರೋಹನ್ ಪಾಟೀಲ (64 ರನ್, 36 ಎ) ಮತ್ತು ಪ್ರವೀಣ್ ದುಬೆ (51 ರನ್, 28 ಎ) ಅವರ ಅರ್ಧಶತಕದ ಬಲದಿಂದ ಬೃಹತ್ ಮೊತ್ತ ಗಳಿಸಿತು. ಬ್ಲಾಸ್ಟರ್ಸ್ ಪಡೆ ಇನ್ನು ಒಂದು ಪಂದ್ಯ ಗೆದ್ದರೂ ಪ್ಲೇ ಆಫ್ ತಲುಪಲಿದೆ.

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 203 (ರೋಹನ್ ಪಾಟೀಲ 64, ಪ್ರವೀಣ್ ದುಬೆ 51; ವೈಭವ್ ಶರ್ಮಾ ಎ 38 ಕ್ಕೆ 3, ಅಭಿಷೇಕ್ ಅಹ್ಲಾವತ್ 39 ಕ್ಕೆ 2). ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 201 (ಮನ್ವಂತ್‌ಕುಮಾರ್ ಎಲ್ 60, ಶಿವಕುಮಾರ್ ರಕ್ಷಿತ್ 41; ನಿಶ್ಚಿತ್ ರಾವ್ 27ಕ್ಕೆ 3, ವಿದ್ವತ್ ಕಾವೇರಪ್ಪ 55ಕ್ಕೆ 2). ಪಂದ್ಯದ ಆಟಗಾರ: ನಿಶ್ಚಿತ್ ರಾವ್

ಇಂದಿನ ಪಂದ್ಯಗಳು:

- ಹುಬ್ಬಳ್ಳಿ ಟೈಗರ್ಸ್–ಮೈಸೂರು ವಾರಿಯರ್ಸ್ (ಮಧ್ಯಾಹ್ನ 2)
- ಕೋಸ್ಟಲ್ ಕಿಂಗ್ಸ್ ಮಂಗಳೂರು–ಶಿವಮೊಗ್ಗ ಯೋಧಾಸ್ (ರಾತ್ರಿ 7)

ಬೆಂಗಳೂರು ಬ್ಲಾಸ್ಟರ್ಸ್ ತಂಡದ ನಿಶ್ಚಿತ್ ರಾವ್
ಚಿತ್ರ: ಗೋವಿಂದರಾಜ ಜವಳಿ

ಮಯಂಕ್‌ಗೆ ಗಾಯ

ಫೀಲ್ಡಿಂಗ್ ವೇಳೆ ಹುಬ್ಬಳ್ಳಿ ಟೈಗರ್ಸ್ ತಂಡದ ಮಯಂಕ್ ಅಗರವಾಲ್ ಗಾಯಗೊಂಡರು. ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಎಲ್.ಆರ್. ಕುಮಾರ್ ಅವರ ಎಸೆತವನ್ನು ಎಸ್.ಶಿವರಾಜ್ ಬಲವಾಗಿ ಬಾರಿಸಿದರು. ಲಾಂಗ್ ಆಫ್‌ನಲ್ಲಿದ್ದ ಮಯಂಕ್, ಡೈವ್ ಮಾಡಿ ಚೆಂಡು ತಡೆದರು. ಈ ವೇಳೆ ಅವರು ಗಾಯಗೊಂಡರು.

ಹಿಮಾಂಶಿಗೆ ಮಹಿಳಾ ಸಿಂಗಲ್ಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಗ್ರ ಶ್ರೇಯಾಂಕದ ಆಟಗಾರ್ತಿಯ ವಿರುದ್ಧ ಪಾರಮ್ಯ ಮೆರೆದ ಬೆಂಗಳೂರಿನ ಎಲೀಟ್ ಟೇಬಲ್ ಟೆನಿಸ್ ಸೆಂಟರ್ ಆಫ್ ಎಕ್ಸಲೆನ್ಸ್‌ನ ಹಿಮಾಂಶಿ ಚೌಧರಿ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ರಾಜ್ಯ ಟೇಬಲ್ ಟೆನಿಸ್ ಸಂಸ್ಥೆಯ ಸಹಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಕೊಟ್ಟಾರ ಸಮೀಪದ ಪುದುಕೋಡಿಯ ಮಂಗಳೂರು ಟೇಬಲ್ ಟೆನಿಸ್ ಅಕಾಡೆಮಿಯಲ್ಲಿ ಬುಧವಾರ ಆರಂಭವಾದ ಟೂರ್ನಿಯ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಹಿಮಾಂಶಿ 11-8, 11-6, 11-9, 11-13, 11-3ರಲ್ಲಿ ತಮ್ಮದೇ ಕ್ಲಬ್‌ನ ಸಹನಾ ಮೂರ್ತಿ ಎದುರು ಗೆದ್ದರು.

ಮೂರನೇ ಶ್ರೇಯಾಂಕಿತೆ ಖುಷಿ ವಿ ವಿರುದ್ಧ ಸೆಮಿಫೈನಲ್‌ನಲ್ಲಿ ಕೆಚ್ಚೆದೆಯ ಆಟ ಪ್ರದರ್ಶಿಸಿ (12-14, 11-5, 10-12, 11-5, 11-9, 16-14 ರಲ್ಲಿ) ಜಯ ಸಾಧಿಸಿದ್ದ ಹಿಮಾಂಶಿ ಫೈನಲ್‌ನಲ್ಲಿ ನಿರಾಳವಾಗಿ ಆಡಿದರು. ಸಹನಾ ಕುಮಾರಿಗೆ ನಾಲ್ಕನೇ ಶ್ರೇಯಾಂಕಿತೆ ತೃಪ್ತಿ ಪುರೋಹಿತ್ ಸೆಮಿಫೈನಲ್‌ನಲ್ಲಿ ಭಾರಿ ಪೈಪೋಟಿ ಒಡ್ಡಿದರು. ಆದರೆ ಛಲದಿಂದ ಆಡಿದ ಸಹನಾ ಗೆಲುವು ತಮ್ಮದಾಗಿಸಿಕೊಂಡರು.

ಗೌರವ್, ಹಿಮಾಂಶಿ ಫೈನಲ್‌ಗೆ: 19 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಹಿಮಾಂಶಿ ಹಾಗೂ ರಾಶಿ ವಿ.ಗೌಡ ಮತ್ತು ಬಾಲಕರ ವಿಭಾಗದಲ್ಲಿ ಗೌರವ್ ಗೌಡ ಹಾಗೂ ಬಿ.ಆರ್ ಗೌರವ್ ಫೈನಲ್ ಪ್ರವೇಶಿಸಿದರು.

ಝಾಗ್ರೆಬ್ ಚೆಸ್: ಅಲಿರೇಝಾ ಮುನ್ನಡೆ

ಝಾಗ್ರೆಬ್ (ಕ್ರೊವೇಷಿಯಾ): ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಅವರು ಬುಧವಾರ ಇಲ್ಲಿ ಆರಂಭವಾದ ಝಾಗ್ರೆಬ್ ರ‍್ಯಾಪಿಡ್ ಮತ್ತು ಬ್ಲಿಟ್ಝ್ ಟೂರ್ನಿಯ ರ‍್ಯಾಪಿಡ್ ವಿಭಾಗದ ಎರಡನೇ ಸುತ್ತಿನ ನಂತರ ಎರಡೂ ಪಂದ್ಯ ಗೆದ್ದು ಅಗ್ರಸ್ಥಾನದಲ್ಲಿದ್ದರು. ಭಾರತದ ಪ್ರಜ್ಞಾನಂದ, ಫ್ರಾನ್ಸ್‌ನ ವೇಷಿಯರ್ ಲಗ್ರಾವ್, ಹಾಲೆಂಡ್‌ನ ಅನಿಶ್ ಗಿರಿ ತಲಾ 3 ಪಾಯಿಂಟ್ಸ್ ಗಳಿಸಿದ್ದಾರೆ. ವಿಶ್ವ ಚಾಂಪಿಯನ್ ಡಿ.ಗುಕೇಶ್ 2 ಅಂಕ ಗಳಿಸಿ ಏಳನೇ ಸ್ಥಾನದಲ್ಲಿದ್ದರು. 10 ಆಟಗಾರರು ಕಣದಲ್ಲಿದ್ದಾರೆ.

ಪ್ರಜ್ಞಾನಂದ, ಜರ್ಮನಿಯ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿದರು.

ಅಭಿಷೇಕ್, ಶ್ರೇಯಸ್ ಅರ್ಧಶತಕ

ಟಿ20: ಇಂಗ್ಲೆಂಡ್‌ಗೆ ಸವಾಲಿನ ಗುರಿ ಒಡ್ಡಿದ ಶ್ರೇಯಸ್ ಪಡೆ

ಚೆಸ್ಟರ್ ಲಿ ಸ್ಟ್ರೀಟ್ (ಯು.ಕೆ) (ಪಿಟಿಐ): ಆರಂಭ ಆಟಗಾರ ಅಭಿಷೇಕ್ ಶರ್ಮಾ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಅವರ ಅರ್ಧಶತಕಗಳ ಬಲದಿಂದ ಪ್ರವಾಸಿ ಭಾರತ ತಂಡವು ಇಂಗ್ಲೆಂಡ್ ಎದುರಿನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ 7 ವಿಕೆಟ್‌ಗೆ 189 ರನ್‌ಗಳ ಸವಾಲಿನ ಮೊತ್ತ ಗಳಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡವು ಎರಡು ಓವರ್‌ಗಳಾಗುವಷ್ಟರಲ್ಲಿ ಎರಡು ವಿಕೆಟ್ ಕಳೆದುಕೊಂಡಿತ್ತು. ಅಭಿಷೇಕ್ ಜೊತೆ ಇನಿಂಗ್ಸ್ ಆರಂಭಿಸಿದ ಸಂಜು ಸ್ಯಾಮ್ಸನ್ (1; 7ಎ) ಮತ್ತೆ ವಿಫಲರಾದರು. ಇಶಾನ್ ಕಿಶನ್ (0; 2ಎ) ರನೌಟ್ ಆದರು. ಆದರೂ ಧೃತಿಗೆಡದೆ ತಮ್ಮ ಎಂದಿನ ಶೈಲಿಯಂತೆ ಬ್ಯಾಟ್ ಬೀಸಿದ ಅಭಿಷೇಕ್ 20 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ 100 ಸಿಕ್ಸರ್ ಪೂರೈಸಿದರು.

24 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಸಹಿತ 59 ರನ್ ಗಳಿಸಿ ಔಟಾದರು. ಜವಾಬ್ದಾರಿಯುತವಾಗಿ ಇನಿಂಗ್ಸ್ ಬೆಳೆಸಿದ ಶ್ರೇಯಸ್ (68; 47ಎ, 4x6, 6x1) ಅಭಿಷೇಕ್ ಜೊತೆಗೆ 38 ಎಸೆತಗಳಲ್ಲಿ 82 ರನ್ ಸೇರಿಸಿದರು. ಕೊನೆಯಲ್ಲಿ ಶಿವಂ ದುಬೆ (42; 21ಎ, 4x2, 6x3) ಅಬ್ಬರದ ಬ್ಯಾಟಿಂಗ್ ಮೂಲಕ ತಂಡವನ್ನು 180 ಗಡಿ ದಾಟಿಸಿದರು.

ಅಭಿಷೇಕ್ ಶರ್ಮಾ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಇಂಗ್ಲೆಂಡ್ ವೇಗಿ ಸಾಕಿಬ್ ಮಹಮೂದ್ 33 ರನ್ ನೀಡಿ ಮೂರು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 189 (ಅಭಿಷೇಕ್ ಶರ್ಮಾ 59, ಶ್ರೇಯಸ್ ಅಯ್ಯರ್ 68, ಶಿವಂ ದುಬೆ 42; ಸಾಕಿಬ್ ಮಹಮೂದ್ 33ಕ್ಕೆ3, ಸ್ಯಾಮ್ ಕರನ್ 25ಕ್ಕೆ1, ಆದಿಲ್ ರಶೀದ್ 39ಕ್ಕೆ1). ವಿರುದ್ಧ ಇಂಗ್ಲೆಂಡ್.